₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 29.01.2026 ಸಂಪುಟ: 11 ಸಂಚಿಕೆ: 15 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸೂರ್ಯ ಪಡೆ ಗೆಲುವಿನ ಓಟಕ್ಕೆ ಬ್ರೇಕ್

ಆರಂಭಿಕ ಬ್ಯಾಟ್ಸ್‌ಮ್ಯಾನ್ ಟಿಮ್ ಸೀಫರ್ಟ್ 36 ಬಾಲ್‌ಗಳಲ್ಲಿ ಬಾರಿಸಿದ 62 ರನ್‌ಗಳ ನೆರವಿನಿಂದ ವಿಶಾಖಪಟ್ಟಣದಲ್ಲಿ ಬುಧವಾರ ನಡೆದ 4ನೇ ಟಿ20 ಪಂದ್ಯದಲ್ಲಿ ಭಾರತವನ್ನು ನ್ಯೂಜಿಲೆಂಡ್ 50 ರನ್‌ಗಳಿಂದ ಮಣಿಸಿ, ಟೀಮ್ ಇಂಡಿಯಾದ ಅಜೇಯ ಓಟಕ್ಕೆ ಬ್ರೇಕ್ ಹಾಕಿದೆ.

ಕರ್ನಾಟಕ ಸರ್ಕಾರ

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ-ಗ್ರಾಮ್ ಜಿ

ಗ್ರಾಮ ಪಂಚಾಯತಿಗಳ ಅಧಿಕಾರ ಹಾಗೂ ಉದ್ಯೋಗ ಖಾತ್ರಿಗೆ ಮರಣ ಶಾಸನ!

ಮನರೇಗಾ ಪುನರ್ ಸ್ಥಾಪನೆ, ಕರ್ನಾಟಕದ ಮೇಲಿನ ತೆರಿಗೆ ಭಯೋತ್ಪಾದನೆ, ಗ್ರಾಮೀಣ ಜನರ ಜೀವನೋಪಾಯ ಮತ್ತು ಪಂಚಾಯತಿಗಳ ಅಧಿಕಾರ ಕಸಿಯುವ ಕುತಂತ್ರ ನಿಲ್ಲುವವರೆಗೂ

#ಗ್ರಾಮಸಂಗ್ರಾಮನಿರಂತರ!

ಪ್ರಕಟಣೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಿವೃತ್ತಿ ಬೇಡ...
ಭಾರತದ ಖ್ಯಾತ ಗಾಯಕ, ಸಂಗೀತ ಸಂಯೋಜಕ ಅರಿಜಿತ್ ಸಿಂಗ್ ನಿವೃತ್ತಿ ನಿರ್ಧಾರವನ್ನು ವಾಪಸ್ ಪಡೆಯಬೇಕೆಂದು ಗಣ್ಯರು ಆಗ್ರಹಿಸಿದ್ದಾರೆ.

ಸೊಂಪಾದ ಪುಟಗಳು

ಡಾ.ರಾಜಾರಾಮಣ್ಣ ಎಂಬ ನಿತ್ಯ ನೆನಪಿನ ಸ್ಥಾವರ !
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ನಿಧಿಗಳೂ ನಮ್ಮ ನಿಮ್ಮೊಳಗಿನ ನಿಧಿಚೋರರೂ
ಕಾಡುದಾರಿ
ಹರೀಶ್ ಕೇರ 6

ದಾರಿದೀಪೋಕ್ತಿ

ನದಿ ಹೇಗೆ ಸದಾ ಹರಿಯುತ್ತಾ ತನ್ನ ದಾರಿಯನ್ನು ತಾನೇ ಕಂಡುಕೊಳ್ಳುತ್ತದೋ, ಹಾಗೆಯೇ ನೀವು ಕೂಡ ಎಷ್ಟೇ ಅಡೆತಡೆಗಳು ಬಂದರೂ ನಿರಂತರವಾಗಿ ಸಾಗುವುದನ್ನು ರೂಢಿಸಿಕೊಳ್ಳಬೇಕು. ನಿನ್ನೆಗಳ ಸೋಲು ನಾಳೆಯ ಗೆಲುವಿಗೆ ಬುನಾದಿಯಾಗಬೇಕು. ನಿಮ್ಮ ಆತ್ಮವಿಶ್ವಾಸವೇ ನಿಮ್ಮ ಯಶಸ್ಸಿನ ಮಂತ್ರವಾಗಲಿ.

ವಕ್ರತುಂಡೋಕ್ತಿ

ಪತ್ನಿಯ ಮುಂದೆ ತಪ್ಪು ಒಪ್ಪಿಕೊಳ್ಳುವುದು ಸೋಲಲ್ಲ, ಅದು ಸಾಯಂಕಾಲ ರುಚಿಕಟ್ಟಾದ ಊಟ ಮಾಡುವ ಒಂದು ಮಾಸ್ಟರ್ ಪ್ಲಾನ್!

ತುಳುವಿಗೆ 2ನೇ ಅಧಿಕೃತ ಭಾಷಾ ಮಾನ್ಯತೆ: ತಂಗಡಗಿ

ವಿಧಾನಸಭೆ: ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿ ಶೀಘ್ರದಲ್ಲಿಯೇ ಘೋಷಣೆ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಅಶೋಕ್ ರೈ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ತುಳು ಭಾಷೆಯನ್ನು ರಾಜ್ಯದ ಎರಡನೇ ಹೆಚ್ಚುವರಿ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡುವ ನಿಟ್ಟಿನಲ್ಲಿ ತುಳುವಿನ ಸ್ವರೂಪ, ಲಿಪಿ ಕುರಿತು ಅಧ್ಯಯನ ನಡೆಸಲು ಡಾ.ಮೋಹನ್ ಆಳ್ವಾರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಈ ಸಮಿತಿ 2023ರ ಫೆಬ್ರವರಿಯಲ್ಲಿ ವರದಿ ಸಲ್ಲಿಸಿದೆ ಎಂದರು.

87 ಕೋಟಿ ರು. ಡಾಟಾ ಕದ್ದ ಐಟಿ ಉದ್ಯೋಗಿ

ಬೆಂಗಳೂರು: ನಗರದ ಐಟಿ ಕಂಪನಿಯೊಂದರ ಉದ್ಯೋಗಿಯೊಬ್ಬರು ಸುಮಾರು 87 ಕೋಟಿ ರು. ಮೌಲ್ಯದ ಕಂಪನಿಯ ಡಾಟಾವನ್ನು ಕಳವು ಮಾಡಿದ್ದಾರೆಂಬ ಆರೋಪ ಕೇಳಿಬಂದಿದೆ. ಕಂಪನಿಯ ಸಾಫ್ಟ್‌ವೇರ್ ಸೋರ್ಸ್ ಕೋಡ್ ಅನ್ನು ಅಕ್ರಮವಾಗಿ ಕದ್ದ ಆರೋಪದಲ್ಲಿ ಉದ್ಯೋಗಿ ವಿರುದ್ಧ ಮಂಗಳವಾರ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಮಾಡಿಯಸ್ ಸಾಫ್ಟ್‌ವೇರ್ ಲ್ಯಾಬ್ಸ್ ಇಂಡಿಯಾ ಪ್ರೈ.ಲಿ.ನಲ್ಲಿ ಆಶುತೋಷ್ ನಿಗಮ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಅಂತಿಮ ಹಂತದಲ್ಲಿ ಬಜೆಟ್, ಸಂಪ್ರದಾಯದಂತೆ 'ಹಲ್ವಾ' ತಯಾರಿಸಿದ ಹಣಕಾಸು ಸಚಿವೆ
ಸುದ್ದಿ

ಮುಡಾ ಪ್ರಕರಣದಲ್ಲಿ ಜನಪ್ರತಿನಿಧಿಗಳ ಕೋರ್ಟ್ ತೀರ್ಪು
ಲೋಕಾಯುಕ್ತ ಬಿ ರಿಪೋರ್ಟ್ ಎತ್ತಿ ಹಿಡಿದ ನ್ಯಾಯಾಲಯ
ರಾಜಕೀಯವಾಗಿ ಸಿಎಂ ಸಿದ್ದರಾಮಯ್ಯಗೆ ಮತ್ತಷ್ಟು ಬಲ

ಸಿದ್ದರಾಮಯ್ಯ ನಿರ್ದೋಷಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕುಟುಂಬಕ್ಕೆ ಅಂಟಿದ್ದ ಹಾಗೂ ರಾಜ್ಯ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿದ್ದ ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರಿಗೆ ಕ್ಲೀನ್‌ಚಿಟ್ ಸಿಕ್ಕಿದೆ. ಈ ಮೂಲಕ ಸಿದ್ದರಾಮಯ್ಯ ಅವರಿಗೆ ರಾಜಕೀಯವಾಗಿ ಮತ್ತಷ್ಟು 'ಬಲ' ಸಿಕ್ಕಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನ ಹಂಚಿಕೆ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು 14 ನಿವೇಶನ ಪಡೆದಿದ್ದು ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಕಾನೂನುಬಾಹಿರವಾಗಿ ನಿವೇಶನ ಹಂಚಿಕೆಯಾಗಿದೆ ಹಾಗೂ ಸಿದ್ದರಾಮಯ್ಯ ಅವರು 'ಪ್ರಭಾವ' ಬೀರಿದ್ದಾರೆ ಎಂದು ಆರೋಪಿಸಿ ಸ್ನೇಹಮಯಿ ಕೃಷ್ಣ ದೂರು ನೀಡಿದ್ದರು. ಆದರೆ ಲೋಕಾಯುಕ್ತ ಪೊಲೀಸರಿಂದ ತನಿಖೆ ನಡೆದು, ಪ್ರಕರಣದಲ್ಲಿ ಹುರುಳಿಲ್ಲವೆಂದು ಸಲ್ಲಿಸಿದ್ದ ಬಿ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ನ್ಯಾಯಾಲಯ ಅಂಗೀಕರಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅತ್ಯಂತ ದೊಡ್ಡ ಮಟ್ಟದ ಕಾನೂನು ಜಯ ಸಿಕ್ಕಿದೆ.

ಮುಡಾ ಹಗರಣದ ತನಿಖೆ ನಡೆಸಿದ್ದ ಲೋಕಾಯುಕ್ತ ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ, ಬಾವಮೈದ ಮಲ್ಲಿಕಾರ್ಜುನ ಸ್ವಾಮಿ, ಜಮೀನು ಮಾಲೀಕ ದೇವರಾಜು ವಿರುದ್ಧ ಬಿ ರಿಪೋರ್ಟ್ ಸಲ್ಲಿಸಿತ್ತು. ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ ರಿಪೋರ್ಟ್' ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಂಗೀಕರಿಸುವ ಮೂಲಕ ಸಿದ್ದರಾಮಯ್ಯ ಅವರಿಗೆ ನಿರಾಳತೆಯನ್ನೊದಗಿಸಿದೆ.

ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ವಜಾಗೊಳಿಸಿದ್ದಾರೆ. ಈ ಮೂಲಕ ಮುಖ್ಯಮಂತ್ರಿ ವಿರುದ್ಧ ಮಾಡಲಾಗಿದ್ದ ಆರೋಪಗಳಿಗೆ ಬಲವಾದ ಸಾಕ್ಷಿಗಳಿಲ್ಲ ಎನ್ನುವುದು ಸಾಬೀತಾದಂತಾಗಿದೆ. ಪ್ರಕರಣದ ಉಳಿದ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಸುವಂತೆ ತನಿಖಾಧಿಕಾರಿಗಳಿಗೆ ನ್ಯಾಯಾಲಯ ಆದೇಶಿಸಿದೆ. ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ ವಿರುದ್ಧ ಪ್ರಕರಣವನ್ನು ತನಿಖಾಧಿಕಾರಿಗಳು ಮುಕ್ತಾಯ ಗೊಳಿಸಿದ್ದು, ಇನ್ನೂ ಮುಂದೆ ಯಾವುದೇ ತನಿಖೆ, ವಿಚಾರಣೆ ಸಿಎಂ, ಪತ್ನಿ ಪಾರ್ವತಿ ವಿರುದ್ಧ ನಡೆಯಲ್ಲ.

ತನಿಖಾಧಿಕಾರಿಯ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಬೇಕು ಎಂದು ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯವು ವಜಾಗೊಳಿಸಿರುವುದು ದೂರುದಾರರಿಗೆ ಹಿನ್ನಡೆಯಾಗಿದೆ. ತನಿಖೆ ಪೂರ್ಣಗೊಂಡ ನಂತರ ಅಂತಿಮ ವರದಿಯನ್ನು ಸಲ್ಲಿಸುವಂತೆ ಸೂಚಿಸಿ ಪ್ರಕರಣದ ಮುಂದಿನ ವಿಚಾರಣೆಯನ್ನು ಫೆ. 9ಕ್ಕೆ ನಿಗದಿಪಡಿಸಿದೆ. ತಮ್ಮ ರಾಜಕಾರಣದ ಇತಿಹಾಸದಲ್ಲೇ ಸಿಎಂ ಸಿದ್ದರಾಮಯ್ಯ ಸ್ವಚ್ಛ ರಾಜಕಾರಣಿ ಎನ್ನಿಸಿಕೊಂಡಿದ್ದರು.

→ 8

ಏನಿದು ಕೆಸರೆ ಗ್ರಾಮದ ಪ್ರಕರಣ?

ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಹೆಸರಿನಲ್ಲಿದ್ದ ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂ.464ರಲ್ಲಿ 3 ಎಕರೆ 16 ಗುಂಟೆ ಜಮೀನನ್ನು ಪ್ರಾಧಿಕಾರವು ಬಳಸಿಕೊಂಡಿತ್ತು. ಇದಕ್ಕೆ ಪರಿಹಾರದ ಬದಲಾಗಿ ವಿಜಯನಗರ 3 ಮತ್ತು 4ನೇ ಹಂತದಲ್ಲಿ ಪಾರ್ವತಿ ಸಿದ್ದರಾಮಯ್ಯ ಅವರಿಗೆ 14 ನಿವೇಶನಗಳನ್ನು ಮಂಜೂರು ಮಾಡಲಾಗಿತ್ತು. ಇದು ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿತ್ತು. ನಂತರ ತನಗೆ ಪ್ರಾಧಿಕಾರ ನೀಡಿದ್ದ 14 ಸೈಟುಗಳನ್ನು ವಾಪಸ್ ನೀಡುವುದಾಗಿ ಪಾರ್ವತಿ ಸಿದ್ದರಾಮಯ್ಯ ಘೋಷಿಸಿದ್ದರು. ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ, ಅವರ ಪತ್ನಿ, ಸಂಬಂಧಿ ಹಾಗೂ ಜಮೀನಿನ ಮಾಲೀಕರ ವಿರುದ್ಧ ಮೈಸೂರು ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿದ್ದರು. ನಂತರ, ನಾಲ್ವರು ಅಕ್ರಮ ಎಸಗಿರುವ ಸಂಬಂಧ ಯಾವುದೇ ಸಾಕ್ಷ್ಯಾಧಾರ ಸಿಕ್ಕಿಲ್ಲ ಎಂದು ಲೋಕಾಯುಕ್ತ ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಅಂದರೆ ಆರೋಪ ಸಾಬೀತಾಗಿಲ್ಲ ಎಂದು ವರದಿ ನೀಡಲಾಗಿತ್ತು. ಇನ್ನೊಂದೆಡೆ ಈ 'ಬಿ' ರಿಪೋರ್ಟ್ ಅನ್ನು ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ ತನಿಖಾಧಿಕಾರಿ ಬದಲಾವಣೆ ಕೋರಿದ್ದ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿತ್ತು. ಜತೆಗೆ 'ಬಿ' ರಿಪೋರ್ಟ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿತ್ತು.

ಸ್ವಚ್ಛ ರಾಜಕಾರಣಕ್ಕೆ ಕಾನೂನು ಜಯ

ಸುದೀರ್ಘ ರಾಜಕೀಯ ಜೀವನದಲ್ಲಿ ಸಿದ್ದರಾಮಯ್ಯ ಅವರ ವಿರುದ್ಧ ಯಾವುದೇ ಗಂಭೀರ ಆರೋಪಗಳು ಕೇಳಿಬಂದಿರಲಿಲ್ಲ. ಆದರೆ ಮುಡಾ ನಿವೇಶನ ಹಂಚಿಕೆ ಪ್ರಕರಣ ಸಿದ್ದರಾಮಯ್ಯ ಅವರ ರಾಜಕೀಯ ಜೀವನದಲ್ಲಿ ಬಹುದೊಡ್ಡ 'ಕಪ್ಪು ಚುಕ್ಕೆ' ಎಂದೇ ವ್ಯಾಖ್ಯಾನಿಸಲಾಗಿತ್ತು. ಈ ಕಾರಣಕ್ಕಾಗಿಯೇ ಪಾರ್ವತಿ ಸಿದ್ದರಾಮಯ್ಯ ಅವರು ನಿವೇಶನಗಳನ್ನು ವಾಪಸು ನೀಡುವುದಾಗಿ ಪತ್ರ ಬರೆದಿದ್ದರು. ಆದರೀಗ, ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ಬಿ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ನ್ಯಾಯಾಲಯ ಅಸ್ತು ಎನ್ನುವ ಮೂಲಕ ಸಿದ್ದರಾಮಯ್ಯ ಅವರಿಗೆ ರಾಜಕೀಯವಾಗಿ ಬಹುದೊಡ್ಡ ಗೆಲುವು ಸಿಕ್ಕಿದೆ. ಈ ತೀರ್ಪು ಕಾನೂನಾತ್ಮಕ ಗೆಲುವು ಮಾತ್ರವಲ್ಲದೇ, ರಾಜಕೀಯವಾಗಿಯೂ ಮತ್ತಷ್ಟು ಬಲ ನೀಡಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಮಹಾರಾಷ್ಟ್ರದ ಬಾರಾಮತಿಯಲ್ಲಿ ನೆಲಕ್ಕಪ್ಪಳಿಸಿದ ಲಘು ವಿಮಾನ

ಅಜಿತ್ ಪವಾರ್ ದುರ್ಮರಣ



(1959-2026)

ಮಹಾ ಡಿಸಿಎಂ ಸೇರಿ ಐವರು ನಿಧನ, ಲಘು ವಿಮಾನ ಭಸ್ಮ

ಬಾರಾಮತಿ (ಪುಣೆ): ಮಹಾರಾಷ್ಟ್ರದ ಮಹಾಯುತಿ ಸರಕಾರದ ಉಪಮುಖ್ಯಮಂತ್ರಿ, ಎನ್‌ಸಿಪಿ ನಾಯಕ ಅಜಿತ್ ಪವಾರ್ (ಜು.22, 1959–ಜ.28, 2026) ಬುಧವಾರ ಬೆಳಗ್ಗೆ 8.44ಕ್ಕೆ ಲಘು ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಖಾಸಗಿ ವಿಶೇಷ ಲಘು ವಿಮಾನದಲ್ಲಿ ಅವರು ಜಿಲ್ಲಾ ಪಂಚಾಯತ್ ಚುನಾವಣೆಯ ಹಿನ್ನೆಲೆಯಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಲು ಬಾರಾಮತಿಗೆ ತೆರಳಿದ್ದರು. ಬಾರಾಮತಿಯಲ್ಲಿ ವಿಮಾನ ಇಳಿಸುವ ವೇಳೆಗೆ ನಡೆದ ದುರಂತದಲ್ಲಿ ದುರ್ಮರಣ ಹೊಂದಿದ್ದಾರೆ.

ಘಟನೆಗೆ ನಿರ್ದಿಷ್ಟ ಕಾರಣವೇನೆಂದು ಸ್ಪಷ್ಟವಾಗಿಲ್ಲ. ವಿಮಾನದಲ್ಲಿ ಇಬ್ಬರು ಪೈಲಟ್‌ಗಳು ಸೇರಿ ಸೇರಿ ಒಟ್ಟು ಐವರಿದ್ದರು. ಅಷ್ಟೂ ಮಂದಿ ಮೃತಪಟ್ಟಿದ್ದಾರೆ. ವಿಮಾನ ಸುಟ್ಟುಭಸ್ಮವಾಗಿದೆ. ತನಿಖೆ ಆರಂಭವಾಗಿದೆ. ಸದ್ಯದ ಪ್ರಕಾರ ವಿಮಾನ ಹಾಗೂ ಪೈಲಟ್‌ಗಳು ಸಶಕ್ತ ಸ್ಥಿತಿಯಲ್ಲೇ ಇದ್ದರು. ವಿಮಾನ ಇಳಿಸುವಾಗ ರನ್‌ವೇ 11ರಲ್ಲಿ ಇಳಿಸಲು ಸೂಚನೆ ನೀಡಲಾಗಿತ್ತು. ಆದರೆ ಆ ಜಾಗ ಸರಿಯಾಗಿ ತಿಳಿಯದೇ ಪೈಲಟ್‌ಗಳು ಪರದಾಡಿದ್ದಾರೆ. ಅಂತಿಮವಾಗಿ ರನ್‌ವೇ ಸಿಕ್ಕಿದರೂ ಸ್ಥಳದಿಂದ 100 ಮೀಟರ್ ದೂರದಲ್ಲೇ ವಿಮಾನ ನೆಲಕ್ಕೆ ಬಡಿದಿದೆ.

ಪವಾರ್ ಅವರು ಕೆನಡಾದ ಬೊಂಬಾರ್ಡಿಯರ್ ಕಂಪನಿ ನಿರ್ಮಿಸಿದ ಲಿಯರ್‌ಜೆಟ್ 45 ಪ್ಲೇನ್‌ನಲ್ಲಿ ಪ್ರಯಾಣಿಸಿದ್ದರು. ಇದನ್ನು ವಿಎಸ್‌ಆರ್ ಕಂಪನಿ ನಿರ್ವಹಿಸುತ್ತಿದ್ದು, ವಿಟಿ–ಎಸ್‌ಎಸ್‌ಕೆ ಎಂದು ವಿಮಾನವನ್ನು ಕರೆಯಲಾಗುತ್ತದೆ.

ಇಂದು ಅಂತ್ಯಕ್ರಿಯೆ, ಬೆ. 9ರಿಂದ ಮೆರವಣಿಗೆ

ಅಜಿತ್ ಪವಾರ್ ಅವರ ಅಂತ್ಯಕ್ರಿಯೆ ಗುರುವಾರ ನಡೆಯಲಿದೆ. ಬೆಳಗ್ಗೆ 9 ಗಂಟೆ ಯಿಂದ ಪವಾರ್ ದೇಹದ ಉಳಿದ ಭಾಗಗಳನ್ನು ಹೊತ್ತ ಶವಪೆಟ್ಟಿಗೆಯ ಮೆರವಣಿಗೆ ಇರಲಿದೆ. ಬೆಳಗ್ಗೆ 11 ಗಂಟೆಗೆ ಬಾರಾಮತಿಯ ವಿದ್ಯಾ ಪ್ರತಿಷ್ಠಾನ ಮೈದಾನದಲ್ಲಿ ಅಂತಿಮ ವಿಧಿಗಳು ನಡೆಯಲಿವೆ.

ಯಾವ ಸಮಯದಲ್ಲಿ ಏನಾಯ್ತು?

ಬೆಳಗ್ಗೆ 8.10
1. ಮುಂಬೈನ ಛತ್ರಪತಿ ಅಂತಾರಾಷ್ಟ್ರೀಯ ವಿಮಾನನಿಲ್ದಾಣದಿಂದ ಬುಧವಾರ ಬೆಳಗ್ಗೆ 8.10ಕ್ಕೆ ಅಜಿತ್ ಪವಾರ್ ಇದ್ದ ವಿಮಾನಯಾನ ಆರಂಭ.

ಬೆಳಗ್ಗೆ 8.18
2. ಪುಣೆಯ ಬಾರಾಮತಿ ವಿಮಾನನಿಲ್ದಾಣದ ಸಿಬ್ಬಂದಿಯೊಂದಿಗೆ ಬೆ.8.18ಕ್ಕೆ ಸಂಪರ್ಕ. ಒಟ್ಟು 35 ನಿಮಿಷಗಳ ಕಾಲ ಆಗಸದಲ್ಲಿ ಹಾರಾಟ

ಬೆಳಗ್ಗೆ 8.30
3. ವಿಮಾನ ಇಳಿಸಬಹುದೇ ಎಂದು ಪೈಲಟ್‌ಗಳಿಂದ ಪ್ರಶ್ನೆ. ಪರಿಸ್ಥಿತಿ ಶಾಂತ ಎಂದು ಉತ್ತರ. ರನ್‌ವೇ 11ರಲ್ಲಿ ಇಳಿಸಲು 8.30ಕ್ಕೊಮ್ಮೆ ಯತ್ನ.

ಬೆಳಗ್ಗೆ 8.42
4. 11ನೇ ರನ್‌ವೇಯಲ್ಲಿ ಇಳಿಸಬಹುದೆಂದು ನಿಲ್ದಾಣ ಸಿಬ್ಬಂದಿ ಸೂಚನೆ. ಆದರೆ ಅದು ಕಾಣುತ್ತಿಲ್ಲ ಎಂದು ಪೈಲಟ್‌ಗಳಿಂದ ಉತ್ತರ.

ಬೆಳಗ್ಗೆ 8.43
5. ರನ್‌ವೇ 11 ಕಾಣುತ್ತಿದೆ ಎಂದು ಪೈಲಟ್‌ಗಳಿಂದ ಉತ್ತರ. ಬೆ.8.43ಕ್ಕೆ ಇಳಿಸಲು ಎಟಿಸಿಯಿಂದ ಅನುಮತಿ. ಇದಕ್ಕೆ ಪೈಲಟ್‌ಗಳಿಂದ ಪ್ರತಿಕ್ರಿಯೆಯಿಲ್ಲ.

ಬೆಳಗ್ಗೆ 8.44
6. ರನ್‌ವೇ 11ಕ್ಕೆ ಇನ್ನೂ 100 ಮೀಟರ್‌ಗಳಿದ್ದಾಗಲೇ ಪತನ. ಬೆ.8.44ಕ್ಕೆ ಘಟನೆ. ಜೋರಾಗಿ ಮೇಲೆದ್ದ ಭಾರೀ ಜ್ವಾಲೆ, ರಕ್ಷಣೆಗೆ ಧಾವಿಸಿದ ನಿಲ್ದಾಣ ಸಿಬ್ಬಂದಿ.

→ 8

4 ದಶಕದಿಂದ ನೌಕರರ ಧ್ವನಿಯಾಗಿದ್ದ ಸುಬ್ಬರಾವ್

ಅನಂತಸುಬ್ಬರಾವ್ ನಿಧನ; ಸಾರಿಗೆ ಮುಷ್ಕರ ಮುಂದಕ್ಕೆ

ಬೆಂಗಳೂರು: ಸಿಪಿಎಂನ ಹಿರಿಯ ನಾಯಕ ಸಾರಿಗೆ ನೌಕರರ ಸಂಘದ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ, ಅನಂತ ಸುಬ್ಬರಾವ್ (84 ವರ್ಷ) ಹೃದಯಾಘಾತದಿಂದ ಬುಧವಾರ ನಿಧನರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಗುರುವಾರ ನಡೆಯಬೇಕಾಗಿದ್ದ ಸಾರಿಗೆ ನೌಕರರ ಮುಷ್ಕರವನ್ನು ಜಂಟಿ ಕ್ರಿಯಾ ಸಮಿತಿ ಮುಂದೂಡಿದೆ.

ಸಾರಿಗೆ ನೌಕರರ ಮುಷ್ಕರದ ಮುಂದಾಳತ್ವ ವಹಿಸಿದ್ದ ಅವರಿಗೆ ಬುಧವಾರ ಸಂಜೆ 5.30ಕ್ಕೆ ಹೃದಯಾಘಾತವಾಗಿತ್ತು. ವಿಜಯನಗರದ ಆಸ್ಪತ್ರೆಗೆ ದಾಖಲಿಸಲಾಗಿತ್ತು, ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದಿದ್ದಾರೆ. ಕೆಎಸ್‌ಆರ್‌ಟಿಸಿಯ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಅಧ್ಯಕ್ಷರಾಗಿದ್ದ ಸುಬ್ಬರಾವ್, ನೌಕರರ ಪರ ಹೋರಾಟಗಳಲ್ಲಿ ಸಕ್ರಿಯರಾಗಿದ್ದರು.



ಕೇಂದ್ರದ ದೂರವಾಣಿ ಕರೆ ಮೇರೆಗೆ ಗೆಹ್ಲೋಥ್ ಕಾರ್ಯಾಚರಣೆ: ಎಚ್ಕೆ ಆರೋಪ
ಬಿಜೆಪಿ ಕೆಂಡ, ಸರಕಾರದ ವಿರುದ್ಧ ಫೋನ್ ಟ್ಯಾಪಿಂಗ್ ದೂರು: ದಿನವಿಡೀ ಗದ್ದಲ

ಸದನದಲ್ಲಿ ಗವರ್ನರ್ ಫೋನ್ ಕದ್ದಾಲಿಕೆ ಸದ್ದು

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಜಂಟಿ ಅಧಿವೇಶನ ಆರಂಭವಾದಾಗಿನಿಂದಲೂ ಒಂದಿಲ್ಲೊಂದು ವಿಷಯಕ್ಕೆ ಆಡಳಿತ–ಪ್ರತಿಪಕ್ಷ ನಡುವೆ ನಡೆಯುತ್ತಿರುವ ವಾಕ್ಸಮರಕ್ಕೆ ಇದೀಗ ಫೋನ್ ಕದ್ದಾಲಿಕೆಯೂ ಸೇರಿದ್ದು, ಬುಧವಾರ ಇದೇ ವಿಷಯ ಮುಂದಿಟ್ಟುಕೊಂಡು ಬಿಜೆಪಿ ಧರಣಿ ನಡೆಸಿತು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರಿಗೆ ದೆಹಲಿಯಿಂದ ಕರೆಗಳು ಬರುತ್ತಿದ್ದು, ಕೇಂದ್ರದ ಸೂಚನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ವಿಧಾನಸಭೆಯಲ್ಲಿ ಆರೋಪಿಸಿದ್ದು ಆಡಳಿತ ಹಾಗೂ ಪ್ರತಿಪಕ್ಷಗಳ ನಡುವಣ ತೀವ್ರ ಮಾತಿನ ಚಕಮಕಿಗೆ ಕಾರಣವಾಯಿತು. ಸಚಿವರು ಈ ಹೇಳಿಕೆ ನೀಡುತ್ತಿದ್ದಂತೆಯೇ ಕಾಂಗ್ರೆಸ್ ಸರಕಾರ ಫೋನ್ ಕದ್ದಾಲಿಕೆ ಮಾಡು ತ್ತಿದೆ ಎಂದು ಆರೋಪಿಸಿ ಬಿಜೆಪಿ ಶಾಸಕರು ಸದನದಲ್ಲಿ ಗದ್ದಲವೆಬ್ಬಿಸಿದರು.

ಸಿದ್ದರಾಮಯ್ಯ ನೇತೃತ್ವದ ಸರಕಾರ ಫೋನ್ ಕದ್ದಾಲಿಕೆ ಮಾಡುತ್ತಿದೆ ಎಂದು ಆರೋಪಿಸಿದ ಬಿಜೆಪಿ ಶಾಸಕರು, ಲೋಕಭವನ ಮತ್ತು ರಾಜ್ಯಪಾಲರಿಗೆ ಬಂದ ಫೋನ್ ಕರೆಗಳ ಮಾಹಿತಿ ಸಚಿವ ಎಚ್.ಕೆ.ಪಾಟೀಲ್ ಅವರಿಗೆ ಹೇಗೆ ಗೊತ್ತಾಯಿತು ಎಂದು ಪ್ರಶ್ನಿಸಿದರು.

ಬಿಜೆಪಿಯ ತೀವ್ರ ವಾಗ್ವಾದ ಮತ್ತು ಗದ್ದಲ ಮುಂದುವರಿದಾಗ, ಸ್ಪೀಕರ್ ಯು.ಟಿ.ಖಾದರ್ ಸದನವನ್ನು ಭೋಜನ ವಿರಾಮಕ್ಕೆ ಮುಂದೂಡಿದರು. ಬಳಿಕ ಸದನ ಸಮಾವೇಶಗೊಂಡಾಗ ಸರಕಾರ ಕ್ಷಮೆ ಕೇಳಬೇಕು ಎಂದು ಆರ್.ಅಶೋಕ ಒತ್ತಾಯಿಸಿದರು. ಇದಕ್ಕೆ ಸ್ಪಷ್ಟನೆ ನೀಡಿದ ಸಿಎಂ ಸಿದ್ದರಾಮಯ್ಯ, ಸರಕಾರ ಫೋನ್ ಕದ್ದಾಲಿಕೆ ಮಾಡುತ್ತಿಲ್ಲ ಎಂದು ಹೇಳಿದರು.

ಏನಾಯ್ತು?

- ರಾಜ್ಯಪಾಲ ಗೆಹ್ಲೋಥ್‌ಗೆ ಕೇಂದ್ರ ಸೂಚನೆ ನೀಡುತ್ತಿದೆ: ಎಚ್.ಕೆ.ಪಾಟೀಲ್ ಆರೋಪ
- ಗೆಹ್ಲೋಥ್‌ಗೆ ಕರೆ ಬರುತ್ತಿರುವುದು ರಾಜ್ಯ ಸರಕಾರಕ್ಕೆ ಹೇಗೆ ಗೊತ್ತಾಗುತ್ತಿದೆ?: ಬಿಜೆಪಿ
- ಸರಕಾರ ಫೋನ್ ಕದ್ದಾಲಿಕೆ ಮಾಡುತ್ತಿದೆ ಎಂದು ಆರೋಪ, ಸದನದಲ್ಲಿ ಭಾರೀ ಗದ್ದಲ
- ರಾಜ್ಯ ಸರಕಾರ ಫೋನ್ ಕದ್ದಾಲಿಕೆ ಮಾಡುತ್ತಿಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸ್ಪಷ್ಟನೆ

ರಾಮಮೂರ್ತಿಗೆ ಸುಪ್ರೀಂ ಹಿನ್ನಡೆ

ಬೆಂಗಳೂರು: ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ, ಹೈಕೋರ್ಟ್ ಆದೇಶ ಪ್ರಶ್ನಿಸಿ ಜಯನಗರ ಶಾಸಕ ಸಿ.ಕೆ.ರಾಮಮೂರ್ತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರಿಂಕೋರ್ಟ್ ವಜಾಗೊಳಿಸಿದೆ. ಪ್ರಕರಣದ ಟ್ರಯಲ್‌ಗೆ (ವಿಚಾರಣೆ) ತಡೆ ಕೋರಿ ರಾಮಮೂರ್ತಿ ಅರ್ಜಿ ಸಲ್ಲಿಸಿದ್ದರು. 2023ರ ವಿಧಾನಸಭೆ ಚುನಾವಣೆಯಲ್ಲಿ, ಜಯನಗರ ಕ್ಷೇತ್ರದಿಂದ ಸಿ.ಕೆ.ರಾಮಮೂರ್ತಿ ಆಯ್ಕೆಯನ್ನು ಸೌಮ್ಯಾ ರೆಡ್ಡಿ ಪ್ರಶ್ನಿಸಿದ್ದರು.

ಬಸ್‌ಗೆ ಬೆಂಕಿ: 36 ಮಂದಿಗೆ ಗಾಯ

ಶಿವಮೊಗ್ಗ: ನಗರದಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ನಾನ್ ಎಸಿ ಸ್ಲೀಪರ್ ಬಸ್‌ನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಬಸ್ ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ಮಂಗಳವಾರ ತಡರಾತ್ರಿ, ಸೂಡೂರು ಗ್ರಾಮದ ಬಳಿ ನಡೆದಿದೆ. ಈ ದೃಶ್ಯ ಭಯಾನಕವಾಗಿದೆ. ಹೊಸನಗರ ತಾಲೂಕು ಅರಸಾಳು ಬಳಿಯ 9ನೇ ಮೈಲಿಗಲ್ಲಿನ ಬಳಿ ಬಸ್‌ಗೆ ಆಕಸ್ಮಿಕ ಬೆಂಕಿ ತಗುಲಿದೆ. ಈ ವೇಳೆ ಬಸ್‌ನಲ್ಲಿ ಸುಮಾರು 36 ಜನ ಪ್ರಯಾಣಿಕರಿದ್ದರು. ಎಲ್ಲರಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಇದರಲ್ಲಿ 12 ಜನರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಎರಡು ದಿನ ಅಧಿವೇಶನ ವಿಸ್ತರಣೆ?

ಬೆಂಗಳೂರು: ಮನರೇಗಾ ಮರುಸ್ಥಾಪನೆ ಹಾಗೂ ವಿಬಿ ಜಿ ರಾಮ್ ಜಿ ಕಾಯಿದೆ ವಿರೋಧಿಸಿ ರಾಜ್ಯ ಸರಕಾರ ಕರೆದಿರುವ ಅಧಿವೇಶನ ಎರಡು ದಿನ ವಿಸ್ತರಣೆ ಮಾಡುವುದು ಬಹುತೇಕ ನಿಶ್ಚಿತವಾಗಿದೆ. ಖಾಸಗಿ ಹೋಟೆಲ್‌ನಲ್ಲಿ ಬುಧವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ, ವಿಬಿ ಜಿ ರಾಮ್ ಜಿ ಕಾಯಿದೆ ವಿರೋಧಿಸಿ ಕಾಂಗ್ರೆಸ್ ತೆಗೆದುಕೊಂಡಿರುವ ನಿರ್ಣಯವನ್ನು ಈವರೆಗೆ ಮಂಡಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಎರಡು ದಿನ ಅಧಿವೇಶನ ವಿಸ್ತರಿಸಬೇಕು ಎಂದು ಕೆಲ ಶಾಸಕರು ಸಲಹೆ ನೀಡಿದರು. ಇದನ್ನು ಮುಖ್ಯಮಂತ್ರಿ ಅಂಗೀಕರಿಸಿದ್ದು, ಎಲ್ಲ ಕಾಂಗ್ರೆಸ್ ಶಾಸಕರು ಕಡ್ಡಾಯವಾಗಿ ಹಾಜರಿರಬೇಕೆಂದು ಸೂಚಿಸಿದ್ದಾರೆ. ಈ ಬಗ್ಗೆ ಗುರುವಾರದ ಅಧಿವೇಶನದಲ್ಲಿ ಅಧಿಕೃತವಾಗಿ ಪ್ರಕಟಿಸುವ ಸಾಧ್ಯತೆಯಿದೆ ಎಂದು ತಿಳಿದಿಬಂದಿದೆ.

ಮನೆ ಹಂಚಿಕೆ, ವರ್ಗಾವಣೆ ವಿಷಯದಲ್ಲಿ ಸಚಿವರು ನಮ್ಮ ಸಲಹೆಯನ್ನು ಪರಿಗಣಿಸುತ್ತಿಲ್ಲ ಎಂದು ಕೆಲ ಶಾಸಕರು ಆರೋಪಿಸಿದ್ದಾರೆ. ಸಮಸ್ಯೆಯಾಗದಂತೆ ಕ್ರಮವಹಿಸುವ ಭರವಸೆಯನ್ನು ಸಿಎಂ ನೀಡಿದ್ದಾರೆನ್ನಲಾಗಿದೆ.

ಜ.26ಕ್ಕೆ ಅಧಿಕಾರ ಮುಕ್ತಾಯ, ಮುಂದಿನ ಆದೇಶದವರೆಗೆ ಅವಕಾಶ

ನಿಗಮ ಅಧ್ಯಕ್ಷರ ಸೇವಾವಧಿ ವಿಸ್ತರಣೆ

ಬೆಂಗಳೂರು: 25 ಶಾಸಕರ ನಿಗಮ–ಮಂಡಳಿಗಳ ಅಧ್ಯಕ್ಷರ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಬುಧವಾರ ಅವರ ಅವಧಿಯನ್ನು ಮುಂದಿನ ಆದೇಶದವರೆಗೆ ವಿಸ್ತರಿಸಿ ಮಹತ್ವದ ಆದೇಶವನ್ನು ಹೊರಡಿಸಿದೆ.

2024 ಜ.26ಕ್ಕೆ ರಾಜ್ಯದ ವಿವಿಧ ನಿಗಮ ಮತ್ತು ಮಂಡಳಿಗಳಿಗೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಒಟ್ಟು 25 ಶಾಸಕರ ಅವಧಿ ಮುಗಿದ ಹಿನ್ನೆಲೆಯಲ್ಲಿ ಬುಧವಾರ ಅವರ ಅವಧಿ ವಿಸ್ತರಿಸಿ ರಾಜ್ಯ ಸರಕಾರ ಆದೇಶಿಸಿದೆ. ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹೊರಡಿಸಿರುವ ಅಧಿಕೃತ ಅಧಿಸೂಚನೆಯಲ್ಲಿ, ಎಲ್ಲಾ ಶಾಸಕರಿಗೆ ಸಂಪುಟದರ್ಜೆಯ ಸಚಿವರಿಗೆ ನೀಡುವ ಎಲ್ಲಾ ಸೌಲಭ್ಯಗಳೊಂದಿಗೆ ಮುಂದುವರಿಸಲಾಗಿದೆ. ಈ ನೇಮಕಾತಿಯು ಜನವರಿ 26, 2026ರಿಂದಲೇ ಪೂರ್ವಾನ್ವಯ ವಾಗುವಂತೆ ಜಾರಿಗೆ ಬರಲಿದೆ.

ಬಸವರಾಜ ಶಿವಣ್ಣನವರ (ಅರಣ್ಯ ಅಭಿವೃದ್ಧಿ), ಬಿ.ಜಿ.ಗೋವಿಂದಪ್ಪ (ಆಹಾರ ನಿಗಮ), ಎಚ್.ಸಿ.ಬಾಲಕೃಷ್ಣ (ರಸ್ತೆ ಅಭಿವೃದ್ಧಿ ನಿಗಮ), ಜಿ.ಎಸ್.ಪಾಟೀಲ್ (ಖನಿಜ ನಿಗಮ), ಸಿ.ಪುಟ್ಟರಂಗಶೆಟ್ಟಿ (ಎಂಎಸ್‌ಐಎಲ್), ಜೆ.ಟಿ.ಪಾಟೀಲ್ (ಹಟ್ಟಿ ಚಿನ್ನದ ಗಣಿ), ಬಿ.ಕೆ.ಗೋಪಾಲಕೃಷ್ಣ ಬೇಳೂರು, ಎಸ್.ಎನ್.ನಾರಾಯಣ ಸ್ವಾಮಿ, ಟಿ.ರಘುಮೂರ್ತಿ, ರಮೇಶ ಬಂಡಿ ಸಿದ್ದೇಗೌಡ (ಸೆಸ್ಕ್), ಕನೀಜ್ ಫಾತಿಮಾ, ಟಿ.ಡಿ. ರಾಜೇಗೌಡ ಮತ್ತು ಬಸವನಗೌಡ ತುರುವಿಹಾಳ ಅವರ ಅವಧಿಯನ್ನೂ ವಿಸ್ತರಿಸಲಾಗಿದೆ.

ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನಕ್ಕೆ ಬಹಳ ಮಹತ್ವವಿದೆ. ಸಚಿವ ಸಿಗದ ಅತೃಪ್ತ ಶಾಸಕರನ್ನು ಸಮಾಧಾನಗೊಳಿಸಲು ನಿಗಮ, ಮಂಡಳಿಗಳನ್ನು ಬಳಸುವ ಕ್ರಮವೂ ಇದೆ. ಈ ಮಂಡಳಿಗಳ ಮೂಲಕ ಪ್ರಭಾವಿಯಾಗಿ ವಿವಿಧ ಅಭಿವೃದ್ಧಿ ಯೋಜನೆಯನ್ನು ಜಾರಿ ಮಾಡುವ ಅವಕಾಶವೂ ಶಾಸಕರಿಗೆ ಇರುತ್ತದೆ. ಇದನ್ನು ಪಡೆಯಲು ತೀವ್ರ ಪೈಪೋಟಿ ನಡೆಯುತ್ತದೆ.

ಯಾರೆಲ್ಲಾ ಮುಂದುವರಿಕೆ?

- ಎನ್.ಎ.ಹ್ಯಾರಿಸ್: ಅಧ್ಯಕ್ಷರು, ಬಿಡಿಎ
- ಎಸ್.ಆರ್.ಶ್ರೀನಿವಾಸ್: ಕೆಎಸ್‌ಆರ್‌ಟಿಸಿ
- ಕೆ.ಎಂ.ಶಿವಲಿಂಗೇಗೌಡ: ಗೃಹ ಮಂಡಳಿ
- ಅಪ್ಪಾಜಿ ಸಿ.ಎಸ್.ನಾಡಗೌಡ: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
- ರಾಜು ಕಾಗೆ: ವಾಯುವ್ಯ ಸಾರಿಗೆ ಸಂಸ್ಥೆ
- ಬಿ.ಕೆ.ಸಂಗಮೇಶ್ವರ: ಅಧ್ಯಕ್ಷರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಗಮ
- ಅಬ್ಬಯ್ಯ ಪ್ರಸಾದ್: ಅಧ್ಯಕ್ಷರು, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ
- ಬಸವನಗೌಡ ದದ್ದಲ್: ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
- ರೂಪಕಲಾ ಎಂ.: ಕರಕುಶಲ ನಿಗಮ
- ಶರತ್ ಬಚ್ಚೇಗೌಡ: ಕಿಯೋನಿಕ್ಸ್
- ಅನಿಲ್ ಚಿಕ್ಕಮಾದು: ಜಂಗಲ್ ಲಾಡ್ಜ್
- ಸತೀಶ್ ಕೃಷ್ಣ ಸೈಲ್: ಅಧ್ಯಕ್ಷರು, ಎಂಪಿಎ

ಸಂಸತ್‌ನಲ್ಲಿ ರಾಷ್ಟ್ರಪತಿ ಭಾಷಣ: ಬಜೆಟ್ ಅಧಿವೇಶನಕ್ಕೆ ಚಾಲನೆ

95 ಕೋಟಿ ಜನರಿಗೆ ಸಾಮಾಜಿಕ ಭದ್ರತೆ

ದೆಹಲಿ: ನನ್ನ ಸರಕಾರ ದೇಶದ 25 ಕೋಟಿ ಜನರನ್ನು ಬಡತನದಿಂದ ಮುಕ್ತಗೊಳಿಸಿದೆ. 95 ಕೋಟಿ ಜನರು ಸಾಮಾಜಿಕ ಭದ್ರತೆಯನ್ನು ಪಡೆದುಕೊಂಡಿದ್ದಾರೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಹೇಳಿದ್ದಾರೆ.

ಬಜೆಟ್ ಅಧಿವೇಶನದ ಮೊದಲ ದಿನ ಜಂಟಿ ಸದನವನ್ನುದ್ದೇಶಿಸಿ ದೀರ್ಘ ಭಾಷಣ ಮಾಡಿದ ರಾಷ್ಟ್ರಪತಿಗಳು, ಎನ್‌ಡಿಎ ಮೈತ್ರಿಕೂಟ ಸರಕಾರವು ಕಳೆದ ಹನ್ನೊಂದೂವರೆ ವರ್ಷಗಳಲ್ಲಿ ಜನಹಿತಕಾರಿಯಾದ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದ್ದು, ಅದರ ಫಲವಾಗಿ 25 ಕೋಟಿ ನಾಗರಿಕರು ಬಡತನ ರೇಖೆಯಿಂದ ಹೊರಬಂದಿದ್ದಾರೆ. ಬಡವರನ್ನು ಸಶಕ್ತಗೊಳಿಸುವ ಕಾರ್ಯಕ್ರಮಗಳು ಈಗ ಮೊದಲಿಗಿಂತ ಹೆಚ್ಚಿನ ವೇಗದಲ್ಲಿ ಸಾಗುತ್ತಿವೆ ಎಂದು ಹೇಳಿದರು.

ಮಹಿಳೆಯರಿಗೆ ಶೇ.33 ಮೀಸಲು ಸವಲತ್ತು, 'ಲಖ್‌ಪತಿ ದೀದಿ' ಮೊದಲಾದ ಮಹಿಳಾ ಕೇಂದ್ರಿತ ಕ್ರಮಗಳು ದೇಶದ ನಾರಿ ಶಕ್ತಿಯನ್ನು ಉನ್ನತೀಕರಿಸುತ್ತಿದೆ. ಸರಕಾರದ ಈ ಕ್ರಮಗಳು ಮಹಿಳೆಯರ ಜೀವನವನ್ನು ಬದಲಿಸುತ್ತಿವೆ ಎಂದು ಹೇಳಿದ್ದಾರೆ. ಕಳೆದೊಂದು ದಶಕದಲ್ಲಿ ದೇಶದಲ್ಲಾಗಿರುವ ಪ್ರಗತಿಯ ಅಂಶಗಳನ್ನು ಭಾಷಣದಲ್ಲಿ ಉಲ್ಲೇಖಿಸಿದ ರಾಷ್ಟ್ರಪತಿ ಮುರ್ಮು ಅವರು ಮಹತ್ವದ ಅಂಕಿಅಂಶಗಳನ್ನು ಹಂಚಿಕೊಂಡರು. ಭಾರತ ದೇಶ ಶೀಘ್ರದಲ್ಲೇ ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆಯಾಗಿ ಗುರುತಿಸಿಕೊಳ್ಳಲಿದೆ ಎಂದು ಮುರ್ಮು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಲಿಖಿತ ಭಾಷಣವನ್ನು ವಾಚಿಸಿದ ಮುರ್ಮು ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯಗಳನ್ನು ಸ್ಮರಿಸಿದರು. ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೂ ತಾರತಮ್ಯವಿಲ್ಲದೆ ಸಮಾನ ಹಕ್ಕುಗಳನ್ನು ನೀಡಿದೆ. ಸಾಮಾಜಿಕ ನ್ಯಾಯ ಕೇವಲ ಘೋಷಣೆಯಾಗಬಾರದು, ಅದು ಪ್ರತಿಯೊಬ್ಬರಿಗೂ ತಲುಪಬೇಕು ಎಂಬುದೇ ನಮ್ಮ ಸರಕಾರದ ಗುರಿಯಾಗಿದೆ ಎಂದರು.

ಈ ಸಂದರ್ಭ ರಾಜ್ಯಸಭೆ ಸಭಾಪತಿಯೂ ಆಗಿರುವ ಉಪ ರಾಷ್ಟ್ರಪತಿ ರಾಧಾಕೃಷ್ಣನ್, ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಎಲ್ಲಾ ಸಚಿವರು, ಆಡಳಿತ ಪಕ್ಷದ ಸಂಸದರು, ಪ್ರತಿಪಕ್ಷ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿದಂತೆ ವಿವಿಧ ಪಕ್ಷಗಳ ಸಂಸದರು ಉಪಸ್ಥಿತರಿದ್ದರು.

ಹೇಳಿದ್ದೇನು?

- ನನ್ನ ಸರಕಾರ ನಿಜವಾದ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ
- ಬಾಹ್ಯಾಕಾಶ, ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ತೀವ್ರ ಪ್ರಗತಿ
- ಹಿಂದುಳಿದ ಸಮುದಾಯಗಳಿಗಾಗಿ ಸಮಾಜ ಕಲ್ಯಾಣ ನೀತಿ
- ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸರ್ವರಿಗೂ ಸಮಾನ ನ್ಯಾಯ
- ಭ್ರಷ್ಟಾಚಾರ ಮುಕ್ತ ವ್ಯವಸ್ಥೆಯಿದೆ, ಪ್ರತಿ ರುಪಾಯಿ ಖರ್ಚಿಗೂ ಪಕ್ಕಾ ಲೆಕ್ಕವಿದೆ
- ಎಲೆಕ್ಟ್ರಾನಿಕ್ಸ್, ಕೃಷಿ ಉತ್ಪನ್ನ, ಮೀನುಗಾರಿಕೆಯಲ್ಲಿ ಬೆಳವಣಿಗೆ
- ರೈಲ್ವೆ, ವಿಮಾನಯಾನ ಕ್ಷೇತ್ರದಲ್ಲಿ ಮೂಲಸೌಕರ್ಯ ಅಭಿವೃದ್ಧಿ

ಸದನದಲ್ಲಿ ಕದ್ದಾಲಿಕೆ ಕದನ

ಸರಕಾರದಿಂದ ಫೋನ್ ಕದ್ದಾಲಿಕೆ ಆರೋಪ, ವಿಧಾನಸಭೆಯಲ್ಲಿ ಗದ್ದಲ ಫೋನ್ ಕದ್ದಾಲಿಕೆ ಮಾಡುತ್ತಿಲ್ಲವೆಂದ ಮುಖ್ಯಮಂತ್ರಿ ಸಿದ್ದರಾಮಯ್ಯ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರಿಗೆ ದೆಹಲಿಯಿಂದ ಕರೆಗಳು ಬರುತ್ತಿದ್ದು, ಕೇಂದ್ರದ ಸೂಚನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ವಿಧಾನಸಭೆಯಲ್ಲಿ ನೀಡಿದ ಹೇಳಿಕೆ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವಣ ತೀವ್ರ ಮಾತಿನ ಚಕಮಕಿಗೆ ಕಾರಣವಾಯಿತು. ಸಚಿವರು ಈ ಹೇಳಿಕೆ ನೀಡುತ್ತಿದ್ದಂತೆಯೇ ಕಾಂಗ್ರೆಸ್ ಸರಕಾರ ಫೋನ್ ಟ್ಯಾಪಿಂಗ್ ಮಾಡುತ್ತಿದೆ ಎಂದು ಆರೋಪಿಸಿ ಬಿಜೆಪಿ ಶಾಸಕರು ಸದನದಲ್ಲಿ ಗದ್ದಲವೆಬ್ಬಿಸಿದರು.

ಸಿದ್ದರಾಮಯ್ಯ ನೇತೃತ್ವದ ಸರಕಾರ ಫೋನ್ ಕದ್ದಾಲಿಕೆ ಮಾಡುತ್ತಿದೆ ಎಂದು ಆರೋಪಿಸಿದ ಬಿಜೆಪಿ ಶಾಸಕರು, ಲೋಕಭವನ ಮತ್ತು ರಾಜ್ಯಪಾಲರಿಗೆ ಬಂದ ಫೋನ್ ಕರೆಗಳ ಮಾಹಿತಿ ಸಚಿವ ಎಚ್.ಕೆ.ಪಾಟೀಲ್ ಅವರಿಗೆ ಹೇಗೆ ಗೊತ್ತಾಯಿತು ಎಂದು ಪ್ರಶ್ನಿಸಿದರು. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮೇಲಿನ ವೇಳೆ ಈ ಗದ್ದಲ, ಗೊಂದಲ ಉಂಟಾಯಿತು.

ಚರ್ಚೆ ಮಧ್ಯೆ ಮಾತನಾಡಿದ ಶಾಸಕ ಸುರೇಶ್ ಕುಮಾರ್, ರಾಜ್ಯಪಾಲ ಗೆಹ್ಲೋಥ್ ವಿರುದ್ಧ ಅನಗತ್ಯ ಆರೋಪ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಈ ಹಿಂದೆಯೂ ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ಸಂಪೂರ್ಣ ಭಾಷಣ ಓದದೆ ಇರುವ ನಿದರ್ಶನಗಳು ಇವೆ. 2011ರ ಜನವರಿಯಲ್ಲಿ ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಅವರ ಒತ್ತಾಯದ ಮೇರೆಗೆ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಅವರು ಭಾಷಣ ಓದದೆ ಸದನದಿಂದ ಹೊರ ನಡೆದಿದ್ದರು ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಹಾಲಿ ರಾಜ್ಯಪಾಲರಿಗೆ ದೆಹಲಿಯಿಂದ ಕರೆಗಳು ಬರುತ್ತಿವೆ. ಆ ಕರೆಗಳ ಸೂಚನೆಯಂತೆ ರಾಜ್ಯಪಾಲರು ಪೂರ್ಣ ಭಾಷಣವನ್ನು ಓದಲಿಲ್ಲ, ನೀವು ಹಿಂದಿನ ಘಟನೆಯ ಬಗ್ಗೆ ಮಾತನಾಡಿದರೆ, ನಾವು ಈಗ ಅದರ ಬಗ್ಗೆ ಮಾತನಾಡಬೇಕಾಗುತ್ತದೆ ಎಂದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಸುರೇಶ್ ಕುಮಾರ್, ಕಾನೂನು ಸಚಿವರು ಗಂಭೀರ ಆರೋಪ ಮಾಡುತ್ತಿದ್ದಾರೆ. ರಾಜ್ಯಪಾಲರಿಗೆ ದೆಹಲಿ ಯಿಂದ ಬರುವ ಕರೆಗಳನ್ನು ತಿಳಿಯಲು ಸರಕಾರ ಫೋನ್ ಟ್ಯಾಪಿಂಗ್ ಮಾಡುತ್ತಿದೆ ಎಂದು ಆರೋಪಿ ಸಿದರು. ಸುರೇಶ್ ಕುಮಾರ್ ಬೆಂಬಲಕ್ಕೆ ನಿಂತ ಬಿಜೆಪಿ ಶಾಸಕರು, ಸರಕಾರ ಲೋಕಭವನದ ಫೋನ್ ಟ್ಯಾಪಿಂಗ್ ಮಾಡುತ್ತಿದೆ ಎಂದು ಪ್ರಶ್ನಿಸಿ ದರು. ಇದು ವಿಧಾನಸಭೆಯಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

ಕೇಂದ್ರದ ಕೈಗೊಂಬೆ: ಕಾನೂನು ಸಚಿವರ ಹೇಳಿಕೆಯನ್ನು ಸಮರ್ಥಿಸಿಕೊಂಡ ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯಪಾಲರು ಕೇಂದ್ರ ಸರಕಾರದ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ.

> **ರಾಜ್ಯಭವನದ ಫೋನ್ ಟ್ಯಾಪಿಂಗ್ ನಡೆಯುತ್ತಿದೆಯೇ?. ರಾಜ್ಯ ಸರಕಾರ ಕದ್ದಾಲಿಕೆ ಮಾಡುತ್ತಿದೆ. ಯಾರು ಕದ್ದಾಲಿಕೆ ಮಾಡುತ್ತಿದ್ದಾರೆ? ಮೊನ್ನೆ ಕೂಡ ಕಾನೂನು ಸಚಿವರು ಇದೇ ಆರೋಪ ಮಾಡಿದ್ದರು. ಅವರ ಬಳಿ ಅಧಿಕೃತ ದಾಖಲೆ ಇದ್ದರೆ ಸದನದಲ್ಲಿ ಮಂಡಿಸಲಿ. ವಿವರಣೆ ಕೊಡಲಿ.**
>
> **– ಸುನೀಲ್‌ಕುಮಾರ್ ಶಾಸಕ**

> **ರಾಜ್ಯಪಾಲರು ಕೇಂದ್ರ ಸರಕಾರದ ಕೈಗೊಂಬೆ. ರಾಜ್ಯಪಾಲರು ರಾಷ್ಟ್ರಗೀತೆಗೆ ಅಪಮಾನ ಮಾಡಿಲ್ಲವೇ? ಕೇಶವ ಕೃಪಾದಿಂದಲೂ ಫೋನ್ ಹೋಗುತ್ತದೆ. ಯಾರು ಮಾಡಿದ್ದಾರೆ ಎಂಬುದನ್ನು ಕೇಂದ್ರ ಸರಕಾರದಿಂದ ತಿಳಿದುಕೊಳ್ಳಿ.**
>
> **– ಪ್ರಿಯಾಂಕ್ ಖರ್ಗೆ ಸಚಿವ**

ಅವರಿಗೆ ಕೇಶವ ಕೃಪಾದಿಂದ ಫೋನ್ ಬರುತ್ತದೆ ಎಂದು ಆರೋಪಿಸಿದರು. ಇದರಿಂದ ಕೆರಳಿದ ಸುರೇಶ್ ಕುಮಾರ್ ಹಾಗೂ ಬಿಜೆಪಿ ಸದಸ್ಯರು ರಾಜ್ಯ ಸರಕಾರ, ರಾಜ್ಯಪಾಲರ ಫೋನ್ ಕದ್ದಾಲಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು. ಪ್ರತಿಪಕ್ಷ ನಾಯಕ ಆರ್.ಅಶೋಕ ಕೂಡ ಫೋನ್ ಕದ್ದಾಲಿಕೆ ಆರೋಪವನ್ನು ಸಮರ್ಥಿಸಿಕೊಂಡರು.

ರಾಜ್ಯಪಾಲರಿಗೆ ಕೇಂದ್ರದಿಂದ ಕರೆಗಳು ಬರುತ್ತಿರುವ ಬಗ್ಗೆ ಕಳೆದ ವಾರ ಮಾಡಿದ್ದ ಮೊದಲ ಆರೋಪಕ್ಕೆ ಇಲ್ಲಿಯವರೆಗೆ ರಾಜ್ಯಪಾಲರಿಂದ ಅಥವಾ ಕೇಂದ್ರದಿಂದ ಏಕೆ ಸ್ಪಷ್ಟನೆ ನೀಡಿಲ್ಲ ಎಂದು ಎಚ್.ಕೆ.ಪಾಟೀಲ್ ಪ್ರಶ್ನಿಸಿದರು. ದೆಹಲಿಯಲ್ಲಿ ಗೃಹ ಸಚಿವಾಲಯ ಏನು ಮಾಡುತ್ತಿದೆ? ರಾಜ್ಯ ಪಾಲರು ಮತ್ತು ಗೃಹ ಸಚಿವಾಲಯದ ನಡುವೆ ಯಾವುದೇ ಮಾತುಕತೆ ನಡೆದಿಲ್ಲ ಎಂಬ ಬಗ್ಗೆ ಪತ್ರಿಕಾ ಹೇಳಿಕೆಯನ್ನಾದರೂ ಹೊರಡಿಸಬೇಕ ಲ್ಲವೇ? ಎಂದು ಪ್ರಶ್ನಿಸಿದರು.

ಎಚ್.ಕೆ.ಪಾಟೀಲ್ ಹೇಳಿಕೆಗೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಪ್ರತಿಪಕ್ಷಗಳು ಮತ್ತು ಆಡಳಿತ ಪಕ್ಷದ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ಗದ್ದಲದಲ್ಲೇ ಮಾತು ಮುಂದುವರೆಸಿದ ಆರ್.ಅಶೋಕ, ಸಚಿವ ಎಚ್.ಕೆ.ಪಾಟೀಲ್ ಅವರು ಹೇಳಿರುವುದು ದಾಖಲೆಗೆ ಹೋಗಿದೆ. ರಾಜಭವನಕ್ಕೆ ಕೇಂದ್ರದಿಂದ ಕೇಶವ ಕೃಪಾದಿಂದ ಕರೆ ಬಂದಿದೆ ಎಂದು ಕಾನೂನು ಸಚಿವರು ಹೇಳುತ್ತಿದ್ದಾರೆ. ಈ ಬಗ್ಗೆ ತನಿಖೆ ಆಗಬೇಕು. ಸರಕಾರ ಲೋಕಭವನ, ಆರ್‌ಎಸ್‌ಎಸ್ ಕಚೇರಿಯ ಫೋನನ್ನು ಕದ್ದಾಲಿಸುತ್ತಿದೆ ಎಂಬುದನ್ನು ಕಾನೂನು ಸಚಿವರು ಒಪ್ಪಿಕೊಂಡಿದ್ದಾರೆ. ಇದು ಫೋನ್ ಟ್ಯಾಪಿಂಗ್ ಸರಕಾರನಾ? ಎಂದು ಪ್ರಶ್ನಿಸಿದರು.

ನಾನು ಈ ಬಗ್ಗೆ ಆಪಾದನೆ ಮಾಡುತ್ತಿದ್ದೇನೆ. ಈ ಆಪಾದನೆಗೆ ಕೇಂದ್ರ ಗೃಹ ಸಚಿವಲಾಯ ಒಂದು ಸ್ಪಷ್ಟನೆ ಕೊಟ್ಟಿಲ್ಲ ಎಂದು ಎಚ್.ಕೆ. ಪಾಟೀಲ್ ತಮ್ಮ ಮಾತನ್ನು ಸಮರ್ಥಿಸಿಕೊಂಡರು.ಆಗ ಎದ್ದು ನಿಂತ ಬಿಜೆಪಿಯ ಸುರೇಶ್ ಕುಮಾರ್, ಜವಾಬ್ದಾರಿಯುತ ವ್ಯಕ್ತಿಯಾಗಿ ಕಾನೂನು ಸಚಿವರು ಈ ರೀತಿ ಬೇಜವಾಬ್ದಾರಿ ಹೇಳಿಕೆ ನೀಡಬಾರದು. ನೀವು ರಾಜ್ಯಪಾಲರ ಮೇಲೆ ಆಪಾದನೆ ಮಾಡುತ್ತಿರಾ ರಾಜ್ಯಪಾಲರು ಸದನಕ್ಕೆ ಬಂದು ಉತ್ತರ ಕೊಡಲು ಸಾಧ್ಯನೆ ಎಂದು ತರಾಟೆಗೆ ತೆಗೆದುಕೊಂಡರು. ಪಾಟೀಲ್ ಮತ್ತು ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಗಳು ಲೋಕಭವನ ಮತ್ತು ಕಚೇರಿಯ ಫೋನ್ ಕದ್ದಾಲಿಕೆಯಾಗಿರುವುದನ್ನು ಸಾಬೀತುಪ ಡಿಸುತ್ತದೆ ಎಂದು ಅಶೋಕ ಹೇಳಿದರು.

ನಮ್ಮ ಫೋನ್‌ಗನ್ನೂ ಕದ್ದಾಲಿಕೆ ಮಾಡಲಾಗುತ್ತಿದೆಯೇ? ಇದು ಫೋನ್ ಕದ್ದಾಲಿಕೆ ಸರಕಾರ ಎಂದು ಬಿಜೆಪಿ ತೀವ್ರ ವಾಗ್ವಾದ ಮತ್ತು ಗದ್ದಲ ಮುಂದುವರಿ ದಾಗ, ಸ್ಪೀಕರ್ ಯು.ಟಿ.ಖಾದರ್ ಸದನವನ್ನು ಭೋಜನ ವಿರಾಮಕ್ಕೆ ಮುಂದೂಡಿದರು. ಬಳಿಕ ಸದನ ಸಮಾವೇಶಗೊಂಡಾಗ ಸರ್ಕಾರ ಕ್ಷಮೆಕೇಳ ಬೇಕು ಎಂದು ಆರ್.ಅಶೋಕ ಒತ್ತಾಯಿಸಿದರು. ಇದಕ್ಕೆ ಸ್ಪಷ್ಟನೆ ನೀಡಿದ ಸಿಎಂ, ಸರಕಾರ ಫೋನ್ ಕದ್ದಾಲಿಕೆ ಮಾಡುತ್ತಿಲ್ಲ ಎಂದು ಹೇಳಿದರು.

ಕ್ರಮಬದ್ಧವಾಗಿ ಕಲಾಪ ನಡೆಯುತ್ತಿಲ್ಲ: ನಾರಾಯಣಸ್ವಾಮಿ

ವಿಧಾನ ಪರಿಷತ್: ವಿಧಾನ ಪರಿಷತ್ ಕಲಾಪ ಕ್ರಮಬದ್ಧವಾಗಿ ನಡೆಯದಿರುವುದಕ್ಕೆ ಅಸಮಾಧಾನಗೊಂಡ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ವಿಧಾನ ಪರಿಷತ್ ಕಾರ್ಯವಿಧಾನ ಹಾಗೂ ನಡವಳಿಕೆ ಕುರಿತ ಪುಸ್ತಕ ಹರಿದು ಬಿಸಾಡಿ ಆಕ್ರೋಶ ಹೊರಹಾಕಿದರು.

ಭೋಜನಾ ವಿರಾಮ ಬಳಿಕ ಕಲಾಪ ಆರಂಭವಾಗುತ್ತಿದ್ದಂತೆ ದೋಸ್ತಿ ಸದಸ್ಯರು ಸದನದ ಬಾವಿಗಿಳಿದು ಧರಣಿ ಮುಂದುವರಿಸಿದರು. ಸುಗಮ ಕಲಾಪಕ್ಕೆ ನಡೆಯಲು ಅನುವು ಮಾಡಿಕೊಡುವಂತೆ ಸಭಾಪತಿ ಬಸವರಾಜ ಹೊರಟ್ಟಿ ಅವರು ವಿನಂತಿಸಿ ಪ್ರಶೋತ್ತರ ಕಲಾಪ ಆರಂಭಕ್ಕೆ ಮುಂದಾದರು.

ಇದಕ್ಕೆ ಆಕ್ಷೇಪಿಸಿದ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ನಿಯಾಮವಳಿಯಂತೆ ಸದನವು ಸರಿ ದಾರಿಯಲ್ಲಿ ನಡೆಯುತ್ತಿಲ್ಲ. ಇದೇ ವಿಚಾರವಾಗಿ ಸದನದ ಬಾವಿಗಿಳಿದು ಧರಣಿ ಮಾಡುತ್ತಿದ್ದೇವೆ. ಈ ವಿಚಾರ ಇತ್ಯರ್ಥ ಆಗುವವರೆಗೂ ಮುಂದಿನ ಪ್ರಕ್ರಿಯೆ ನಡೆಸುವುದು ತರವಲ್ಲ. ಕ್ರಮಬದ್ಧವಾಗಿ ಸದನ ನಡೆಯದಿದ್ದರೆ ರೂಲ್ ಬುಕ್ ಯಾಕೆ ಬೇಕು? ಎಂದು ಪ್ರಶ್ನಿಸಿ ಪುಸ್ತಕ ಹರಿದು ಬಿಸಾಕಿ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಆಕ್ಷೇಪಿಸಿದ ಕಾಂಗ್ರೆಸ್ ಸದಸ್ಯರು ವಿರೋಧ ಪಕ್ಷದ ನಾಯಕರ ವಿರುದ್ಧ ಘೋಷಣೆ ಕೂಗಿದರು. ಸದನದ ನಿಯಮಾವಳಿ ಪುಸ್ತಕವನ್ನು ಹರಿದು ಹಾಕುವ ಮೂಲಕ ಪೀಠಕ್ಕೆ ಅಗೌರವ ತೋರಿದ್ದಾರೆ. ಹೀಗಾಗಿ ಅವರು ಕೂಡಲೇ ಕ್ಷಮೆ ಕೇಳಬೇಕು ಹಾಗೂ ಸದನದಿಂದ ಅವರನ್ನು ಹೊರಹಾಕುವಂತೆ ರೂಲಿಂಗ್ ನೀಡಬೇಕೆಂದು ಸಭಾಪತಿಗಳಿಗ ಒತ್ತಾಯಿಸಿದರು.

ಈ ವೇಳೆ ಮಧ್ಯೆ ಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ, ಈ ಸದನದ ನಿಯಮಾವಳಿ ತಿಳಿಸುವ ರೂಲ್ ಬುಕ್ ನಮಗೆ ಸಂವಿಧಾನವಿದ್ದಂತೆ. ಈ ವಿಚಾರದಲ್ಲಿ ಎಡವಿದ್ದೀರಿ. ಹೀಗಾಗಿ ವಿಷಾದ ವ್ಯಕ್ತಪಡಿಸಿ ಎಂದು ಹೇಳಿದರು. ಈ ಕುರಿತು ಮಾತನಾಡಿದ ಛಲವಾದಿ ನಾರಾಯಣಸ್ವಾಮಿ, ಸದನವು ಕ್ರಮಬದ್ಧವಾಗಿ ನಡೆಯುತ್ತಿಲ್ಲ. ಈ ಬಗ್ಗೆ ಮಾತ್ರ ನನ್ನ ಆಕ್ಷೇಪವಿದೆ. ಎಲ್ಲಿಯೂ ನಾನು ಪೀಠಕ್ಕೆ ಅಪ ಮಾಸಿಲ್ಲ ಎಂದು ಸ್ಪಷ್ಟಪಡಿಸುತ್ತಿದ್ದಂತೆ, ಆಡಳಿತ ಪಕ್ಷ ದವರು ಧಿಕ್ಕಾರ ಕೂಗುವುದನ್ನು ಮುಂದುವರಿಸಿದರು.

> ### ಸದನದ ಹಕ್ಕುಚ್ಯುತಿಯಾಗಿದೆ: ಪ್ರತಿಪಕ್ಷ ಆರೋಪ
>
> **ಜಂಟಿ ಅಧಿವೇಶನ ವೇಳೆ ರಾಷ್ಟ್ರಗೀತೆಗೆ ನಿಲ್ಲುವಂತೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಎರಡು ಬಾರಿ ಹೇಳಿದರೂ ರಾಜ್ಯಪಾಲರು ಸದನದಿಂದ ಹೊರ ನಡೆಯುವ ಮೂಲಕ ಅಗೌರವ ತೋರಿದ್ದಾರೆ ಎಂದು ವಿಧಾನಸಭೆಯಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ. ಸುಳ್ಳು ಹೇಳುವ ಮೂಲಕ ಸದನದ ಹಕ್ಕುಚ್ಯುತಿಗೆ ಕಾರಣರಾಗಿದ್ದಾರೆ ಎಂದು ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಹೊರಟ್ಟಿ, ಜಂಟಿ ಅಧಿವೇಶನ ಆರಂಭದ ದಿನದಂದು ರಾಷ್ಟ್ರಗೀತೆ ವಿಚಾರವಾಗಿ ರಾಜ್ಯಪಾಲರೊಂದಿಗೆ ಮಾತನಾಡಿಲ್ಲ. ಅವರ ಭಾಷಣ ಮಾಡುವಾಗ ಜತೆಗಿದ್ದೆ ಅಷ್ಟೇ. ಅವರೊಂದಿಗೆ ಯಾವ ವಿಚಾರವನ್ನು ಪ್ರಸ್ತಾಪಿಸಿಲ್ಲ ಎಂದು ಸ್ಪಷ್ಟನೆ ನೀಡಿದರು.**

ವಿಧಾನಸಭೆಯಲ್ಲಿ ಅಜಿತ್ ಪವಾರ್‌ಗೆ ಶ್ರದ್ಧಾಂಜಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಮಾನ ಅಪಘಾತದಲ್ಲಿ ದುರ್ಮರಣ ಹೊಂದಿದ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರಿಗೆ ವಿಧಾನಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸದನ ಆರಂಭವಾಗುತ್ತಿದ್ದಂತೆಯೇ ಸಭಾಧ್ಯಕ್ಷ ಯು.ಟಿ.ಖಾದರ್ ಸಂತಾಪ ಸೂಚನಾ ನಿರ್ಣಯ ಮಂಡಿಸಿ, ಮಹಾರಾಷ್ಟ್ರ ರಾಜ್ಯದ ಉಪಮುಖ್ಯಮಂತ್ರಿಯರಾದ ಅಜಿತ್ ಪವಾರ್ ಸೇರಿದಂತೆ ಇತರ 5 ಮಂದಿ ವಿಮಾನ ಅಪಘಾತದಲ್ಲಿ ನಿಧನರಾಗಿರುವುದನ್ನು ಸದನದಲ್ಲಿ ಅತ್ಯಂತ ವಿಷಾದದಿಂದ ತಿಳಿಯ ಬಯಸುತ್ತೇನೆ ಎಂದು ಹೇಳಿದರು.

ಅಜಿತ್ ಪವಾರ್ ಅವರು 6 ಬಾರಿ ಶಾಸಕರಾಗಿ ಹಾಗೂ ಒಂದು ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದು, ಕೇಂದ್ರ ರಕ್ಷಣಾ ಸಚಿವರಾಗಿ ಮಹಾರಾಷ್ಟ್ರದಲ್ಲಿ ಸಚಿವರಾಗಿ, ಉಪಮುಖ್ಯಮಂತ್ರಿಯಾಗಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿ, ಅವರ ನಿಧನದಿಂದ ದೇಶ ಒಬ್ಬ ಉತ್ತಮ ನಾಯಕರನ್ನು ಕಳೆದುಕೊಂಡಿದೆ ಎಂದು ತಿಳಿಸಿದರು.

ಸಂತಾಪ ಸೂಚನಾ ನಿರ್ಣಯದ ಮೇಲೆ ಸಚಿವರಾದ ಎಚ್.ಕೆ.ಪಾಟೀಲ್, ಪ್ರತಿಪಕ್ಷದ ನಾಯಕ ಅಶೋಕ, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಶಾಸಕ ಲಕ್ಷ್ಮಣ್ ಸವದಿ ಅವರು ಅಜಿತ್ ಪವಾರ್ ಅವರ ಸೇವೆ, ಕಾರ್ಯವನ್ನು ನೆನಪಿಸಿಕೊಂಡರು. ಇದಾದ ಬಳಿಕ ಸದನದಲ್ಲಿ ಒಂದು ನಿಮಿಷ ಮೌನ ಆಚರಿಸಿ ಅಜಿತ್ ಪವಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿಮಾನ ಅಪಘಾತದಲ್ಲಿ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ದುರಂತ ನಿಧನದಿಂದ ತೀವ್ರ ದುಃಖಿತನಾಗಿದ್ದೇನೆ. ಅವರ ನಿಧನವು ಮಹಾರಾಷ್ಟ್ರ ರಾಜಕೀಯಕ್ಕೆ ದೊಡ್ಡ ನಷ್ಟ. ಸಾರ್ವಜನಿಕ ಜೀವನಕ್ಕೆ ಅಪಾರ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಪ್ರೀತಿಪಾತ್ರರಿಗೆ, ಬೆಂಬಲಿಗರಿಗೆ, ಕುಟುಂಬಸ್ಥರಿಗೆ ಭಗವಂತ ಈ ನಷ್ಟವನ್ನು ಸಹಿಸಿಕೊಳ್ಳುವ ಶಕ್ತಿ ಕೊಡಲಿ.

– ಸಿದ್ದರಾಮಯ್ಯ ಮುಖ್ಯಮಂತ್ರಿ

ಅಜಿತ್ ಪವಾರ್ ಅಕಾಲಿಕ ವಿಮಾನ ಅಪಘಾತದಿಂದ ಆಘಾತವಾಗಿದೆ. ಅವರ ಹಠಾತ್ ನಿಧನವು ಸಾರ್ವಜನಿಕ ಜೀವನ ಮತ್ತು ಮಹಾರಾಷ್ಟ್ರ ರಾಜಕೀಯಕ್ಕೆ ದೊಡ್ಡ ನಷ್ಟವಾಗಿದೆ, ಅಲ್ಲಿ ಅವರು ಅನುಭವ ಮತ್ತು ದೃಢ ಸಂಕಲ್ಪದಿಂದ ಸೇವೆ ಸಲ್ಲಿಸಿದರು. ಅವರ ಕುಟುಂಬ ಮತ್ತು ಬೆಂಬಲಿಗರಿಗೆ ನನ್ನ ಹೃತ್ಪೂರ್ವಕ ಸಂತಾಪಗಳು ಮತ್ತು ಈ ದುಃಖದ ಸಮಯದಲ್ಲಿ ಶಕ್ತಿಗಾಗಿ ಪ್ರಾರ್ಥಿಸುತ್ತೇನೆ.

– ಡಿ.ಕೆ.ಶಿವಕುಮಾರ್ ಡಿಸಿಎಂ

ಅಜಿತ್ ಪವಾರ್ ಅವರ ದುರಂತ ವಿಮಾನ ಅಪಘಾತದಲ್ಲಿ ಅಕಾಲಿಕ ನಿಧನದಿಂದ ಆಘಾತ ಮತ್ತು ತೀವ್ರ ದುಃಖವಾಗಿದೆ. ಅವರ ಹಠಾತ್ ನಿಧನವು ಸಾರ್ವಜನಿಕ ಜೀವನ ಮತ್ತು ಮಹಾರಾಷ್ಟ್ರ ರಾಜಕೀಯಕ್ಕೆ ದೊಡ್ಡ ನಷ್ಟವಾಗಿದೆ, ಅಲ್ಲಿ ಅವರು ಅನುಭವ ಮತ್ತು ದೃಢಸಂಕಲ್ಪದೊಂದಿಗೆ ಸೇವೆ ಸಲ್ಲಿಸಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ.

– ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ



ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ ವಿಮಾನ ದುರಂತದಲ್ಲಿ ಮೃತಪಟ್ಟಿದ್ದಾರೆ. ಇದು ನಿಜಕ್ಕೂ ದುಃಖಕರ ವಿಚಾರ ವಿಮಾನ ಅಪಘಾತಗಳಲ್ಲಿ ನಾವು ಅನೇಕ ನಾಯಕರನ್ನು ಕಳೆದುಕೊಂಡಿದ್ದೇವೆ. ಅವರ ಸಾಲಿಗೆ ಅಜಿತ್ ಪವಾರ್ ಸೇರಿರುವುದು ದುರಂತದ ಸಂಗತಿ. ಅಜಿತ್ ಪವಾರ ಆತ್ಮಕ್ಕೆ ಶಾಂತಿ ಸಿಗಲಿ ಅವರ ಕುಟುಂಬಕ್ಕೆ ದುಃಖ ತಡೆದುಕೊಳ್ಳುವ ಶಕ್ತಿ ದೇವರು ದಯಪಾಲಿಸಲಿ.

– ಬಸವರಾಜ ಬೊಮ್ಮಾಯಿ ಮಾಜಿ ಮುಖ್ಯಮಂತ್ರಿ

ಬೀದರ್‌ನಲ್ಲಿ 1.8 ತೀವ್ರತೆ ಭೂಕಂಪನ

ಬೀದರ್: ಜಿಲ್ಲೆಯ ಹುಚುಕನಹಳ್ಳಿಯಲ್ಲಿ ಹಾಗೂ ಸೀರಕಟಹಳ್ಳಿಯಲ್ಲಿ 1.8 ತೀವ್ರತೆಯ ಲಘು ಭೂಕಂಪನ ಸಂಭವಿಸಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಬುಧವಾರ ಮಧ್ಯಾಹ್ನ 1:34ರ ಸುಮಾರಿಗೆ ಭೂಕಂಪನ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ 1.8 ತೀವ್ರತೆ ದಾಖಲಾಗಿದೆ. ಬೀದರ್ ತಾಲೂಕಿನ ರಂಜೋಲಖೇಣಿ ಜಿಪಿಯ ಹುಚುಕನಹಳ್ಳಿಯ ಗ್ರಾಮದ 1.0 ಕಿ.ಮೀ ವಾಯವ್ಯ ದಿಕ್ಕಿನಲ್ಲಿ ಭೂಕಂಪದ ಕೇಂದ್ರಬಿಂದುವಿದೆ. ಲಘು ಭೂಕಂಪನದಿಂದಾಗಿ ಭೂಮಿಯಿಂದ ವಿಚಿತ್ರ ಶಬ್ದ ಹೊರಬಂದಿದ್ದು, ಜನರು ಆತಂಕಗೊಂಡಿದ್ದಾರೆ. ಸ್ಥಳಕ್ಕೆ ಬೀದರ್ ತಹಸೀಲ್ದಾರ್ ಸೇರಿದಂತೆ ಸ್ಥಳೀಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ಮಾಡಿದ್ದಾರೆ. ಲಘು ಭೂಕಂಪನಕ್ಕೆ ಭಯ ಪಡಬೇಡಿ ಎಂದು ತಿಳಿಸಿದ್ದಾರೆ.

ಕೊಳಚೆ ನೀರಿನಲ್ಲಿ ತಟ್ಟೆ ತೊಳೆದ ಶಾಲಾ ಮಕ್ಕಳು

ಬಾಗಲಕೋಟೆ: ಊಟ ಮಾಡಿದ ತಟ್ಟೆಯನ್ನು ವಿದ್ಯಾರ್ಥಿಗಳು ಕೊಳಚೆ ನೀರಿನಲ್ಲಿ ತೊಳೆದ ಅಮಾನುಷ ಘಟನೆ ಜಿಲ್ಲೆಯ ಜಮಖಂಡಿ ತಾಲೂಕಿನ ಆಲಬಾಳ ಗ್ರಾಮದಲ್ಲಿ ನಡೆದಿದೆ.

ಶಾಲೆಯ ವಿದ್ಯಾರ್ಥಿಗಳು ಮಧ್ಯಾಹ್ನದ ಊಟದ ನಂತರ ತಮ್ಮ ತಟ್ಟೆಯನ್ನು ಚರಂಡಿಯ ಕೊಳಚೆ ನೀರಿನಲ್ಲಿ ತೊಳೆಯುವ ಸ್ಥಿತಿ ಬಂದಿದ್ದು, ಸಂಬಂಧಿಸಿದ ಶಾಲೆಯ ಶಿಕ್ಷಕರು ಹಾಗೂ ಆಡಳಿತ ಮಂಡಳಿ ಕಾರ್ಯ ವೈಖರಿಗೆ ಸಾರ್ವಜನಿಕ ರಿಂದ ಆಕ್ರೋಶ ವ್ಯಕ್ತವಾಗುತ್ತಿದೆ. ಮಕ್ಕಳನ್ನು ದೇವರ ಸಮಾನಕ್ಕೆ ಹೋಲಿಸುವ ನಮ್ಮ ಸಮಾಜದಲ್ಲಿ ಪುಟ್ಟ ಪುಟ್ಟ ಮಕ್ಕಳು ಊಟ ಮಾಡಿದ ತಾಟನ್ನು ಕೊಳಚೆ ನೀರಿನಲ್ಲಿ ತೊಳೆಯುತ್ತಿರುವ ಫೋಟೊಗಳು ವೈರಲ್ ಆಗುತ್ತಿದ್ದಂತೆ ಮಕ್ಕಳ ಸ್ಥಿತಿ ಈ ರೀತಿಯಾದರೆ ಹೇಗೆ ಎಂದು ಶಿಕ್ಷಣ ಇಲಾಖೆ ವಿರುದ್ಧ ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ.

ಮೈಸೂರು ಮೃಗಾಲಯ: ಜಿರಾಫೆ ಸಾವು

ಮೈಸೂರು: ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ನೆಲೆಸಿದ್ದ ಗಂಡು ಜಿರಾಫೆ ಯುವರಾಜ ಬುಧವಾರ ಸಾವನ್ನಪ್ಪಿದೆ. 25 ವರ್ಷದ ಯುವರಾಜ ಜಿರಾಫೆ ಬುಧವಾರ ಬೆಳಗ್ಗೆ ಮೃತಪಟ್ಟಿದೆ. 1987ರಲ್ಲಿ ಜರ್ಮನಿಯಿಂದ ತಂದ ಹೆನ್ರಿ ಮತ್ತು ಹನಿ ಜಿರಾಫೆಗಳಿಗೆ 9ನೇ ಮರಿಯಾಗಿ ಯುವರಾಜ 7-12-2001ರಲ್ಲಿ ಜನಿಸಿತ್ತು. ಹನಿ ಮತ್ತು ಹೆನ್ರಿ ಜಿರಾಫೆ ಯುವರಾಜ ಜಿರಾಫೆಯ ಜತೆಗೆ ಕೃಷ್ಣರಾಜ, ಚಾಮರಾಜ, ನರಸಿಂಹರಾಜ ಮತ್ತು ಯುವರಾಜ ಜಿರಾಫೆಗಳು ಜನ್ಮ ನೀಡಿದ್ದು, ಈ ಪೈಕಿ ಯುವರಾಜ ಹೆಚ್ಚು ವರ್ಷಗಳ ಕಾಲ ಬದುಕಿದ ಜಿರಾಫೆ ಎನಿಸಿಕೊಂಡಿದೆ.

ಕರ್ನಾಟಕ ಸರ್ಕಾರ
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ
ವಿ. ಸಿ. ಫಾರಂ, ಮಂಡ್ಯ 571 405 ಕರ್ನಾಟಕ, ಭಾರತ
ಎಸ್. ವಿನಯ್ ಕುಮಾರ್, ಆಸ್ತಿ ಅಧಿಕಾರಿಗಳು
ಮೊ.ನಂ: 9448196321
ಮಿಂಚಂಚೆ : eouasmandya@gmail.com
ಸಂಖ್ಯೆ: ಕೃವಿವಿ/ಆಅ/ಟೆಂಡರ್ ಪ್ರಕಟಣೆ/88/2025-26
ದಿ : 22.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯದ ವಿ.ಸಿ.ಫಾರಂ ಆವರಣದ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಹೊಂದಿದ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು https://kppp.karnataka.gov.in ವೆಬ್ ಸೈಟ್ ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ:- (1) ಪೂರ್ವ ಬಿಡ್ ಸಭೆ ದಿನಾಂಕ ಮತ್ತು ಸಮಯ : 31.01.2026 ಬೆಳಿಗ್ಗೆ 10.30 ಗಂಟೆಗೆ. (2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 04.02.2026 ಸಂಜೆ 4.00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 06.02.2026 ಬೆಳಿಗ್ಗೆ 10.30 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 09.02.2026 ಬೆಳಿಗ್ಗೆ 10.30 ಗಂಟೆಗೆ. ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಆಸ್ತಿ ಅಧಿಕಾರಿಗಳು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ, ವಿ.ಸಿ.ಫಾರಂ, ಮಂಡ್ಯ-571405 ಇವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 9448196321.

Sd/-Estate Officer
University of Agricultural Sciences Mandya V.C.Farm,
Mandya - 571 405

ವಾಸಾಸಂಇ/ಸನಿ-ಮಂ/ಕೆಎಸ್ಎಂಸಿ&ಎ/730/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 33/2025-26 ದಿನಾಂಕ: 23.01.2026 (3ನೇ ಕರೆ)
ಉಲ್ಲೇಖ:1.ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 19/2025-26 ದಿನಾಂಕ: 23.10.2025
2. ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 25/2025-26 ದಿನಾಂಕ: 10.12.2025 (2ನೇ ಕರೆ)
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ KPWD Class-I/CPWD Class-1 & Above registration ದರ್ಜೆಯ ಗುತ್ತಿಗೆದಾರರಿಂದ ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

"Survey, Investigation, Design, Supply, Erection, Testing and Commissioning of Tank Filling Scheme System for filling up of 15tanks by lifting water from Dandavathi River in SorabaTaluk of Shivamogga District consisting of the following components: construction of Bridge cum Barrage, Intake structure, Jackwell cum pump house, Pumping machineries, 11/0.433KV sub-station, 11 KV Transmission line and 11 KV Terminal bay, Rising main, Pressure distribution network, surge analysis and protection system for filling up of 15 tanks including supply of spares parts and tools, O & M for five years after successful commissioning of the work under Yadagoppa Tank filling scheme on turn-key basis". (INDENT No: 3317) ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ ರೂ. 34.93 ಕೋಟಿಗಳು & ಇ.ಎಂ.ಡಿ ಮೊತ್ತ ರೂ. 0.30 ಕೋಟಿಗಳು.

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 28-01-2026 ರಿಂದ 27-02-2026 ಸಂಜೆ 5.00 ರವರೆಗೆ, 2) ಪ್ರೀಬಿಡ್ ಸಭೆಯ ದಿನಾಂಕ: 10.02.2026 ಬೆಳಿಗ್ಗೆ 11.00 ಗಂಟೆಗೆ (ಸ್ಥಳ :ಮುಖ್ಯ ಇಂಜಿನೀಯರವರ ಕಛೇರಿ, ಕನೀನಿನಿ, ತುಂಗಾ ಮೇಲ್ದಂಡೆ ಯೋಜನಾ ವಲಯ ಶಿವಮೊಗ್ಗ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 02.03.2026 ಬೆಳಿಗ್ಗೆ 11.00 ಗಂಟೆಗೆ 4)ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ಶಿ/ನಂ.191-01/ ಝೋಂಕಾರ್/2025-26
ಸಹಿ/- ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

ಜಿಲ್ಲಾ ಪಂಚಾಯತ್ ಕೋಲಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ-563101. ದೂರವಾಣಿ ಸಂಖ್ಯೆ: 08152-222570, ಇ-ಮೇಲ್ ವಿಳಾಸ: eepredkolar1@gmail.com

ಅಲ್ಪಾವಧಿ ದ್ವಿ-ಲಕೋಟೆ ಟೆಂಡರ್ ಇ-ಪ್ರಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ: 23/2025-26 ದಿನಾಂಕ: 27.01.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-II & III ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ಏಕ/ ದ್ವಿ-ಲಕೋಟೆ ಪದ್ಧತಿಯಲ್ಲಿ **(Single/Two Cover System)** ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಅಧಿಕೃತ ಗುತ್ತಿಗೆದಾರರಿಂದ **ಕೋಲಾರ ಜಿಲ್ಲೆ ಕೋಲಾರ, ಕೆ.ಜಿ.ಎಫ್ ಮತ್ತು ಮಾಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ನಗರ/ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಕೆ.ಡಬ್ಲ್ಯೂ-2&3 ಮಾದರಿಯಲ್ಲಿ ಏಕ/ದ್ವಿ-ಲಕೋಟೆಯಲ್ಲಿ ಟೆಂಡರಗಳನ್ನು ಆಹ್ವಾನಿಸಲಾಗಿದ್ದು, ಇಂಡೆಂಟ್ ಸಂಖ್ಯೆ: 21770 & 21757** ಪರಿಶಿಷ್ಟ ಜಾತಿರವರಿಗೆ 21772 & 23679 ಪ್ರವರ್ಗ-**IIA ಮೀಸಲು ಕಾಮಗಾರಿಗಳಾಗಿದ್ದು ಮತ್ತು ಇಂಡೆಂಟ್ ಸಂಖ್ಯೆ : 23673, 23677, 23681, 23682 & 23687 ಸಾಮಾನ್ಯ ಕಾಮಗಾರಿಗಳಾಗಿರುತ್ತದೆ. ಟೆಂಡರಗಿಟ್ಟ ಮೊತ್ತ ಪ್ರತಿ ಕಾಮಗಾರಿಗೆ ಸರಾಸರಿ ರೂ:. 32.56 ರಿಂದ 84.59 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ** ಟೆಂಡರಗಳನ್ನು ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್: **https://kppp.karnataka.gov.in/** ಮುಖಾಂತರ ಇ-ಟೆಂಡರನಲ್ಲಿ ಭಾಗವಹಿಸಲು ಕೋರಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ:**13.02.2026 ರ ಸಂಜೆ: 4.00 ರವರೆಗೆ** ಗುತ್ತಿಗೆದಾರರು ಟೆಂಡರುಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. **(2)** ಟೆಂಡರನ ತಾಂತ್ರಿಕ ಬಿಡ್ಡನ್ನು **ತೆರೆಯುವ ದಿ: 16.02.2026 ರಂದು ಬೆಳ್ಳಗೆ 11.00 ಗಂಟೆಗೆಂದು ನಿಗದಿ ಪಡಿಸಲಾಗಿದೆ. (3)** ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದ ಗುತ್ತಿಗೆದಾರರಿಗೆ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರಕ್ಯೂರ್‌ಮೆಂಟ್ ಪ್ರೋಟಾಲ್ **(Viz., https://kppp.karnataka.gov.in/)** ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ-ಪ್ರಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: **91 9240214000 & +91 9240214001. ಅನ್ನು ಸಂಪರ್ಕಿಸಲು ಕೋರಲಾಗಿದೆ.**

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:463/ಕೆಎಸ್ಎಂಸಿಎ/2025-26

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2025-26/6818 ದಿನಾಂಕ:27.01.2026

-:ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1,2,3&4 ರಲ್ಲಿ ಲೆಕ್ಕ ಶೀರ್ಷಿಕೆ:2059 ಇಲಾಖಾ ಕಟ್ಟಡಗಳ ನಿರ್ವಹಣೆ,2216 ಇಲಾಖಾ ಮತ್ತು ನ್ಯಾಯಾಂಗ ವಸತಿ ಗೃಹಗಳ ನಿರ್ವಹಣೆ,3054 ರಾಜ್ಯ ಹೆದ್ದಾರಿ ರಸ್ತೆಗಳು ನಿರ್ವಹಣೆ, 3054- ಜಿಲ್ಲಾ ಮುಖ್ಯ ರಸ್ತೆಗಳು ನಿರ್ವಹಣೆ, 3054 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ, 3054- ಜಿಲ್ಲಾ ಮುಖ್ಯ ಸೇತುವೆಗಳ ನಿರ್ವಹಣೆ, ,4059 ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳವೆಚ್ಚ, 4059 ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (ಎಸ್.ಸಿ.ಪಿ/ ಟಿ.ಎಸ್.ಪಿ) 4059- ಇಲಾಖಾ ಕಟ್ಟಡಗಳು, 5054- ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ, 5054- ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ,8443 ಠೇವಣಿ ವಂತಿಕೆ ಅಡಿಯಲ್ಲಿ ಸೇರಿ ಒಟ್ಟು 76 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 5.08 ಲಕ್ಷಗಳು ಹಾಗೂ ರೂ.391.49 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ.7,700/- ಹಾಗೂ ರೂ.5,87,300/- ಇರುತ್ತದೆ. ಭಾಗ-1: ಟೆಂಡರ ಸ್ವೀಕರಿಸುವ ದಿನಾಂಕ 05.02.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 06.02.2026 ರ ಸಂಜೆ 4.45 ಘಂಟೆ ನಂತರ ಭಾಗ-2: ಟೆಂಡರ ಸ್ವೀಕರಿಸುವ ದಿನಾಂಕ 13.02.2026 ರ ಸಂಜೆ 4.30 ಘಂಟೆ ಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 14.02.2026 ರ ಸಂಜೆ 4.45 ಘಂಟೆ ನಂತರ, ಭಾಗ-3:ಟೆಂಡರ ಸ್ವೀಕರಿಸುವ ದಿನಾಂಕ 17.02.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 18.02.2026 ರ ಸಂಜೆ 4.45 ಘಂಟೆ ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ:27.01.2026ರ ನಂತರ ಪಡೆಯಬಹುದು.

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1708/KSMCA/2025-26

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ
ಅನೆಕ್ಸ್ ಕಟ್ಟಡ, 2ನೇ ಮಹಡಿ, ಎಸ್‌ಪಿ ಕಛೇರಿಯ ಹಿಂಭಾಗ, ಡ್ಯಾಂ ರಸ್ತೆ, ಹೊಸಪೇಟೆ
ಸಂ.ಕಾನಿ/ಪಂರಾಇಂವಿ/ವಿಜಯನಗರ/ತಾ.ಶಾಖೆ/ಟೆಂಡರ್/ವಿವಿಲೆಶಿ/2025-26/2181
ದಿನಾಂಕ:27.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through Government of Karnataka Public Procurement Portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ ಹೊಸಪೇಟೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ - 2000ರಂತೆ ಮೀಸಲಾತಿಗೆ ಒಳಪಟ್ಟು ಹಡಗಲಿ, ಹ.ಬೋ.ಹಳ್ಳಿ, ಕೂಡ್ಲಿಗಿ & ಹರಪನಹಳ್ಳಿ, ಹೊಸಪೇಟೆ ತಾಲೂಕಿಗೆ **KKRDB, 5054 (CMIDP), 5054 (Flood), 5054 (SCP), DMF** ಹಾಗೂ ಇತರೆ ಲೆಕ್ಕಶೀರ್ಷಿಕೆಗಳನ್ನು ಅನುಮೋದನೆಯಾದ ವಿವಿಧ ಕಾಮಗಾರಿಗಳಿಗಾಗಿ ಟರ್ನ ಕೀ ಆಧಾರದ ಮೇಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **Standard Bid Document (KW1,2,3 &4)** ನಿಯಮವಳಿಗಳಂತೆ ವೆಬ್‌ಸೈಟ್‌ನ ಆಯಾ ಇಂಡೆಂಟ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿರುವ ನಿಬಂಧನೆಗಳಿಗೊಳಪಟ್ಟು **Works** ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದಾದ ದಿನಾಂಕ: **Annexure I** ಕಾಮಗಾರಿಗಳಿಗೆ ದಿನಾಂಕ:28.01.2026 ರಿಂದ ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ :07.02.2026 ಸಂಜೆ:5.00ವರೆಗೆ ಹಾಗೂ **Annexure II** ಕಾಮಗಾರಿಗಳಿಗೆ ದಿನಾಂಕ:28.01.2026 ರಿಂದ ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ :16.02.2026 ಸಂಜೆ:5.00ವರೆಗೆ **(Auto Extension Specialty up to 4 Days)**

Annexure I Indent Nos (Including Category works) : Harpanahalli Taluk : 22367, 22513, 22960, 22203, 22301, 22873, 22453, 22536, 22620, 22447, 22259, 22260, 22451, 22947, 22627, 22288, 22868, 22256, 22299, 22629, 22632, 22262 & 22866. H B Halli Taluk :22323, 23091 & 23092. Hadagali Taluk :22561, 22563, 22565, 22780 & 22781, Hosapete Taluk : 18904, 18905, 18907, 18909, 18910, 18911, 18912, 18914, 18915, 21769, 22687, 22740, 22683, 22680, 22665, 22672, 22677, 22674 and other indent

Annexure II Indent Nos : 22932, 22931, 22930, 22928, 22929, 22933, 22926, 22927, 22935 & 22934

ಟೆಂಡರ್ ಪ್ರಕ್ರಿಯೆ ದಿನಾಂಕಗಳು/ತಿದ್ದುಪಡಿ/ಮುಂದೂಡಿಕೆಗಳ ಬಗ್ಗೆ ಕಾರಣಾಂತರಗಳಿಂದ ಬದಲಾವಣೆಯಾದಲ್ಲಿ ಕೆಪಿಪಿ ಪೋರ್ಟಲ್ **(https://kppp.karnataka.gov.in)** ವೆಬ್‌ಸೈಟ್‌ನಲ್ಲಿಯೆ ನೋಡಿಕೊಳ್ಳುವುದು. ಬಾಕಿ ಉಳಿದಂತೆ ಟೆಂಡರ್ ಪ್ರಕಟಣೆಯ (ಅನುಭಂದ) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ ವೆಬ್‌ಸೈಟ್ ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ **(eepredvijayanagara@gmail.com)** ಸಂಪರ್ಕಿಸಬಹುದು.

ಸಹಿ/- ಕಾಪಅ ಪಂರಾಇಂ ವಿಭಾಗ, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/502

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕನೀನಿನಿ, ಮಏದಂಕಾನಿ
ವಿಭಾಗ ನಂ 3, ಬಾದಾಮಿ ಜಿಲ್ಲೆ:ಬಾಗಲಕೋಟ
ದೂರವಾಣಿ ಸಂಖ್ಯೆ : 08357-220057 e-mail : eemlb3bdm@gmail.com
ಸಂ.ಕನೀನಿನಿ/ಮಏಕಾನಿ,ವಿ-3/ಡಿಬಿ/ಟೆಂಡರ/2025-26/ 734 ದಿನಾಂಕ: 28-1-2026

(ಕೆಪಿಪಿಪಿ ಪೋರ್ಟಲ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರಿಂದ ಲೆಕ್ಕ ಶೀರ್ಷಿಕೆ 4701 ಎಂ&ಎಂಐ ಇ.ಆರ್.ಎಂ. ಅಡಿಯಲ್ಲಿ ಬರುವ ಕಾಮಗಾರಿಗಳಿಗೆ, ಲೋಕೋಪಯೋಗಿ ಇಲಾಖೆಯಲ್ಲಿ ಸೂಕ್ತ ದರ್ಜೆ/ನಿಗಮದಲ್ಲಿ ನೊಂದಾಯಿತರಾಗಿರುವ ಅರ್ಹ ಗುತ್ತಿಗೆದಾರರಿಂದ, ಶೇಕಡಾವಾರು ಇ-ಟೆಂಡರಗಳನ್ನು ಕೆಪಿಪಿಪಿ ಪೋರ್ಟಲ್ ಮೂಲಕ ಕರೆಯಲಾಗಿದೆ.

ವಿವರವು ಈ ಕೆಳಗಿನಂತಿದೆ

ಕ್ರ.ಸಂ.	ಕಾಮಗಾರಿಯ ಇಂಡೆಂಟ ಸಂಖ್ಯೆ	ಟೆಂಡರಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) ಜಿ.ಎಸ್.ಟಿ ಹೊರತುಪಡಿಸಿ	ಇ.ಎಂ.ಡಿ.ಮೊತ್ತ (ರೂ.ಲಕ್ಷಗಳಲ್ಲಿ)
1	3464	75.74	1.52
2	3465	105.32	1.58
3	3466	72.29	1.45
4	3467	94.53	1.89
5	3468	156.73	2.35
6	3473	144.49	2.17
7	3469	140.15	2.11
8	3470	125.39	1.89

ಟೆಂಡರನ ದಿನಾಂಕಗಳ ವಿವರ:- 1)ಇ-ಟೆಂಡರ ದಾಖಲೆಗಳನ್ನು ಡೌನಲೋಡ ಮಾಡಿಕೊಳ್ಳಲು ಹಾಗೂ ಭರ್ತಿ ಮಾಡಿದ ಇ-ಟೆಂಡರ ಸಲ್ಲಿಸುವ ದಿನಾಂಕ 28-1-2026 ರಿಂದ 11-2-2026 ರಂದು ಸಾಯಂಕಾಲ 4-00 ಗಂಟೆ ವರೆಗೆ. 2)ಪ್ರೀ-ಬಿಡ್ ಸಭೆಯ ದಿನಾಂಕ 04-02-2025 ರಂದು ಮುಂಜಾನೆ 11-00 ಗಂಟೆಗೆ, 3)ಟೆಂಡರ ಆಕ್ಷೇಪಣೆಗಳಿಗೆ/ಸ್ಪಷ್ಟೀಕರಣಕ್ಕಾಗಿ ನಿಗದಿಪಡಿಸಿದ ದಿನಾಂಕ: 04-02-2026 ರಂದು ಸಾಯಂಕಾಲ 4-30 ಗಂಟೆ ವರೆಗೆ. 4)ತಾಂತ್ರಿಕ ಬಿಡ್ ತೆರೆಯುವ ದಿನಾಂಕ:12-02-2026 ರಂದು ಸಾಯಂಕಾಲ 4-00 ಗಂಟೆಯ ನಂತರ. 5)ಆರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್ ಅನುಮೋದನೆ ನಂತರ

ಗುತ್ತಿಗೆದಾರರ ಅರ್ಹತೆ/ಟೆಂಡರ ನಿಯಮಗಳು/ಟೆಂಡರಪ್ರೊಸೆಸ್ಸಿಂಗ ಶುಲ್ಕ ಇತ್ಯಾದಿ ವಿವರಗಳಿಗೆ ವೆಬ್ ಸೈಟwww.kpp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕಛೇರಿಯ ಸಮಯದಲ್ಲಿ ದೂರವಾಣಿ ಸಂ.08357-220057 ಕ್ಕೆ ಸಂಪರ್ಕಿಸಬಹುದು. ಟೆಂಡರಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಕನೀನಿನಿ.ಮ.ಏ.ಕಾ.ನಿ.ವಿಭಾಗ ನಂ.3,ಬಾದಾಮಿ.
DIPR/BGK/RO-NO-531/KSMCA/2025-26

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಆಯುಕ್ತರವರ ಕಛೇರಿ, ಪಾಲಿಕೆ ಕಛೇರಿಗಳ ಸಂಕೀರ್ಣ, 2ನೇ ಮಹಡಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು-560011

ಸಂಖ್ಯೆ : ಸ.ಆ(ಅ)/ಪಿಆರ್/248/2025-26 ದಿನಾಂಕ : 27.01.2026

ಅಧಿಸೂಚನೆ

ಕಾನೂನು ಕೋಶದ ಮುಖ್ಯಸ್ಥರ ಕಛೇರಿಯಲ್ಲಿ "**ಕಾನೂನು ಸಹಾಯಕರ**" ಹುದ್ದೆಗೆ ಅರ್ಹ ಕಾನೂನು ಪದವೀಧರರು ಅಥವಾ ಹೊಸದಾಗಿ ವೃತ್ತಿ ಆರಂಭಿಸಿರುವ ವಕೀಲರಿಂದ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ.

ಸದರಿ ಹುದ್ದೆಯ ಅವಧಿಯು 11 ತಿಂಗಳು ಆಗಿದ್ದು ಮಾಹೆಯಾನ **ರೂ.30,000/-** ಗಳ ಗೌರವಧನದ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು.

- ನೇರ ಸಂದರ್ಶನದ ಮೂಲಕ ಆಯ್ಕೆ ವಿಧಾನ.
- ಸಂಪೂರ್ಣ ಬಯೋ-ಡೇಟಾ ಮತ್ತು ಅಧಿಕೃತ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸುವುದು.

ಅರ್ಜಿ ಸಲ್ಲಿಸಬೇಕಾದ ವಿಳಾಸ: ಆಯುಕ್ತರು, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಪಾಲಿಕೆ ಕಛೇರಿಗಳ ಸಂಕೀರ್ಣ, 2ನೇ ಮಹಡಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, 2ನೇ ಬ್ಲಾಕ್, ಜಯನಗರ ಬೆಂಗಳೂರು-560011.

"ಕಾನೂನು ಸಹಾಯಕರ ಹುದ್ದೆಗೆ ಅರ್ಜಿ" ಎಂದು ಮುಖಪುಟದಲ್ಲಿ ಸರಿಯಾಗಿ ನಮೂದಿಸಿ **ದಿನಾಂಕ: 09.02.2026 ರಂದು** ಅಥವಾ ಒಳಗಾಗಿ ಅಂಚೆ ಮೂಲಕ ಸಲ್ಲಿಸುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.

ಸಹಿ/- ಅಪರ ಆಯುಕ್ತರು (ಅಭಿವೃದ್ಧಿ)
ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080-22255210
ಸಂಖ್ಯೆ: ಕಾಅ/ಕವಿ.1/ಎಇ-ಎಲ್‌ಹೆಚ್,1,4/2025-26/74 ದಿನಾಂಕ: 27.01.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ಮೇಲ್ಕಂಡ ಇಲಾಖೆಯು ಸೂಚಿತ ವಿವಿಧ ಸ್ಥಳಗಳಲ್ಲಿ ವುಡನ್ ಫ್ಲೋರಿಂಗ್ ಒದಗಿಸುವುದು, ಫಾಲ್ಸ್ ಸೀಲಿಂಗ್ ಒದಗಿಸುವುದು, ಪಾಲಿಷಿಂಗ್, ಪೇಂಟಿಂಗ್, ಅಗತ್ಯ ಚೇರುಗಳನ್ನು ಒದಗಿಸುವುದು, ಸ್ವೆರ್‌ಲೈನ್ ದುರಸ್ತಿ, ಮಳೆನೀರು ಕೊಯ್ಲು ಪದ್ಧತಿ ಒದಗಿಸುವುದು, ಬೇಸ್ಮೆಂಟ್ ರ್‍ಯಾಂಪ್ ಒದಗಿಸುವುದು, ವಾಟರ್ ಪ್ರೂಫಿಂಗ್ ಕೆಲಸಗಳು, ಓಪನ್ ಕೋರ್ಟ್ ಯಾರ್ಡ್ ರೂಫ್ ಸುಧಾರಣೆ, ಶೌಚಾಲಯ ದುರಸ್ತಿ, ಅಲ್ಯೂಮಿನಿಯಂ ಕೆಲಸಗಳು, ಮಸ್ಕಿಟೋ ಮೆಶ್ ಒದಗಿಸುವುದು, ವಾರ್ಡ್‌ರೋಬ್, ಮಾಡ್ಯೂಲರ್ ಕಿಚನ್, ವಿನ್ಯಲ್ ಫ್ಲೋರಿಂಗ್ ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ **ಒಟ್ಟು 06 ಕಾಮಗಾರಿಗಳಿಗೆ** ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.7.24 ಲಕ್ಷಗಳು, ಗರಿಷ್ಠ ರೂ.118.62 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.9,100/-, ಗರಿಷ್ಠ ರೂ.2,00,000/-** ಪ್ರತೀ ಕಾಮಗಾರಿಯ ಕಾಲಾವಧಿ: **2 ರಿಂದ 3 ತಿಂಗಳು.** ಕಾಮಗಾರಿಯ ದಸ್ತಾವೇಜು ಬೆಲೆ: **ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 03.02.2026, ಸಂಜೆ 4.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಟೆಂಡರ್ ಕರೆ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ವಾಸಸಂಇ/ಉನಿ-ಸಿ.ಪಿ/5239/ಕೆಎಸ್ಎಂಸಿಎ/2025-26 **ಸಹಿ/-ಕಾರ್ಯಪಾಲಕ ಅಭಿಯಂತರರು.**

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು-560011.
ಸಂಖ್ಯೆ: ಕಾಇಂ/ಸನೀ/ಸ.ಇಂ-5/ಟೆಂಡರು ಪ್ರಕಟಣೆ ಸಂ.28/2025-26 ದಿನಾಂಕ: 27.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರು ಲೆಕ್ಕ ಶೀರ್ಷಿಕೆ ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಮತ್ತು ಡಿಪಿಆರ್ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1 ಮತ್ತು 2 ರ ಮುಖಾಂತರ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ, ಪ್ರವರ್ಗ 1 ಗುತ್ತಿಗೆದಾರರಿಗೆ, ಪ್ರವರ್ಗ 2(ಎ) ಗುತ್ತಿಗೆದಾರರಿಗೆ & ಸಾಮಾನ್ಯ (ಜನರಲ್) ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :- ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲ್ಲೂಕು, ಹಾರೋಹಳ್ಳಿ ತಾಲ್ಲೂಕು, ರಾಮನಗರ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು, ಕನಕಪುರ ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಕೊರೆದು ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ, ಹಳ್ಳಕ್ಕೆ ಅಡ್ಡಲಾಗಿ ಚೆಕ್ ಡ್ಯಾಂ ಕಮ್ ಬ್ರಿಡ್ಜ್ ಕಾಮಗಾರಿಯ ಡಿ.ಪಿ.ಆರ್ ತಯಾರಿಸುವ ಜಾಬ್‌ವರ್ಕ್ ಕಾಮಗಾರಿಗಳು ಒಳಗೊಂಡಂತೆ **ಒಟ್ಟು 21 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.1.58 (ಕನಿಷ್ಠ) & ರೂ.24.25 (ಗರಿಷ್ಠ)**
ಇಎಂಡಿ (ರೂಗಳಲ್ಲಿ): **ರೂ.4,000/- (ಕನಿಷ್ಠ) & ರೂ.48,500/- (ಗರಿಷ್ಠ).**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 02 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **28.01.2026 ಸಂಜೆ 16.30** ಗಂಟೆಯ ನಂತರ, **(2)** ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **04.02.2026 ಸಂಜೆ 15.00** ಗಂಟೆಯವರೆಗೆ. **(3)** ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **04.02.2026 ಸಂಜೆ 16.30** ಗಂಟೆಯವರೆಗೆ. **(4)** ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **06.02.2026 ಬೆಳಿಗ್ಗೆ 11.30** ಗಂಟೆಗೆ. **(5)** ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. **2)** ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ- 1 ಮತ್ತು 2 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. **3)** ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. **4)** ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
ವಾಸಾಸಂಇ/ವಾ.ಪ್ರ/5232/ಎಸ್‌ಎಸ್‌ಸಿ/2025-26

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಂಡ್ಯ-571401
Autonomous Medical Institution, Government of Karnataka)
Phone No: 08232-231003, 222086,231197, 224040, Fax-08232-231001
E-mail: mimsmandyasupplysection@gmail.com, mimsmandya@gmail.com

ಸಂಖ್ಯೆ: ಮಿಮ್ಸ್/ಸರಬ-ಡಿ/ಬಿ.ಬಿ/ಇ-ಟೆಂ/13/2024-25(ಕಾಲ್-2)/ ದಿನಾಂಕ: 16.01.2026

ಮರು ಇ-ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಕ್ತನಿಧಿ ಕೇಂದ್ರಕ್ಕೆ ಅವಶ್ಯಕವಿರುವ ವಿವಿಧ Kits and Consumables Items ಗಳನ್ನು (ಅಂದಾಜು ಮೊತ್ತ ರೂ **182.00 ಲಕ್ಷಗಳು**) ಸರಬರಾಜು ಮಾಡಲು ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಮರು ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಕೆ ಪ್ರಾರಂಭ ಹಾಗೂ ಅಂತಿಮ ದಿನಾಂಕ ಹಾಗೂ ಮತ್ತಿತ್ತರ ವಿವರಗಳನ್ನು ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/- ನಿರ್ದೇಶಕರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಮಂಡ್ಯ/ಶಿರಡಿಸಾಯಿ/739/2025-26

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಕೆ..ಹೆಚ್.ರಸ್ತೆ, ಬೆಂಗಳೂರು-560027 ದೂರವಾಣಿ ಸಂಖ್ಯೆ: 080 22537575
ವೆಬ್‌ಸೈಟ್ : www.mybmtc.com ಇ-ಮೇಲ್ : ctmc@mybmtc.com
ಸಂ:ಬೆಂಮಸಾಸಂ/ಕೇಕ/ಸಂ/ವಾ1932/4289/2025-26 ದಿನಾಂಕ:27.01.2026

ಟೆಂಡರ್ ಪ್ರಕಟಣೆ ಸಂಖ್ಯೆ: 31/2025-26 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಿವಿಧ ಬಸ್ ನಿಲ್ದಾಣ/ ಟಿಟಿಎಂಸಿಗಳಲ್ಲಿ **ಶೌಚಾಲಯ ನಿರ್ವಹಣೆ ಮತ್ತು ಸ್ವಚ್ಛತ ನಿರ್ವಹಣೆ ಸಂಬಂಧ ಪರವಾನಗಿದಾರರ/ ಗುತ್ತಿಗೆದಾರರ ಆಯ್ಕೆಗಾಗಿ ಪರವಾನಗಿ** ನೀಡಲು ಆಸಕ್ತ ವ್ಯಕ್ತಿ/ಏಜೆನ್ಸಿಗಳಿಂದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಸಲ್ಲಿಸುವ ಕೊನೆಯ ದಿನಾಂಕ	**18.02.2026 ರಂದು 17:00 ಗಂಟೆಯ ವರೆಗೆ**
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	**21.02.2026 ರಂದು 11:00 ಗಂಟೆ**
ಆರ್ಥಿಕ ಬಿಡ್ ತೆರೆಯುವ ದಿನಾಂಕ	**ನಂತರ ತಿಳಿಸಲಾಗುವುದು.**

ಇ.ಎಂ.ಡಿ ಮೊತ್ತ, ವಿಸ್ತೀರ್ಣ, ಇನ್ನಿತರ ಎಲ್ಲಾ ಮಾಹಿತಿ ಹಾಗೂ ಆಯ್ಕೆ ವಿಧಾನ ಇತ್ಯಾದಿಗಳಿಗಾಗಿ **www.kppp.karnataka.gov.in** ಗೆ ಲಾಗಿನ್ ಆಗಿ ಅಥವಾ ಇ-ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ:-09240214000; 09240214001; 080-22483777 ಅಥವಾ 7760997519 & 7760991222 ಇ-ಮೇಲ್;**ctmc@mybmtc.com** ಗೆ ಸಂಪರ್ಕಿಸಬಹುದು.

ಸಹಿ/- ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತ ಗಂಗೋತ್ರಿ, ಮೈಸೂರು-570006
ಸಂಖ್ಯೆ:KSOU/IT/CW-03/AMC of CCTV/119/2025-26 ದಿನಾಂಕ:23.01.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ Annual Maintenance for Contract of Intelligent Centralized Surveillance system at KSOU ಕಾರ್ಯಕ್ಕೆ ಆಸಕ್ತ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳನ್ನು ವೆಬ್ ಸೈಟ್ **www.kppp.karnataka.gov.in** ನಿಂದ ಪಡೆಯಬಹುದು.
(Tender Number: KSOU/2025-26/SE0018)

ಸಹಿ/-
ಕುಲಸಚಿವ
ವಾಸಾಸಂಇ/ಮೈಸೂರು/ಶಿರಡಿ ಸಾಯಿ/1573/2025-26

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 21.02.2026 ಸಂಜೆ 4.00 ಗಂಟೆಗೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಆದಿವಾಳ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿ. **Work Indent No:** KHB/2025-26/BD/WORK_INDENT 692 & IFT No.137/2025-26 Date: 22.01.2026. **ಟೆಂಡರ್‌ಗಿಟ್ಟ ಮೊತ್ತ:** ರೂ. 12,15,20,117/-

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/ 080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/5260/ಆಕಾರ್/2025-26

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ ಬೆಂಗಳೂರು - 560070.

ಸಂ.: ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/36/2025-26 ದಿನಾಂಕ: 27.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ) (ದ್ವಿ-ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಚೇರಿಯಿಂದ **APA Grants** ಗಳಿಗೆ ಅನುಮೋದನೆಯಾಗಿರುವ ಕಾಮಗಾರಿಗಾಗಿ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 04.02.2026ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **http://www.kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- **ಕಾರ್ಯಪಾಲಕ ಅಭಿಯಂತರರು**
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
DIPR/CP/5251/SA/2025-26

ಪ್ರತಿ ಭಾನುವಾರ

ದಿನ ವಿಶೇಷ

29 ಜನವರಿ 2026 ಗುರುವಾರ

» ಸೂರ್ಯೋದಯ	: 06-47
» ಸೂರ್ಯಾಸ್ತ	: 06-20
» ತಿಥಿ	: ಏಕಾದಶಿ
» ನಕ್ಷತ್ರ	: ರೋಹಿಣಿ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಮಾಘ
» ಪಕ್ಷ	: ಶುಕ್ಲಪಕ್ಷ

ಸಮಾಚಾರ ಸಣ್ಣದಲ್ಲ

ನೀರಾವರಿ ಇಲಾಖೆಯಲ್ಲಿ 13 ಸಾವಿರ ಕೋಟಿ ರುಪಾಯಿ ಬಿಲ್ ಬಾಕಿ

ವಿಧಾನಸಭೆ: ನೀರಾವರಿ ಇಲಾಖೆಯಲ್ಲಿ 13 ಸಾವಿರ ಕೋಟಿ ರು.ಗಳಿಗೂ ಹೆಚ್ಚಿನ ಬಿಲ್‌ಗಳು ಬಾಕಿಯಿದ್ದು, ಆ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಒತ್ತಾಯಿಸಿದರು. ವಿಧಾನ ಸಭೆಯ ಕಲಾಪದಲ್ಲಿ ಭಾಗವಹಿಸಿದ್ದ ಅವರು, ನೀರಾವರಿ ಇಲಾಖೆಯಲ್ಲಿ 13 ಸಾವಿರ ಕೋಟಿ ರು. ಗಳಿಗೂ ಹೆಚ್ಚಿನ ಮೊತ್ತದ ಬಿಲ್‌ಗಳು ಬಾಕಿ ಉಳಿದಿವೆ.



ಕಾವೇರಿ ನೀರಾವರಿ ನಿಗಮದಲ್ಲೇ 3,500 ಕೋಟಿ ರು. ಬಿಲ್‌ಗಳು ಬಾಕಿ ಇದ್ದು 3500ಕ್ಕೂ ಹೆಚ್ಚು ಸಣ್ಣ ಗುತ್ತಿಗೆದಾರರು ಸಂಕಷ್ಟದಲ್ಲಿದ್ದಾರೆ. ಅವರಲ್ಲಿ ಕೆಲವರು ಮಾಂಗಲ್ಯ ಅಡ ಇಟ್ಟಿದ್ದಾರೆ. ಇನ್ನು ಕೆಲವರು ಬಡ್ಡಿ ನೀಡಿ ಸಾಲ ತಂದಿದ್ದಾರೆ. ಅವರಿಗೆ ಬಾಕಿ ಬಿಲ್ ಪಾವತಿ ಮಾಡುವ ಮೂಲಕ ಸರ್ಕಾರ ಅವರ ನೆರವಿಗೆ ಬರಬೇಕು ಎಂದು ಒತ್ತಾಯಿಸಿದರು. ದೊಡ್ಡ ದೊಡ್ಡ ಗುತ್ತಿಗೆದಾರರ ಬಿಲ್‌ಗಳಿಗೆ ಆದ್ಯತೆ ನೀಡಿ ಸಣ್ಣ ಗುತ್ತಿಗೆದಾರರನ್ನು ಕಡೆಗಣಿಸುತ್ತಿರುವುದು ಸರಿಯಲ್ಲ ಎಂದ ರೇವಣ್ಣ ಅವರು, ನಿಲುವಳಿ ಸೂಚನೆಯಡಿ ಈ ವಿಷಯದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸಿದರು. ಸಭಾಧ್ಯಕ್ಷ ಯು.ಟಿ.ಖಾದರ್, ನಿಲುವಳಿ ಸೂಚನೆಯ ಬದಲಾಗಿ ನಿಯಮ 69ರಡಿ ಸಾರ್ವಜನಿಕ ಮಹತ್ವದ ವಿಚಾರವನ್ನಾಗಿ ಪರಿಗಣಿಸಿ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಕೊಳ್ಳೇಗಾಲ ಕರ್ನಾಟಕ ಭವನಕ್ಕೆ ಶೀಘ್ರ ಅನುದಾನ: ತಂಗಡಗಿ

ವಿಧಾನಸಭೆ: ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ಪಟ್ಟಣದ ಸುವರ್ಣ ಕನ್ನಡ ಭವನದ ಮುಂದುವರಿದ ಕಾಮಗಾರಿಗೆ ಅನುಮೋದಿತ ಮೊತ್ತಕ್ಕಿಂತ ಹೆಚ್ಚುವರಿಯಾಗಿ 80 ಲಕ್ಷ ರುಗಳನ್ನು ಒದಗಿಸುವಂತೆ ಕೋರಲಾಗಿದೆ ಎಂದು ಸಚಿವ ಶಿವರಾಜ್ ತಂಗಡಗಿ ತಿಳಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ಕೊಳ್ಳೇಗಾಲ ಶಾಸಕ ಕೃಷ್ಣಮೂರ್ತಿ ಪ್ರಶ್ನೆಗೆ ಉತ್ತರಿಸಿದ ಅವರು, ಕೊಳ್ಳೇಗಾಲದ ಸುವರ್ಣ ಕರ್ನಾಟಕ ಭವನ ಕಾಮಗಾರಿಯನ್ನು ಪೂರ್ಣಗೊಳಿಸಲು ಪರಿಸ್ಕೃತ ಅಂದಾಜು ಪಟ್ಟಿಯಂತೆ 1.86 ಕೋಟಿ ರು. ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈಗಾಗಲೇ ಸದರಿ ಕಾಮಗಾರಿಗೆ ಬಿಡುಗಡೆಯಾಗಿರುವ 1.25 ಕೋಟಿ ರು.'ಳನ್ನು ಹೊರತುಪಡಿಸಿ ಬಾಕಿಯಿರುವ ಅನುದಾನ 61.49 ಲಕ್ಷಗಳಲ್ಲಿ 50 ಲಕ್ಷ ಬಿಡುಗಡೆ ಮಾಡಲಾಗಿದೆ. ಹೆಚ್ಚುವರಿಯಾಗಿ 80 ಲಕ್ಷಗಳನ್ನು ಒದಗಿಸುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೂಡಲೇ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ



- **ಸ್ಥಳ:** ಬಂಡಿಕೊಟ್ಯ, ದಕ್ಷಿಣ ಕನ್ನಡ
- **ಸಮಸ್ಯೆಯೇನು?** ರಾಜಕಾಲುವೆಗೆ ಶಾಶ್ವತ ತಡೆ ಬೇಲಿ ಅಳವಡಿಸುವ ಕುರಿತು.
- **ಪರಿಹಾರ:** ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ಸಮೀಪದ ಬಂಡಿಕೊಟ್ಯ ಗ್ರಾಮದಲ್ಲಿ ಹರಿದು ಹೋಗುವ ರಾಜಕಾಲುವೆ ಸೇತುವೆಗೆ ತಾತ್ಕಾಲಿಕ ವಾಗಿ ತಡೆ ಬೇಲಿ ಹಾಕಲಾಗಿತ್ತು. ಶಾಶ್ವತ ತಡೆ ಬೇಲಿ ಹಾಕುವಂತೆ ಸ್ಥಳೀಯರೊಬ್ಬರು ಮನವಿ ಮಾಡಿದ್ದರು. ಈ ಹಿನ್ನೆಲೆ ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿಗಳು ಶಾಶ್ವತ ತಡೆ ಬೇಲಿ ಹಾಕಿಸಲು ಕ್ರಮ ವಹಿಸಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
29.01.2026
ಸಂಜೆ: 06.55 ರಿಂದ 08.05 ರವರೆಗೆ

ಗುರುವಾರದ ಅತಿಥಿ
ಡಾ.ಅಮಿತ್ ಶೇಖರ್
ಶ್ರೀಮತಿ ವನಜಾಕ್ಷಿ ಚಂದ್ರಶೇಖರ್
ವಿಷಯ
ಗಾನ ಸಂಭ್ರಮ
vishwavani.news

ರಾಜ್ಯಪಾಲರಿಗೆ ಅಪಮಾನ; ಕಾಂಗ್ರೆಸ್ ವಿರುದ್ಧ ಕಿಡಿಕಾರಿದ ಬಿಜೆಪಿ ನಾಯಕರು

ಪರಿಷತ್‌ನಲ್ಲಿ ತೀವ್ರ ವಾಕ್ಸಮರ, ಧರಣಿಯಲ್ಲಿಯೇ ಬಹು ಸಮಯ ವ್ಯರ್ಥ

ಗೌರ್ನರ್‌ಗೆ ಅವಮಾನಿಸಿದ್ದನ್ನು ಖಂಡಿಸಿ ಬಾವಿಗಿಳಿದ ಪ್ರತಿಪಕ್ಷದ ನಾಯಕರು

ವಂದನಾ ನಿರ್ಣಯವೋ ಖಂಡನಾ ನಿರ್ಣಯವೋ?

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ಮೇಲ್ಮನೆಯಲ್ಲಿ ರಾಜ್ಯಪಾಲರ ಭಾಷಣದ ವೇಳೆ ನಡೆದ ಗದ್ದಲದ ಕಿಡಿ ದೊಡ್ಡ ಪ್ರತಿಭಟನೆಯಾಗಿ ಮಾರ್ಪಟಿದ್ದು, ರಾಜ್ಯಪಾಲರಿಗೆ ಅವಮಾನ ಮಾಡಿದವರನ್ನು ಸದನದಿಂದ ಹೊರಹಾಕಿ ಎಂದು ಪಟ್ಟು ಹಿಡಿದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಧರಣಿ ಮುಂದುವರಿಸಿದ್ದಾರೆ.

ಈ ವೇಳೆ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಡಳಿತ ಪಕ್ಷದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರೆ, ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್, ಪ್ರತಿಪಕ್ಷದವರು ಹೇಳಿದಂತೆ ಕೇಳಲು ನಾವೇನೂ ಗೂಸುಂಬೆಯಲ್ಲ ಎಂದು ಖಾರವಾಗಿ ತಿರುಗೇಟು ನೀಡಿದ್ದಾರೆ. ಈ ವಾದ-ಪ್ರತಿವಾದಗಳಿಂದಾಗಿ ಮೇಲ್ಮನೆಯಲ್ಲಿ ಹಗ್ಗಜಗ್ಗಾಟ ಮುಂದುವರಿದಿತ್ತು.

ರಾಜ್ಯಪಾಲರ ಭಾಷಣ ಸಂಬಂಧ ವಂದನಾ ನಿರ್ಣಯವೋ ಖಂಡನಾ ನಿರ್ಣಯವೋ ಎಂಬುದರ ಬಗ್ಗೆ ರಾಜ್ಯ ಸರಕಾರ ದ್ವಂದ್ವ ನಿಲುವು ತಳೆದಿದೆ. ಈ ಬಗ್ಗೆ ಆಗಿರುವ ಗೊಂದಲವನ್ನು ನಿವಾರಿಸಿದ ಬಳಿಕವಷ್ಟೇ ಚರ್ಚೆ ನಡೆಸಬೇಕು ಎಂದು ವಿಧಾನ ಪರಿಷತ್ತಿನ ವಿಪಕ್ಷ ಸದಸ್ಯರು ಸದನದ ಬಾವಿಗಿಳಿದು ಧರಣಿ ನಡೆಸಿದರು. ಆಗ ಸಭಾಪತಿ ಬಸವರಾಜ ಹೊರಟ್ಟಿ ಅವರು, ಬಾವಿಯಲ್ಲಿ ನಿಂತು ಧಿಕ್ಕಾರ ಕೂಗಬೇಡಿ. ಹಾಗೆ ಮಾಡಿದರೆ ಸದನದಿಂದ ಹೊರ ಹಾಕುತ್ತೇನೆ ಎಂದು ಎಚ್ಚರಿಸಿದರು.

ಇದಕ್ಕೆ ಪ್ರತಿಕಿಯಿಸಿದ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ನಮ್ಮನ್ನು ಹೊರ ಹಾಕುವುದಾದರೆ ಹಾಕಿ, ಅದೂ ಆಗಲಿ. ನಮ್ಮ ಎರಡು ಬೇಡಿಕೆ ಈಡೇರುವರೆಗೂ ಧರಣಿ ಮುಂದುವರಿಸುತ್ತೇವೆ. ರಾಜ್ಯಪಾಲರು ಭಾಷಣ ಮಾಡಿಲ್ಲ ಎಂದಾದ ಮೇಲೆ, ವಂದನೆ ನಿರ್ಣಯ ಹೇಗಾಗಲಿದೆ? ನೀವು ಮಾಡುತ್ತಿರುವುದು ಖಂಡನಾ ನಿರ್ಣಯವೋ? ವಂದನಾ ನಿರ್ಣಯವೋ ಮೊದಲು ತಿಳಿಸಿ ಎಂದು ಪಟ್ಟುಹಿಡಿದರು. ಅದು ಅಲ್ಲದೆ, ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಆರೋಪ ಸಂಬಂಧ ಅದೇ ಇಲಾಖೆ ಸಚಿವ ಆರ್.ಬಿ.ತಿಮ್ಮಾಪುರ್ ಅವರು ರಾಜೀನಾಮೆ ನೀಡಬೇಕೆಂದು ಅವರು ಆಗ್ರಹಿಸಿದರು.

ರಾಷ್ಟ್ರಪತಿ, ರಾಜ್ಯಪಾಲರನ್ನು ಟೀಕಿಸುವಂತಿಲ್ಲ: ಈ ವೇಳೆ ಬಸವರಾಜ ಹೊರಟ್ಟಿ ಅವರು, ರಾಷ್ಟ್ರಪತಿ ಹಾಗೂ ರಾಜ್ಯಪಾಲರನ್ನು ಟೀಕೆಗೆ ಒಳಪಡಿಸುವಂತಿಲ್ಲ. ಇದು ಎರಡೂ ಪಕ್ಷದ ಸದಸ್ಯರಿಗೆ ಅನ್ವಯಿಸಲಿದೆ. ಇದು ನಿಯಮಗಳಲ್ಲಿ ಇದು ಉಲ್ಲೇಖವಾಗಿದೆ. ಹೀಗಾಗಿ ಈ ಬಗ್ಗೆ ಗಮನಹರಿಸಬೇಕು. ನಿಯಮ ಮೀರಿದರೆ ಶಿಸ್ತು ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಧರಣಿ ಮುಂದುವರಿಸಿದ ವಿಪಕ್ಷ ಸದಸ್ಯರ ವಂದನಾ ನಿರ್ಣಯನಾ, ನಿಂದನಾ ನಿರ್ಣಯ ಇತ್ಯರ್ಥಕ್ಕೆ ಒತ್ತಾಯಿಸಿದರು. ಸದನ ಹತೋಟಿಗೆ ಬರದ ಕಾರಣ ಸದನವನ್ನು 10 ನಿಮಿಷ ಸಭಾಪತಿಗಳು ಮುಂದೂಡಿದರು. ಬಳಿಕ ಮತ್ತೆ ಕಲಾಪ ಆರಂಭವಾಗುತ್ತಿದ್ದಂತೆ ವಿಪಕ್ಷ ಸದಸ್ಯರು ಸದನದ ಬಾವಿಗಿಳಿದು ಧರಣಿ ಮುಂದುವರೆಸಿದರು.

ಸದನದಲ್ಲಿ 'ಯೋಗ್ಯತೆ' ಗದ್ದಲ

ಮೇಲ್ಮನೆಯಲ್ಲಿ ಮಾತಿನ ಗದ್ದಲ ಹೆಚ್ಚಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯ ಬಿ.ಕೆ.ಹರಿಪ್ರಸಾದ್ ಎದ್ದು ನಿಂತು ಸಂವಿಧಾನದ ನಿಯಾಮವಳಿ ಓದಿ, ರಾಜ್ಯಪಾಲರು ಮೂಲಭೂತ ಕರ್ತವ್ಯವನ್ನು ಪಾಲಿಸಿಲ್ಲ ಎಂದು ಕಿಡಿಕಾರಿದರು. ಇದಕ್ಕೆ ಆಕ್ಷೇಪಿಸಿದ ಛಲವಾದಿ, ಸಂವಿಧಾನಕ್ಕೆ ರಾಜ್ಯಪಾಲರೇ ಮುಖ್ಯಸ್ಥರಾಗಿರುತ್ತಾರೆ. ರಾಜ್ಯಪಾಲರನ್ನು ಖಂಡಿಸಿ ಸಂವಿಧಾನ ಓದುವ ಯೋಗ್ಯತೆ ಹರಿಪ್ರಸಾದ್ ಕಳೆದುಕೊಂಡಿದ್ದಾರೆ ಎಂದರು. ತಾಳ್ಮೆ ಕಳೆದುಕೊಂಡ ಹರಿಪ್ರಸಾದ್, ಯೋಗ್ಯತೆ ಬಗ್ಗೆ ಮಾತನಾಡುವುದು ಬೇಡ. ಈ ಹಿಂದೆ ಬಿಜೆಪಿ ಏನು ಮಾಡಿತ್ತು ಎಂಬುದರ ಬಗ್ಗೆ ಹೇಳಬೇಕಾಗುತ್ತದೆ. ಮಾತನಾಡುವಾಗ ನಾಲಿಗೆ ಮೇಲೆ ಹಿಡಿತವಿರಲಿ. ಸಂವಿಧಾನ ವಿರೋಧಿಗಳಿಗೆ ಹಾಗೂ ರಾಷ್ಟ್ರಗೀತೆಗೆ ಧಕ್ಕೆ ತರುವವರಿಗೆ ಏನು ಬೇಕಾದರೂ ಮಾಡುತ್ತೇನೆ ಎಂದು ಹರಿಹಾಯ್ದರು. ಹರಿಪ್ರಸಾದ್ ಮಾತಿಗೆ ವಿಪಕ್ಷ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ ಬಾವಿಯೊಳಗೆ ನಿಂತು ಧಿಕ್ಕಾರ ಕೂಗಿದರು. ಪರಿಸ್ಥಿತಿ ಕೈ ಮೀರುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಸಭಾಪತಿ ಹೊರಟ್ಟಿ ಬಾವಿಯಲ್ಲಿ ನಿಂತು ಘೋಷಣೆ ಕೂಗಿದವರನ್ನ ಹೊರ ಹಾಕ ಹಾಕುತ್ತೇನೆ ಎಚ್ಚರಿಕೆ ನೀಡಿದರು. ಬಳಿಕ ಮಾತನಾಡಿದ ಹೊರಟ್ಟಿ ಸಭಾ ನಾಯಕರು ಹೇಳಿರುವ ಖಂಡನಾ ನಿರ್ಣಯ ಪದ ಕಡತದಿಂದ ತೆಗೆಯುವಂತೆ ಆದೇಶಿಸಿದರು. ಇದಕ್ಕೆ ಸ್ವಾಗತಿಸಿದ ವಿಪಕ್ಷವು ಸಭಾನಾಯಕರಿಂದ ವಿಷಾದ ವ್ಯಕ್ತಪಡಿಸುವಂತೆ ಒತ್ತಾಯಿಸಿತು. ಈ ವೇಳೆ ಗದ್ದಲ ಹೆಚ್ಚಾದ ಹಿನ್ನೆಲೆ ಸದನವನ್ನು ಮುಂದೂಡಲಾಯಿತು.

ಈ ವೇಳೆ ಸಭಾನಾಯಕ ಎನ್.ಎಸ್.ಬೋಸರಾಜ್ ಮಾತನಾಡಿ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯಕ್ಕೆ ಸಹಮತವಿದೆ ಎಂದು ಹೇಳಿದರು. ಇದಕ್ಕೊಪ್ಪದ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ವಂದನಾ ನಿರ್ಣಯ ಕೈಗೊಂಡಿರುವುದು ಸರಿ. ಆದರೆ ಖಂಡನೆ ವ್ಯಕ್ತಪಡಿಸಿರುವುದಕ್ಕೆ ವಿಷಾದ ವ್ಯಕ್ತಪಡಿಸಬೇಕು. ಖಂಡನಾ ಎಂಬ ಪದ ಕಡತದಿಂದ ತೆಗೆದುಹಾಕಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಆಕ್ಷೇಪಿಸಿದ ಯತೀಂದ್ರ, ಸಿದ್ದರಾಮಯ್ಯ, ಸಭಾನಾಯಕರು ರಾಜ್ಯಪಾಲರು ನಡೆಯನ್ನ ಖಂಡಿಸಿದ್ದಾರೆ. ಅವರ ಭಾಷಣವನ್ನಲ್ಲ ಎಂದು ಸ್ಪಷ್ಟಪಡಿಸಿದರು. ಇದಕ್ಕೆ ಉತ್ತರಿಸಿದ ಛಲವಾದಿ, ರಾಜ್ಯಪಾಲರ ನಡೆ ಖಂಡಿಸಬಹುದೆ ಎಂದು ಪ್ರಶ್ನಿಸಿದರು. ಈ ವೇಳೆ ಸಿ.ಟಿ.ರವಿ ಸಂವಿಧಾನದ ನಿಯಾಮವಳಿ ಓದಿದ ಬಳಿಕ ಮಾತನಾಡಿ ರಾಜ್ಯಪಾಲರಿಗೆ ಅಡ್ಡಿಪಡಿಸಿದವರನ್ನು ಸದನದಿಂದ ಹೊರಗೆ ಹಾಕಿ ಎಂದು ಒತ್ತಾಯಿಸಿದರು.

ರಾಜ್ಯಪಾಲರ ಭಾಷಣದ ಮೇಲೆ ಸಭಾನಾಯಕ ಬೋಸರಾಜ್ ಅವರು ಖಂಡನೆ ಮಾಡಿದ್ದಕ್ಕೆ ವಿಷಾದ ವ್ಯಕ್ತಪಡಿಸಬೇಕು ಹಾಗೂ ಕಡತದಿಂದ ತೆಗೆದು ಹಾಕುವಂತೆ ಒತ್ತಾಯಿಸಿದರು. ಇದಕ್ಕೆ ಆಕ್ಷೇಪಿಸಿದ ಕಾಂಗ್ರೆಸ್ ಸದಸ್ಯರು ವಿಷಾದ ವ್ಯಕ್ತಪಡಿಸುವುದಿಲ್ಲ ಎಂದು ನಿಲುವು ತಳೆದರು. ಸದಸ್ಯ ರಮೇಶ್ ಬಾಬು ಮಾತನಾಡಿ, ಸದನಕ್ಕೆ ಅಗೌರವ ತೋರಿದವರನ್ನ ಹೊರ ಹಾಕಿ ಎಂದು ಹೇಳುತ್ತಿದ್ದಂತೆ ಛಲವಾದಿ, ಹಾಗಾದರೆ ರಾಜ್ಯಪಾಲರನ್ನ ಅಡ್ಡಹಾಕಿದವರನ್ನು ಮೊದಲು ಹೊರಹಾಕಿ ಎಂದು ಆಗ್ರಹಿಸಿದರು.

ವಿಧಾನ ಪರಿಷತ್‌ನಲ್ಲಿ ವಿಶ್ವವಾಣಿ ಪತ್ರಿಕೆ.

ತಂತ್ರಾಂಶ ಲೋಪ ಸಮಸ್ಯೆ ಶೀಘ್ರ ಇತ್ಯರ್ಥ: ಪ್ರಿಯಾಂಕ್

ವಿಧಾನಸಭೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇ-ಸ್ವತ್ತು 2.0 ತಂತ್ರಾಂಶದ ಸಮಸ್ಯೆಗಳನ್ನು ಇನ್ನೊಂದು ತಿಂಗಳಲ್ಲಿ ಬಗೆಹರಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಕಿರಣ ಕುಮಾರ್ ಕೊಡ್ಗಿ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊಸದಾಗಿ ಇ-ಸ್ವತ್ತು ತಂತ್ರಾಂಶ ಅಳವಡಿಸಲಾಗಿದೆ. ಈ ತಂತ್ರಾಂಶದಲ್ಲಿ ಲೋಪಗಳಾಗಿವೆ. ಖಾತಾ 11ಬಿ,. 11ಎ ಪರಿವರ್ತನೆ ಮಾಡಿ ಕೊಳ್ಳಲು ತೊಂದರೆಯಾಗಿದೆ. ಇದನ್ನು ಕೂಡಲೆ ಪರಿಹರಿಸಿ ಎಂದು ಒತ್ತಾಯಿಸಿದ್ದರು.

ಸದಸ್ಯರ ಪ್ರಶ್ನೆಗೆ ಉತ್ತರಿಸಿದ ಸಚಿವ ಪ್ರಿಯಾಂಕ ಖರ್ಗೆ,ಗ್ರಾಮೀಣಾಭಿವೃದ್ಧಿ ಇಲಾಖೆಯ ಇ-ಸ್ವತ್ತಿನಲ್ಲಿ ಸುಧಾರಣೆ, ಸಬಲೀಕರಣ ಮತ್ತು ಸರಳೀಕರಣ ಗಮನದಲ್ಲಿಟ್ಟುಕೊಂಡು ಇ-ಸ್ವತ್ತು 2.0 ತಂತ್ರಾಂಶ ಅಳವಡಿಸಲಾಗಿದೆ. ಇದರಲ್ಲಿ ಕೆಲ ಸಮಸ್ಯೆಗಳಿದ್ದು ಅದನ್ನು ತ್ವರಿತವಾಗಿ ಬಗೆಹರಿಸಲು ಕ್ರಮ ವಹಿಸಲಾಗಿದೆ ಇನ್ನೊಂದು ತಿಂಗಳಲ್ಲಿ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿ ಸಾರ್ವಜನಿಕರು ಮತ್ತು ಬಳಕೆದಾರರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಕಳೆದ ಡಿಸೆಂಬರ್ 1ರಿಂದ ಇ-ಸ್ವತ್ತು 2.0 ತಂತ್ರಾಂಶ ಜಾರಿ ಮಾಡಿದ್ದೇವು. ಹೊಸ ತಂತ್ರಜ್ಞಾನ ಬಳಸಿದಾಗ ಲೋಪವಾಗುವುದು ಸಹಜ. ಈ ಲೋಪಗಳನ್ನು ಪತ್ರಿಕಾ ಪ್ರಕಟಣೆ ಮೂಲಕ ಜನರ ಗಮನಕ್ಕೆ ತಂದಿದ್ದೇವೆ. ಇದನ್ನು ಎನ್‌ಐಸಿ ಮೂಲಕವೇ ಸರಿಪಡಿಸಬೇಕಾಗಿದ್ದು, ಎನ್‌ಐಸಿಗೆ ಅಗತ್ಯವಾದ ಹಣ ಬಿಡುಗಡೆ ಮಾಡಿ ಆದಷ್ಟು ಬೇಗ ಈ ಕೆಲಸವನ್ನು ಪೂರ್ಣಗೊಳಿಸುವಂತೆ ಕೇಂದ್ರ ಐಟಿ ಸಚಿವರಿಗೆ ಪತ್ರ ಬರೆದಿದ್ದೇನೆ. ಎನ್‌ಐಸಿ ಈಗ ಹೆಚ್ಚಿನ ಮಾನವ ಸಂಪನ್ಮೂಲ ಗಳನ್ನು ಒದಗಿಸಿ ಈ ತಂತ್ರಾಂಶದ ಲೋಪವನ್ನು ಸರಿಪಡಿಸುವ ಕೆಲಸ ಮಾಡು ತ್ತಿದೆ. ಆದಷ್ಟು ಬೇಗ ಎಲ್ಲವೂ ಬಗೆಹರಿಯಲಿದೆ ಎಂದು ಖರ್ಗೆ ಹೇಳಿದರು.

ತುಳು ಭಾಷೆಗೆ ಶೀಘ್ರವೇ 2ನೇ ಹೆಚ್ಚುವರಿ ಅಧಿಕೃತ ಭಾಷಾ ಮಾನ್ಯತೆ: ಶಿವರಾಜ್ ತಂಗಡಗಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯದಲ್ಲಿ ತುಳು ಭಾಷೆಯನ್ನು ರಾಜ್ಯದ ಎರಡನೇ ಹೆಚ್ಚುವರಿ ಅಧಿಕೃತ ಭಾಷೆಯನ್ನಾಗಿ ಶೀಘ್ರದಲ್ಲಿಯೇ ಘೋಷಣೆ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಕಾಂಗ್ರೆಸ್‌ನ ಅಶೋಕ್ ರೈ ಅವರ ಪ್ರಶ್ನೋತ್ತರ ಅವಧಿಗೆ ಉತ್ತರಿಸಿದ ಅವರು, ತುಳು ಭಾಷೆಯನ್ನು ರಾಜ್ಯದ ಎರಡನೇ ಹೆಚ್ಚುವರಿ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡುವ ನಿಟ್ಟಿನಲ್ಲಿ ತುಳು ಭಾಳೆಯ ಸ್ವರೂಪ ಮತ್ತು ಇತಿಹಾಸ, ತುಳು ಸಾಹಿತ್ಯ ಪರಂಪರೆ, ತುಳು ಲಿಪಿ, ಪ್ರಾಚೀನ ತುಳು ಸಾಹಿತ್ಯ, ಆಧುನಿಕ ತುಳು ಸಾಹಿತ್ಯ, ಸಂಸ್ಕೃತಿ, ತುಳು ಶಾಸನಗಳ ಕುರಿತು ಅಧ್ಯಯನ ನಡೆಸಲು ಡಾ. ಮೋಹನ್ ಆಳ್ವಾರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಈ ಸಮಿತಿ 2023ರ ಫೆಬ್ರವರಿಯಲ್ಲಿ ಸರಕಾರಕ್ಕೆ ವರದಿ ಸಲ್ಲಿಸಿದೆ ಎಂದರು.

ಈ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಕನ್ನಡವೇ ಅಧಿಕೃತ ಆಡಳಿತ ಭಾಷೆಯಾಗಿರುತ್ತದೆ. ಅದೇ ರೀತಿ ಇಂಗ್ಲೀಷ್ ಹೆಚ್ಚುವರಿ ಆಡಳಿತ ಭಾಷೆಯಾಗಿರುತ್ತದೆ. ಯಾವುದೇ ರಾಜ್ಯ ಸರಕಾರ ಒಂದು ಭಾಷೆಯನ್ನು ಆ ರಾಜ್ಯದ ಅಧಿಕೃತ ಭಾಷೆಯನ್ನಾಗಿ ಘೋಷಿಸಲು ಭಾರತ ಸಂವಿಧಾನ ಅನುಚ್ಛೇಧ 345 ರಲ್ಲಿ ಅವಕಾಶ ಮಾಡಿಕೊಟ್ಟಿದೆ. ಈ ಪ್ರಕಾರ ಕ್ರಮ ವಹಿಸುವ ಪೂರ್ವದಲ್ಲಿ ಸದರಿ ರಾಜ್ಯಗಳು ಈ ಬಗ್ಗೆ ಕಾನೂನಾತ್ಮಕ ಸಮಿತಿಗಳನ್ನು ರಚನೆ ಮಾಡಿ ಮತ್ತು ವರದಿ ಪಡೆದುಕೊಂಡು ಆ ನಂತರ ಮುಂದುವರೆಯಬಹುದಾಗಿರುತ್ತದೆ. ಅದೇ ರೀತಿ ತುಳು ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯೆಂದು ಘೋಷಿಸುವ ಬಗ್ಗೆ ಆಡಳಿತ ಇಲಾಖೆಯು ಭಾರತ ಸಂವಿಧಾನದ ಅನುಚ್ಛೇಧ 345 ಪ್ರಕಾರ ಕ್ರಮ ವಹಿಸಬಹುದಾಗಿರುತ್ತದೆ ಮತ್ತು ಈ ರೀತಿ ಕ್ರಮ ವಹಿಸುವ ಪೂರ್ವದಲ್ಲಿ ಸದರಿ ಭಾಷೆಗೆ ಸಂಬಂಧಿಸಿದಂತೆ ಸೂಕ್ತವಾದ ಅಧ್ಯಯನ ಮಾಡಲು ಸಮಿತಿ ರಚಿಸಲು ಸದರಿ ಸಮಿತಿಯ ವರದಿಯ ಆಧಾರದ ಮೇರೆಗೆ ಹಾಗೂ ವಿವಿಧ ರಾಜ್ಯಗಳಲ್ಲಿ 2ನೇ ಭಾಷೆಯನ್ನು ಘೋಷಿಸಿರುವ ಬಗ್ಗೆ ಅಧ್ಯಯನ ನಡೆಸಿ, ಆ ನಂತರ ಸೂಕ್ತವಾಗಿ ಮುಂದುವರೆಯಬೇಕಾಗುತ್ತದೆ ಎಂದು ಹೇಳಿದೆ.

ಈ ಸಂದರ್ಭದಲ್ಲಿ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರು ಲಂಬಾಣಿ ಭಾಷೆಯನ್ನು ಷೆಡ್ಯೂಲ್ 'ಎ'ಗೆ ಸೇರಿಸುವ ಸಂಬಂಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಆಗ ಸಭಾಧ್ಯಕ್ಷರು ಮೊದಲು ತುಳು ಭಾಷೆಯನ್ನು ಮಾಡೋಣ. ನಂತರ ನಿಮ್ಮ ಲಂಬಾಣಿ ಭಾಷೆ ಸಂಬಂಧವೂ ಸರಕಾರ ಕ್ರಮ ಕೈಗೊಳ್ಳುತ್ತದೆ ಎಂದು ಹೇಳಿ, ಲಂಬಾಣಿ ಭಾಷೆಯನ್ನು ರಾಜ್ಯದ ಹೆಚ್ಚುವರಿ ಭಾಷೆಯನ್ನಾಗಿ ಮಾಡಲು ಕ್ರಮ ಕೈಗೊಳ್ಳುವಂತೆ ಸಚಿವರಿಗೆ ಸೂಚಿಸಿದರು.

ಆಂಧ್ರಪ್ರದೇಶದಲ್ಲಿ ಉರ್ದು ಭಾಷೆಯನ್ನು 2ನೇ ಅಧಿಕೃತ ಭಾಷೆಯನ್ನಾಗಿ ಘೋಷಿಸಲಾಗಿರುತ್ತದೆ. ಅಲ್ಲಿ ಅನುಸರಿಸುವ ಮಾನದಂಡಗಳ ಕುರಿತು ಪರಿಶೀಲಿಸಲು ಸಮಿತಿಯು ಕಳೆದ ಜ.19 ಮತ್ತು 20 ರಂದು ಆಂಧ್ರಕ್ಕೆ ಭೇಟಿ ನೀಡಿದ್ದು, ಅಧ್ಯಯನ ವರದಿ ಸಲ್ಲಿಸಿಲ್ಲ. ಈ ವರದಿ ಬಂದ ನಂತರ ಸಿಎಂ ಸಿದ್ದರಾಮಯ್ಯ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಎಲ್ಲಾ ಶಾಸಕರ ಸಭೆ ಕರೆದು ಒಂದು ತೀರ್ಮಾನ ಮಾಡಲಾಗುವುದು.

- ಶಿವರಾಜ್ ತಂಗಡಗಿ ಸಚಿವ

3 ವರ್ಷದಲ್ಲಿ 5542 ಕೋಟಿ ರು. ವಿಮೆ ಪರಿಹಾರ ವಿತರಣೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಕೃಷಿ ಸಚಿವನಾಗಿ ಅಧಿಕಾರ ವಹಿಸಿಕೊಂಡ ನಂತರ ನಿರಂತರವಾಗಿ ಅಧಿಕಾರಿಗಳ ಸಭೆ ಮಾಡುವುದರೊಂದಿಗೆ ರೈತರೊಂದಿಗೆ ಹಾಗು ಜನಪ್ರತಿನಿಧಿಗಳೊಂದಿಗೆ ವಿಮೆ ಪರಿಹಾರ ಸುಧಾರಣೆ ತರಲು ಚರ್ಚಿಸಿ ಆಯಾ ಹಂಗಾಮಿನ ವಿಮೆ ಪರಿಹಾರವನ್ನು ಅದೇ ವಾರ್ಷಿಕ ವರ್ಷದ ಅವಧಿಯಲ್ಲಿ ಒದಗಿಸುವಂತೆ ಕ್ರಮ ಜರುಗಿಸಲಾಗಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿಯವರು ಉತ್ತರ ನೀಡಿದರು.

ಕಲಬುರಗಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಕೃಷಿ ಸಚಿವರು, ಕಳೆದ ಮೂರು ವರ್ಷಗಳಲ್ಲಿ ಬಿತ್ತನೆ ಮಾಡಿದ ಕೆಲವೇ ದಿನಗಳಲ್ಲಿ ಅಧಿಕ ಮಳೆಯಿಂದ ಶೇ 50 ಕ್ಕೂ ಹೆಚ್ಚು ಬೆಳೆ ಹಾನಿ ಆದ ಸಂದರ್ಭದಲ್ಲಿ ತಕ್ಷಣವೇ ರೈತರಿಗೆ ಮಿಡ್ ಸೀಸನ್ ಅಡ್ವೆಸರಿ ನಿಯಾಮಾವಳಿ ಪ್ರಕಾರ ವಿಮೆ ಪರಿಹಾರವನ್ನು ನೀಡಿ ರೈತರ ನೇರವಿಗೆ ನಮ್ಮ ಸರಕಾರ ಧಾವಿಸಿದೆ ಎಂದರು.

ವಿಶೇಷವಾಗಿ ಕಪ್ ಕ್ಯಾಪ್ ಮಾದರಿಯಲ್ಲಿ ವಿಮೆ ಪರಿಹಾರ ವನ್ನು ನಿರ್ಧರಿಸಲು ಕ್ರಮ ಕೈಕೊಂಡಿರುವುದರಿಂದ ವಿಮೆ ಪರಿಹಾರ ವಿತರಣೆಯಲ್ಲಿ ಸುಧಾರಣೆ ತರಲಾಗಿದೆ. ಈ ಕುರಿತು ವಿಮಾ ಕಂಪನಿ ಅಧಿಕಾರಿಗಳೊಂದಿಗೆ ಹಲವು ಬಾರಿ ಸಭೆ ನಡೆಸಿರುವುದಲ್ಲದೇ, ಕ್ರಾಪ್ ಕಟಿಂಗ್ ಎಕ್ಸಪರಿಮೇಟ್ ಸರಿಯಾಗಿ ಹಾಗೂ ವೈಜ್ಞಾನಿಕವಾಗಿ ನಡೆಸಬೇಕೆಂದು ಸೂಚನೆ ನೀಡಲಾಗಿದ್ದರ ಪರಿಣಾಮ ರಾಜ್ಯದಲ್ಲಿ ಬೆಳೆ ವಿಮೆ ಯೋಜನೆ ಅತ್ಯಂತ ಯಶ್ವಸಿಯಾಗಿ ಜಾರಿಗೊಳಿಸಲಾಗಿದೆ. ಈ 3 ವರ್ಷಗಳಲ್ಲಿ ಎಲ್ಲಾ ಹಂಗಾಮುಗಳಲ್ಲಿ ರಾಜ್ಯದಲ್ಲಿ ಒಟ್ಟು 73 ಲಕ್ಷ ರೈತರು ವಿಮೆ ಹಣ ಪಾವತಿಸಿ ನೊಂದಾಯಿಸಿಕೊಂಡವರ ಪೈಕಿ ಶೇ ಅಂದಾಜು ಶೇ.60 ರಷ್ಟು ರೈತರು, 43 ಲಕ್ಷ ನೊಂದಾಯಿಸಿಕೊಂಡ ರೈತರಿಗೆ ಒಟ್ಟು 5542.17 ಕೋಟಿ ರು. ವಿಮೆ ಪರಹಾರ ನೀಡಿ ರೈತರ ಸಂಕಷ್ಟದ ಸಮಯದಲ್ಲಿ ನಮ್ಮ ಸರಕಾರ ರೈತರಿಗೆ ವಿಮೆ ನೀಡಿ ರೈತರ ಸಂಕಷ್ಟಕ್ಕೆ ನೆರವಾಗಿದೆ ಎಂದರು.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಒಟ್ಟು 21 ಲಕ್ಷ ರೈತರು ನೋಂದಣಿಯಾಗಿದ್ದು, ಬಿತ್ತನೆ ವೈಫಲ್ಯ, ಪ್ರಕೃತಿ ವಿಕೋಪ, ಮಧ್ಯಂತರ ಬೆಳೆ ವಿಮೆ ಪರಿಹಾರ, ಕೋಯ್ಲೋತ್ತರ ಬೆಳೆ ನಷ್ಟದಡಿ 7.06 ಲಕ್ಷ ರೈತರಿಗೆ ಒಟ್ಟು 571.49 ಕೋಟಿ ಪರಿಹಾರ ಮಂಜೂರಾಗಿದ್ದು, ಇಲ್ಲಿಯವರೆಗೆ 3.41 ಲಕ್ಷ ರೈತರಿಗೆ 218.80 ಕೋಟಿ ಇತ್ಯರ್ಥಪಡಿಸಲಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಡಿ ಒಟ್ಟು 20563 ಪ್ರಕರಣಗಳಿಗೆ ಒಟ್ಟು 8.21 ಕೋಟಿ ಬೆಳೆ ವಿಮೆ ಪರಿಹಾರ ಇತ್ಯರ್ಥಪಡಿಸಲಾಗಿದೆ. ಮಧ್ಯಂತರ ಬೆಳೆ ವಿಮೆ ಪರಿಹಾರದಡಿ ಒಟ್ಟು 2.67 ಲಕ್ಷ ರೈತರಿಗೆ 234.74 ಕೋಟಿ ವಿಮೆ ಪರಿಹಾರ ನೀಡಲಾಗಿದೆ ಎಂದರು.

ಸವಳು ಜವಳು ತಪ್ಪಿಸಲು ವಿಶೇಷ ಅನುದಾನ

ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ಭೂಮಿಯು ಸವಳು-ಜವಳು ಆಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ. ಈ ಸವಳು-ಜವಳನ್ನು ತಪ್ಪಿಸಲು ಮುಂದಿನ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಒದಗಿಸಲಾಗುವುದು ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್ ಧರ್ಮಗೌಡ, ಲಕ್ಷ್ಮಣ ಸವದಿ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಸುಮಾರು 77,646 ಹೆಕ್ಟೇರ್ ಮಳೆಯಾಶ್ರಿತ ಭೂಮಿ ಸವಳು-ಜವಳು ಬಾಧಿತವಾಗಿರುತ್ತದೆ. ಇದರಲ್ಲಿ ಉತ್ತರ ಕರ್ನಾಟಕದ ಒಟ್ಟು 13 ಜಿಲ್ಲೆಗಳಲ್ಲಿ ಸವಳು- ಜವಳು ಬಾಧಿತ ಪ್ರದೇಶ ಸುಮಾರು 56,621 ಹೆಕ್ಟೇರ್‌ಗಳಿದ್ದು, ಈ ಸವಳು-ಜವಳನ್ನು ಉಪಚರಿಸಲು ಮುಂದಿನ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಒದಗಿಸುವ ಚಿಂತನೆ ಇದೆ ಎಂದರು.

ಉತ್ತರ ಕರ್ನಾಟಕ ಭಾಗದ 13 ಜಿಲ್ಲೆಗಳಿಗೆ ಜವಳು-ಜವಳು ಉಪಚರಿಸಲು ಹೆಚ್ಚಿನ ಅನುದಾನ ನೀಡುವಂತೆ ನಾನು ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ. ಕೇಂದ್ರ ಸರಕಾರ ನಾಲ್ಕು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಇನ್ನು ಹೆಚ್ಚಿನ ಅನುದಾನ ಅಗತ್ಯವಿದ್ದು, ಮುಂದಿನ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಒದಗಿಸಲಾಗುವುದು. ಜಲಾಯನ ಅಭಿವೃದ್ಧಿ ಇಲಾಖೆಯಿಂದ ಮಳೆಯಾಶ್ರಿತ ಪ್ರದೇಶದಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ- ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಕಾರ್ಯಕ್ರಮದಡಿ 2016-17ನೇಸಾಲಿನಿಂದ 2005-26ನೇ ಸಾಲಿನವರೆಗೇ ಒಟ್ಟು 31.43 ಕೋಟಿ ರೂ.ಗಳ ವೆಚ್ಚದಲ್ಲಿ ಸವಳು-ಜವಳು ಬಾಧಿತ ಪ್ರದೇಶಗಳಲ್ಲಿ ಅಂತರ್ ಬಸಿ ಕಾಲುವೆ ನಿರ್ಮಾಣ ಮೂಲಕ ಮಣ್ಣಿನ ಸುಧಾರಣೆ ಉಪಚಾರವನ್ನು ಒಟ್ಟು 4208 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ. ಈ ಯೋಜನೆಯಡಿ 2025-26ನೇ ಸಾಲಿನಲ್ಲಿ 4.1 ಕೋಟಿಗಳ ಹೆಚ್ಚುವರಿ ಅನುದಾನಕ್ಕೆ ಅನುಮೋದನೆ ದೊರೆತಿದ್ದು, ಹೆಚ್ಚಿನ ಅನುದಾನವನ್ನು ಕೇಂದ್ರದಿಂದ ನಿರೀಕ್ಷಿಸಲಾಗಿದೆ ಎಂದರು.

ಉತ್ತರ ಕರ್ನಾಟಕ ಭಾಗದಲ್ಲಿ ಅದರಲ್ಲೂ ಬೆಳಗಾವಿ ಜಿಲ್ಲೆಯ ಕೃಷ್ಣ ಜಲಾಯನ ಪ್ರದೇಶದಲ್ಲಿ ಸವಳು- ಜವಳುನಿಂದ ಮಣ್ಣಿನ ಫಲವತತ್ತೆ ಹಾಳಾಗಿ ಜನ ಬದುಕದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಸರಿಪಡಿಸಲಿದ್ದರೆ ಜನ ಬದುಕಲು ಸಾಧ್ಯವಿಲ್ಲ. ಹೆಚ್ಚಿನ ಅನುದಾನ ನೀಡಿ ಸವಳು-ಜವಳು ಉಪಚರಿಸಿ.

- ರಾಜು ಕಾಗೆ ಶಾಸಕ

ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಅಕ್ಕಪಡೆ ರಚನೆ

ವಿಧಾನಸಭೆ: ಮಹಿಳೆಯರು ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ಸಲುವಾಗಿಯೇ ಅಕ್ಕಪಡೆ ರಚಿಸಲಾಗಿದ್ದು, ದಿನದಲ್ಲಿ 12 ಗಂಟೆ ಗಸ್ತು ತಿರುಗಲಿದೆ. ದೌರ್ಜನ್ಯಕ್ಕೊಳಗಾಗಿ ದೂರು ನೀಡುವವರ ಹೆಸರನ್ನು ಗೌಪ್ಯವಾಗಿ ಇಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಡಾ.ಭರತ್ ಶೆಟ್ಟಿ ಕೇಳಿದ ಪ್ರಶ್ನೆಗೆ ಉತ್ತರಿಸಿ, ಮಕ್ಕಳ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ದಿನದ 24 ಗಂಟೆಯೂ ಸಹಾಯವಾಣಿಗಳನ್ನು ತೆರೆಯಲಾಗಿದೆ. ಕಳೆದ ವರ್ಷ ನವೆಂಬರ್ 28 ರಂದು ಅಕ್ಕ ಪಡೆಗೆ ಚಾಲನೆ ನೀಡಲಾಗಿದ್ದು, ಈ ಅಕ್ಕಪಡೆ ಎಲ್ಲೆಡೆ ಗಸ್ತು ತಿರುಗುತ್ತದೆ. ನಮ್ಮ ಇಲಾಖೆಯಿಂದ ಸಹಾಯವಾಣಿ ತೆರೆಯಲಾಗಿದ್ದು, 1098 ಸಂಖ್ಯೆಗೆ ಕರೆ ಮಾಡಬಹುದು. ಅಕ್ಕ ಪಡೆಗೆ ಮಹಿಳಾ ಸಹಾಯವಾಣಿ 181, ಜತೆಗೆ ಪೊಲೀಸ್ ಇಲಾಖೆಯ 112 ಸಂಖ್ಯೆಗೆ ಕರೆ ಮಾಡಬಹುದು. ದೌರ್ಜನ್ಯ ತಡೆಗಟ್ಟಲು ಗ್ರಾಮ ಪಂಚಾಯಿತಿಯಿಂದ ಹಿಡಿದು ಮೇಲ್ಮಟ್ಟವರೆಗೂ ಸಮಿತಿ ರಚಿಸಲಾಗಿದೆ ಎಂದರು.

ಮಹಿಳೆಯರ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ಜವಾಬ್ದಾರಿ ಪ್ರತಿಯೊಬ್ಬರದ್ದಾಗಿರುತ್ತದೆ. ಇಲಾಖೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಾಕಷ್ಟು ಪ್ರಚಾರ ಮಾಡಲಾಗುತ್ತಿದೆ. ಬೀದಿ ನಾಟಕಗಳ ಮೂಲಕ ಜನರನ್ನು ತಲುಪುವ ಕೆಲಸ ಮಾಡಲಾಗುತ್ತಿದೆ, ಆಕಾಶವಾಣಿಯಲ್ಲಿ ಒಂದೂವರೆ ತಿಂಗಳ ಪ್ರಚಾರ ನೀಡಲಾಗಿದೆ.

- ಲಕ್ಷ್ಮಿ ಹೆಬ್ಬಾಳ್ಕರ್ ಸಚಿವೆ

ವಿಶ್ವವಾಣಿ

ಸಂಪಾದಕೀಯ

ದರೋಡೆ ಪ್ರಕರಣ ಹೆಚ್ಚಳ ಕಳವಳಕಾರಿ

ರಾಜ್ಯದಲ್ಲಿ ಇತ್ತೀಚೆಗೆ ದರೋಡೆ ಪ್ರಕರಣಗಳ ಸಂಖ್ಯೆ ಆತಂಕಕಾರಿಯಾಗಿ ಹೆಚ್ಚುತ್ತಿರುವುದು ನಾಗರಿಕರ ಭದ್ರತೆ ಮತ್ತು ಕಾನೂನು-ಕ್ರಮದ ಸ್ಥಿತಿಗತಿಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ. ನಗರ ಪ್ರದೇಶಗಳಷ್ಟೇ ಅಲ್ಲ, ಗ್ರಾಮೀಣ ಭಾಗಗಳಲ್ಲಿಯೂ ದರೋಡೆ, ಲೂಟಿ ಪ್ರಕರಣಗಳು ವರದಿಯಾಗುತ್ತಿರುವುದು ಸಮಾಜದ ಶಾಂತಿ ಮತ್ತು ಜನರ ನೆಮ್ಮದಿಗೆ ಧಕ್ಕೆ ತಂದಿದೆ. ಬೆಂಗಳೂರಿನ ಎಟಿಎಂ ಹಣ ದರೋಡೆ ಪ್ರಕರಣ, ಮೈಸೂರಿನ ಹುಣಸೂರು ಚಿನ್ನಾಭರಣ ಅಂಗಡಿ ದರೋಡೆ, ವಿಜಯಪುರ ಜಿಲ್ಲೆಯ ಚಡಚಣದಲ್ಲಿ ನಡೆದ ಚಿನ್ನಾಭರಣ ಅಂಗಡಿ ಪ್ರಕರಣದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ ಎಂಬ ಸುದ್ದಿ ಕೇಳಿ ಜನರು ನಿಟ್ಟುಸಿರುವ ಬಿಡುವ ಮುನ್ನವೇ ಇಂಥ ಹಲವು ಪ್ರಕರಣಗಳು ವರದಿಯಾಗುತ್ತಿವೆ. ಜುವೆಲ್ಲರ್ಸ್, ಬ್ಯಾಂಕ್, ಎಟಿಎಂ, ವ್ಯಾಪಾರ ಸಂಸ್ಥೆಗಳು ಹಾಗೂ ವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಅಪರಾಧಗಳು ಪೊಲೀಸ್ ವ್ಯವಸ್ಥೆಗೆ ಸವಾಲಾಗಿ ಪರಿಣಮಿಸಿವೆ. ಕೆಲವು ಪ್ರಕರಣಗಳಲ್ಲಿ ಆರೋಪಿಗಳು ಜಾಮೀನಿನಲ್ಲಿ ಹೊರಬಂದು ಮತ್ತೆ ಅದೇ ಕೃತ್ಯಗಳಲ್ಲಿ ತೊಡಗುತ್ತಿದ್ದಾರೆ. ದರೋಡೆಕೋರರನ್ನು ಮಟ್ಟಹಾಕಬೇಕಾದರೆ ಪೊಲೀಸ್ ಇಲಾಖೆಯ ಜವಾಬ್ದಾರಿ ಎಷ್ಟಿದೆಯೋ ಅದಕ್ಕಿಂತಲೂ ಹೆಚ್ಚಾಗಿ ಸಾರ್ವಜನಿಕರು ಮತ್ತು ಸರಕಾರದ ಜವಾಬ್ದಾರಿ ಇದೆ. ಅಪರಾಧ ನಿಯಂತ್ರಣಕ್ಕೆ ವಿಶೇಷ ಪೊಲೀಸ್ ಪಡೆ, ವೇಗದ ನ್ಯಾಯಾಲಯಗಳ ಸ್ಥಾಪನೆ, ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ವ್ಯವಸ್ಥೆ ಜಾರಿಗೊಳಿಸಬೇಕಾಗಿದೆ. ಸಾರ್ವಜನಿಕರು ಪಕ್ಕದ ಮನೆಯವರ ಬಗ್ಗೆ ಎಚ್ಚರಿಕೆ, ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು, ಸಮುದಾಯ ಮಟ್ಟದಲ್ಲಿ ಜಾಗೃತಿ ಮೂಡಿಸುವುದು ದರೋಡೆ ಪ್ರಕರಣಗಳನ್ನು ತಡೆಯುವಲ್ಲಿ ಸಹಕಾರಿಯಾಗುತ್ತದೆ. ಒಟ್ಟಿನಲ್ಲಿ, ದರೋಡೆ ಪ್ರಕರಣಗಳ ಹೆಚ್ಚಳ ಕೇವಲ ಪೊಲೀಸ್ ಸಮಸ್ಯೆಯಲ್ಲ; ಇದು ಆಡಳಿತ, ನ್ಯಾಯಾಂಗ ಮತ್ತು ಸಮಾಜದ ಸಂಯುಕ್ತ ಜವಾಬ್ದಾರಿಯ ವಿಷಯ. ಇಲ್ಲವಾದರೆ, ಕಾನೂನು-ಕ್ರಮದ ಮೇಲಿನ ನಂಬಿಕೆ ಕುಸಿದು, ಸಮಾಜ ಅಶಾಂತಿಯತ್ತ ಸಾಗುವ ಅಪಾಯವನ್ನು ನಿರ್ಲಕ್ಷಿಸುವಂತಿಲ್ಲ.

ಸೊಂಪಾದಕೀಯ

ಈ ದೇಶ ಗಂಡಸರಿಗಲ್ಲ

ನಮ್ಮಲ್ಲಿ ಆಗಾಗ ಕೇಳಿಬರುವ ಪದಪುಂಜ ಅಂದ್ರೆ, 'ಇದು ಪುರುಷ ಪ್ರಧಾನ ಸಮಾಜ' ಅನ್ನೋದು. ಆದರೆ ನಿಜವಾಗಿಯೂ ಸಮಾಜದಲ್ಲಿನ ಕೆಲವು ಕಟ್ಟಳೆ, ಕಾನೂನು, ಸವಲತ್ತುಗಳನ್ನು ನೋಡಿದರೆ ಗಂಡಸರಿಗೆ ಅದ್ಯಾವ ಸೀಮೆ ಪ್ರಾಮುಖ್ಯ ಸಿಗುತ್ತಿದೆ ಅನ್ನೋ ಪ್ರಶ್ನೆ ಮೂಡೋದು ಸಹಜ. ವಿಚ್ಛೇದನ ಪ್ರಕರಣಗಳಲ್ಲಂತೂ ಪುರುಷನೇ ಶೋಷಿತ. ಸಂಸಾರ ಹದಗೆಟ್ಟಾಗ ಗಂಡ ಹೆಂಡತಿ ಬೇರೆ ಆಗ್ತಾರೆ. ಅದು ಒಂಥರ ಮಾನಸಿಕ ನೋವು. ಆದರೆ ಅದಕ್ಕೆ ಸಮಾಧಾನಕರ ಬಹುಮಾನ ಎಂಬಂತೆ ಮಹಿಳೆ ಯರಿಗೆ ಜೀವನಾಂಶ ಸಿಗುತ್ತದೆ. ಆದರೆ ಪುರುಷ ಆ ಜೀವನಾಂಶ ಕೊಡ ಬೇಕಾಗಿರೋದ್ರಿಂದ ಅವನಿಗೆ ಮಾನಸಿಕ ಸಂಕಷ್ಟದ ಜತೆಗೆ ಆರ್ಥಿಕ ಸಂಕಷ್ಟ ಕೂಡಾ ಎದುರಾಗುತ್ತದೆ. ಇನ್ನು ಹೆಂಡತಿಯ ಮಾತು ಕೇಳದಿದ್ದರೆ ಸಾಕು, ಗಂಡನ ಮೇಲೆ ವರದಕ್ಷಿಣೆ ಕೇಸು ಗ್ಯಾರಂಟಿ. ಸರಕಾರಗಳಿಂದ ಬರುವ ಸವಲತ್ತುಗಳಲ್ಲೂ ಮಹಿಳೆಯರಿಗೇ ಆದ್ಯತೆ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಹಿಳೆಯರ ಪಿಂಚಣಿ ಹಣದಲ್ಲೂ ಪುರುಷರನ್ನು ಕಡೆಗಣಿಸಲಾಗುತ್ತಿದೆ. ಹೆಂಡತಿಗೆ ಪಿಂಚಣಿ ಬರುತ್ತಿದ್ದರೆ ಅದು ಗಂಡನಿಗೆ ಇಷ್ಟು ದಿನ ಸೇರುತ್ತಿತ್ತು. ಆದರೆ ಈಗ ಮಹಿಳೆಯರ ಪಿಂಚಣಿ ಹಣವನ್ನು ಗಂಡನಿಗೆ ಕೊಡೋ ಬದಲು ಮಕ್ಕಳಿಗೆ ಕೊಡಬೇಕು ಅಂತ ಹೊಸ ಕಾನೂನು ಬರ್ತಾ ಇದೆಯಂತೆ. ಇದನ್ನೆಲ್ಲಾ ನೋಡಿದ ಮೇಲೆ ಈ ದೇಶ ಗಂಡಸರಿಗಲ್ಲ ಬಿಡಿ ಅನ್ನೋ 'ಎದ್ದೇಳು ಮಂಜುನಾಥ'ನ ಶೈಲಿಯಲ್ಲಿ ಗಂಡಸರು ನಿಟ್ಟುಸಿರು ಬಿಡುತ್ತಿದ್ದಾರೆ. ಒಟ್ಟಿನಲ್ಲಿ ದುಡಿದು, ಕಡಿದು ಗುಡ್ಡೆ ಹಾಕಿ ಸಂಸಾರವನ್ನು ಸಾಕೋ ಜವಾಬ್ದಾರಿ ಮಾತ್ರ ಪುರುಷನ ಪಾಲಿಗೆ. ಆದರೆ ಸೌಕರ್ಯಗಳ ವಿಷಯದಲ್ಲಿ ಮಾತ್ರ ಗಂಡಸು ಅಕ್ಷರಶಃ ಪರದೇಸಿ ಅನ್ನಿಸಿದರೆ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ಬಜೆಟ್ ಪ್ರೆಸ್ ಅಂತರಂಗ

ಭಾರತದ ಆರ್ಥಿಕತೆಯ ಅತ್ಯಂತ ನಿರ್ಣಾಯಕ ದಾಖಲೆಯಾದ 'ಕೇಂದ್ರ ಬಜೆಟ್' ತಯಾರಾಗುವ ಪ್ರಕ್ರಿಯೆ ಒಂದು ರೋಚಕ ಕಥೆಯೇ ಸರಿ. ನವದೆಹಲಿಯ ರೈಸಿನಾ ಹಿಲ್ಸ್‌ನಲ್ಲಿರುವ ನಾರ್ಥ್ ಬ್ಲಾಕ್‌ನ ನೆಲಮಹಡಿಯಲ್ಲಿರುವ 'ಬಜೆಟ್ ಪ್ರೆಸ್' ಕೇವಲ ಒಂದು ಮುದ್ರಣಾಲಯವಲ್ಲ, ಅದು ಅತ್ಯಂತ ರಹಸ್ಯವಾದ ಮತ್ತು ಕಟ್ಟುನಿಟ್ಟಾದ ಭದ್ರತೆಯ ಕೋಟೆಯೂ ಹೌದು. ಈ ಬಜೆಟ್ ಪ್ರೆಸ್‌ನ ವೈಶಿಷ್ಟ್ಯ, ಅದರ ಕಾರ್ಯವೈಖರಿ ಮತ್ತು ಅಲ್ಲಿನ ರಹಸ್ಯಗಳು ಕುತೂಹಲಕಾರಿ. ಭಾರತದ ಹಣಕಾಸು ಸಚಿವಾಲಯವು ಕಾರ್ಯನಿರ್ವಹಿಸುವ ನಾರ್ಥ್ ಬ್ಲಾಕ್ ಕಟ್ಟಡದ ನೆಲಮಹಡಿಯ ಒಂದು ಭಾಗದಲ್ಲಿ ಈ ವಿಶೇಷ ಮುದ್ರಣಾಲಯವಿದೆ. 1980ರ ದಶಕದ ಮೊದಲು, ಬಜೆಟ್ ದಾಖಲೆಗಳನ್ನು ರಾಷ್ಟ್ರಪತಿ ಭವನದ ಪ್ರೆಸ್‌ನಲ್ಲಿ ಮುದ್ರಿಸಲಾಗುತ್ತಿತ್ತು. ಆದರೆ ಬಜೆಟ್‌ನ ಕೆಲವು ಅಂಶಗಳು ಸೋರಿಕೆಯಾದ ಕಾರಣ, ಭದ್ರತೆಯ ದೃಷ್ಟಿಯಿಂದ 1980ರಿಂದ ಇದನ್ನು ನಾರ್ಥ್ ಬ್ಲಾಕ್‌ನ ಒಳಗೇ ಸ್ಥಳಾಂತರಿಸಲಾಯಿತು. ಅಲ್ಲಿಂದ ಈಚೆಗೆ, ಬಜೆಟ್ ದಾಖಲೆಗಳ ಮುದ್ರಣವು ಈ ಅತ್ಯಂತ ಸುರಕ್ಷಿತ ವಲಯದಲ್ಲೇ ನಡೆಯುತ್ತಿದೆ. ಬಜೆಟ್ ಮುದ್ರಣ ಪ್ರಕ್ರಿಯೆಯು ಅಧಿಕೃತವಾಗಿ ಆರಂಭವಾಗುವುದು 'ಹಲ್ವಾ ಸಮಾರಂಭ'ದ ಮೂಲಕ. ಬಜೆಟ್ ಮಂಡನೆಗೆ ಸುಮಾರು ಹತ್ತು ದಿನಗಳ ಮೊದಲು ಹಣಕಾಸು ಸಚಿವರು ದೊಡ್ಡ ಕಡಾಯಿಯಲ್ಲಿ ಹಲ್ವಾ ತಯಾರಿಸಿ ಅಧಿಕಾರಿಗಳಿಗೆ ಹಂಚುತ್ತಾರೆ. ಇದು ಭಾರತೀಯ ಸಂಪ್ರದಾಯದಂತೆ ಯಾವುದೇ ಶುಭ ಕಾರ್ಯಕ್ಕೆ ಮುನ್ನ ಸಿಹಿ ತಿನ್ನುವ ಪದ್ಧತಿಯಾಗಿದೆ. ಈ ಸಮಾರಂಭದ ನಂತರವೇ ಬಜೆಟ್ ಪ್ರೆಸ್‌ನ ಒಳಗೆ ಅಧಿಕಾರಿಗಳ 'ದಿಗ್ಬಂಧನ' ಅಥವಾ 'ಕ್ವಾರಂಟೈನ್' ಪ್ರಕ್ರಿಯೆ ಆರಂಭವಾಗುತ್ತದೆ. ಬಜೆಟ್ ಪ್ರೆಸ್‌ನ ಅತ್ಯಂತ ಆಶ್ಚರ್ಯಕರ ಸಂಗತಿಯೆಂದರೆ ಅಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಏಕಾಂತ ವಾಸ. ಸುಮಾರು 100 ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಮುದ್ರಣ ಸಿಬ್ಬಂದಿಗಳು ಬಜೆಟ್ ಮಂಡನೆಯಾಗುವವರೆಗೂ (ಸುಮಾರು 10 ದಿನಗಳು) ಈ ಪ್ರೆಸ್‌ನ ಒಳಗೇ ಇರಬೇಕಾಗುತ್ತದೆ. ಅವರು ತಮ್ಮ ಮನೆಗೆ ಹೋಗುವಂತಿಲ್ಲ ಮತ್ತು ಕುಟುಂಬದವರೊಂದಿಗೆ ಮಾತನಾಡುವಂತಿಲ್ಲ. ಪ್ರೆಸ್‌ನ ಒಳಗೆ ಯಾವುದೇ ಮೊಬೈಲ್ ಫೋನ್, ಇಂಟರ್ನೆಟ್ ಅಥವಾ ಸಂವಹನ ಸಾಧನಗಳಿಗೆ ಅವಕಾಶವಿರುವುದಿಲ್ಲ. ಅಲ್ಲಿನ ಲ್ಯಾಂಡ್ ಲೈನ್ ಫೋನ್‌ಗಳು ಕೇವಲ ಒಳಬರುವ ಕರೆಗಳಿಗೆ ಸೀಮಿತವಾಗಿರುತ್ತವೆ. ಮಾಹಿತಿಯ ಸೋರಿಕೆಯನ್ನು ತಡೆಯಲು ಇಡೀ ನಾರ್ಥ್ ಬ್ಲಾಕ್ ವಲಯದಲ್ಲಿ ಪ್ರಬಲವಾದ ಜಾಮರ್‌ಗಳನ್ನು ಅಳವಡಿಸಲಾಗುತ್ತದೆ. ಈ ಮುದ್ರಣಾಲಯವು ದೇಶದ ಅತ್ಯಂತ ಸುರಕ್ಷಿತ ಸ್ಥಳಗಳಲ್ಲಿ ಒಂದಾಗಿರುತ್ತದೆ. ಇಂಟೆಲಿಜೆನ್ಸ್ ಬ್ಯೂರೋ (IB) ಅಧಿಕಾರಿಗಳು 24 ಗಂಟೆಯೂ ಪ್ರೆಸ್‌ನ ಪ್ರತಿಯೊಂದು ಚಟುವಟಿಕೆಯ ಮೇಲೆ ನಿಗಾ ಇಟ್ಟಿರುತ್ತಾರೆ. ಸಚಿವಾಲಯದ ಹಿರಿಯ ಅಧಿಕಾರಿಗಳಿಗೂ ಸಹ ಕಟ್ಟುನಿಟ್ಟಾದ ತಪಾಸಣೆಯ ನಂತರವೇ ಒಳಗೆ ಪ್ರವೇಶ ನೀಡಲಾಗುತ್ತದೆ. ಪ್ರತಿಯೊಂದು ನಡೆಯೂ ಕೆಮರಾದಲ್ಲಿ ಸೆರೆಯಾಗುತ್ತದೆ. ಮುದ್ರಣಾಲಯದ ಒಳಗೆ ಹೋಗುವ ಪ್ರತಿಯೊಂದು ಪೇಪರ್ ಮತ್ತು ಹೊರಬರುವ ಪ್ರತಿಯೊಂದು ವಸ್ತುವನ್ನು ಕೂಲಂಕಷವಾಗಿ ತಪಾಸಣೆ ಮಾಡಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಬಜೆಟ್ ಪ್ರೆಸ್‌ನ ಕಾರ್ಯವೈಖರಿಯಲ್ಲಿ ದೊಡ್ಡ ಬದಲಾವಣೆಗಳಾಗಿವೆ. 2021ರಲ್ಲಿ ಕೋವಿಡ್ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಭಾರತವು ತನ್ನ ಮೊದಲ 'ಪೇಪರ್‌ಲೆಸ್ ಬಜೆಟ್' ಮಂಡಿಸಿತು. ಮೊದಲು ಸಾವಿರಾರು ಪ್ರತಿಗಳನ್ನು ಮುದ್ರಿಸಲಾಗುತ್ತಿತ್ತು, ಆದರೆ ಈಗ ಮುದ್ರಣದ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಬಹುತೇಕ ದಾಖಲೆಗಳು ಈಗ ಡಿಜಿಟಲ್ ರೂಪದಲ್ಲಿ ಲಭ್ಯವಿರುತ್ತವೆ. ಆದರೂ, ಸಂಸತ್ತಿನ ಸದಸ್ಯರಿಗಾಗಿ ಮತ್ತು ದಾಖಲೆಗಳಿಗಾಗಿ ಕೆಲವು ಪ್ರಮುಖ ಪ್ರತಿಗಳನ್ನು ಇಂದಿಗೂ ಅತ್ಯಂತ ರಹಸ್ಯವಾಗಿ ಈ ಪ್ರೆಸ್‌ನಲ್ಲಿ ಮುದ್ರಿಸಲಾಗುತ್ತದೆ. ಹಣಕಾಸು ಸಚಿವರು ಈಗ ಬಜೆಟ್ ಪ್ರತಿಯ ಬದಲು 'ಟ್ಯಾಬ್ಲೆಟ್' ಹಿಡಿದು ಸಂಸತ್ತಿಗೆ ಬರುವುದು ನಾರ್ಥ್ ಬ್ಲಾಕ್ ಪ್ರೆಸ್‌ನ ಬದಲಾದ ಸ್ವರೂಪಕ್ಕೆ ಸಾಕ್ಷಿ. ಬಜೆಟ್ ಪ್ರೆಸ್‌ನ ಒಳಗೆ ಇರುವ ಸಿಬ್ಬಂದಿಗೆ ಅಲ್ಲಿಯೇ ಊಟ ಮತ್ತು ನಿದ್ರೆಯ ವ್ಯವಸ್ಥೆ ಮಾಡಲಾಗುತ್ತದೆ. ಅವರು ಹಗಲಿರುಳು ಕೆಲಸ ಮಾಡುತ್ತಾರೆ. ಬಜೆಟ್ ಮಂಡನೆಯಾದ ದಿನ ಸಂಸತ್ತಿನಲ್ಲಿ ಸಚಿವರು ಭಾಷಣ ಮುಗಿಸಿದ ನಂತರವೇ ಈ ಸಿಬ್ಬಂದಿಗೆ ಹೊರಗೆ ಬರಲು ಅವಕಾಶ ನೀಡಲಾಗುತ್ತದೆ. ದೇಶದ ಆರ್ಥಿಕ ಭವಿಷ್ಯವನ್ನು ನಿರ್ಧರಿಸುವ ದಾಖಲೆಗಳನ್ನು ಗೌಪ್ಯವಾಗಿಡುವಲ್ಲಿ ಇವರ ಪಾತ್ರ ಮತ್ತು ತ್ಯಾಗ ಬಹಳ ದೊಡ್ಡದಿದೆ. ನಾರ್ಥ್ ಬ್ಲಾಕ್‌ನ ಬಜೆಟ್ ಪ್ರೆಸ್ ಕೇವಲ ಯಂತ್ರಗಳಿರುವ ಜಾಗವಲ್ಲ, ಅದು ಭಾರತದ ಆರ್ಥಿಕ ಸಾರ್ವಭೌಮತ್ವದ ಮತ್ತು ಶಿಸ್ತಿನ ಸಂಕೇತ. ತಂತ್ರಜ್ಞಾನ ಎಷ್ಟೇ ಬೆಳೆದರೂ, ಬಜೆಟ್‌ನ ಗೌಪ್ಯತೆಯನ್ನು ಕಾಪಾಡುವಲ್ಲಿ ಈ ಸ್ಥಳವು ಇಂದಿಗೂ ತನ್ನದೇ ಆದ ಮಹತ್ವವನ್ನು ಉಳಿಸಿಕೊಂಡಿದೆ. ಅಲ್ಲಿ ನಡೆಯುವ ಪ್ರತಿಯೊಂದು ಮುದ್ರಣದ ಹೆಜ್ಜೆಯೂ ದೇಶದ ಅಭಿವೃದ್ಧಿಯ ಹಾದಿಯನ್ನು ನಿರ್ಧರಿಸುತ್ತದೆ.

ಡಾ.ರಾಜಾರಾಮಣ್ಣ ಎಂಬ ನಿತ್ಯ ನೆನಪಿನ ಸ್ಥಾವರ !

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಜನವರಿ 28. ಖ್ಯಾತ ಅಣುವಿಜ್ಞಾನಿ, ಪದ್ಮವಿಭೂಷಣ ಡಾ.ರಾಜಾ ರಾಮಣ್ಣ ಅವರ ಜನ್ಮದಿನ. ಅವರು ಬದುಕಿದ್ದಿದ್ದರೆ ಅವರಿಗೆ ನಿನ್ನೆ 101 ವರ್ಷ ಆಗುತ್ತಿತ್ತು. ನನಗೆ ಅವರೊಂದಿಗೆ ಸುಮಾರು ಹನ್ನೆರಡು ವರ್ಷಗಳ ಅನ್ಯೋನ್ಯ ಸಂಬಂಧವಿತ್ತು. ಅಣುವಿಜ್ಞಾನಿಯಾಗಿದ್ದ ಕಾರಣದಿಂದಲೋ, ಅವರು ಏರಿದ ಎತ್ತರದಿಂದಲೋ, ನನಗೆ ಅವರ ಜತೆ ಬೆರೆಯುವುದು ಆರಂಭದಲ್ಲಿ ಸುಲಭವಾಗಿರಲಿಲ್ಲ. ನಮ್ಮಿಬ್ಬರ ನಡುವಿನ ಅಂತರವನ್ನು ಕಿರಿದು ಮಾಡಿದವರು ಅವರೇ. 'ಭಟ್ರೇ, ನೀವು ನನ್ನನ್ನು ಆಗಾಗ ಭೇಟಿ ಮಾಡದಿದ್ದರೆ, ನಾವು ಆತ್ಮೀಯರಾಗುವುದು ಸಾಧ್ಯವೇ ಇಲ್ಲ' ಎಂದು ಅವರು ಆರಂಭ ದಲ್ಲಿ ಹೇಳುತ್ತಿದ್ದ ಮಾತುಗಳು ಅವರ ಹತ್ತಿರಕ್ಕೆ ಕರೆದೊಯ್ಯಿತು. ಆದರೆ ಒಮ್ಮೆ ಅವರಿಗೆ ಫೋನ್ ಮಾಡಿದಾಗ, 'ಮಹತ್ವದ ವಿಷಯವಿಲ್ಲದಿದ್ದರೆ ಫೋನ್ ಮಾಡಬೇಡಿ' ಎಂದು ಅಂದುಬಿಟ್ಟಿದ್ದರು.

ನಾನು ಸುಮಾರು ನಾಲ್ಕು ತಿಂಗಳು ಅವರ ಸಹವಾಸಕ್ಕೇ ಹೋಗಿರಲಿಲ್ಲ. ಅನಂತರ ಅವರು ಕೋಟೆ ಮೈದಾನದಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಸಿಕ್ಕಾಗ, 'ಬನ್ನಿ, ಈಗ ನಮ್ಮ ಮನೆಗೆ ಹೋಗೋಣ' ಎಂದು ವರಾತ ಮಾಡಿ ಅವರ ಕಾರಿನಲ್ಲಿ ಕುಳ್ಳಿರಿಸಿಕೊಂಡು ಹೋಗಿದ್ದರು. ಅಂದು ಅವರ ಮನೆಯಲ್ಲಿ ಕಪ್ಪಾದ ನಿಲುವಂಗಿ ಧರಿಸಿ, ಒಂದು ಗ್ಲಾಸ್ ಸ್ಕಾಚ್ ಇಟ್ಟುಕೊಂಡು ಸುಮಾರು ಮುಕ್ಕಾಲು ಗಂಟೆ ಪಿಯಾನೋ ನುಡಿಸಿದ್ದರು. ನನಗೆ ಪಿಯಾನೋ ಅಂದ್ರೆ, ಗ್ರೀಕ್ ಇದ್ದಂತೆ. 'ಪಿಯಾನೋ ಅರ್ಥ ಮಾಡಿಕೊಳ್ಳಲು ಒಳ್ಳೆಯ ಕಿವಿಗಳಿದ್ದರೆ ಸಾಕು, There's nothing remarkable about it. All one has to do is hit the right keys at the right time and the instrument plays itself' ಎಂದು ಅವರು ಹೇಳಿದ್ದು ಈಗಲೂ ಕಿವಿಯಲ್ಲಿ ಗುಂಯ್ ಗುಡುತ್ತಿದೆ. 'ಎಲ್ಲ ಗುಂಡುಗಳ ಪೈಕಿ ಸ್ಕಾಚ್ ಶ್ರೇಷ್ಠ ಅಂತಾರೆ. ಎಲ್ಲ ಸಂಗೀತ ವಾದನಗಳಲ್ಲಿ ಪಿಯಾನೋ' ಎಂಬ ಮಾತನ್ನು ಅವರ ಬಾಯಿಯಿಂದ ಅನೇಕ ಸಲ ಕೇಳಿದ್ದೇನೆ.

ಒಮ್ಮೆ ಅರ್ಧ ಗಂಟೆ ಪಿಯಾನೋ ವಾದನದಲ್ಲಿ ತಲ್ಲೀನರಾದ ಡಾ.ರಾಮಣ್ಣ, ಒಂದೇ ಗುಟುಕಿಗೆ ಸ್ಕಾಚ್ ಗ್ಲಾಸ್ ಖಾಲಿ ಮಾಡಿ, 'ಭಟ್ರೇ, ನಿಮಗೆ ಏನು ಅರ್ಥವಾಯಿತು ಹೇಳಿ' ಎಂದು ತಬ್ಬಿಬ್ಬು ಮಾಡಿಬಿಟ್ಟಿದ್ದರು. ಅದಕ್ಕೆ ನಾನು, 'ನನಗೆ ಅರ್ಥವಾಗಿದ್ದು ಇಷ್ಟೇ ಸರ್... ನೀವು ಪಿಯಾನೋ ಬಾರಿಸುವಾಗ ಕೈಗಳಿಗೆ ಕೆಲಸ ಕೊಡ್ತೀರಿ, ಸ್ಕಾಚ್ ಕುಡಿಯುವಾಗ ಗಂಟಲಿಗೆ ಕೆಲಸ ಕೊಡ್ತೀರಿ. ಆದರೆ ಎರಡೂ ಮುಗಿದ ಮೇಲೆ ತಬ್ಬಿಬ್ಬು ಆಗೋಕೆ ನನ್ನ ತಲೆಗೆ ಕೆಲಸ ಕೊಡ್ತೀರಲ್ಲ, ಅದು ಮಾತ್ರ ಎಲ್ಲ 'ಶಾಸ್ತ್ರ'ವನ್ನೂ ಮೀರಿದ್ದು.' ಎಂದು ಹೇಳಿ ಬಚಾವ್ ಆಗಿದ್ದೆ. ಕೆಲವೊಮ್ಮೆ ನನ್ನ ಮತ್ತು ಅವರ ಮಧ್ಯೆ ಆ ಹಾಳು ಪಿಯಾನೋ ಅಡ್ಡ ಬಂದಿರಬಹುದಾ ಎಂದು ನನಗೆ ಅನೇಕ ಸಲ ಅನಿಸಿದ್ದುಂಟು. ಪಿಯಾನೋ ಮುಂದೆ ನನ್ನನ್ನು ಕುಳ್ಳಿರಿಸಿಕೊಂಡು, ಮಂಗಾ ಮಾಡಿ ಇವರು ಮಜಾ ತೆಗೆದುಕೊಳ್ಳುತ್ತಿರಬಹುದಾ ಎಂದೂ ಅಂದುಕೊಂಡಿದ್ದಿದೆ.



'ನೀವು ಈ ಜನ್ಮದಲ್ಲಿ ನನಗೆ ಪಿಯಾನೋ ಕಲಿಸಬೇಕು ಅಂತ ನಿರ್ಧರಿಸಿದ್ದರೆ, ನಾನು ನಿಮಗೆ ಯಾವ ರೀತಿಯಲ್ಲೂ ಸಹಕರಿಸಲಾರೆ' ಎಂದು ಅವರಿಗೆ ಆಗಾಗ ಹೇಳುತ್ತಿದ್ದೆ. 'When you play Piano, never mind who listens to you' ಎಂದು ಡಾ.ರಾಮಣ್ಣ ಹೇಳುತ್ತಿದ್ದರು. ಅದಕ್ಕಾಗಿಯೇ ನೀವು ನನ್ನನ್ನು ಕುಳ್ಳಿರಿಸಿಕೊಂಡು, ನಾನು ಇದ್ದರೆಷ್ಟು, ಬಿಟ್ಟರೆಷ್ಟು ಎಂಬ ರೀತಿಯಲ್ಲಿ ಪಿಯಾನೋ ನುಡಿಸುತ್ತಿರಬೇಕಲ್ಲ?' ಎಂದು ಹೇಳಿದರೆ ಬಾಯ್ತುಂಬಾ ನಗುತ್ತಿದ್ದರು. 'ನಿಮ್ಮ ಮೂಡು ಈ ಹಾಳು ಪೆಟ್ಟಿಗೆಯನ್ನು ಅವಲಂಬಿಸಿದೆ' ಎಂದು ನಾನು ಕೆಲವು ಸಲ ಅವರಿಗೆ ಹೇಳಿದ್ದಿದೆ. ಆ ಪಿಯಾನೋಕ್ಕೆ ಏನಾದರೂ ಮಾತಾಡಲು ಬರುತ್ತಿದ್ದರೆ, ಖಂಡಿತವಾಗಿಯೂ ಅದು 'ಈ ಭಟ್ಟನನ್ನು ಕುಳ್ಳಿರಿಸಿಕೊಂಡು ನನ್ನ ಮತ್ತು ನಿಮ್ಮ ಟೈಮ್ ವೇಸ್ಟ್ ಮಾಡ್ತಾ ಇದ್ದೀರಿ ಎಂದು ಹೇಳುತ್ತಿತ್ತೇನೋ' ಎಂದು ನಾನು ಅವರಿಗೆ ಹೇಳಿದ್ದಿದೆ. ಅವರು ಪಿಯಾನೋ ಮುಂದೆ ಕುಳಿತಾಗ ಅವರಾಗಿರುತ್ತಿರಲಿಲ್ಲ. ಯಾವುದೋ ಲೋಕದಲ್ಲಿ ವಿಹರಿಸುತ್ತಿದ್ದಂತೆ ಭಾಸವಾಗುತ್ತಿತ್ತು. ನಾನು ಪಿಯಾನೋದ ಕೀಲಿಗಳನ್ನು ಒತ್ತಿದಾಗ ಸಿಗುವ ಆನಂದ ಮತ್ತು ಪರಮಾಣುವಿನ ರಹಸ್ಯವನ್ನು ಭೇದಿಸಿದಾಗ ಸಿಗುವ ತೃಪ್ತಿ ಎರಡೂ ಒಂದೇ. ಇವೆರಡೂ ಬ್ರಹ್ಮಾಂಡದ ಲಯವನ್ನು ಅರ್ಥಮಾಡಿಕೊಳ್ಳುವ ದಾರಿಗಳು' ಎಂದು ಅವರು ಹೇಳಿದ್ದರು.

ಒಮ್ಮೆ ಮಾತಾಡುವಾಗ, ಸಾರ್, ನಾನು ಕಾಲೇಜಿನಲ್ಲಿ ಓದುವಾಗ, ಕೈಗಾ ಅಣು ಸ್ಥಾವರವನ್ನು ವಿರೋಧಿಸಿ ಹೋರಾಟದಲ್ಲಿ ಪಾಲ್ಗೊಂಡಿದ್ದೆ. ಉತ್ತರಕನ್ನಡ ಜಿಲ್ಲೆಯಲ್ಲಿ ವಾರಗಟ್ಟಲೆ ಜಾಥಾ ಮಾಡಿ, ಭಾಷಣದಲ್ಲಿ ನಿಮ್ಮನ್ನು ಬೈದಿದ್ದೆ. ಆ ದಿನಗಳಲ್ಲಿ ನಾವು ನಿಮ್ಮ ಪ್ರತಿಕೃತಿಯನ್ನು ಸುಟ್ಟಿದ್ದೆವು' ಎಂದು ಹೇಳಿದಾಗ, 'ನೀವು ನನ್ನ ಸ್ನೇಹಿತರಾಗಲು ಲಾಯಕ್ಕು ಬಿಡಿ' ಎಂದು ಹೇಳಿ ಬೆನ್ನು ತಟ್ಟಿದ್ದರು. ಒಬ್ಬರ ಬಗ್ಗೆ ಅಂಥ ಪ್ರೀತಿಯಷ್ಟೇ ಇರಬಾರದು, ವಿರೋಧಗಳೂ ಇರಬೇಕು' ಎಂದು ಹೇಳಿ ಅಚ್ಚರಿಯುಂಟು ಮಾಡಿದ್ದರು. ಡಾ.ರಾಮಣ್ಣನವರು ಕೇಂದ್ರ ಸರಕಾರದಲ್ಲಿ ರಕ್ಷಣಾ ಖಾತೆ ರಾಜ್ಯ ಸಚಿವರಾಗಿದ್ದಾಗ, ದಿಲ್ಲಿಯ ಅವರ ಮನೆಯಲ್ಲಿ ನಾನು ಮೂರು ದಿನ ತಂಗಿದ್ದೆ. ಅಲ್ಲಿಂದ ಅವರು ರಕ್ಷಣಾ ಹೆಲಿಕಾಪ್ಟರ್ ನಲ್ಲಿ ನನ್ನನ್ನು ಲಡಾಖ್ ಗೂ ಕರೆದುಕೊಂಡು ಹೋಗಿದ್ದರು. ನಮ್ಮಿಬ್ಬರ ಮಧ್ಯೆ ಒಂದು ಅದ್ಭುತ ಕೆಮಿಸ್ಟ್ರಿ ಇತ್ತು. ಅದು ಏನು ಎಂಬುದನ್ನು ಈಗಲೂ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಕಾರಣ ನಮ್ಮಿಬ್ಬರ ಮಧ್ಯೆ ಕಾಮನ್ ಆದ ಯಾವ ವಿಷಯಗಳೂ ಇರಲಿಲ್ಲ. 'ಯಾರ ಮಧ್ಯೆ ಕಾಮನ್ ಇಂಟರೆಸ್ಟ್ ಇರುವುದಿಲ್ಲವೋ ಅವರೇ ಉತ್ತಮ pair (ಜತೆಗಾರ) ಆಗುತ್ತಾರೆ. ಉದಾಹರಣೆಗೆ, ಗಂಡ-ಹೆಂಡತಿ' ಎಂದು ಹೇಳಿ ಅವರು ಜೋರಾಗಿ ನಕ್ಕಿದ್ದು ನೆನಪಾಗುತ್ತದೆ.

ಡಾ.ರಾಜಾರಾಮಣ್ಣ ಭಾರತ ಕಂಡ ಅತ್ಯಂತ ಪ್ರತಿಭಾವಂತ ವಿಜ್ಞಾನಿಗಳಲ್ಲಿ ಒಬ್ಬರು. ಭಾರತದ ಪರಮಾಣು ಕಾರ್ಯಕ್ರಮದ ಪಿತಾಮಹ ಎಂದು ಕರೆಯಲ್ಪಡುವ ಇವರು, 1974ರ 'ಪೋಖ್ರಾನ್-1' ಅಣು ಪರೀಕ್ಷೆಯ ರೂವಾರಿಯಾಗಿದ್ದರು. ಡಾ.ರಾಮಣ್ಣ ಕೇವಲ ಅಣುವಿಜ್ಞಾನಿ ಎಂದಷ್ಟೇ ಅನೇಕರು ಭಾವಿಸಿದ್ದಾರೆ. ಆದರೆ, ಅವರ ವ್ಯಕ್ತಿತ್ವದ ಮತ್ತೊಂದು ಮಗ್ಗುಲು ಅವರ ವಿಜ್ಞಾನದ ಸಾಧನೆಗಿಂತಲೂ ಕುತೂಹಲಕಾರಿಯಾದದ್ದು. ಡಾ.ರಾಮಣ್ಣ ಕೇವಲ ಲ್ಯಾಬೊರೇಟರಿ ಅಥವಾ ರಿಯಾಕ್ಟರ್‌ಗಳ ನಡುವೆ ಜೀವನ ಕಳೆದವರಲ್ಲ. ಅವರು ಒಬ್ಬ ಪೂರ್ಣ ಪ್ರಮಾಣದ ಕಲಾಪ್ರೇಮಿ, ಪಿಯಾನೋ ವಾದಕ ಮತ್ತು ಸಂಸ್ಕೃತ ಸಾಹಿತ್ಯದ ಅಪ್ಪಟ ಆರಾಧಕರಾಗಿದ್ದರು ಎಂಬುದು ಅನೇಕರಿಗೆ ಗೊತ್ತಿಲ್ಲ.

ಡಾ.ರಾಜಾರಾಮಣ್ಣಗೆ ಸಂಗೀತದ ನಂಟು ಬಾಲ್ಯದಲ್ಲೇ ಆರಂಭವಾಯಿತು. ಮೈಸೂರಿನ ಅರಮನೆಯ ವಾತಾವರಣ ಮತ್ತು ಅಲ್ಲಿನ ಸಂಗೀತ ಸಂಸ್ಕೃತಿ ಅವರ ಮೇಲೆ ಗಾಢವಾದ ಪ್ರಭಾವ ಬೀರಿತ್ತು. ಬಾಲ್ಯದಲ್ಲಿ ಅವರು ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದ ಕಡೆಗೆ ಆಕರ್ಷಿತರಾಗಿ ಪಿಯಾನೋ ಕಲಿಯಲು ಪ್ರಾರಂಭಿಸಿದರು. ಇದು ಕೇವಲ ಒಂದು ಹವ್ಯಾಸವಾಗಿ ಉಳಿಯದೆ, ಅವರ ಬದುಕಿನ ಅವಿಭಾಜ್ಯ ಅಂಗವಾಯಿತು. ಅವರು ಪಿಯಾನೋ ನುಡಿಸುವುದರಲ್ಲಿ ಎಷ್ಟು ಪ್ರವೀಣರಾಗಿದ್ದರೆಂದರೆ, ಪ್ರಮುಖ ವೇದಿಕೆಗಳಲ್ಲಿ ಅವರು ಸಂಗೀತ ಕಚೇರಿಗಳನ್ನು ನೀಡುತ್ತಿದ್ದರು. ಬಿಥೋವನ್, ಮೊಜಾಟರ್, ಬಾಕ್, ಫ್ರೆಡೆರಿಕ್ ಚಾಪಿನ್, ಫ್ರಾಂಜ್ ಲಿಸ್ಟ್, ಪಯೋಟರ್ ಇಲಿಚ್ ಚೈಕೋವ್ಸ್ಕಿ ಅವರಂಥ ಪಾಶ್ಚಾತ್ಯ ಸಂಗೀತ ದಿಗ್ಗಜರ ರಚನೆಗಳನ್ನು ಅವರು ಲೀಲಾಜಾಲವಾಗಿ ನುಡಿಸುತ್ತಿದ್ದರು.

ವಿಶೇಷವೆಂದರೆ, ಅವರು ಪಾಶ್ಚಾತ್ಯ ಸಂಗೀತಕ್ಕೆ ಮಾತ್ರ ಸೀಮಿತವಾಗಲಿಲ್ಲ. ಅವರು ಭಾರತೀಯ ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತವನ್ನೂ ಆಳವಾಗಿ ಪ್ರೀತಿಸುತ್ತಿದ್ದರು. ತಮ್ಮ 'The Structure of Music in Raga and Western Systems' ಎಂಬ ಕೃತಿಯಲ್ಲಿ ಅವರು ಸಂಗೀತದ ವ್ಯಾಕರಣ ಮತ್ತು ವಿಜ್ಞಾನವನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಒಬ್ಬ ವಿಜ್ಞಾನಿಯಾಗಿ ಸಂಗೀತದಲ್ಲಿರುವ ಗಣಿತದ ಸೂತ್ರಗಳನ್ನು ಅವರು ಗುರುತಿಸಿದ್ದರು. ಭಾರತೀಯ ರಾಗಗಳಲ್ಲಿರುವ ತರಂಗಾಂತರಗಳು ಮತ್ತು ಪಾಶ್ಚಾತ್ಯ ಹಾರ್ಮೋನಿ ನಡುವಿನ ಸಂಬಂಧವನ್ನು ಅವರು ವೈಜ್ಞಾನಿಕವಾಗಿ ಚರ್ಚಿಸಿದ್ದಾರೆ. ಭಾರತೀಯ ಸಂಗೀತವು 'ರಾಗ' ಆಧಾರಿತವಾಗಿದ್ದು, ಅದು ಸ್ವರಗಳ ಅನುಕ್ರಮ ಮತ್ತು ಭಾವಕ್ಕೆ ಒತ್ತು ನೀಡುತ್ತದೆ. ಆದರೆ ಪಾಶ್ಚಿಮಾತ್ಯ ಸಂಗೀತವು 'ಹಾರ್ಮೋನಿ' ಅಥವಾ ಏಕಕಾಲದಲ್ಲಿ ನುಡಿಸುವ ಸ್ವರಗಳ ಸಮೂಹಕ್ಕೆ ಒತ್ತು ನೀಡುತ್ತದೆ.

ಡಾ.ರಾಮಣ್ಣ ಅವರು ಇವೆರಡನ್ನೂ ವಿರೋಧಾಭಾಸಗಳಾಗಿ ನೋಡದೇ, ಅವುಗಳ ಹಿಂದಿರುವ ಗಣಿತದ ಸೂತ್ರಗಳನ್ನು ವಿಶ್ಲೇಷಿಸುತ್ತಾರೆ. ವಿಜ್ಞಾನಿಯಾದ ಕಾರಣ ಅವರಿಗೆ ಸಂಗೀತದಲ್ಲಿ ಗಣಿತದ ಸ್ಪಷ್ಟತೆ ಕಾಣುತ್ತಿತ್ತು. ಸ್ವರಗಳ ನಡುವಿನ ಕಂಪನಾಂಕ (Frequency) ಮತ್ತು ಅವುಗಳ ಅನುಪಾತಗಳು ಹೇಗೆ ಮನುಷ್ಯನ ಮಿದುಳಿನ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಅವರು ತಾರ್ಕಿಕವಾಗಿ ವಿವರಿಸುತ್ತಿದ್ದರು. ಈ ಪುಸ್ತಕದಲ್ಲಿ ಸಂಗೀತದ ಸೌಂದರ್ಯಕ್ಕಿಂತ ಹೆಚ್ಚಾಗಿ ಅದರ 'ಆಕೃತಿ' ಅಥವಾ 'ಜ್ಯಾಮಿತಿ'ಯ ಬಗ್ಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಈ ಕೃತಿಯಲ್ಲಿ ಅವರು ಭಾರತೀಯ ರಾಗಗಳನ್ನು ಪಾಶ್ಚಿಮಾತ್ಯ ಸಂಗೀತದ ನೋಟೇಷನ್‌ಗಳ ಮೂಲಕ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಇದು ವಿದೇಶಿ ಸಂಗೀತಗಾರರಿಗೆ ಭಾರತೀಯ ರಾಗಗಳ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಭಾರತೀಯರಿಗೆ ಪಾಶ್ಚಿಮಾತ್ಯ ಸಂಗೀತದ ಆಳವನ್ನು ಅರಿಯಲು ಒಂದು ಸೇತುವೆಯಂತಿದೆ. ಬಿಥೋವನ್ ಅಥವಾ ಮೊಜಾರ್ಟ್ ಕೃತಿಗಳಲ್ಲಿನ ತಾರ್ಕಿಕ ಅಂತ್ಯ ಮತ್ತು ಭಾರತೀಯ ರಾಗಗಳ ವಿಸ್ತರಣೆಯ ನಡುವಿನ ಹೋಲಿಕೆಗಳು ಕುತೂಹಲಕಾರಿಯಾಗಿವೆ.

ಡಾ. ರಾಜಾರಾಮಣ್ಣ ಅವರು ತಮಿಳುನಾಡಿನ ಶಾಸನಗಳಲ್ಲಿರುವ ಸಂಗೀತದ ಉಲ್ಲೇಖಗಳನ್ನು ಕೂಡ ಈ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ. ಪ್ರಾಚೀನ ಭಾರತೀಯ ಸಂಗೀತ ಪದ್ಧತಿಯು ಕಾಲಕ್ರಮೇಣ ಹೇಗೆ ವಿಕಸನಗೊಂಡಿತು ಮತ್ತು ಅದು ಜಾಗತಿಕ ಸಂಗೀತ ಪದ್ಧತಿಗಳೊಂದಿಗೆ ಹೇಗೆ ಸಂವಾದ ನಡೆಸಬಲ್ಲದು ಎಂಬುದನ್ನು ಅವರು ಸಾಕ್ಷ್ಯಾಧಾರಿತವಾಗಿ ಮಂಡಿಸಿದ್ದಾರೆ. 'ಸಂಗೀತ ಎನ್ನುವುದು ಕೇವಲ ಮನರಂಜನೆಯಲ್ಲ, ಅದು ವಿಶ್ವದ ಅತ್ಯುನ್ನತ ಕ್ರಮಬದ್ಧವಾದ ಭಾಷೆ' ಎಂಬ ಸಂದೇಶವನ್ನು ಈ ಕೃತಿ ನೀಡುತ್ತದೆ. ಅವರಿಗೆ ಬಿಥೋವನ್ ಇಷ್ಟವಾಗಿದ್ದಕ್ಕೆ ಕಾರಣ ಆ ಸಂಗೀತದ ಹಿಂದಿರುವ ಲೆಕ್ಕಾಚಾರ, ಶಿಸ್ತು ಮತ್ತು ಗಾಂಭೀರ್ಯ. ಅವರ ಪ್ರಕಾರ, 'ಸಂಗೀತವೆಂದರೆ ಅದು ಧ್ವನಿಯ ಮೂಲಕ ಮಾಡುವ ಗಣಿತ.' ಈ ಮಾತು ಅವರ ವಿಜ್ಞಾನದ ತರ್ಕ ಮತ್ತು ಸಂಗೀತದ ಭಾವನೆಯ ಸಮನ್ವಯಕ್ಕೆ ಕನ್ನಡಿ ಹಿಡಿಯುತ್ತದೆ. ಡಾ.ರಾಜಾರಾಮಣ್ಣ ಅವರು ಪಾಶ್ಚಿಮಾತ್ಯ ಶಾಸ್ತ್ರೀಯ ಸಂಗೀತ ಮತ್ತು ಭಾರತೀಯ ಶಾಸ್ತ್ರೀಯ ಸಂಗೀತ (ಕರ್ನಾಟಕ ಮತ್ತು ಹಿಂದೂಸ್ತಾನಿ) ಎರಡನ್ನೂ ಸಮಾನವಾಗಿ ಆರಾಧಿಸಿದವರು. ಈ ಪುಸ್ತಕದಲ್ಲಿ ಅವರು ಈ ಎರಡೂ ಪದ್ಧತಿಗಳ ನಡುವಿನ 'ರಚನಾತ್ಮಕ' ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ವೈಜ್ಞಾನಿಕವಾಗಿ ಚರ್ಚಿಸಿದ್ದಾರೆ. ಒಬ್ಬ ವಿಜ್ಞಾನಿಯ ದೃಷ್ಟಿಕೋನದಲ್ಲಿ ಸಂಗೀತದ ಸ್ವರೂಪ ಹೇಗಿರುತ್ತದೆ ಎಂಬುದು ಇಲ್ಲಿನ ವಿಶೇಷ.

'ಜಗತ್ತಿನಲ್ಲಿ ಎಷ್ಟೇ ಗೊಂದಲಗಳಿದ್ದರೂ, ಸಂಗೀತವು ಮನಸ್ಸಿಗೆ ಒಂದು ಬಗೆಯ ಸ್ಥಿರತೆಯನ್ನು ನೀಡುತ್ತದೆ. ಕ್ವಾಂಟಮ್ ಭೌತವಿಜ್ಞಾನದ ಅನಿಶ್ಚಿತತೆಯನ್ನು ಅರ್ಥೈಸಿಕೊಳ್ಳಲು ನನಗೆ ಸಂಗೀತದ ಸ್ವರಗಳೇ ಆಧಾರವಾಗಿದ್ದವು' ಎಂದು ಹೇಳುತ್ತಿದ್ದ ಡಾ.ರಾಮಣ್ಣ, 'ವಿಜ್ಞಾನವು ನಮಗೆ ಶಿಸ್ತನ್ನು ಕಲಿಸಿದರೆ, ಸಂಗೀತವು ನಮಗೆ ಸೃಜನಶೀಲತೆಯನ್ನು ನೀಡುತ್ತದೆ. ಒಬ್ಬ ಉತ್ತಮ ವಿಜ್ಞಾನಿಯಾಗಲು ಕೇವಲ ಪ್ರಯೋಗಾಲಯದ ಜ್ಞಾನ ಸಾಕಾಗುವುದಿಲ್ಲ, ಅಲ್ಲಿ ಕಲೆಯ ಸೂಕ್ಷ್ಮ ಸಂವೇದನೆಯೂ ಇರಬೇಕು' ಎಂದು ಬಲವಾಗಿ ನಂಬಿದ್ದರು.

ಡಾ.ರಾಮಣ್ಣ ವ್ಯಕ್ತಿತ್ವದ ಇನ್ನೊಂದು ಮಗ್ಗುಲು ಅವರ ಸಂಸ್ಕೃತ ಪಾಂಡಿತ್ಯ ಮತ್ತು ಭಾರತೀಯ ದರ್ಶನಗಳ ಮೇಲಿದ್ದ ಅಪಾರ ಗೌರವ. ವಿಜ್ಞಾನದ ತರ್ಕ ಮತ್ತು ಸಂಸ್ಕೃತದ ಸೌಂದರ್ಯ ಎರಡನ್ನೂ ಸಮತೋಲನದಲ್ಲಿರಿಸಿಕೊಂಡಿದ್ದ ಅವರು, ಭಾರತೀಯ ಪುರಾತನ ಸಾಹಿತ್ಯದಲ್ಲಿ ಅಪಾರ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಅವರ ದೃಷ್ಟಿಯಲ್ಲಿ ಸಂಸ್ಕೃತ ಎನ್ನುವುದು ಕೇವಲ ಧಾರ್ಮಿಕ ವಿಧಿವಿಧಾನಗಳಿಗೆ ಸೀಮಿತವಾದ ಭಾಷೆಯಾಗಿರಲಿಲ್ಲ. ಅದೊಂದು ಪರಿಪೂರ್ಣ ಭಾಷಾ ವಿಜ್ಞಾನ. ಸಂಸ್ಕೃತದ ವ್ಯಾಕರಣದಲ್ಲಿರುವ ಕ್ರಮಬದ್ಧತೆ (Precision) ಅವರಿಗೆ ಆಧುನಿಕ ಕಂಪ್ಯೂಟರ್ ಪ್ರೋಗ್ರಾಮಿಂಗ್ ಭಾಷೆಗಳಿಗಿಂತಲೂ ಹೆಚ್ಚು ನಿಖರವೆಂದು ಅನಿಸುತ್ತಿತ್ತು. 'ವಿಜ್ಞಾನವು ಹೊರಗಿನ ಜಗತ್ತನ್ನು ಶೋಧಿಸಿದರೆ, ಸಂಸ್ಕೃತ ಸಾಹಿತ್ಯವು ಮನುಷ್ಯನ ಒಳಗಿನ ಜಗತ್ತನ್ನು ಶೋಧಿಸುತ್ತದೆ' ಎಂದು ಅವರು ನಂಬಿದ್ದರು. ಉಪನಿಷತ್ತುಗಳು, ವೇದಗಳು ಮತ್ತು ಭಗವದ್ಗೀತೆಯ ಬಗ್ಗೆ ರಾಜಾರಾಮಣ್ಣ ಅವರಿಗೆ ಗಾಢವಾದ ಒಲವಿತ್ತು.

ವಿಜ್ಞಾನದಲ್ಲಿ ಉನ್ನತ ಪದವಿ ಪಡೆದರೂ, ಅವರು ತಮ್ಮ ಬಿಡುವಿನ ವೇಳೆಯಲ್ಲಿ ಸಂಸ್ಕೃತದ ಮೂಲ ಪಠ್ಯಗಳನ್ನು ಅಭ್ಯಸಿಸುತ್ತಿದ್ದರು. ಅವರು ಅಣು ವಿಜ್ಞಾನದಂಥ ಜಟಿಲ ವಿಷಯಗಳನ್ನು ಚರ್ಚಿಸುವಾಗಲೂ ಉಪನಿಷತ್ತಿನ ಶ್ಲೋಕಗಳನ್ನು ಉಲ್ಲೇಖಿಸುತ್ತಿದ್ದರು. ಸೃಷ್ಟಿಯ ಮೂಲ, ಕಾಲದ ಪರಿಕಲ್ಪನೆ ಮತ್ತು ವಿಶ್ವದ ಅಸ್ತಿತ್ವದ ಬಗ್ಗೆ ಆಧುನಿಕ ಭೌತವಿಜ್ಞಾನ ಹೇಳುವ ಸತ್ಯಗಳು ಸಾವಿರಾರು ವರ್ಷಗಳ ಹಿಂದೆಯೇ ಸಂಸ್ಕೃತ ಸಾಹಿತ್ಯದಲ್ಲಿ ಪ್ರತಿಪಾದಿಸಲ್ಪಟ್ಟಿವೆ ಎಂಬುದು ಅವರ ದೃಢವಾದ ಅಭಿಪ್ರಾಯವಾಗಿತ್ತು. ಪಿಯಾನೋ ಮತ್ತು ಪಾಶ್ಚಿಮಾತ್ಯ ಸಂಗೀತದ ಬಗ್ಗೆ ಎಷ್ಟು ಆಸಕ್ತಿ ಇತ್ತೋ, ಅಷ್ಟೇ ಆಸಕ್ತಿ ಸಂಸ್ಕೃತದ ಸ್ತೋತ್ರಗಳು ಮತ್ತು ಛಂದಸ್ಸಿನ ಮೇಲಿತ್ತು. ಸಂಸ್ಕೃತದ ಶ್ಲೋಕಗಳನ್ನು ಪಠಿಸುವಾಗ ಉಂಟಾಗುವ ಧ್ವನಿ ತರಂಗಗಳು ಮತ್ತು ಅವುಗಳ ಲಯ (Rhythm) ಸಂಗೀತದಷ್ಟೇ ಪರಿಣಾಮಕಾರಿ ಎಂದು ಅವರು ಭಾವಿಸಿದ್ದರು. ಅವರು ಸಂಸ್ಕೃತವನ್ನು 'ಲಯಬದ್ಧ ಜ್ಞಾನ' ಎಂದು ಕರೆಯುತ್ತಿದ್ದರು.

ಡಾ.ರಾಜಾರಾಮಣ್ಣನವರು ವಿದೇಶಗಳಿಗೆ ಹೋದಾಗ ಅಲ್ಲಿನ ವಿಜ್ಞಾನಿಗಳಿಗೆ ಭಾರತದ ಬೌದ್ಧಿಕ ಶ್ರೀಮಂತಿಕೆಯನ್ನು ಪರಿಚಯಿಸಲು ಸಂಸ್ಕೃತ ಸಾಹಿತ್ಯವನ್ನು ಬಳಸುತ್ತಿದ್ದರು. 'ನಮ್ಮಲ್ಲಿ ವಿಜ್ಞಾನ ಇರಲಿಲ್ಲ ಎಂದು ಹೇಳುವುದು ತಪ್ಪು, ನಮ್ಮ ವಿಜ್ಞಾನವು ಸಂಸ್ಕೃತದ ಶ್ಲೋಕಗಳಲ್ಲಿ ಗುಪ್ತವಾಗಿದೆ' ಎಂಬುದು ಅವರ ವಾದವಾಗಿತ್ತು. ಅವರು ಸಂಸ್ಕೃತವನ್ನು ಒಂದು ಸಂಕುಚಿತ ಚೌಕಟ್ಟಿನಿಂದ ಹೊರತಂದು, ಅದನ್ನು ಜಾಗತಿಕ ಜ್ಞಾನದ ಭಾಷೆಯಾಗಿ ನೋಡಲು ಬಯಸಿದ್ದರು. ಸಂಸ್ಕೃತದ ಕಾವ್ಯಗಳಲ್ಲಿರುವ ಕಲ್ಪನಾಶಕ್ತಿ ಮತ್ತು ನಾಟಕಗಳಲ್ಲಿರುವ ಮಾನವೀಯ ಮೌಲ್ಯಗಳು ಅವರನ್ನು ಸದಾ ಆಕರ್ಷಿಸುತ್ತಿದ್ದವು. ಕಾಳಿದಾಸನ ವರ್ಣನೆಗಳಾಗಲಿ ಅಥವಾ ಶಂಕರಾಚಾರ್ಯರ ತರ್ಕಬದ್ಧ ಅದ್ವೈತ ಸಿದ್ಧಾಂತವಾಗಲಿ, ಡಾ.ರಾಜಾರಾಮಣ್ಣಗೆ ಅವುಗಳಲ್ಲಿ ಅತ್ಯುನ್ನತ ಮಟ್ಟದ ಬೌದ್ಧಿಕ ತೃಪ್ತಿ ಸಿಗುತ್ತಿತ್ತು. ವಿಜ್ಞಾನದ ಒಣ ತರ್ಕದ ನಡುವೆ ಸಂಸ್ಕೃತವು ಅವರಿಗೆ ಮಾನಸಿಕ ನೆಮ್ಮದಿ ಮತ್ತು ಸಾಂಸ್ಕೃತಿಕ ಬೇರುಗಳನ್ನು ಒದಗಿಸಿತು. ಇದಕ್ಕೆ ಅವರು ಬರೆದ, ಭಾರತೀಯ ವಿದ್ಯಾಭವನ ಪ್ರಕಟಿಸಿದ, 'Science And Sanskrit' ಪುಸ್ತಕವೇ ನಿದರ್ಶನ. ವಿಜ್ಞಾನ ಮತ್ತು ಸಂಸ್ಕೃತದ ಮೇಲೆ ಅವರಿಗೆ ಅದೆಂಥ ತಿಳಿವಳಿಕೆ ಇತ್ತು ಎಂಬುದಕ್ಕೆ ಇದೊಂದೇ ಸಾಕು. ಶಂಕರಾಚಾರ್ಯರ ಅದ್ವೈತ ಸಿದ್ಧಾಂತದಿಂದ ಪ್ರೇರಿತರಾಗಿದ್ದರು. ಅಣು ವಿಜ್ಞಾನದಂತಹ ಸಂಕೀರ್ಣ ವಿಷಯಗಳಲ್ಲಿ ತೊಡಗಿದ್ದಾಗಲೂ, ಅವರು ಮನಸ್ಸಿನ ಶಾಂತಿಗಾಗಿ ಮತ್ತು ಹೊಸ ಆಲೋಚನೆಗಳಿಗಾಗಿ ಸಂಸ್ಕೃತ ಶ್ಲೋಕಗಳ ಮೊರೆ ಹೋಗುತ್ತಿದ್ದರು. ವೇದಾಂತ ಮತ್ತು ಆಧುನಿಕ ಭೌತವಿಜ್ಞಾನದ ನಡುವೆ ಒಂದು ಅವಿನಾಭಾವ ಸಂಬಂಧವಿದೆ ಎಂದು ಅವರು ಆಗಾಗ್ಗೆ ಪ್ರತಿಪಾದಿಸುತ್ತಿದ್ದರು. ವಿಶ್ವದ ಉಗಮ ಮತ್ತು ಅಣುಗಳ ಚಲನೆಯನ್ನು ಅರ್ಥಮಾಡಿಕೊಳ್ಳಲು ಪುರಾತನ ಸಂಸ್ಕೃತ ಗ್ರಂಥಗಳು ಒಂದು ಹೊಸ ದೃಷ್ಟಿಕೋನ ನೀಡುತ್ತವೆ ಎಂಬುದು ಅವರ ಅಭಿಪ್ರಾಯವಾಗಿತ್ತು.

1974ರ ಪೋಖ್ರಾನ್ ಅಣು ಪರೀಕ್ಷೆ ರಹಸ್ಯವಾಗಿ, ಯಶಸ್ವಿಯಾಗಿ ಪೂರೈಸಿ, ಬುದ್ಧ ಪೂರ್ಣಿಮೆಯ ದಿನದಂದೇ ಈ ಪರೀಕ್ಷೆ ನಡೆದಿದ್ದರಿಂದ ಮತ್ತು ಭಾರತದ ಶಾಂತಿ ಮಂತ್ರದ ಸಂಕೇತವಾಗಿ, ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರಿಗೆ ಫೋನ್ ಮಾಡಿ ಕೇವಲ ಒಂದು ವಾಕ್ಯದಲ್ಲಿ 'The Buddha has finally smiled' ಎಂದು ಹೇಳಿದ್ದ ಡಾ. ರಾಜಾರಾಮಣ್ಣ ವಿಜ್ಞಾನ ಲೋಕದ ಧ್ರುವತಾರೆಯಾಗಿದ್ದರೂ, ಅವರ ವ್ಯಕ್ತಿತ್ವಕ್ಕೆ ಮೆರುಗು ನೀಡಿದ್ದು ಅವರ ಸಾಂಸ್ಕೃತಿಕ ಆಸಕ್ತಿಗಳು ಎಂದು ನನಗೆ ಬಲವಾಗಿ ಅನಿಸಿದೆ. ವಿಜ್ಞಾನದ ತರ್ಕ, ಸಂಗೀತದ ಮಾಧುರ್ಯ ಮತ್ತು ಸಂಸ್ಕೃತದ ಗಾಂಭೀರ್ಯ ಈ ಮೂರರ ಮಿಶ್ರಣವೇ ಅವರಾಗಿದ್ದರು. ಇಂದಿನ ಯುವ ಪೀಳಿಗೆಗೆ ಮತ್ತು ಮುಖ್ಯವಾಗಿ ವಿಜ್ಞಾನ ಆಸಕ್ತರಿಗೆ ಡಾ.ರಾಜಾರಾಮಣ್ಣ ಅವರು ಒಂದು ಆದರ್ಶ ಮಾದರಿ. ಅವರು ನಮನ್ನಗಲಿ ಇಪ್ಪತ್ತೆರಡು ವರ್ಷಗಳಾದರೂ ನನ್ನ ಪಾಲಿಗೆ ಅವರು ನಿತ್ಯ ನೆನಪಿನ ಸ್ಥಾವರ !

ಮಕ್ಕಳು ದಿನಪತ್ರಿಕೆ ಓದುವುದನ್ನು ರೂಢಿಸಿಕೊಳ್ಳುವುದು ಹೇಗೆ..?

ವರ್ತಮಾನ
ಪ್ರಸಾದ್ ಜಿ.ಎಂ.
vveditoped@gmail.com

ಉತ್ತರ ಪ್ರದೇಶ ಸರಕಾರವು ಶಾಲೆಗಳಲ್ಲಿ ಪ್ರತಿನಿತ್ಯ ವಿದ್ಯಾರ್ಥಿಗಳು ದಿನಪತ್ರಿಕೆಯನ್ನು ಓದುವುದನ್ನು ಇತ್ತೀಚೆಗೆ ಕಡ್ಡಾಯಗೊಳಿಸಿದೆ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಉತ್ತರ ಪ್ರದೇಶ ಸರಕಾರದ ಈ ನಡೆ ಸ್ವಾಗತಾರ್ಹವಾದುದು. ಹಿಂದುಳಿದ ರಾಜ್ಯಗಳಲ್ಲಿ ಉತ್ತರ ಪ್ರದೇಶವೂ ಒಂದಾಗಿದ್ದು, ವಿದ್ಯಾರ್ಥಿಗಳು ದಿನಪತ್ರಿಕೆ ಓದುವುದನ್ನು ಶಾಲೆಗಳಲ್ಲಿ ಕಡ್ಡಾಯಗೊಳಿಸಿರುವುದು ಶೈಕ್ಷಣಿಕವಾಗಿ ಅನುಕೂಲಗಳು ಆಗಬಹುದು. ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆ ಸಮಯದಲ್ಲಿ ಕೆಲವೊಂದು ಶಾಲೆಗಳಲ್ಲಿ ದಿನಪತ್ರಿಕೆಗಳನ್ನು ಸಾರ್ವಜನಿಕವಾಗಿ ಓದುವ ಪರಿಪಾಠವಿದೆ.

ತೀರಾ ಚಿಕ್ಕಮಕ್ಕಳನ್ನು ಹೊರತುಪಡಿಸಿ ಕನಿಷ್ಠ ಐದನೇ ತರಗತಿ ಮೇಲ್ಪಟ್ಟ ಮಕ್ಕಳು ದಿನಪತ್ರಿಕೆಯನ್ನು ಓದುವುದು, ವಾಚನ ಮಾಡುವುದನ್ನು ಕೇಳಿಸಿಕೊಂಡರೆ, ಓದುವ ಕಡೆ ಕುತೂಹಲ ಹೆಚ್ಚಾಗಬಹುದು. ದಿನಪತ್ರಿಕೆಗಳನ್ನು ವಾಚನ ಮಾಡುವುದನ್ನು ಕೇಳಿಸಿಕೊಳ್ಳುವ ಮಕ್ಕಳಲ್ಲಿ ಬೇರೆಯವರು ಏನಾದರೂ ಹೇಳುವಾಗ ಅದನ್ನು ಕೇಳಿಸಿಕೊಳ್ಳುವ ತಾಳ್ಮೆ ಬರುತ್ತದೆ. ಇದರಿಂದ ಮಕ್ಕಳಿಗೆ ವಿಷಯದ ಗ್ರಹಿಕೆ ಉತ್ತಮಗೊಂಡು ಅದರಿಂದ ಉಪಯೋಗವಾಗುತ್ತದೆ.

ಮಕ್ಕಳು ದಿನಪತ್ರಿಕೆಗಳನ್ನು ಓದುವುದರಿಂದ ತಮ್ಮ ಸುತ್ತಮುತ್ತ ಏನೆಲ್ಲಾ ಬೆಳವಣಿಗೆಗಳಾಗುತ್ತಿವೆ ಎಂಬ ಅರಿವು ಉಂಟಾಗುತ್ತದೆ. ಸ್ಥಳೀಯ, ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೈವಿಧ್ಯಮಯ ವಿಚಾರಗಳು ಮಕ್ಕಳಿಗೆ ತಿಳಿಯುತ್ತದೆ. ಉದಾ: ಮಕ್ಕಳು ದಿನಪತ್ರಿಕೆಯನ್ನು ಓದುತ್ತಿದ್ದಾರೆ ಎಂದು ಭಾವಿಸೋಣ, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯು ಗುಣಮಟ್ಟ ಕುಸಿತ ಎಂಬ ಸುದ್ದಿಯನ್ನು ಓದುತ್ತಾರೆ, ಆ ಸಂದರ್ಭದಲ್ಲಿ ಅವರ ತಲೆಯಲ್ಲಿ ಎರಡು ವಿಚಾರಗಳು ಬರುತ್ತವೆ. ಒಂದು, ನಮ್ಮ ದೇಶದ ರಾಜಧಾನಿ ದೆಹಲಿ ಅಂತ, ಇನ್ನೊಂದು ಅಲ್ಲಿನ ವಾಯುಗುಣಮಟ್ಟದ ಬಗ್ಗೆ ಗೊತ್ತಾಗುತ್ತದೆ. ಈ ರೀತಿ ಮಕ್ಕಳು ದಿನಪತ್ರಿಕೆಗಳನ್ನು ಓದುವುದರಿಂದ ಸಾಮಾನ್ಯ ಜ್ಞಾನವು ಅವರಿಗೆ ಅರಿವಿಲ್ಲದಂತೆ ಹೆಚ್ಚುತ್ತದೆ. ಇದು ಶಾಲೆಯಲ್ಲಿ ನಡೆಯುವ ರಸಪ್ರಶ್ನೆ, ಪ್ರಬಂಧ ಸ್ಪರ್ಧೆ, ಪರೀಕ್ಷೆಗಳು ಮುಂತಾದ ಕಡೆಗಳಲ್ಲಿ ಸಹಾಯಕ್ಕೆ ಬರುತ್ತವೆ.

ಮಕ್ಕಳು ದಿನಪತ್ರಿಕೆಗಳನ್ನು ಓದುವುದರಿಂದ ಅವರ ಭಾಷಾ ಕೌಶಲ್ಯ, ಪದಸಂಪತ್ತು ವೃದ್ಧಿಸುತ್ತದೆ. ಸಾಮಾನ್ಯವಾಗಿ ಮಕ್ಕಳು ಪ್ರತಿದಿನ ಸಾಮಾನ್ಯವಾಗಿ ಪಠ್ಯಪುಸ್ತಕಗಳನ್ನು ಮಾತ್ರ ಓದುತ್ತಿರುತ್ತಾರೆ. ಹಿಂದೆ ಚಿಕ್ಕಮಕ್ಕಳಿಗೆ ಬಾಲಮಂಗಳ, ಚಂದಾಮಾಮ ಮುಂತಾದ ಪುಸ್ತಕಗಳನ್ನು ಪೋಷಕರು ಕೊಡಿಸುತ್ತಿದ್ದರು, ಇವುಗಳನ್ನು ಓದುತ್ತಿದ್ದ ಮಕ್ಕಳಿಗೆ ಅದರಿಂದ ಪ್ರಯೋಜನಗಳು ಆಗುತ್ತಿದ್ದವು. ಪ್ರಸ್ತುತ ಮಕ್ಕಳು ಪಠ್ಯಪುಸ್ತಕಗಳನ್ನು ಬಿಟ್ಟು ಬೇರೆನನ್ನೂ ಓದುತ್ತಿಲ್ಲ. ಒಮ್ಮೆ ಅವರು ದಿನಪತ್ರಿಕೆಗಳನ್ನು ಓದಲು ಶುರು ಮಾಡಿದರೆ ಅವರಿಗೆ ಹೊಸದೊಂದು ಜ್ಞಾನ ಪ್ರಪಂಚ ತೆರೆದುಕೊಳ್ಳುತ್ತದೆ. ಪ್ರತಿದಿನ ಬರೀ ಪಠ್ಯಪುಸ್ತಕಗಳು ಮತ್ತು ಇತರ ವಿಚಾರಗಳನ್ನು ತಿಳಿದುಕೊಳ್ಳುವ ಮಕ್ಕಳು ಹೊಸ ವಿಷಯ, ವಿಚಾರಗಳನ್ನು

ತಿಳಿದುಕೊಳ್ಳಲು ಆರಂಭಿಸುತ್ತಾರೆ.

ಕನ್ನಡ, ಇಂಗ್ಲಿಷ್ ಮತ್ತು ಇತರ ಯಾವುದೇ ಭಾಷೆಗಳ ದಿನಪತ್ರಿಕೆಗಳನ್ನು ಓದುತ್ತಾ, ಓದುತ್ತಾ ಹೋದಂತೆ ಇದುವರೆಗೂ ಓದಿರದ ಎಷ್ಟೋ ಪದಗಳು ಗೊತ್ತಾಗುತ್ತವೆ. ಒಂದು ಭಾಷೆಯ ಉಳಿವಿಗೆ ಇದೂ ಕೂಡ ಕೊಡುಗೆ ನೀಡುತ್ತದೆ. ವಿದ್ಯಾರ್ಥಿಯು ಆರನೇ ತರಗತಿಯಿಂದ ತಾನು ಪದವಿ ವ್ಯಾಸಂಗ ಮುಗಿಸುವ ಹಂತಕ್ಕೆ ಬರುವವರೆಗೆ ಪ್ರತಿದಿನವೂ ಒಂದೊಂದು ಪದವನ್ನು ತಿಳಿದುಕೊಂಡರೂ ಆ ವಿದ್ಯಾರ್ಥಿಯ ಪದಸಂಪತ್ತು ಒಂದು ನಿಘಂಟಿಗೆ ಸಮವಾಗುತ್ತದೆ. ಎಲ್ಲಾ ವಿದ್ಯಾರ್ಥಿಗಳಿಂದ ಇದು ಸಾಧ್ಯವೇ ಎಂಬ ಪ್ರಶ್ನೆ ಮೂಡಬಹುದು. ಅದಕ್ಕೆ ಪರಿಹಾರ - ವಿದ್ಯಾರ್ಥಿಗಳು ದಿನಪತ್ರಿಕೆಯನ್ನು ಓದುವಂತೆ ಉತ್ತೇಜನ ನೀಡಬೇಕು, ಓದುವ ಪರಿಸರ ಸೃಷ್ಟಿಸಬೇಕು. ಮಕ್ಕಳು ಚಿಕ್ಕವಯಸ್ಸಿನಲ್ಲೇ ದಿನಪತ್ರಿಕೆಗಳನ್ನು ಓದುವುದನ್ನು ರೂಢಿಸಿಕೊಂಡರೆ ಅದರಿಂದ ಆಗುವ ಲಾಭಗಳು ಸಾಕಷ್ಟು.

ದಿನಪತ್ರಿಕೆಗಳ ಓದು ಉತ್ತೇಜಿಸುವುದು ಹೇಗೆ..?

ಸರಕಾರಗಳೇನೋ ಶಾಲೆಗಳಲ್ಲಿ ಪ್ರತಿನಿತ್ಯ ದಿನಪತ್ರಿಕೆಗಳನ್ನು ಓದುವುದನ್ನು ಕಡ್ಡಾಯಗೊಳಿಸಿದೆ. ಆದರೆ, ಅದನ್ನು ಹೊರತುಪಡಿಸಿ ಬೇರೆ ಮಾರ್ಗಗಳ ಬಗ್ಗೆ ಚಿಂತಿಸುವ ಅಗತ್ಯವಿದೆ. ಮನೆಯೇ ಮೊದಲ ಪಾಠಶಾಲೆ ಎಂಬ ನಾಣ್ಣುಡಿಯ ಹಾಗೆ ಯಾವುದೇ ಮಗು ಶಾಲೆಗೆ ಸೇರುವ ಮೊದಲು ಆ ಮಗುವಿಗೆ ತನ್ನ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು. ಈ ನಿಟ್ಟಿನಲ್ಲಿ ಮೊದಲು ಪೋಷಕರಾದವರು ಮನೆಯಲ್ಲಿ ದಿನಪತ್ರಿಕೆಗಳನ್ನು ಓದಲು ಅಭ್ಯಾಸ ಮಾಡಿಕೊಂಡರೆ ಚಿಕ್ಕಮಕ್ಕಳು ಅದನ್ನು ನೋಡಿ ಮುಂದೆ ಬೆಳೆಯುತ್ತಾ ಹೋದಂತೆ ದಿನಪತ್ರಿಕೆಗಳನ್ನು ಓದುವ ಪ್ರಯತ್ನ ಮಾಡಬಹುದು. ಇದು ಎಲ್ಲಾ ಪೋಷಕರಿಗೂ ಸಾಧ್ಯವೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಆದರೆ ಅಕ್ಷರಸ್ಥ ಪೋಷಕರಲ್ಲಿ ಕೆಲವರಾದರೂ ಈ ಕೆಲಸವನ್ನು ಮಾಡಬಹುದು, ಅದು ಸಾಧ್ಯವಿದೆ, ಮಾಡುವ ಇಚ್ಛಾಶಕ್ತಿ, ಮಾಡುವ ಸಂಕಲ್ಪ ಇರಬೇಕಷ್ಟೆ.

ಮಾಹಿತಿ ತಂತ್ರಜ್ಞಾನದ ಆಗಮನದಿಂದ ಮನುಷ್ಯನ ಜೀವನ ಸಾಕಷ್ಟು ಬದಲಾವಣೆಯನ್ನು ಕಂಡಿದೆ. ಕೊರೊನಾ ನಂತರವಂತೂ ವಿದ್ಯಾರ್ಥಿಗಳು, ಮಕ್ಕಳು ಶೈಕ್ಷಣಿಕ ಕಾರಣಗಳ ಹೊರತಾಗಿ ಮೊಬೈಲ್ ಬಳಸುವುದನ್ನು ಹೆಚ್ಚೆಚ್ಚು ರೂಢಿ ಮಾಡಿಕೊಂಡಿದ್ದಾರೆ. ಇದರಿಂದ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರುತ್ತಿದೆ. ಇದರಿಂದ ಹೊರಬರಲು ದಿನಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಬಹುದು.

ಗ್ರಂಥಾಲಯಕ್ಕೆ ಹೋಗುವುದು

ಮಕ್ಕಳು ತಮಗೆ ಹತ್ತಿರವಿರುವ ಯಾವುದಾದರೂ ಗ್ರಂಥಾಲಯಕ್ಕೆ ಹೋದರೆ ಅಲ್ಲಿ ಸಿಗುವುದು ಗಾಢ ಮೌನ, ತೆರೆಯದೇ ಇರುವ ದಿನಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ಪುಸ್ತಕಗಳು. ಇದರಿಂದಾಗುತ್ತಿರುವ ನಷ್ಟಕ್ಕೆ ಬೆಲೆಕಟ್ಟಲು ಆಗುವುದಿಲ್ಲ. ಈ ನಿಟ್ಟಿನಲ್ಲಿ ಪೋಷಕರು ಅಥವಾ ಶಿಕ್ಷಕರು ಮಕ್ಕಳು ಗ್ರಂಥಾಲಯಕ್ಕೆ ಹೋಗುವುದನ್ನು ಉತ್ತೇಜಿಸಬೇಕು. ಗ್ರಂಥಾಲಯದಲ್ಲಿ ವಿವಿಧ ಭಾಷೆಗಳ ಸಾಕಷ್ಟು ಪುಸ್ತಕಗಳು, ದಿನಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು ಸಿಗುತ್ತವೆ. ಮಕ್ಕಳು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಇಂದು ಹದಿಹರೆಯದವರು ಕೂಡ ಸಾಮಾಜಿಕ ಜಾಲತಾಣಗಳ ದಾಸರಾಗಿರುವುದು ಆತಂಕದ ಸಂಗತಿ. ನಿತ್ಯಜೀವನಕ್ಕೆ ಬೇಡದ ಅನವಶ್ಯಕವಾದುದನ್ನು ಇಂದಿನ ಯುವ ಪೀಳಿಗೆ ನೋಡುತ್ತಿದೆ. ಇದರಿಂದ ಹೊರಬರಲು ದಿನಪತ್ರಿಕೆ, ಪುಸ್ತಕಗಳ ಓದು ಪರಿಹಾರವಾಗಬಲ್ಲದು. ಈ ಎಲ್ಲಾ ಬೆಳವಣಿಗೆಗಳು ಒಂದೇ ದಿನಕ್ಕೆ ಆಗದಿರಬಹುದು, ಆದರೆ ಎಲ್ಲರೂ ಪ್ರಯತ್ನಿಸಿದರೆ ಹೊಸ ವ್ಯವಸ್ಥೆಯನ್ನು ಕಟ್ಟಲು ಸಾಧ್ಯ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಸಾಕಷ್ಟು ವರ್ಷಗಳ ಹೋರಾಟ, ಪ್ರಯತ್ನದ ಫಲವಾಗಿ. ಆದ್ದರಿಂದ ಮಕ್ಕಳು/ವಿದ್ಯಾರ್ಥಿಗಳು ದಿನಪತ್ರಿಕೆ, ಪುಸ್ತಕ, ನಿಯತಕಾಲಿಕೆಗಳನ್ನು ಓದುವುದನ್ನು ಸ್ವಲ್ಪವಾದರೂ ರೂಢಿಸಿಕೊಳ್ಳಬೇಕು. ಒಂದು ಬದಲಾವಣೆ ಒಂದೆರಡು ದಿನಕ್ಕೆ ಆಗದಿರಬಹುದು. ಆದರೆ ಪ್ರಯತ್ನವನ್ನು ನಿಲ್ಲಿಸಬಾರದು. ಒಳ್ಳೆಯ ಕಾರಣಕ್ಕೆ ಆಗುವ ಬದಲಾವಣೆ ಕಾಲ ಹಿಡಿಯುತ್ತದೆ. ಆದರೆ ವಿದ್ಯಾರ್ಥಿಗಳು ಕೈಚೆಲ್ಲಬಾರದು. ಸ್ವಾಮಿ ವಿವೇಕಾನಂದರು ಮರಳಿ ಯತ್ನವ ಮಾಡು ಗೆಲುವು ನಿನ್ನದೇ ಎಂದು ಹೇಳಿದ ಹಾಗೆ ವಿದ್ಯಾರ್ಥಿಗಳು ಒಳ್ಳೆಯ ಬದಲಾವಣೆಗೆ ನಿರಂತರ ಪ್ರಯತ್ನ ಮಾಡಬೇಕು. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಾಮಾಜಿಕ ಉನ್ನತಿ ಹಾಗೂ ಅಂತಿಮವಾಗಿ ದೇಶಕ್ಕೆ ಒಳ್ಳೆಯದಾಗುತ್ತದೆ.

ಮಕ್ಕಳಲ್ಲಿ ದಿನಪತ್ರಿಕೆ ಓದುವುದನ್ನು ಉತ್ತೇಜನ ನೀಡುವುದರ ಜೊತೆಗೆ ನಿಯಮಿತವಾಗಿ ಪುಸ್ತಕವನ್ನು ಓದುವಂತೆ ಉತ್ತೇಜಿಸಬೇಕು. ಇಂದು ನಮ್ಮ ಶಿಕ್ಷಣ ವ್ಯವಸ್ಥೆ ಕೇವಲ ಪಠ್ಯಕ್ರಮ ಆಧಾರಿತ, ಉತ್ತಮ ಅಂಕಗಳನ್ನು ಗಳಿಸುವುದರ ಮೇಲೆ ಕೇಂದ್ರೀಕೃತವಾಗಿದೆ. ಇದರಿಂದ ದೀರ್ಘಕಾಲಕ್ಕೆ ವಿದ್ಯಾರ್ಥಿಗಳಿಗೆ ಅನುಕೂಲಗಳಿಲ್ಲ. ವಿದ್ಯಾರ್ಥಿಗಳಲ್ಲಿ ಸಚ್ಚಾರಿತ್ರ್ಯ ನಿರ್ಮಾಣ ಮಾಡುವ ನಿಟ್ಟಿನಲ್ಲಿ ದಿನಪತ್ರಿಕೆ, ನಿಯತಕಾಲಿಕೆ, ಪುಸ್ತಕಗಳ ಓದು ನೆರವಾಗುತ್ತದೆ. ಇದರ ಜೊತೆಗೆ ದಿನಪತ್ರಿಕೆಯನ್ನು ಓದುವ ಅಭ್ಯಾಸವನ್ನು ಚೆನ್ನಾಗಿ ರೂಢಿಸಿಕೊಂಡ ವಿದ್ಯಾರ್ಥಿಯನ್ನು ಪ್ರಶಂಸಿಸಬೇಕು. ಇದರಿಂದ ಇತರ ವಿದ್ಯಾರ್ಥಿಗಳು ಪ್ರೇರೇಪಿತರಾಗಿ ತಾವು ಓದುವುದನ್ನು ರೂಢಿಸಿಕೊಳ್ಳುವ ಸಾಧ್ಯತೆ ಹೆಚ್ಚು.

ಸರಕಾರ ಶಾಲೆಗಳಲ್ಲಿ ದಿನಪತ್ರಿಕೆಗಳನ್ನು ಓದುವಂತೆ ನಿಯಮವನ್ನು ರೂಪಿಸಿದರೂ, ಅಂತಿಮವಾಗಿ ಶಾಲೆಗಳಲ್ಲಿ ಶಿಕ್ಷಕರು, ಮನೆಯಲ್ಲಿ ಪೋಷಕರು ಪ್ರೋತ್ಸಾಹವನ್ನು ನೀಡಬೇಕು. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭ್ಯಾಸದ ರೀತಿಯಲ್ಲೇ ಮೊದಮೊದಲು ಕಷ್ಟವಾಗಬಹುದು, ಮುಂದೆ ಎಲ್ಲವೂ ಸರಿಹೋಗುತ್ತದೆ.

ಲೇಖಕರು, ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟನ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಭಟ್ಟರ್ ಸ್ಕಾಚ್

- **ಸಂಧ್ಯಾ ಭಾಗವತ, ಕುಮಟಾ**
ಭಟ್ರೇ, ಅತಿ ಹೆಚ್ಚು ಎಲ್ಲಿ 'ಬ್ರೇಕ್' ಹಾಕ್ತಾರೆ?
– **ಸರಕಾರಿ ಕಚೇರಿಗಳಲ್ಲಿ.. ಯಾಕೆಂದರೆ ಅಲ್ಲಿ ಲಂಚ್ ಬ್ರೇಕ್, ಟೀ ಬ್ರೇಕ್ ಅಂತ ಸದಾ ಬ್ರೇಕ್ ಹಾಕ್ತಾ ಇರ್ತಾರೆ!**

- **ವಿನೋದ ಕಡೂರು, ಕಡೂರು**
ಆಕಾಶದಲ್ಲಿ ಹಾರುವ ಹಕ್ಕಿ ಗಳಿಗೆ 'ಆಕ್ಸಿಡೆಂಟ್' ಆಗೊಲ್ಲ ವಲ್ಲ ?
– **ಕಾರಣ ಅವುಗಳ ಹತ್ತಿರ 'ಲೈಸೆನ್ಸ್' ಇರಲ್ಲ, ಹೀಗಾಗಿ ಪೊಲೀಸರು ಹಿಡಿಯುವ ಭಯವೂ ಇಲ್ಲ!**

- **ರಾಘವ ಶೆಟ್ಟಿ, ಬೈಂದೂರು**
ಭಟ್ರೇ, ಅಡುಗೆ ಮನೆಯಲ್ಲಿ ಯಾವ ಪಾತ್ರೆಗೆ ಅತಿ ಹೆಚ್ಚು 'ಕೋಪ' ಜಾಸ್ತಿ?
– **ಕುಕ್ಕರ್… ಅದಕ್ಕೆ ಸ್ವಲ್ಪ ಬಿಸಿ ತಗುಲಿದರೂ ಸಾಕು, ಎಲ್ಲರ ಮೇಲೂ 'ವಿಸಿಲ್' ಹಾಕಿ ಕಿರುಚುತ್ತೆ!**

- **ಪ್ರಭು ಪಾಟೀಲ, ಧಾರವಾಡ**
ಭಟ್ರೇ, ಸೊಳ್ಳೆಗಳಿಗೆ ಸಕ್ಕರೆ ಕಾಯಿಲೆ ಬರಬಹುದಾ?
– **ಸಕ್ಕರೆ ಕಾಯಿಲೆ ಇರುವವರ ರಕ್ತ ಕುಡಿದರೆ ಬರಬಹುದು!**

- **ದಿನೇಶ ಚಂದ್ರು, ಬಾಣಸವಾಡಿ**
ಭಟ್ರೇ, ಫೋನ್ ಚಾರ್ಜಿಂಗ್‌ಗೂ, ಮನುಷ್ಯನ ನಿದ್ದೆಗೂ, ಏನು ಸಂಬಂಧ?
– **ಎರಡು ಹಂಡ್ರೆಡ್ ಪರ್ಸೆಂಟ್ ಆದರೂ, ಬೆಳಗ್ಗೆ ಎದ್ದ ತಕ್ಷಣ 'ಬ್ಯಾಟರಿ' ಡೌನ್ ಆಗೋಕೆ ಶುರುವಾಗುತ್ತದೆ !**

- **ರಾಜಿ, ಬೆಂಗಳೂರು**
ಭಟ್ರೇ, ಜಗತ್ತಿನಲ್ಲಿ ಯಾವ ವಸ್ತು ಬೆಲೆ ಬಾಳುತ್ತದೆ ಎಂದು ಕೇಳಿದರೆ ಒಬ್ಬ ಆಲಸಿ ಏನು ಹೇಳುತ್ತಾನೆ?
– **ನಿದ್ದೆ… ಯಾಕೆಂದರೆ ಅದಕ್ಕೆ ಬಂಡವಾಳ ಬೇಕಿಲ್ಲ, ಆದರೆ ಅದಕ್ಕಿಂತ ಸುಖ ಬೇರೆಲ್ಲೂ ಸಿಗಲ್ಲ!**

- **ಶಂಕರ ಬೆಳವಾಡಿ, ಹಾಸನ**
ಭಟ್ರೇ, ಕಿಸೆ ಖಾಲಿಯಾಗಿದ್ದರೂ ಮುಖದಲ್ಲಿ ನಗು ಇರುವುದು ಯಾವಾಗ?
– **ಫೋಟೋ ಸ್ಟುಡಿಯೋದಲ್ಲಿ ಫೋಟೋಗೆ ಫೋಸ್ ಕೊಡುವಾಗ!**

- **ಬಿ.ರಾವ್, (ಇಮೇಲ್ ಮೂಲಕ)**
ಭಟ್ರೇ, ಮದುವೆ ಅಂದ್ರೆ ಏನು?
– **ಒಬ್ಬ ವ್ಯಕ್ತಿ ತಾನು ಮಾಡದ ತಪ್ಪಿಗೆ ಜೀವನ ಪೂರ್ತಿ 'ಸಾರಿ' ಕೇಳುವ ಒಂದು ಒಪ್ಪಂದ!**

- **ಹೇಮಂತ ಗೌಡ, ಬೆಂಗಳೂರು**
ಭಟ್ರೇ, ಗಿಡಗಳಿಗೆ ಯಾವಾಗ ನೀರು ಹಾಕಬಾರದು?
– **ಮಳೆ ಬಂದ ನಂತರ!**

ನಿಧಿಗಳೂ ನಮ್ಮ ನಿಮ್ಮೊಳಗಿನ ನಿಧಿಚೋರರೂ…



ಕಾಡುದಾರಿ

ಹರೀಶ್ ಕೇರ
vveditoped@gmail.com

ನಿಧಿ ಸಿಗಬಹುದು, ಸಿಕ್ಕರೆ ಬದುಕು ಬಂಗಾರ ಎಂಬುದು ಮನುಷ್ಯನ ಪುರಾತನ ಆಸೆ. ಗದಗ ಜಿಲ್ಲೆಯ ಲಕ್ಕುಂಡಿಯಲ್ಲಿ ರಿತ್ತಿ ಮನೆತನದವರ ಮನೆಯ ಪಾಯ ಅಗೆಯುವಾಗ ಸಿಕ್ಕಿದ ಬಂಗಾರ, ಇದೀಗ ಇಡೀ ಲಕ್ಕುಂಡಿಯನ್ನು ಅಗೆದು ಗಾಳುಮೇಳು ಮಾಡುವ ಹಂತಕ್ಕೆ ಹೋಗಿದೆ. ಸಿಗಬಹುದು, ಸಿಗದೆಯೂ ಇರಬಹುದು. ನಿಧಿಯನ್ನು ಸರಕಾರಕ್ಕೆ ಒಪ್ಪಿಸಿದವರನ್ನೂ ಒಂದು ಹಂತದಲ್ಲಿ ಕಾಡಿದ ಆಮಿಷ, ಮನುಷ್ಯ ಸಹಜವಾದದ್ದು. ಹಾಗೆ ನೋಡಿದರೆ ಎಲ್ಲ ಪುರಾತನ ದೇಗುಲಗಳು, ಪಾಳು ದೇವಾಲಯಗಳು, ರಾಜಮನೆತನಗಳ ಅರಮನೆಗಳು ನಿಧಿಗಳ ಮೇಲೆ ಕೂತಿರುವ ಸಾಧ್ಯತೆ ಇದ್ದೇ ಇದೆ. ಕಷ್ಟಕಾಲಕ್ಕೆ ಆಗಲೆಂದು, ಮುಂದಿನ ತಲೆಮಾರಿಗೆ ಸಿಗಲೆಂದು, ಅಯೋಗ್ಯರಿಗೆ ಸಿಗದಿರಲೆಂದು, ಯಾರಿಗೂ ದಕ್ಕದಿರಲೆಂದು– ಹೀಗೆ ನಾನಾ ಕಾರಣಗಳಿಗಾಗಿ ಬಂಗಾರ ಅವಿತಿಡುವುದು ಮನುಷ್ಯನ ಹುಟ್ಟುಗುಣ. ಹಂಪಿಯ ಯಾವ ಪಾಳುದೇಗುಲದ ಕಲ್ಲನ್ನೂ ನಿಧಿಚೋರರು ಕಿತ್ತೆಸೆದು ಹುಡುಕಾಡದೆ ಬಿಟ್ಟಿಲ್ಲ.

ನಿಧಿಗಳ ಬಗ್ಗೆ ನಾವೆಲ್ಲ ಸಾಕಷ್ಟು ಕತೆಗಳನ್ನು ಕೇಳಿರುತ್ತೇವೆ. ನಾನಂತೂ ಕೇಳಿದ್ದೆ– ಪುತ್ತೂರಿನ ಬಳಿ ಆಗಮಿಸಿದ ಕೇರಳದ ಮಂತ್ರವಾದಿಯೊಬ್ಬ ನಿಧಿಯ ಆಸೆ ತೋರಿಸಿ ವೃದ್ಧ ದಂಪತಿಯನ್ನು ಕೊಂದು ಗಂಟಿನೊಂದಿಗೆ ಪರಾರಿಯಾದನಂತೆ. ಪಡುಬಿದ್ರಿ ಬಳಿ ಪಾಳುಬಿದ್ದ ದೇವಾಲಯದಲ್ಲಿ ಯಾರೋ ನಿಧಿಯನ್ನು ಅಗೆದು ತೆಗೆದಿದ್ದಾರಂತೆ. ಕುದುರೆಮುಖದ ಪಾಳುಬಿದ್ದ ಪಟ್ಟಣದಲ್ಲಿ, ಕೋಲಾರದ ಗಣಿ ಪ್ರದೇಶಗಳಲ್ಲಿ ನಿಧಿ ಹುಡುಕುತ್ತಾ ಕೆಲವು ಮಂದಿ ಅಲೆಯುತ್ತಿದ್ದಾರಂತೆ. ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಕೊಳ್ಳೇಗಾಲದ ಮಾಂತ್ರಿಕರು ಆಗಾಗ ಕಾಣಿಸಿಕೊಳ್ಳುತ್ತಾರಂತೆ. ನಿಧಿ ಸಿಗುತ್ತದೆ ಎಂಬ ಆಸೆಗೆ ಬೆಂಗಳೂರಿನ ಹರಿಶ್ಚಂದ್ರ ಘಾಟ್‌ನಲ್ಲಿ ಯಾರೋ ಮಂತ್ರವಾದಿ ಮಗುವೊಂದನ್ನು ಬಲಿ ಕೊಟ್ಟನಂತೆ. ಹೀಗೆ ಎಲ್ಲೆಲ್ಲೂ ಬಿಡದ ನಿಧಿಯ ಮಾಯೆ.

ಪಾಳು ಗುಡಿ ಕಂಡಾಗಲೆಲ್ಲ ಮನುಷ್ಯನಿಗೆ ಅನಿಸುವುದು: ಇದರೊಳಗೆ ಎಲ್ಲೋ ಹಿಂದಿನವರು ಚಿನ್ನ ಹೂತಿಟ್ಟಿರಬಹುದೆ? ಗರ್ಭಗುಡಿಯಲ್ಲಿದ್ದ ದೇವತೆ ಭಿನ್ನವಾಗಿ, ಗೋಡೆಗಳೆಲ್ಲ ಕುಸಿದು, ಅಲ್ಲಲ್ಲಿ ನಿಧಿಕಳ್ಳರು ಅಗೆದ ಗುರುತು. ಶತಮಾನಗಳ ಹಿಂದೆ ಸೋಮನಾಥ ದೇವಸ್ಥಾನಕ್ಕೆ ದಾಳಿ ಮಾಡಿದ ಘೋರಿ, ಘಜ್ನಿಗಳಿಗೂ ಇದೇ ಆಸೆಯಿತ್ತು. ಗರ್ಭಗುಡಿಯಲ್ಲಿರುವ ಕಲ್ಲಿನ ಮೂರ್ತಿಯ ಮೇಲೆ ಅಷ್ಟೊಂದು ಚಿನ್ನ ಇರುವಾಗ, ಒಳಗೆಲ್ಲೋ ಇನ್ನಷ್ಟು ಇರದು ಎನ್ನಲಾಗುವುದೆ? ಇರಬಹುದು ಎಂದು ನಾವೂ ನಂಬಬಹುದು. ಅದಕ್ಕೆ ಕಾರಣವೂ ಇದೆಯಲ್ಲ– ತಿರುವಾಂಕೂರಿನ ಅನಂತಪದ್ಮನಾಭ ದೇವಾಲಯ. ಕೆಲ ವರ್ಷ ಹಿಂದೆ ನೆಲಮಾಳಿಗೆ ಕೋಣೆಯ ಕದ ತೆರೆದು ನೋಡಿದ ಅಧಿಕಾರಿಗಳಿಗೆ ಸಿಕ್ಕಿದ್ದು ಕೋಟಿ ಕೋಟಿ ಮೌಲ್ಯದ ಚಿನ್ನ. ಅದರ ಲೆಕ್ಕಾಚಾರವೇ ಇನ್ನೂ ಮುಗಿದಿಲ್ಲ. ಇನ್ನೂ ಕೆಲ ಕೋಣೆಗಳು ತೆರೆಯದೆ ಬಾಕಿಯಿವೆ. ಅದರೊಳಗೇನಿದೆಯೊ? ಅನುಮಾನ, ಸೊತ್ತಿನ ಸ್ವಾಮಿತ್ವದ ತಗಾದೆ, ಕ್ಯಂಗಳು ನಿಧಿಯ ಸುತ್ತಲಿನ ಹಾವಿನಂತೆ.

ಹುಟ್ಟಿದ ಮನುಷ್ಯನನ್ನು ಕಟ್ಟಿಟ್ಟ ಗಂಟಿನ ಆಸೆ ಕಾಡುತ್ತಲೇ ಇರುವುದು ಕೊನೆತನಕ. ಅದಕ್ಕೆಂದೇ ನೂರಾರು ಕಥನಗಳು ಹುಟ್ಟಿಕೊಳ್ಳುತ್ತವೆ. ಮೊದಮೊದಲು ಸ್ಥಳೀಯ ಜನಪದ ಕತೆಗಳಾಗಿ ಬಾಯಿಂದ ಬಾಯಿಗೆ ಹರಿದಾಡುತ್ತವೆ. ಕೊನೆಗೆ ಕತೆಗಾರರ ಕತೆಗಳಲ್ಲಿ, ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ನಂತರ ಸಿನಿಮಾಗಳಾಗುತ್ತವೆ. ಭಾರತೀಯ ನೆಲದ ಕತೆಗಳಲ್ಲಿ ನಿಧಿಯನ್ನು ಕಾಯಲು ಸರ್ಪ ಕಾಯಂ. ಈಜಿಪ್ಟಿನ ಪಿರಮಿಡ್ ಕಥನಗಳಲ್ಲಿ ನಾನಾ ಬಗೆಯ ಹಾವು ಚೇಳುಗಳು. ಅಮೆಜಾನ್ ನದಿ ತೀರದ ನೆಲಗಳಲ್ಲಿ ಸರ್ಪಗಳಂತೆ ಆದಿವಾಸಿಗಳು. ಅಂತೂ ಬಗೆಬಗೆಯ ಅಗ್ನಿದಿವ್ಯ ದಾಟದೆ ನಿಧಿ ದೊರೆಯದು.

ನಮ್ಮ ಪುರಾತನರು ನಿಧಿ ಹುಗಿದಿಟ್ಟಿದ್ದಾರೆ ಎಂಬ

ಅನಿಸಿಕೆ ಸಂಪೂರ್ಣ ಸುಳ್ಳು ಅನ್ನುವಂತಿಲ್ಲ. ಸುಳ್ಳು ಅಂದುಬಿಟ್ಟರೆ ರೋಚಕ ಜಗತ್ತೊಂದರ ಕದದ ಕೀಲಿಕೈಯನ್ನು ನಾವಾಗಿ ಎಸೆದುಬಿಟ್ಟಂತೆ. ನಮ್ಮ ಬಗೆಬಗೆಯ ನಿಧಿಶೋಧದ ಕತೆ ಕಾದಂಬರಿಗಳು ಸಿನಿಮಾಗಳಿಗೆ ವಸ್ತುವಾದ ಸಂಗತಿಗಳು ಎದುರು ನಿಂತು ಕಾಡುತ್ತವೆ. ಉದಾಹರಣೆಗೆ, ದಕ್ಷಿಣ ಅಮೆರಿಕದ ಅರಿರೋನಾದ ಮರುಭೂಮಿಯಲ್ಲಿರುವ ಪರ್ವತಗಳು ಮತ್ತು ಗ್ರಾಂಡ್ ಕ್ಯಾನ್ಯನ್ ಕಣಿವೆ ಪರ್ವತಗಳು. ಸ್ಥಳೀಯ ನಿವಾಸಿಗಳಾದ ಅಪಾಚೆ ಇಂಡಿಯನ್ನರಿಗೆ ಇವು ಪವಿತ್ರ ಪ್ರದೇಶಗಳಾಗಿದ್ದವು. ಈ ಪ್ರದೇಶಗಳಿಗೆ ದಾಳಿಯಿಟ್ಟ ಸ್ಪೇನಿಗರು ಇಲ್ಲೆಲ್ಲೋ ನಿಧಿಯಿದೆ ಎಂದು ಭ್ರಮಿಸಿ ಹುಡುಕತೊಡಗಿದರು. 120 ವರ್ಷಗಳಿಂದ ಹುಡುಕುತ್ತಲೇ ಇದ್ದಾರೆ. ಹುಡುಕಾಟದಲ್ಲಿ ನೂರಾರು ಮಂದಿ ನಿಗೂಢವಾಗಿ ಸತ್ತಿದ್ದಾರೆ. ಕೆಲವರಿಗೆ ಇದು ಭ್ರಮೆಗೆ ತೆತ್ತ ಬೆಲೆಯಾದರೆ, ಇನ್ನು ಕೆಲವರಿಗೆ ನಿಧಿಯಿದೆಯೆನ್ನಲು ಇದೇ ಸಾಕ್ಷಿ.

ಇನ್ನು ಎಲ್ ಡೊರಾಡೋ ಎಂಬ ಚಿನ್ನದ ಪಟ್ಟಣ. ಇದು ದಕ್ಷಿಣ ಅಮೆರಿಕಾದ ಅಮೆಝಾನ್ ನದಿ ತೀರದ ಗೊಂಡಾರಣ್ಯದಲ್ಲೆಲ್ಲೋ ಇರುವ ಪುರಾತನ ಪಟ್ಟಣ, ಇಲ್ಲಿ ಚಿನ್ನ ತುಂಬಿ ತುಳುಕುತ್ತಿತ್ತಂತೆ. ಇಲ್ಲಿನ ರಾಜ ಚಿನ್ನದ ಹುಡಿಯಲ್ಲೇ ಸ್ನಾನ ಮಾಡುತ್ತಿದ್ದನಂತೆ. ಈ ದಂತಕತೆಯನ್ನು ನಂಬಿ ಕೊಲಂಬಿಯಾ, ಬ್ರೆಜಿಲ್, ವೆನೆಜುವೆಲಾ ದೇಶಗಳನ್ನೆಲ್ಲ ಪಾಶ್ಚಾತ್ಯ ಶೋಧಕರು ಹುಡುಕಿದ್ದೇ ಹುಡುಕಿದ್ದು, ಇಲ್ಲೂ ಹಲವಾರು ಸಂಶೋಧಕರು ಹೇಳಹೆಸರಿಲ್ಲದೆ ನಾಪತ್ತೆಯಾದರು. ಮೂರನೆಯದು ಈಜಿಪ್ಟಿನ ಪಿರಮಿಡ್‌ಗಳು. ಇವು ಮೊದಲಿನಿಂದಲೂ ನಿಧಿಕಳ್ಳರಿಗೆ ಸ್ವರ್ಗಸಮಾನ. 1797ರಲ್ಲಿ ಗಿಸೆಪ್ ಫೆರ್ಲಿನಿ ಎಂಬ ಇಟಲಿಯ ಶೋಧಕ ಈಜಿಪ್ಟಿನ ಹಲವಾರು ಪಿರಮಿಡ್‌ಗಳನ್ನು ಹುಡಿಗಟ್ಟಿ, ಅಲ್ಲಿ ಹುಗಿದಿಡಲಾಗಿದ್ದ ನಿಧಿಯನ್ನು ಎತ್ತಿ ಕೊಂಡೊಯ್ದ. ಈತ ತಾನು ಪಡೆದ, ಮಾರಿದ ಚಿನ್ನದ ದಾಖಲೆ ಇಟ್ಟ. ಉಳಿದವರು ಅದೂ ಮಾಡಲಿಲ್ಲ. 1922ರಲ್ಲಿ ರಾಜ ಟೂಟಾಂಖಮುನ್‌ನ ಸಮಾಧಿ ಇಂಥದೊಂದು ಪಿರಮಿಡ್‌ನಡಿಯಲ್ಲಿ ಪತ್ತೆಯಾಯ್ತು. ಅಲ್ಲಿ ನೂರಾರು ಚಿನ್ನದ ವಸ್ತುಗಳು ಸಿಕ್ಕವು. ಇದು ಇನ್ನಷ್ಟು ಪಿರಮಿಡ್‌ಗಳಡಿಯಲ್ಲಿ ಚಿನ್ನವಿದೆಯೆನ್ನಲು ಸಾಕ್ಷ್ಯವಾಯ್ತು. ಆದರೆ ಇಂದು ಪಿರಮಿಡ್‌ಗಳಿಗೆ ಸರ್ಪಗಾವಲು. ಅಲ್ಲಿ ಏನು ಸಿಕ್ಕಿದರೂ ಸರಕಾರಕ್ಕೆ ಹೋಗಬೇಕು.

ಈಗ ಆಧುನಿಕ ಟ್ರೆಷರ್ ಹಂಟ್ ಒಂದರ ಕಥೆ. 2010ರಲ್ಲಿ ಫಾರೆಸ್ಟ್ ಫೆನ್ ಎಂಬ ವಿಚಿತ್ರ ಸ್ವಭಾವದ ಕೋಟ್ಯಾಧಿಪತಿ ಕಲಾ ವ್ಯಾಪಾರಿ ವಿಲಕ್ಷಣ ನಿಧಿಶೋಧಕ್ಕೆ ಚಾಲನೆ ನೀಡಿದ. ಅವನಿಗಾಗಲೇ 80 ವರ್ಷ. ಕ್ಯಾನ್ಸರ್ ಬಂದಿತ್ತು. ಅವನು ರಾಕಿ ಪರ್ವತ ಶ್ರೇಣಿಯ ಅರಣ್ಯದಲ್ಲಿ ಎಲ್ಲೋ ಒಂದು ಕಡೆ ಸುಮಾರು 15 ಲಕ್ಷ ಡಾಲರ್ ಬೆಲೆಬಾಳುವ ಚಿನ್ನಾಭರಣ ಇತ್ಯಾದಿಗಳನ್ನು ಹುಗಿದಿಟ್ಟ. ನಂತರ ತನ್ನ ಆತ್ಮಕತೆ (The Thrill of the Chase) ಬರೆದು, ಅದರಲ್ಲಿ ನಿಧಿಯ ಸುಳಿವು ನೀಡುವ 24 ಸಾಲುಗಳ 'ರಹಸ್ಯಸೂತ್ರ' ಕವನವೊಂದನ್ನು ಬರೆದಿಟ್ಟ. ತಗೊಳ್ಳಿ, ನೂರಾರು ಮಂದಿ ಈ ನಿಧಿಯ ಹಿಂದೆ ಬಿದ್ದರು.

ಹುಡುಕಾಟ ಸುಲಭವಾಗಿರಲಿಲ್ಲ. ಶೋಧದಲ್ಲಿ ಐದು ಮಂದಿ ಮೃತಪಟ್ಟರು. 2016ರಲ್ಲಿ 54 ವರ್ಷದ ರ್‍ಯಾಂಡಿ ಬಿಲಿಯು ಎಂಬಾತ ನಿಧಿ ಹುಡುಕುತ್ತಾ ಹೋಗಿ ನದಿಗೆ ಬಿದ್ದು ಸತ್ತ. ಅವನ ಮೃತದೇಹ ನ್ಯೂ ಮೆಕ್ಸಿಕೋದಲ್ಲಿನ ರಿಯೋ ಗ್ರಾಂಡೆ ನದಿಯ ಬಳಿ ಏಳು ತಿಂಗಳ ನಂತರ ಪತ್ತೆಯಾಯಿತು. ಮುಂದಿನ ನಾಲ್ಕು ವರ್ಷಗಳಲ್ಲಿ ಇನ್ನೂ ನಾಲ್ವರು ಜೀವ ಕಳೆದುಕೊಂಡರು. 80 ವರ್ಷದ ವ್ಯಕ್ತಿ ಹೋಗಲು ಸಾಧ್ಯವಾಗದ ಜಾಗದಲ್ಲಿ ಖಜಾನೆ ಇಟ್ಟಿಲ್ಲ ಎಂದು ಫೆನ್ ಸ್ಪಷ್ಟವಾಗಿ ಹೇಳಿದ್ದರೂ, ಗೊಂಡಾರಣ್ಯದಲ್ಲಿ ಶೋಧ ಮುಂದುವರಿಯಿತು. ಜನ ಅಪಾಯಕಾರಿ ಸ್ಥಳಗಳಲ್ಲಿ ಒದ್ದಾಡಿದರು. ಅನುಭವವಿಲ್ಲದ ಹೈಕರ್‌ಗಳು ಜೀವಕ್ಕೆ ಅಪಾಯವಾಗುವ ಪರಿಸ್ಥಿತಿಗಳಲ್ಲಿ ಸಿಲುಕಿಕೊಂಡರು.

ವಿವಾದಗಳು, ಬೆದರಿಕೆಗಳು ಮತ್ತು ಕಾನೂನು ಸಮಸ್ಯೆಗಳು ಎದ್ದವು. ಫೆನ್ ಕುಟುಂಬಕ್ಕೆ ಮರಣ ಬೆದರಿಕೆಗಳು ಬಂದವು. ಫೆನ್ ಅವರ ಮೊಮ್ಮಗಳನ್ನು ಕೇಡಿಗಳು ಬೆಂಬತ್ತಿ ಕಾಡಿದರು. ಆದರೂ ಹುಡುಕಾಟ ಮುಂದುವರಿಯಿತು. ಕೊನೆಗೂ 2020 ಜೂನ್ 6ರಂದು, ಜ್ಯಾಕ್ ಸ್ಟ್ಯೂಫ್ ಎಂಬ ವೈದ್ಯಕೀಯ ವಿದ್ಯಾರ್ಥಿ ನಿಧಿಯನ್ನು ವ್ಯೋಮಿಂಗ್ ಸ್ಟೇಟ್‌ನ ಗುಪ್ತ ಸ್ಥಳದಲ್ಲಿ ಪತ್ತೆ ಹಚ್ಚಿದೆನೆಂದು ಹೇಳಿಕೊಂಡ. ಫೆನ್ ತಮ್ಮ ಬ್ಲಾಗ್‌ನಲ್ಲಿ ನಿಧಿ ಪತ್ತೆಯಾಗಿದೆ ಎಂದು ಖಚಿತಪಡಿಸಿದರು. ಈ ಕತೆ ನಿಧಿಶೋಧದ ಥ್ರಿಲ್‌ನ ಜೊತೆಗೆ ನಿಧಿ ಕಾಪಿಡುವ ಮನುಷ್ಯನ ಚಪಲದ ಬಗೆಗೂ ಸಾಕಷ್ಟು ಹೇಳುತ್ತದೆ.

ಎಲ್ಲಿ ನಿಧಿ ಇದೆಯೋ ಇಲ್ಲವೋ, ನಮ್ಮ ಜನಪ್ರಿಯ ಸಾಹಿತ್ಯ, ಹಾಲಿವುಡ್ ಸಿನಿಮಾಗಳಲ್ಲಂತೂ ಸಾಕಷ್ಟು ಇದೆ. ಹೆಚ್ಚಿನ ವೆಸ್ಟರ್ನ್ ಕೌಬಾಯ್ಸ್ ಮೂವಿಗಳಲ್ಲಿ ನಿಧಿಯ ಹುಡುಕುವಿಕೆ ಅನಿವಾರ್ಯ ಅಂಗ. ಮೆಕಾನಸ್ ಗೋಲ್ಡ್, ದಿ ಗುಡ್ ದಿ ಬ್ಯಾಡ್ ಆಂಡ್ ದಿ ಅಗ್ಲಿ ಇಂಥ ಚಿತ್ರಗಳಲ್ಲೆಲ್ಲ ಅನುಪಮವಾದ್ದು. ನಮ್ಮ 'ಇವನೇ ಶ್ರೀಮನ್ನಾರಾಯಣ' ಕೂಡ. ನಿಧಿ ಕೆಟ್ಟವರಿಗೆ ದಕ್ಕದೆ ಒಳ್ಳೆಯವರಿಗೆ ಸಿಕ್ಕುವುದು, ಕೆಲವೊಮ್ಮೆ ಯಾರಿಗೂ ಸಿಗದೆ ಮಣ್ಣಿನಡಿ ಸಮಾಧಿಯಾಗುವುದು, ಇಂಥ ಚಿತ್ರಗಳಿಗೆಲ್ಲ ಸಾಮಾನ್ಯವಾದ ಕಥಾಹಂದರ. ಹಳೆಯ ಕಾಲದ ಹರಿದ ಚರ್ಮದ ಮ್ಯಾಪುಗಳು, ಎದೆಗೆಡಿಸುವ ಅಪಾಯಕಾರಿ ಜಾಡುಗಳು, ದುರಾಸೆ ಹೊತ್ತ ಮನುಜರು, ನಿಗೂಢ ಕೀಲಿಗಳನ್ನುಳ್ಳ ಗಜಗಾತ್ರದ ಬಾಗಿಲುಗಳು, ಲಡ್ಡು ಹಿಡಿದ ಮರದ ಪೆಟ್ಟಿಗೆಗಳಲ್ಲಿ ಅವಿತಿಟ್ಟ ವಜ್ರಗಳು, ನೇರ ಯಮಲೋಕಕ್ಕೆ ಕಳಿಸಬಲ್ಲ ವಿಷಕಾರಿ ಜೇಡ– ಇರುವೆ– ಹಾವುಗಳು, ನಂಬಿಸಿ ಎರಡೆಣಿಸುವ ಜೊತೆಗಾರರು ಇವೆಲ್ಲ ಟ್ರೆಷರ್‌ಹಂಟ್ ಸಿನಿಮಾಗಳಲ್ಲಿ ಇರಲೇಬೇಕು.

ಭಾರತದಲ್ಲಿ ಸಾಕಷ್ಟು ಕಡೆ ಊಹಿಸಲಾಗದ ಮೊತ್ತದ ನಿಧಿಯಿದೆ ಎಂದು ಹೇಳುವುದುಂಟು. ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನ, ಕೃಷ್ಣಾ ನದಿ ಪಾತ್ರದಲ್ಲಿ ಕೊಹಿನೂರ್ ವಜ್ರ ದೊರೆತ ಗೋಲ್ಕೊಂಡಾ ಗಣಿ ಪ್ರದೇಶ, ಹೈದರಾಬಾದಿನ ಚಾರ್ ಮಿನಾರ್ ಮತ್ತು ಗೋಲ್ಕೊಂಡಾ ಕೋಟೆಯನ್ನು ಸೇರಿಸುವ ಸುರಂಗ, ಹೈದರಾಬಾದಿನ ಕೊನೆಯ ನಿಜಾಮ್ ಅಡಗಿಸಿಟ್ಟ ಸಂಪತ್ತು, ಜಹಾಂಗೀರ್ ಅಡಗಿ ಕುಳಿತ ಆಳ್ವಾರ್ ಕೋಟೆ, ಜೈಗಢದ ರಾಜಾ ಮಾನ್‌ಸಿಂಗ್‌ನ ಅಮಿತ ಸಂಪತ್ತು (ಇದನ್ನು ಇಂದಿರಾ ಗಾಂಧಿ ಸೇನೆ ಕಳಿಸಿ ಹುಡುಕಿ ವಿಫಲರಾಗಿದ್ದರು ಎಂಬ ಪ್ರತೀತಿ) ಇವೆಲ್ಲ ನಿಧಿಯಾಸೆಯ ಬೆಂಕಿಗೆ ತುಪ್ಪವೆರೆಯುವಂಥ ಸಂಗತಿಗಳೇ.

ಎಲ್ಲರಲ್ಲೂ ಅಂಥದೊಂದು ಕನಸಿನ ಬಾಗಿಲುಗಳಿವೆ. ಅದು ತೆರೆಯುವುದನ್ನೇ ಕಾದು ಕೂತಿದ್ದಾರೆ ಎಲ್ಲರೂ. ತಿಳಿದೋ ತಿಳಿಯದೆಯೋ ಕಾಸಿನ ಬೆನ್ನು ಹತ್ತಿರುವ ನಾವುಗಳೆಲ್ಲ ಅಂಥದೊಂದು ನಿಧಿಯನ್ನು ಎಚ್ಚರದಂತಿರುವ ಮಂಪರಿನಲ್ಲಿ ಹುಡುಕುತ್ತಿದ್ದೇವೆ. ಲಕ್ಷ ಹೂಡಿ ಕೋಟಿ ಬರುತ್ತದೆಂದು ಜೊಲ್ಲು ಸುರಿಸುವ ಬೆಂಗಳೂರಿನ ರಿಯಲ್ ಎಸ್ಟೇಟ್, ದಿನದ ದುಡಿಮೆಯನ್ನು ತಂದು ಕುದುರೆ ಕಾಲಿಗೆ ಕಟ್ಟುವ ರೇಸು, ಯಾವುದೋ ಕಂಪೆನಿಯನ್ನು ನಂಬಿ ಜೀವಮಾನದ ಗಳಿಕೆಯನ್ನು ಹೂಡುವ ಷೇರು… ಇವೆಲ್ಲ ನಿಧಿಶೋಧನೆಗಳಲ್ಲದೆ ಇನ್ನೇನು?

ಮುಂಗಡ ಪತ್ರ

ಡಾ. ತೈಲೂರು ದೇವರಾಜ್

ಕೇಂದ್ರ ಬಜೆಟ್‌ಗೆ ಮುನ್ನ ಹಲ್ವಾ, ಏನಿದರ ಮರ್ಮ!

ಶ್ರೀಸಾಮಾನ್ಯನಿಗೆ ಫೆಬ್ರವರಿ ತಿಂಗಳು ಬಂದರೆ ಬಜೆಟ್ ನದ್ದೇ ಚಿಂತೆ. ಈ ವರ್ಷ ಯಾವ ಹೊಸ ತೆರಿಗೆಗಳು ತಲೆ ಮೇಲೆ ಬೀಳುವುದೊ, ಎಷ್ಟು ತೆರಿಗೆ ಉಳಿತಾಯ ಆಗುವುದೋ ಎಂಬ ಲೆಕ್ಕಾಚಾರ ಎಲ್ಲ ತೆರಿಗೆ ಪಾವತಿದಾರರ ಮನಸ್ಸನ್ನು ಕಾಡುತ್ತದೆ. 'ನೀವು ಎಷ್ಟಾದರೂ ಚಿಂತೆ ಮಾಡಿ, ನಾವು ಮಾತ್ರ ಹಲ್ವಾ ತಿಂದೇ ಆಯವ್ಯಯ ಮಂಡಿಸೋದು' ಎಂದು ಪ್ರತಿವರ್ಷದಂತೆ ಈ ಬಾರಿಯೂ ಜನವರಿ 7ರಂದು ಹಣಕಾಸು ಸಚಿವರು, ಅಧಿಕಾರಿಗಳು ಹಲ್ವಾ ತಯಾರಿಗೆ ಸಾಂಪ್ರದಾಯಿಕ ರೀತಿಯಲ್ಲಿ ಚಾಲನೆ ನೀಡಿದ್ದಾರೆ. ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಸೌಟು ಹಿಡಿದು ಹಲ್ವಾ ತಯಾರಿಕೆಗೆ ಮುಂದಾದರೆ ಹಣಕಾಸು ಖಾತೆ ರಾಜ್ಯ ಸಚಿವರಾದ ಪಂಕಜ್ ಚೌಧರಿ ಮತ್ತು ಸಚಿವಾಲಯದ ಹಿರಿಯ ಅಧಿಕಾರಿಗಳು ಅವರಿಗೆ ಬೆಂಬಲವಾಗಿ ನಿಂತಿದ್ದಾರೆ. ಏನೇ ಆದರೂ ಸಿಹಿ ತಯಾರಿಸೋದು ಮತ್ತು ಹಂಚೋದು (ಜೀವನ ಸಿಹಿಯಾಗಿಸೋದು) ಮಹಿಳೆಯರಿಂದ ಮಾತ್ರ ಸಾಧ್ಯ ಎಂದು ಭಾವಿಸೋಣವೆ?. ಆದರೆ ಸರಕಾರಿ ವ್ಯವಸ್ಥೆಯಲ್ಲಿ ಈ ಸಂಪ್ರದಾಯ ಹೇಗೆ ಮತ್ತು ಏಕೆ ಪ್ರಾರಂಭವಾಯಿತು ಎನ್ನುವುದು ಕುತೂಹಲಕರ ಸಂಗತಿ.

ಐತಿಹಾಸಿಕವಾಗಿ 1950 ರ ಬಜೆಟ್ ಮಂಡನೆಗೆ ಮುಂಚೆ ಇಂತಹದೊಂದು ಸಂಪ್ರದಾಯ ಚಾಲ್ತಿಯಲ್ಲಿರಲಿಲ್ಲ. ಆ ವರ್ಷ ಬಜೆಟ್ ಮಂಡನೆಗೆ ಮುಂಚಿತವಾಗಿ ಬಜೆಟ್‌ನ ರಹಸ್ಯಗಳು ಬಹಿರಂಗವಾದ್ದರಿಂದ ಮುಂದೆ ಹಾಗಾಗದಂತೆ ಗೌಪ್ಯತೆಯನ್ನು ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆ ಎದುರಾಯಿತು. ಇದಕ್ಕಾಗಿ ಬಜೆಟ್ ತಯಾರಿಕೆಯ ಅಂತಿಮ ಹಂತದ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಹೊರಗಿನ ಸಂಪರ್ಕದಿಂದ ದೂರವಿರುವಂತೆ ಮಾಡಲು ಹಲ್ವಾ ತಯಾರಿಕೆಯ ಸಂಪ್ರದಾಯ ಪ್ರಾರಂಭವಾಯಿತು. ಬಜೆಟಿನ ಸಮಗ್ರತೆ, ಗೌಪ್ಯತೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಅಧಿಕಾರಿಗಳು ತಮ್ಮ ಕುಟುಂಬಗಳ ನೇರ ಸಂಪರ್ಕದಿಂದಲು ದೂರವಿರುತ್ತಾರೆ. 1950ರ ಬಜೆಟ್ ಮಂಡನೆಗೂ ಮುನ್ನ ರಹಸ್ಯಗಳು ಬಯಲಾದ್ದರಿಂದ ಸಾರ್ವಜನಿಕ ಟೀಕೆಗೆ ಗುರಿಯಾಗಿ ಅಂದಿನ ಹಣಕಾಸು ಸಚಿವರಾಗಿದ್ದ ಜಾನ್ ಮಥಾಯ್ ಅವರು ರಾಜೀನಾಮೆ ನೀಡಬೇಕಾಯಿತು.

ಹಲ್ವಾ ತಯಾರಿಕೆ ಭಾರತೀಯ ಪ್ರಾಚೀನ ಸಂಪ್ರದಾಯವೊಂದರ ಆಚರಣೆಯನ್ನು ಆಡಳಿತ ವ್ಯವಸ್ಥೆಯೊಳಗೆ ಮಿಳಿತಗೊಳಿಸುವ ದೂರದೃಷ್ಟಿಯನ್ನು ಒಳಗೊಂಡಿದೆ. ನಮ್ಮ ಸಂಸ್ಕೃತಿಯಲ್ಲಿ ಮುಖ್ಯವಾದ ಮತ್ತು ಶುಭಕರವಾದ ಸಂದರ್ಭಗಳಲ್ಲಿ ಸಿಹಿ ಹಂಚುವ ವಾಡಿಕೆ ಇದೆ. ಯಥಾಪ್ರಕಾರ ಅದನ್ನು ಇಲ್ಲಿ ಸಹ ಅಳವಡಿಸಿಕೊಳ್ಳಲಾಗಿದೆ. ದೇಶದ ಅಭಿವೃದ್ಧಿಗೆ ಮತ್ತು ಸಾರ್ವಜನಿಕ ಉದ್ದೇಶಗಳಿಗೆ ವೈಯಕ್ತಿಕ ಕೊಡುಗೆ ಇದೆ ಎನ್ನುವುದೇ ಸಿಹಿ ಭಾವನೆ ಉಂಟುಮಾಡುವ ವಿಚಾರ. ಸಂಸ್ಕೃತಿಯ ಸಂಕೇತ ಮತ್ತು ಆಡಳಿತಶಾಹಿಯ ನೀತಿಗಳನ್ನು ಒಂದುಗೂಡಿಸಿ ಸಂಭ್ರಮಿಸುವ ಸಂಕೇತವಾಗಿ ಸಹ ಈ ಆಚರಣೆಯನ್ನು ನೋಡಲಾಗುತ್ತದೆ.

ಹಲ್ವಾ ತಯಾರಿಕೆ ಬಜೆಟ್ ತಯಾರಿಕೆಯ ಅಂತಿಮ ಹಂತದ ಸಂಕೇತ. ಇದರೊಂದಿಗೆ ಆ ವರ್ಷದ ಬಜೆಟ್ ಪ್ರತಿಗಳನ್ನು ಮುದ್ರಿಸುವ ಕಾರ್ಯ ಆರಂಭವಾಗುತ್ತದೆ. ಅದು ಅಲ್ಲಿಯ ತನಕ ಹಣಕಾಸು ಸಚಿವಾಲಯ ವಿವಿಧ ರಾಜ್ಯಗಳು ಮತ್ತು ಬೇರೆ ಬೇರೆ ಇಲಾಖೆಗಳ ಜೊತೆ ನಡೆಸಿದ ಸಮಾಲೋಚನೆ ಮತ್ತು ಹಣಕಾಸು ಯೋಜನೆ, ಹಂಚಿಕೆ, ಸಮನ್ವಯ ಮುಂತಾದ ಕಾರ್ಯಗಳ ಅಳವಡಿಕೆಯ ಗತಿಯನ್ನು ಸೂಚಿಸುವುದರ ಜೊತೆಗೆ ಯಶಸ್ವಿಯಾಗಿ ಬಜೆಟ್ ತಯಾರಿಕೆ ಆಗಿರುವುದರ ಸಂಕೇತವು ಆಗಿರುತ್ತದೆ. ಮಾತ್ರವಲ್ಲದೆ ಹಲ್ವಾ ತಯಾರಿಕೆ ಹಂತವು ಮಾಧ್ಯಮಗಳ ಗಮನ ಸೆಳೆದು ಪ್ರಚಾರ ಪಡೆಯುವುದರಿಂದ ದೇಶದ ಪ್ರಜೆಗಳು, ಸಂಘ–ಸಂಸ್ಥೆಗಳು, ವಿವಿಧ ಶೈಕ್ಷಣಿಕ, ಔದ್ಯೋಗಿಕ, ವೃತ್ತಿನಿರತ ಸಂಘಟನೆಗಳು ದೇಶದ ಹಣಕಾಸು ನೀತಿಗಳು, ಆದ್ಯತೆಗಳು, ಯೋಜನೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಲು ಪ್ರೇರೇಪಿಸುತ್ತದೆ ಎನ್ನಬಹುದು.

1950ರವರೆಗೂ ಬಜೆಟ್ ಪ್ರತಿಗಳನ್ನು ರಾಷ್ಟ್ರಪತಿ ಭವನದಲ್ಲೇ ಮುದ್ರಿಸಲಾಗುತ್ತಿತ್ತು. ಆದರೆ ಆ ವರ್ಷ ಬಜೆಟ್ ರಹಸ್ಯಗಳು ಬಯಲಾದ್ದರಿಂದ, ಅಲ್ಲಿಂದ ಮಿಂಟೊ ರಸ್ತೆಗೆ ಸ್ಥಳಾಂತರಿಸಿ ಹೆಚ್ಚು ಭದ್ರತೆಯಲ್ಲಿ ಮುದ್ರಿಸಲಾಗುತ್ತಿತ್ತು. ಆದರೆ 1980 ರಲ್ಲಿ ರೈಸಿನಾ ಹಿಲ್ ಅಲ್ಲಿರುವ ನಾರ್ತ್ ಬ್ಲಾಕ್ ನೆಲಮಹಡಿಯ ಮುದ್ರಣಾಲಯಕ್ಕೆ ಸ್ಥಳಾಂತರಿಸಲಾಯಿತು. ಕಳೆದ ವರ್ಷ ಹಣಕಾಸು ಸಚಿವಾಲಯದ ಕಚೇರಿಗಳನ್ನು ಕರ್ತವ್ಯ ಭವನಕ್ಕೆ ಸ್ಥಳಾಂತರಿಸಲಾಗಿದೆ. ಆದರೆ ಅಲ್ಲಿ ಮುದ್ರಣಾಲಯದ ಲಭ್ಯತೆ ಇಲ್ಲದಿರುವುದರಿಂದ ಈ ವರ್ಷ ಕೂಡ ನಾರ್ತ್ ಬ್ಲಾಕ್ ಮುದ್ರಣಾಲಯದಲ್ಲೇ ಬಜೆಟ್ ಪ್ರತಿಗಳನ್ನು ಮುದ್ರಿಸಲಾಗುತ್ತಿದೆ.

2017ರಿಂದ ಕೇಂದ್ರ ಬಜೆಟ್ ಮಂಡನೆಯಲ್ಲಿ ಅನೇಕ ಬದಲಾವಣೆಗಳಾಗಿವೆ. ಅಲ್ಲಿಯವರೆಗೆ ಪ್ರತಿವರ್ಷ ಫೆಬ್ರವರಿ ಕೊನೆ ದಿನ ಬಜೆಟ್ ಮಂಡನೆಯಾಗುತ್ತಿತ್ತು. 2017ರಿಂದ ಬಜೆಟ್ ಮಂಡನೆಯನ್ನು ಬದಲಾಯಿಸಲಾಯಿತು. 2021 ರವರೆಗೆ ಬಜೆಟ್ ಮಂಡನೆಯ ಪ್ರತಿಗಳು ಭೌತಿಕ ರೂಪದಲ್ಲಿ ಮಾತ್ರ ಲಭ್ಯವಿದ್ದವು. 2021ರ ಬಜೆಟ್ ಮಂಡನೆ ವೇಳೆ ಡಿಜಿಟಲ್ ರೂಪದಲ್ಲಿ ಸಹ ಪ್ರತಿಗಳನ್ನು ಒದಗಿಸಲಾಯಿತು. ಈ ವರ್ಷ 2026 ರಲ್ಲಿ ಫೆಬ್ರವರಿ 1ನೇ ತಾರೀಕು ಭಾನುವಾರ ಬಂದಿರುವುದರಿಂದ ಬೇರೆ ದಿನಾಂಕಕ್ಕೆ ಬಜೆಟ್ ಮಂಡನೆಯಾಗಬಹುದು ಎಂಬ ನಿರೀಕ್ಷೆ ಹುಸಿಯಾಗಿ ಮೊದಲನೇ ಸಲ ಭಾನುವಾರ ಬಜೆಟ್ ಮಂಡನೆಯಾಗುತ್ತಿದೆ. ಇದು ಹೊಸ ಇತಿಹಾಸ ಸೃಷ್ಟಿ. ಬಜೆಟ್ ಮಂಡನೆ ಭಾನುವಾರ ಆಗುತ್ತಿರುವುದರಿಂದ ಆ ದಿನ ಭಾರತದ ಷೇರು ಮಾರುಕಟ್ಟೆ ಸಹ ಎಂದಿನಂತೆ ವಹಿವಾಟು ನಡೆಸಲಿದೆ. ಇದು ಭಾರತದ ಷೇರು ಮಾರುಕಟ್ಟೆ ಪಾಲಿಗೆ ಇನ್ನೊಂದು ರೀತಿಯ ಇತಿಹಾಸ ನಿರ್ಮಾಣ. ಅಂದಹಾಗೆ ನಿರ್ಮಲಾ ಸೀತಾರಾಮನ್ ಅವರು ಕೇಂದ್ರ ಹಣಕಾಸು ಸಚಿವರಾಗಿ ಸತತ ಒಂಬತ್ತನೇ ಬಾರಿಗೆ ಆಯವ್ಯಯ ಮಂಡನೆ ಮಾಡುತ್ತಿದ್ದಾರೆ. ಈ ಮೂಲಕ ಚಿದಂಬರಂ ಅವರ ದಾಖಲೆಯನ್ನು ಸರಿಗಟ್ಟುತ್ತಿದ್ದಾರೆ. ದಾಖಲೆಯ 10 ಬಜೆಟ್ ಮಂಡಿಸಿದ ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅವರ ದಾಖಲೆ ಸರಿಗಟ್ಟಲು ನಿರ್ಮಲಾ ಅವರಿಗೆ ಇನ್ನೊಂದು ಮೆಟ್ಟಿಲು ಬಾಕಿ ಇದೆ. ಜಗತ್ತಿನ ಪ್ರಭಾವಿ ಮಹಿಳಾ ವಿತ್ತ ಮಂತ್ರಿಯಾಗಿ ಇದು ಕೂಡ ಇತಿಹಾಸವೇ. ಬೆಲೆ ಏರಿಕೆ, ತೆರಿಗೆ ಭಾರದಿಂದ ಹೈರಾಣಾಗುತ್ತಿರುವ ಶ್ರೀಸಾಮಾನ್ಯನಿಗೂ ನಿರ್ಮಲಾ ಸಿಹಿ ಸುದ್ದಿ ನೀಡುವರೆಂದು ಆಶಿಸೋಣವೆ?

ದ್ವೇಷಭಾಷಣದ ಹೆಸರಿನಲ್ಲಿ ಸಂವಿಧಾನದ ಅಡಿಪಾಯಕ್ಕೆ ಧಕ್ಕೆ ?!

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ಕಳೆದ ಡಿಸೆಂಬರ್‌ನಲ್ಲಿ ಕರ್ನಾಟಕ ವಿಧಾನಸಭೆ ಕರ್ನಾಟಕ ಹೇಟ್ ಸ್ಪೀಚ್ ಆಂಡ್ ಹೇಟ್ ಕ್ರೈಮ್ಸ್ (ಪ್ರಿವೆನ್ಷನ್ ಆಂಡ್ ಕಂಟ್ರೋಲ್) ಬಿಲ್, 2025 ಎಂಬ ಮಸೂದೆಯನ್ನು ದೊಡ್ಡ ವಿರೋಧದ ನಡುವೆಯೇ ತದ್ವತಾಗಿ ಸ್ವೀಕರಿಸಿತು. ಇದು ಹೇಟ್ ಸ್ಪೀಚ್ ಮತ್ತು ಹೇಟ್ ಟು ಕ್ರೈಮ್ ಸೇರಿದಂತೆ ಜನರ ನಡುವೆ ಹಿತ–ಅಶಾಂತಿ ಹುಟ್ಟಿಸಬಹುದಾದ ಭಾಷಣ/ವರ್ತನೆಗಳನ್ನು ನಿಯಂತ್ರಿಸಲು ಉದ್ದೇಶಿಸಿ ಕಾನೂನು ಮಾಡುವುದಾಗಿದ್ದ ಡ್ರಾಫ್ಟ್ ಆಗಿತ್ತು.

ಒಟ್ಟು 22 ಮಸೂದೆಗಳನ್ನು ಒಪ್ಪಿಗೆ ಪಡೆದುಕೊಳ್ಳಲು ರಾಜ್ಯಪಾಲರಿಗೆ ರಾಜ್ಯ ಸರಕಾರವು ಕಳುಹಿಸಿಕೊಟ್ಟಿತ್ತು. ಇದರಲ್ಲಿ, 19 ಬಿಲ್‌ಗಳಿಗೆ ಗವರ್ನರ್ ಅವರು assent (permit) ನೀಡಿದ್ದಾರೆ. ಉಳಿದ 2 ಬಿಲ್‌ಗಳನ್ನು ಗವರ್ನರ್ ತಿರಸ್ಕರಿಸಿ, ವಿವರಕ್ಕಾಗಿ ರಾಜ್ಯ ಸರಕಾರಕ್ಕೆ ಹಿಂತಿರುಗಿಸಿದ್ದಾರೆ. ಆದರೆ, ಈ ದ್ವೇಷಭಾಷಣಕ್ಕೆ ಸಂಬಂಧಿಸಿದಂತೆ pending / in hold state - neither approved nor returned ಎಂಬಂತೆ ಗವರ್ನರ್ ಸುಮ್ಮನಾಗಿದ್ದಾರೆ.

ಇದರ ವಿರುದ್ಧ ಸಾರ್ವಜನಿಕ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ವಾಕ್ ಸ್ವಾತಂತ್ರ್ಯ ಸೇರಿದಂತೆ ಇತರೆ ಕೆಲವು ವಿಚಾರಗಳಲ್ಲಿ, ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ತರುವಂತೆ ಈ ಮಸೂದೆ ರೂಪಿತವಾಗಿದೆ ಎಂದೂ ವಿರೋಧ ಪಕ್ಷಗಳು ಬಲವಾಗಿ ವಿರೋಧಿಸಿವೆ. ಫ್ರೀ–ಸ್ಪೀಚ್ ಬಗ್ಗೆ ಆತಂಕ ವ್ಯಕ್ತಪಡಿಸಿ, ಕೆಲವು ಸಾರ್ವಜನಿಕ ಹಿತಾಸಕ್ತಿ ದೂರುಗಳೂ ಕೂಡ petition/request) ಗವರ್ನರ್ ಅಂಗಳಕ್ಕೆ, ನ್ಯಾಯಾಲಯಕ್ಕೆ ತಲುಪಿವೆ. ವಾಸ್ತವಿಕತೆ ಹೀಗಿರುವಾಗ ಇತ್ತೀಚೆಗೆ ರಾಜ್ಯದಲ್ಲಿ ಕೆಲ ಘಟನೆಗಳು ನಡೆಯುತ್ತಿವೆ.

ಹೇಟ್ ಸ್ಪೀಚ್ ಮತ್ತು ಹೇಟ್ ಕ್ರೈಮ್ಸ್ ಬಿಲ್ ಇತ್ತೀಚೆಗೆ ರಾಜ್ಯ ವಿಧಾನಸಭೆಯಲ್ಲಿ ಅಂಗೀಕಾರಗೊಂಡರೂ, ಅಧಿಕೃತವಾಗಿ ಕಾಯ್ದೆ ಆಗಿ ಪ್ರಕಟಿತ/ನೋಟಿಫೈ ಆಗಿಲ್ಲ. ಈಗ ನೀಡಿರುವ–ನೀಡುತ್ತಿರುವ ನೋಟೀಸ್‌ಗೆ ಕಾನೂನಿನ ಮಾನ್ಯತೆ ಇಲ್ಲವೆಂದೂ ಸಾರ್ವಜನಿಕವಾಗಿ ವಿರೋಧ ವ್ಯಕ್ತವಾಗುತ್ತಿದೆ. ಆರೆಸ್ಸೆಸ್ ಮುಖಂಡರಾದ ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧ ದುರ್ಭಾವನೆಗಳನ್ನು ವ್ಯಕ್ತಪಡಿಸಿ ಮಾತನಾಡಿದ ಹಿನ್ನಲೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ವಿಕಾಸ್ ಪುತ್ತೂರು ಅವರಿಗೆ ದ್ವೇಷಭಾಷಣದ ಹೆಸರಿನಲ್ಲಿ ನೋಟೀಸ್ ನೀಡಲಾಗಿದೆ. ಇದೆಲ್ಲವನ್ನು ಗಮನಿಸಿದಾಗ, ಕಾಂಗ್ರೆಸ್‌ನವರು ದಬ್ಬಾಳಿಕೆ ಮನಸ್ಥಿತಿ ಇಟ್ಟುಕೊಂಡಿದ್ದಾರೆಯೇ? ಎಂದು ಇಂದಿನ ಪ್ರಜ್ಞಾವಂತ ಯುವಜನತೆ ಪ್ರಶ್ನಿಸುತ್ತಿದೆ.

ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ 1975ರಿಂದ 1977ರವರೆಗಿನ ತುರ್ತು ಪರಿಸ್ಥಿತಿ ಒಂದು ಅತ್ಯಂತ ವಿವಾದಾತ್ಮಕ, ಸಂಕೀರ್ಣ ಮತ್ತು ಮಹತ್ವದ ಅಧ್ಯಾಯವಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳು, ನಾಗರಿಕ ಹಕ್ಕುಗಳು, ಸಂವಿಧಾನದ ಆತ್ಮ, ಸಂಸತ್ತಿನ ಸ್ವಾಯತ್ತೆ ಮತ್ತು ನ್ಯಾಯಾಂಗದ ಪಾತ್ರ, ಇವುಗಳು ಈ ಅವಧಿಯಲ್ಲಿ ಗಂಭೀರ ಪರೀಕ್ಷೆಗೆ ಒಳಪಟ್ಟವು. ಸ್ವಾತಂತ್ರ್ಯಾನಂತರ ಭಾರತವು ಕಂಡ ಅತ್ಯಂತ ದೀರ್ಘ ಮತ್ತು ವ್ಯಾಪಕವಾದ ಅಧಿಕಾರ ಕೇಂದ್ರೀಕರಣ ಈ ತುರ್ತು ಪರಿಸ್ಥಿತಿಯಲ್ಲಿಯೇ ನಡೆದಿದೆ.

ಭಾರತೀಯ ಸಂವಿಧಾನದ ಭಾಗ XVIII (ಆರ್ಟಿಕಲ್–352360) ತುರ್ತು ಪರಿಸ್ಥಿತಿಗೆ ಸಂಬಂಧಿಸಿದ ವಿಧಾನಗಳನ್ನು ವಿವರಿಸುತ್ತದೆ. ಆರ್ಟಿಕಲ್–352 ಪ್ರಕಾರ ಯುದ್ಧ, ವಿದೇಶಿ ಆಕ್ರಮಣ ಅಥವಾ ಆಂತರಿಕ ಅಶಾಂತಿ (Internal Disturbance) ಇದ್ದರೆ ರಾಷ್ಟ್ರಪತಿ ತುರ್ತು ಪರಿಸ್ಥಿತಿ ಘೋಷಿಸಬಹುದು. 1975ರಲ್ಲಿ ಇದೇ ಆಂತರಿಕ ಅಶಾಂತಿ ಎಂಬ ಅಸ್ಪಷ್ಟ ಪದಬಳಕೆಯನ್ನು ಆಧಾರವನ್ನಾಗಿ ಮಾಡಿಕೊಂಡು ತುರ್ತು ಪರಿಸ್ಥಿತಿ ಘೋಷಿಸಲಾಯಿತು.

12 ಜೂನ್ 1975ರಂದು ಅಲಹಾಬಾದ್ ಹೈಕೋರ್ಟ್, ಅಂದಿನ ಪ್ರಧಾನಿ ಇಂದಿರಾಗಾಂಧಿಯವರ 1971ರ ಲೋಕಸಭಾ ಕ್ಷೇತ್ರದ ಗೆಲುವನ್ನು ಅಮಾನ್ಯ ಎಂದು ಘೋಷಿಸಿ ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ತೀರ್ಪು ನೀಡಿತು. ಈ ತೀರ್ಪು ರಾಜಕೀಯವಾಗಿ ಭಾರೀ ಆಘಾತ ಉಂಟುಮಾಡಿತು. ಇಂದಿರಾಗಾಂಧಿ ಅವರ ರಾಜೀನಾಮೆಗೆ ಒತ್ತಡ ಹೆಚ್ಚಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ತುರ್ತು ಪರಿಸ್ಥಿತಿ ಘೋಷಣೆ (25 ಜೂನ್ 1975) ಮಾಡಲಾಯಿತು. ಅಲಾಹಾಬಾದ್ ಹೈಕೋರ್ಟ್ ತೀರ್ಪು ತುರ್ತು ಪರಿಸ್ಥಿತಿಗೆ ತಕ್ಷಣದ ಕಾರಣವಾಯಿತೆನ್ನಬಹುದು.

ಇಂದಿರಾ ಗಾಂಧಿಯವರ ಸಲಹೆಯ ಮೇರೆಗೆ 1975ರ ಜೂನ್ 25ರ ಮಧ್ಯರಾತ್ರಿ ಅಂದಿನ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್, ಸಂವಿಧಾನದ 352 ನೇ ವಿಧಿಯಡಿಯಲ್ಲಿ ಆಂತರಿಕ ಅಶಾಂತಿ ಕಾರಣ ನೀಡಿ ತುರ್ತು ಪರಿಸ್ಥಿತಿ ಘೋಷಿಸಿದರು. ಇದು ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಯುದ್ಧವಿಲ್ಲದೆ ಹೇರಲಾದ ತುರ್ತು ಪರಿಸ್ಥಿತಿ. ಸಂವಿಧಾನ ರಚನೆಯ ಬಳಿಕ ಘಟಿಸಿದ ಮೊದಲ ಕರಾಳ ಸಂದರ್ಭ ಇದಾಗಿದ್ದರಿಂದ ಜನರೂ ಭಯಭೀತರಾದರು. ವ್ಯವಸ್ಥೆಗಳು ಹಳಿತಪ್ಪಿದವು, ಮಾಧ್ಯಮಗಳನ್ನು ಸಂಪೂರ್ಣವಾಗಿ ಹತ್ತಿಕ್ಕಲಾಯಿತು. ಎಲ್ಲಕ್ಕಿಂತ ಮುಖ್ಯವಾಗಿ, ದೇಶದ ಸಂಸತ್ತನ್ನು ಅಮಾನತುಗೊಳಿಸಿ, ಪ್ರಜಾಪ್ರಭುತ್ವದ ನಡೆಯನ್ನು ಸ್ಥಗಿತಗೊಳಿಸಲಾಯಿತು.

ಆರ್ಟಿಕಲ್– 356 ದುರುಪಯೋಗ ಪಡಿಸಿಕೊಂಡು ವಿರೋಧ ಪಕ್ಷದ ಸರಕಾರಗಳನ್ನು ವಜಾ ಮಾಡುವ ಮೂಲಕ ರಾಜ್ಯ ಸರಕಾರಗಳ ಮೇಲೆ ನಿಯಂತ್ರಣ ಸಾಧಿಸಲಾಯಿತು. ಸರಕಾರದ ಟೀಕೆಗೆ ಸಂಪೂರ್ಣ ನಿರ್ಬಂಧ ಹೇರಲಾಯಿತು, ಪತ್ರಿಕೆಗಳನ್ನು ಮುದ್ರಣಕ್ಕೆ ಹೋಗುವ ಮುನ್ನ ಸೆನ್ಸಾರ್ ಮಾಡುವ ಮೂಲಕ ಮಾಧ್ಯಮ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಯಿತು. ಆರ್ಟಿಕಲ್–19 ಅಮಾನತುಗೊಳಿಸುವ ಮೂಲಕ, ವಾಕ್ ಸ್ವಾತಂತ್ರ್ಯ, ಸಭೆ–ಸಂಘಟನೆ ಹಕ್ಕು, ಚಳವಳಿಗಳ ನಿಷೇಧ ಸೇರಿ ನಾಗರಿಕ ಹಕ್ಕುಗಳನ್ನು ಅಮಾನತು ಮಾಡಲಾಯಿತು. ಸಂವಿಧಾನದ 21ನೇ ವಿಧಿಯಡಿಯಲ್ಲಿ ನೀಡಲಾದ ಮೂಲಭೂತ ಹಕ್ಕು ನಿಷ್ಪ್ರಯೋಜಕವಾಯಿತು. Maintenance of Internal Security Act (MISA) ಅಡಿಯಲ್ಲಿ ಲಕ್ಷಾಂತರ ಜನರ ಬಂಧನಗಳಾದವು.

ಭಾರತೀಯ ಸಂವಿಧಾನದ ಆತ್ಮವೆಂದೇ ಕರೆಯಬಹುದಾದ 'ಪ್ರಸ್ತಾವನೆ'ಯನ್ನು ಬದಲಾಯಿಸಲಾಯಿತು. 42ನೇ ಸಂವಿಧಾನ ತಿದ್ದುಪಡಿ (Mini Constitution) 1976ರಲ್ಲಿ ಜಾರಿಗೆ ಬಂದ 42ನೇ ತಿದ್ದುಪಡಿ ಮೂಲಕ, ಮೊದಲ ಬಾರಿಗೆ ಸಂವಿಧಾನದ ಪ್ರಸ್ತಾವನೆಗೆ ಸಮಾಜವಾದಿ (Socialist), ಧರ್ಮನಿರಪೇಕ್ಷ (Secular), ರಾಷ್ಟ್ರೀಯ ಏಕತೆ ಮತ್ತು ಅಖಂಡತೆ ಸೇರಿಸಿ ಬದಲಾವಣೆ ತರಲಾಯಿತು. ಈ ಬದಲಾವಣೆಗಳು ಸಂಸತ್ತನ್ನು ಪೂರ್ಣ ನಿಯಂತ್ರಣದಲ್ಲಿಟ್ಟುಕೊಂಡು, ಸಾರ್ವಜನಿಕ ಚರ್ಚೆ ಇಲ್ಲದೆ ನಡೆದಿವೆ ಎನ್ನುವುದು ಗಮನಾರ್ಹ.

ವೈಯಕ್ತಿಕ ಹಾಗೂ ಪಕ್ಷದ ವಿರೋಧವನ್ನು ರಾಷ್ಟ್ರವಿರೋಧ ಎಂದು ಬಿಂಬಿಸುವ ಪ್ರಯತ್ನ ಈ ಮೂಲಕ ಮಾಡಲಾಯಿತು. ಸಂವಿಧಾನ ತಿದ್ದುಪಡಿ ನ್ಯಾಯಾಲಯದ ಪರಿಶೀಲನೆಗೆ ಒಳಪಡುವುದಿಲ್ಲ ಎಂದು ಘೋಷಣೆ, ನ್ಯಾಯಾಂಗದ ಸ್ವಾಯತ್ತೆಗೆ ಭಾರೀ ಹೊಡೆತ ನೀಡಿ, ನ್ಯಾಯಾಂಗವನ್ನು ಶಕ್ತಿಹೀನವನ್ನಾಗಿಸುವ ಪ್ರಯತ್ನ ಮಾಡಲಾಯಿತು. ಬಳಿಕ ಅಚಾನಕ್ಕಾಗಿ ತುರ್ತು ಪರಿಸ್ಥಿತಿ ಹಿಂಪಡೆದು 1977ರಲ್ಲಿ ಚುನಾವಣೆ ನಡೆಸಲಾಯಿತು.

ಜನರು ತಮ್ಮ ತೀರ್ಪಿನಿಂದ ಇಂದಿರಾಗಾಂಧಿ ಸರಕಾರವನ್ನು ಸೋಲಿಸಿದರು. ಜನತಾಪಕ್ಷ ಅಧಿಕಾರಕ್ಕೆ ಬಂದು, 44ನೇ ತಿದ್ದುಪಡಿ ಮೂಲಕ, ಆಂತರಿಕ ಅಶಾಂತಿ ಪದ ತೆಗೆದು, Armed Rebellion ಸೇರಿಸಿತು. . ಸಂವಿಧಾನದ 21ನೇ ವಿಧಿಯಡಿಯಲ್ಲಿ ನೀಡಲಾದ ಹಕ್ಕನ್ನು ತುರ್ತು ಪರಿಸ್ಥಿತಿಯಲ್ಲೂ ಅಮಾನತುಗೊಳಿಸಲಾಗದ ಹಕ್ಕನ್ನಾಗಿ ಮಾಡಲಾಯಿತು. ಭಾರತೀಯ ಸಂವಿಧಾನವು ನ್ಯಾಯಾಂಗವನ್ನು ಕಾರ್ಯನಿರ್ವಹಣಾ ಮತ್ತು ಶಾಸನಾಂಗದ ಹಸ್ತಕ್ಷೇಪದಿಂದ ರಕ್ಷಿಸುವ ಉದ್ದೇಶದಿಂದ ನ್ಯಾಯಾಧೀಶರಿಗೆ ಅತ್ಯುನ್ನತ ಭದ್ರತೆಯನ್ನು ನೀಡಿದೆ. ಇದೇ ಕಾರಣಕ್ಕೆ ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುವ (Impeachment) ಪ್ರಕ್ರಿಯೆಯನ್ನು ಅತ್ಯಂತ ಕಠಿಣವಾಗಿಸಿ, ಸಂಸತ್ತಿನ ಎರಡೂ ಸದನಗಳಲ್ಲಿ ವಿಶೇಷ ಬಹುಮತವನ್ನು ಕಡ್ಡಾಯಗೊಳಿಸಲಾಗಿದೆ. ಹೀಗಿದ್ದರೂ, ಕರಾಳ ಪರಿಸ್ಥಿತಿಯ ಹಿನ್ನಲೆಯಿರುವ ರಾಜಕೀಯ ಪಕ್ಷವೊಂದು, ತನ್ನ ಅಧಿಕಾರಾವಧಿಯಲ್ಲಿ ಹಲವು ನ್ಯಾಯಾಧೀಶರನ್ನು ಮಹಾಭಿಯೋಗದ ಮೂಲಕ ಪದಚ್ಯುತಿಗೊಳಿಸಿದೆ.

ಆರ್ಟಿಕಲ್– 124(4) ಸುಪ್ರೀಂಕೋರ್ಟ್ ನ್ಯಾಯಾಧೀಶರ ಪದಚ್ಯುತಿ ಹಾಗೂ ಆರ್ಟಿಕಲ್– 217 ಮೂಲಕ ಹೈಕೋರ್ಟ್ ನ್ಯಾಯಾಧೀಶರ ಪದಚ್ಯುತಿ ಮಾಡಬಹುದಾಗಿದ್ದು, ಅದಕ್ಕೆ ಸಾಬೀತಾದ ದುರ್ವ್ಯವಹಾರ (Proved Misbehaviour) ಮತ್ತು ಅಸಮರ್ಥತೆ (Incapacity) ಪ್ರಖರ ಕಾರಣ ಕಂಡುಬರಬೇಕು. ಸಂಸತ್ತಿನ ಸದಸ್ಯರ ಸಹಿ ಸಹಿತ ಪ್ರಸ್ತಾವ, ತನಿಖಾ ಸಮಿತಿ (Judges Inquiry Committee)ಯ ನಂತರ ಎರಡೂ ಸದನಗಳಲ್ಲಿ ವಿಶೇಷ ಬಹುಮತ ಪಡೆದರೆ ಪದಚ್ಯುತಿ ಯಶಸ್ವಿಯಾಗುತ್ತದೆ. ಸರಕಾರಿ ಹಣದ ದುರುಪಯೋಗ, ಐಷಾರಾಮಿ ಜೀವನಶೈಲಿ, ಕಾನೂನು ಬಾಹಿರ ಖರ್ಚು ಎಂದು ಆರೋಪ ಬಂದು, ಸಾಬೀತಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿ. ರಾಮಸ್ವಾಮಿ ಪ್ರಕರಣ (199193)ವು ಕಾಂಗ್ರೆಸ್ ಆಡಳಿತದ ಕಾಲದಲ್ಲಿ ನಡೆದ ಮೊದಲ ಮಹಾಭಿಯೋಗ ಪ್ರಕರಣವಾಯಿತು.

1993ರಲ್ಲಿ ಲೋಕಸಭೆಯಲ್ಲಿ ಮಹಾಭಿಯೋಗ ಮತದಾನ ನಡೆಯಿತು. ಇದರಲ್ಲಿ, ಕಾಂಗ್ರೆಸ್ ಪಕ್ಷವು ಮತದಾನದಿಂದ ದೂರ (Abstention) ಉಳಿಯಿತು. ಇದರಿಂದ, ಅಗತ್ಯವಿದ್ದ ಬಹುಮತ ದೊರೆಯದೆ ನ್ಯಾಯಮೂರ್ತಿ ರಾಮಸ್ವಾಮಿ ಪದಚ್ಯುತರಾಗಲಿಲ್ಲ. ಇದು ಭಾರತೀಯ ಇತಿಹಾಸದಲ್ಲಿ ಆರೋಪ ಸಾಬೀತಾದರೂ, ರಾಜಕೀಯ ಕಾರಣಗಳಿಂದ ಪದಚ್ಯುತಿ ವಿಫಲವಾದ ಮೊದಲ ಪ್ರಕರಣವಾಯಿತು.

ತುರ್ತುಪರಿಸ್ಥಿತಿ ಮತ್ತು ನ್ಯಾಯಾಧೀಶರ ಮೇಲೆ ಒತ್ತಡ (197577) ಹೇರುವ ಮೂಲಕ ನೇರ ಮಹಾಭಿಯೋಗ ಇಲ್ಲದಿದ್ದರೂ, ಇಂದಿರಾಗಾಂಧಿ ಸರಕಾರವು ನ್ಯಾಯಾಧೀಶರ ವರ್ಗಾವಣೆ ಹಾಗೂ ಅನನುಕೂಲವಾಗಿದ್ದ ನ್ಯಾಯಾಧೀಶರನ್ನು ಬದಲಿಸುತ್ತಿತ್ತು. ನ್ಯಾಯಮೂರ್ತಿ ಎಚ್. ಆರ್.ಖನ್ನಾ, ADM ಜಬಲ್ಪುರ ಪ್ರಕರಣದಲ್ಲಿ ಮುಖ್ಯನ್ಯಾಯಮೂರ್ತಿ ಸ್ಥಾನಕ್ಕೆ ನಿರಾಕರಣೆ ಮಾಡಲಾಯಿತು. ಇದು ಮಹಾಭಿಯೋಗವಲ್ಲದಿದ್ದರೂ, ನ್ಯಾಯಾಂಗವನ್ನು ಶಿಕ್ಷಿಸುವ ರಾಜಕೀಯ ತಂತ್ರ ಎಂದು ಇತಿಹಾಸದಲ್ಲಿ ದಾಖಲಾಗಿದೆ. ನ್ಯಾಯಮೂರ್ತಿ ಸೌಮಿತ್ರ ಸೇನ್ ಪ್ರಕರಣ (2011), ನ್ಯಾಯಮೂರ್ತಿ ಪಿ.ಡಿ. ದಿನಕರನ್ ಪ್ರಕರಣ (2010), ಅಂದಿನ ಆಡಳಿತ ವ್ಯವಸ್ಥೆಯಲ್ಲಿ ಸರಿಯಾದ ಉಪಕ್ರಮಗಳು ನಡೆಯದೆ ಸಮಾಪ್ತಿಗೊಂಡಿವೆ. ಆದರೆ, ಬಹುತೇಕ ಪ್ರಕರಣಗಳ ಆರೋಪಗಳು ಕೇಳಿಬಂದದ್ದು, ಹಗರಣ ಅಥವಾ ಹಣ, ಅಧಿಕಾರ ದುರ್ಬಳಕೆಯಂತಹ ವಿಚಾರಗಳು.

ಕಾಂಗ್ರೆಸ್ ನೇತೃತ್ವದ ಇಂದಿನ 'ಇಂಡಿಕೂಟ' ಮಾತ್ರ, ಇಡೀ ಸಂವಿಧಾನ–ನ್ಯಾಯಾಂಗ ಕ್ರಮದಲ್ಲಿ ವಿವೇಕವಲ್ಲದ ಮಾರ್ಗದ ಮೂಲಕ, ಸಕಾರಣವಲ್ಲದ ವಿಚಾರಕ್ಕೆ ಮಹಾಭಿಯೋಗದ ಪ್ರಸ್ತಾವವನ್ನು ಕೈಗೆತ್ತಿಕೊಂಡಿದ್ದು, ನ್ಯಾಯಾಂಗಕ್ಕೆ ಮಸಿ ಬಳಿಯಲು ಯತ್ನಿಸಿದ ಪ್ರಯತ್ನವೆಂದೇ ಹೇಳಬೇಕು. ಈ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್, ಮಧುರೈ ಶಾಖೆ ಏಕಸದಸ್ಯ ಪೀಠದ ನ್ಯಾಯಾಧೀಶರಾದ ಜಸ್ಟಿಸ್ ಜಿ.ಆರ್. ಸ್ವಾಮಿನಾಥನ್ ಅವರು, 2025ರಲ್ಲಿ ಕಾರ್ತಿಕ ದೀಪ ಬೆಳಗುವ ಪ್ರಕರಣದಲ್ಲಿ, ನ್ಯಾಯಾಧೀಶರು ಸ್ಥಳಕ್ಕೆ ತಾನು ನೇರ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ, ತಿರುಪರಂಕುಂದ್ರಂ ಬೆಟ್ಟದ ದೀಪಥೂನ್ ಎಂಬ ಶಿಲಾಮೂರ್ತಿ ಬಳಿ ಕಾರ್ತಿಕ ದೀಪವನ್ನು ಹಬ್ಬದ ಸಂದರ್ಭದಲ್ಲಿ ಬೆಳಗಿಸಬಹುದು ಎಂದು ಆದೇಶ ನೀಡಿದರು. ಈ ವಿಚಾರದಲ್ಲಿ, ನ್ಯಾಯಾಧೀಶರ ವಿರುದ್ಧವೇ ಪ್ರಮುಖ ರಾಜಕೀಯ ಮತ್ತು ನ್ಯಾಯಾಂಗ ವಿರೋಧ ವಿವಾದಕ್ಕೆ ಕಾರಣವಾಗಿದೆ.

ಈ ದೀಪ ಪ್ರಜ್ವಲನೆಯನ್ನು ಒಂದು ಧಾರ್ಮಿಕ ಚಿಹ್ನೆ ಎಂಬುದಕ್ಕಿಂತ ಇದು ತಮಿಳ್ ಪರಂಪರೆ, ಸಾಂಸ್ಕೃತಿಕ ಆಚರಣೆ ಎಂದು ನೋಡಬಹುದಾಗಿದ್ದು, ಆದೇಶವು ಐತಿಹಾಸಿಕ ಹಕ್ಕನ್ನು ಪುನರ್ ಸ್ಥಾಪಿಸುವುದು ಎಂದು ಹೇಳಿದ್ದಾರೆ. ಆರ್ಟಿಕಲ್ 25 ಮತ್ತು ಆರ್ಟಿಕಲ್ 26 (ಧಾರ್ಮಿಕ ಸ್ವಾತಂತ್ರ್ಯ ಮತ್ತು ಧಾರ್ಮಿಕ ವಿಷಯಗಳಲ್ಲಿ ಸ್ವಂತ ವ್ಯವಸ್ಥೆ) ಸಂವಿಧಾನದ ಸಾರಕ್ಕನುಗುಣವಾಗಿದೆ ಎಂದು ತೀರ್ಪಿನಲ್ಲಿ ಹೇಳಲಾಗಿದೆ. ತೀರ್ಪಿನ ಬಳಿಕ, ರಾಜ್ಯ ಪೊಲೀಸರಿಂದ ಹಠಾತ್ ತಡೆ, ಸರಕಾರದ ವಕೀಲರಿಂದ ಹಸ್ತಕ್ಷೇಪ ಹಾಗೂ ರಾಜ್ಯದ ಲೇಟರ್ಸ್ ಪೇಟೆಂಟ್ ಅಪೀಲ್ ತೀರ್ಪನ್ನು ಹಿಂಪಡೆಯುವ ಕ್ರಮ ಸೇರಿದಂತೆ ಎಲ್ಲಾ ಮೇಲ್ಮನವಿಯನ್ನು ನ್ಯಾಯಾಲಯದಿಂದ ನಿರಾಕರಿಸಲಾಯಿತು.

ಇಂಡಿಕೂಟದ ಸುಮಾರು 120 ಸಂಸದರು ಲೋಕಸಭಾ ಸ್ಪೀಕರ್‌ಗೆ ಜಸ್ಟಿಸ್ ಜಿ.ಆರ್. ಸ್ವಾಮಿನಾಥನ್ ವಿರುದ್ಧ ಮಹಾಭಿಯೋಗ ನೋಟಿಸ್ ಸಲ್ಲಿಸಿದರು. ಡಿಎಂಕೆ, ಕಾಂಗ್ರೆಸ್ ಕೂಟದ ಪಕ್ಷಗಳ ಸಂಸದರು ಇದಕ್ಕೆ ಸಹಿ ಹಾಕಿದ್ದಾರೆ. ಇಲ್ಲಿಯವರೆಗೆ, ಭ್ರಷ್ಟಾಚಾರ ಇತರೆ ಕಾರಣದಿಂದ ಮಹಾಭಿಯೋಗಕ್ಕೆ ಕಾರಣವಾಗುತ್ತಿದ್ದ ವಿಚಾರವನ್ನು ಸಾಂವಿಧಾನಿಕವಾಗಿ ತೀರ್ಪು ನೀಡಿದ ಕಾರಣ ಇಟ್ಟುಕೊಂಡು ಮಹಾಭಿಯೋಗಕ್ಕೆ ಮುಂದಾಗುವ ಮೂಲಕ, ಹೊಸದೊಂದು ಅನೈತಿಕ ಉಪಕ್ರಮವನ್ನು ಕಾಂಗ್ರೆಸ್ ಹಾಗೂ ಇಂಡಿಕೂಟ ಆರಂಭಿಸಿತೆನ್ನಬಹುದು.

ಬಹುತೇಕ ಸಂವಿಧಾನ ತಜ್ಞರು, ತಪ್ಪಾದ ತೀರ್ಪು ದುರ್ವ್ಯವಹಾರ (Misconduct) ಆಗುವುದಿಲ್ಲ. ತೀರ್ಪು ನಿಮ್ಮ ವಿರುದ್ಧವಾಗಿದ್ದರೆ, ಮೇಲ್ಮನವಿ (Appeal) ಸಲ್ಲಿಸಬೇಕು. ರಾಜಕೀಯ ಕಾರಣಗಳನ್ನಿಟ್ಟುಕೊಂಡು ಮಹಾಭಿಯೋಗದ ಬೆದರಿಕೆ ನೀಡಬಾರದು ಎಂದು ಅಭಿಪ್ರಾಯಪಟ್ಟರು. Judicial error is not a ground for impeachment. ಎಂಬುದು ಸುಪ್ರೀಂಕೋರ್ಟ್‌ನ ಸ್ಥಿರ ನಿಲುವಾಗಿದೆ.

ಪ್ರಸ್ತುತ, ಸರ್ವೋಚ್ಚ ನ್ಯಾಯಾಲಯದ ಅಂಗಳದಲ್ಲಿ ಕಾರ್ತಿಕ ದೀಪದ ಕುರಿತು ಚರ್ಚೆಯಲ್ಲಿದೆ. ಇತ್ತ ಕರ್ನಾಟಕದಲ್ಲಿ ಕಾನೂನು ಆಗಿ ಜಾರಿಯಾಗದಿದ್ದರೂ, ಅದರ ಅಡಿಯಲ್ಲಿ ನಡೆಯದ ಘಟನೆಗಳನ್ನು ಊಹಿಸಿಕೊಂಡು ಮುಂಚಿತ ನೋಟೀಸುಗಳನ್ನು ನೀಡಲಾಗುತ್ತಿದೆ. ಸಂಸತ್ತಿನಲ್ಲಿ ಬೆದರಿಕೆ ಹಾಕುವ, ನ್ಯಾಯಾಂಗವನ್ನು ಹೆದರಿಸುವ, ನ್ಯಾಯಾಂಗ ವ್ಯವಸ್ಥೆಯನ್ನು ರಾಜಕೀಯ ನಿಲುವಿಗೆ ಹಿಡಿದಿಟ್ಟುಕೊಳ್ಳುವ ಮಾನಸಿಕತೆಯನ್ನು ಕಾಂಗ್ರೆಸ್ ಬದಲಾಯಿಸಿಕೊಳ್ಳದಿದ್ದಲ್ಲಿ ಸಂವಿಧಾನ ನಿರಂತರ ಅಪಾಯಕ್ಕೊಳಗಾದೀತು ಎಂಬುದನ್ನು ಮನಗಾಣಬೇಕಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:15

ಸಮಾಚಾರ ಸಣ್ಣದಲ್ಲ

ಅಜಿತ್ ಸಾವಿನ ತನಿಖೆಗೆ ಸುಪ್ರೀಂ ಮೇಲ್ವಿಚಾರಣೆ

ಕೋಲ್ಕತ್ತ: ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ವಿಮಾನ ಅಪಘಾತದಲ್ಲಿ ಮಡಿದ ಪ್ರಕರಣದ ತನಿಖೆಯನ್ನು ಕೇಂದ್ರ ಸರಕಾರ

ಅಧೀನದ ಯಾವುದೇ ಸಂಸ್ಥೆಯಿಂದ ನಡೆಸಬಾರದು. ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿಯೇ ತನಿಖೆ ನಡೆಸಬೇಕು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಒತ್ತಾಯಿಸಿದ್ದಾರೆ. ಏಕೆಂದರೆ ಕೇಂದ್ರ ಅಧೀನದ ಸಂಸ್ಥೆಗಳ ತನಿಖೆ ಬಗ್ಗೆ ನಮಗೆ ನಂಬಿಕೆ ಇಲ್ಲಾ ಎಂದೂ ಅವರು ಹೇಳಿದ್ದಾರೆ. ಸಿಂಗೂರ್‌ಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಸಿಎಂ ಮಮತಾ, 'ನಾವು ಸುಪ್ರೀಂ ಕೋರ್ಟ್ ಮಾತ್ರ ನಂಬುತ್ತೇವೆ. ಇತರೆಲ್ಲಾ ತನಿಖಾ ಸಂಸ್ಥೆಗಳು ಕೇಂದ್ರ ಸರಕಾರದ ಜತೆ ಪೂರ್ಣ ರಾಜಿ ಮಾಡಿಕೊಂಡಿವೆ' ಎಂದರು.

ಕಿರಿಯರಿಗೆ ಸಾಮಾಜಿಕ ಮಾಧ್ಯಮ ನಿಷೇಧ

ಪ್ಯಾರಿಸ್: 15 ವರ್ಷ ವಯೋಮಿತಿವರೆಗಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮಗಳ ಬಳಕೆಯನ್ನು ನಿಷೇಧಿಸುವ ನೂತನ ವಿಧೇಯಕ ಸಂಬಂಧ ಫ್ರಾನ್ಸ್ ಸಂಸತ್ತು ಮಂಗಳವಾರ ತಡರಾತ್ರಿವರೆಗೂ ಚರ್ಚೆ ನಡೆಸಿದ್ದು, ಬುಧವಾರ ವಿಧೇಯಕಕ್ಕೆ ಅಂಗೀಕಾರ ನೀಡಿದೆ. ವಿಧೇಯಕದ ಪರವಾಗಿ 130 ಸಂಸದರು ಮತ ಚಲಾಯಿಸಿದ್ದರೆ, ವಿಧೇಯಕವನ್ನು ವಿರೋಧಿಸಿ 21 ಮಂದಿ ಮತ ಹಾಕಿದ್ದರು. '15 ವರ್ಷದವರೆಗಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ-ಜಾಲತಾಣ ಬಳಕೆ ನಿಷೇಧ' ವಿಧೇಯಕವು ಬಹುಮತದೊಂದಿಗೆ ಸಂಸತ್ತಿನ ಅಂಗೀಕಾರ ಪಡೆದಿದ್ದು, ಸದ್ಯದಲ್ಲೇ ಜಾರಿಗೆ ಬರಲಿದೆ. ಇದರೊಂದಿಗೆ ಹಲವು ದೇಶಗಳು ಕಿರಿಯ ಪ್ರಾಯದವರನ್ನು ಸೋಷಿಯಲ್ ಮೀಡಿಯ ಹಿಡಿತದಿಂದ ದೂರವಿಡುವುದಕ್ಕೆ ಮೊದಲಿಟ್ಟಿವೆ. ಮೊದಲಿಗೆ ಆಸ್ಟ್ರೇಲಿಯ ಸರಕಾರ ಈ ಕ್ರಮ ಕೈಗೊಂಡಿತ್ತು. ಈಗ ಫ್ರಾನ್ಸ್ ಸರದಿಯಾಗಿದೆ.

ಮುಖ-ಕೈ ತೋರಿಸಿ, ತ್ವರಿತ ಹಣ ಪಾವತಿಸಿ

ಅಬುದಾಬಿ: ಬದಲಾವಣೆಗೆ ಸದಾ ಮೊದಲಿಗನಾಗಿ ತೆರೆದುಕೊಳ್ಳುವ ಯುನೈಟೆಡ್ ಅರಬ್ ಎಮಿರೇಟ್ (ಯುಎಇ) ಈಗ ಹೊಸದೊಂದು ಸಾಹಸಕ್ಕೆ

ಕೈಯಿಟ್ಟಿದೆ. ಫೇಸ್ ಅಥವಾ ಪಾಮ್ ಸ್ಕ್ಯಾನ್ ಮೂಲಕವೇ ಹಣ ಪಾವತಿ ಸೇವೆಗೆ ಚಾಲನೆ ನೀಡಿದೆ. ಎಟಿಎಂ/ಕ್ರೆಡಿಟ್ ಕಾರ್ಡ್ ಗೋಜಿಲ್ಲದೇ, ಸ್ಮಾರ್ಟ್‌ಫೋನ್‌ನ ಅಗತ್ಯವಿಲ್ಲದೇ, ಪಾಸ್‌ವರ್ಡ್ ಕೇಳದೇ, ಕೇವಲ ಗ್ರಾಹಕರ ಮುಖಚಹರೆ ಸ್ಕ್ಯಾನ್ ಮಾಡುವ ಅಥವಾ ಅವರ ಅಂಗೈ ಸ್ಕ್ಯಾನ್ ಮಾಡುವ ಮೂಲಕವೇ ಅವರ ಬ್ಯಾಂಕ್ ಖಾತೆಯಿಂದ ನೇರವಾಗಿ ವ್ಯಾಪಾರಿ ಕೇಂದ್ರಗಳಿಗೆ ಹಣ ಪಾವತಿ ಆಗುವಂತೆ ಮಾಡುವ ತಂತ್ರಜ್ಞಾನವನ್ನು ಯುಎಇ ಜಾರಿಗೆ ತಂದಿದೆ. ಆ ಮೂಲಕ ಇಂಥದೊಂದು ಹಣ ಪಾವತಿ ವ್ಯವಸ್ಥೆಯನ್ನು ಜಾರಿಗೆ ತಂದ ಮಧ್ಯಪ್ರಾಚ್ಯದ ಮೊದಲ ದೇಶ ಎನಿಸಿಕೊಂಡಿದೆ. 'ಸೆಂಟ್ರಲ್ ಬ್ಯಾಂಕ್ ಆಫ್ ಯುಎಇ'(ಸಿಬಿಯುಎಇ) ಈ ಸೇವೆಗೆ ಸದ್ಯ ಪ್ರಾಯೋಗಿಕವಾಗಿ ಚಾಲನೆ ನೀಡಿದೆ.

ಪತಿ ಆದಾಯ ವಿವರ: ಐಟಿಗೆ ಸಿಐಸಿ ಆದೇಶ

ದೆಹಲಿ: ವೈವಾಹಿಕ ಜೀವನಕ್ಕೆ ಸಂಬಂಧಿಸಿದ ವಿವಾದಗಳಲ್ಲಿ ಪತಿಯ ದುಡಿಮೆಯ ಒಟ್ಟು ವರಮಾನದ ವಿವರಗಳನ್ನು ಪರಿತ್ಯಕ್ತ ಪತ್ನಿಗೆ ಬಹಿರಂಗಪಡಿಸುವಂತೆ ಆದಾಯ ತೆರಿಗೆ ಇಲಾಖೆಗೆ, ಕೇಂದ್ರ ಮಾಹಿತಿ ಆಯೋಗ(ಸಿಐಸಿ) ನಿರ್ದೇಶನ ನೀಡಿದೆ. ವೈಯಕ್ತಿಕ ಗೌಪ್ಯತೆ ಆಧಾರದ ಮೇಲೆ ಪತಿಯ ಸಂಪಾದನೆಯ ಮಾಹಿತಿಯನ್ನು ವಿಚ್ಛೇದಿತ ಪತ್ನಿಗೆ ನೀಡುವುದನ್ನು ನಿರಾಕರಿಸುವಂತಿಲ್ಲ ಎಂದೂ ಸಿಐಸಿ ಹೇಳಿದೆ. ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದ ಜೀವನಾಂಶ ಕೋರಿದ ಅರ್ಜಿ ಪ್ರಕ್ರಿಯೆಗೆ ಪೂರಕವಾಗಿ ಮಾಹಿತಿ ಸಲ್ಲಿಸುವುದಕ್ಕಾಗಿ ಪರಿತ್ಯಕ್ತ ಪತಿಯ ಕಳೆದ ಐದು ವರ್ಷಗಳ ಆದಾಯದ ವಿವರಗಳನ್ನು ನೀಡುವಂತೆ ವಿಚ್ಛೇದಿತ ಪತ್ನಿ ಆದಾಯ ತೆರಿಗೆ ಇಲಾಖೆಯನ್ನು ಕೋರಿದ್ದರು. ಆದರೆ, ಆದಾ ಯ ತೆರಿಗೆ ಇಲಾಖೆಯು ವೈಯಕ್ತಿಯ ಗೌಪ್ಯತೆ ವಿಚಾರವನ್ನು ಮುಂದಿಟ್ಟು ಮಾಹಿತಿ ಹಂಚಿಕೊಳ್ಳುವು ದಕ್ಕೆ ನಿರಾಕರಿಸಿತ್ತು. ಬಳಿಕ ಪತ್ನಿಯು 'ಸಿಐಸಿ' ಮೊರೆ ಹೋಗಿದ್ದರು. ಅಲ್ಲದೇ, ಪರಿತ್ಯಕ್ತ ಪತಿಯು ಜೀವನಾಂಶ ನೀಡಬೇಕಾದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ತಮ್ಮ ನಿಜವಾದ ಮಾಸಿಕ ವರಮಾನದ ಮಾಹಿತಿಗಳನ್ನು ಮರೆಮಾಚಿದ್ದಾರೆ ಎಂದು ಪತ್ನಿ ಆರೋಪಿಸಿದ್ದರು. ಪತ್ನಿಯ ಅರ್ಜಿಯನ್ನು ಪರಿಗಣಿಸಿದ ಕೇಂದ್ರ ಮಾಹಿತಿ ಆಯುಕ್ತ ವಿನೋದ್ ಕುಮಾರ್ ತಿವಾರಿ, ಪತಿಯ ಆದಾಯದ ವಿವರ ಗಳನ್ನು ವಿಚ್ಛೇದಿತ ಪತ್ನಿ ಜತೆ ಹಂಚಿಕೊಳ್ಳುವಂತೆ ಆದೇಶ ಹೊರಡಿಸಿದರು.

{ ಧರ್ಮೇಂದ್ರ ಪ್ರಧಾನ್ } ಕೇಂದ್ರ ಶಿಕ್ಷಣ ಸಚಿವ

ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ಹೋಗಲಾಡಿಸಲೆಂದೇ 'ವಿಶ್ವವಿದ್ಯಾಲಯ ಧನಸಹಾಯ ಆಯೋಗ' ಹೊಸ ನಿಯಮಗಳನ್ನು ತಂದಿದೆ. ಯಾರಿಗೂ ತಾರತಮ್ಯವಾಗಲು ಹೊಸ ನಿಯಮಗಳು ಬಿಡುವುದಿಲ್ಲ. ಯಾವ ಕಾರಣಕ್ಕೂ ಕಾನೂನು ದುರುಪಯೋಗ ಆಗಲ್ಲ. ಕ್ಯಾಂಪಸ್‌ನಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ವಿದ್ಯಾರ್ಥಿಗಳಿಗೆ ರಕ್ಷಣೆ ಸಿಗಲಿದೆ.

ಪವಾರ್ ಕುಟುಂಬ ಪ್ರಭಾವದ 'ಬಾರಾಮತಿ' | 'ಎನ್‌ಸಿಪಿ' ಎರಡೂ ಬಣ ಒಂದಾಗುವುದೇ? | ಪತ್ನಿ ಸುನೇತ್ರಾ ಪವಾರ್ ರಾಜ್ಯಸಭಾ ಸದಸ್ಯೆ

ಅಜಿತ್ ಪವಾರ್ ಉತ್ತರಾಧಿಕಾರಿ ಯಾರು?

ಮುಂಬೈ: ದಶಕಗಳ ಕಾಲದಿಂದಲೂ ಶರದ್ ಪವಾರ್ ಕುಟುಂಬದ ಹಿಡಿತದಲ್ಲೇ ಇರುವ ಬಾರಾಮತಿ ರಾಜಕೀಯ ಕ್ಷೇತ್ರದ ಜವಾಬ್ದಾರಿಯನ್ನು ಈಗ ಅಜಿತ್ ಪವಾರ್ ನಿಧನಾ ನಂತರ ಯಾರು ವಹಿಸಿಕೊಳ್ಳುತ್ತಾರೆ? ಬಾರಾಮತಿ ಮತ್ತು ಮರಾಠವಾಡ ರಾಜಕೀಯದಲ್ಲಿ ಅಜಿತ್ ಪವಾರ್ ಉತ್ತರಾಧಿಕಾರಿ ಯಾರು ಎಂಬ ಪ್ರಶ್ನೆ ಎದುರಾಗಿದೆ.

ಅಜಿತ್ ಕುಟುಂಬದಲ್ಲಿ ಪತ್ನಿ-ರಾಜ್ಯಸಭಾ ಸದಸ್ಯೆ ಸುನೇತ್ರಾ ಪವಾರ್ ಮತ್ತು ಇಬ್ಬರು ಪುತ್ರರಾದ ಪಾರ್ಥ್ ಪವಾರ್ ಮತ್ತು ಜಯ್ ಪವಾರ್ ಇದ್ದಾರೆ. ಕುಟುಂಬದ ನಿರ್ಧಾರದ ಕುರಿತೂ ಕುತೂಹಲ ಹೆಚ್ಚಿದೆ. ಕ್ಷೇತ್ರದಲ್ಲಿ ಜನರಿಂದ ಪ್ರೀತಿಯಿಂದ 'ದಾದಾ' ಎಂದೇ ಕರೆಸಿಕೊಳ್ಳುತ್ತಿದ್ದ ಅಜಿತ್ ಪವಾರ್ ಈಗ ಹಠಾತ್ ಎಂಬಂತೆ ನಿರ್ಗಮಿಸಿದ್ದಾರೆ. ಕಳೆದ ಎರಡು ದಶಕಗಳಿಂದ ಮಹಾರಾಷ್ಟ್ರ ರಾಜಕೀಯದಲ್ಲಿ ಪ್ರಮುಖ ವ್ಯಕ್ತಿ-ಶಕ್ತಿಯಾಗಿದ್ದ ಅಜಿತ್ ಪವಾರ್, ಅವರ ನಿಧನ ಆಡಳಿತಾರೂಢ ಮಹಾಯುತಿ ಮೈತ್ರಿಕೂಟಕ್ಕೆ ದೊಡ್ಡ ಹೊಡೆತ ನೀಡಿದೆ. ಮಾತ್ರವಲ್ಲದೆ ಮರಾಠಾ ಪ್ರಭಾವದ ರಾಜ್ಯ ರಾಜಕೀಯದಲ್ಲಿನ ಬದಲಾವಣೆಗಳ ಕುರಿತು ಪ್ರಶ್ನೆಗಳನ್ನೂ ಹುಟ್ಟು ಹಾಕಿದೆ. ಅಜಿತ್ ಪವಾರ್ ಕಠಿಣ ಹಾಗೂ ಅಚ್ಚರಿಯ ನಿರ್ಧಾರ ತೆಗೆದುಕೊಳ್ಳುವ ನಾಯಕ ಎಂದೇ ರಾಜ್ಯ ರಾಜಕೀಯದಲ್ಲಿ ಹೆಸರಾಗಿದ್ದರು. ಅವರು ತಳಮಟ್ಟದ ಕಾರ್ಮಿಕರ ಜತೆ ಸಂಪರ್ಕ ಸಾಧಿಸಿದ್ದರು. ಸುನೇತ್ರಾ ಪವಾರ್ ದಕ್ಷ ಆಡಳಿತಾಧಿಕಾರಿ ಮತ್ತು ಸಾಮಾಜಿಕ ಕಾರ್ಯಕರ್ತೆ ಎಂದು ಗುರುತಿಸಿಕೊಂಡಿದ್ದಾರೆ. ಪವಾರ್ ಕುಟುಂಬದ ರಾಜಕೀಯ ಭದ್ರಕೋಟೆ ಎನಿಸಿಕೊಂಡಿರುವ ಬಾರಾಮತಿಯನ್ನು ನಿಭಾಯಿಸಬಲ್ಲರೇ ಎಂಬ ಕುತೂಹಲವಿದೆ.

ಪಾರ್ಥ್ ಪವಾರ್ 2019ರಲ್ಲಿ ಮಾವಲ್ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುವ ಮೂಲಕ ರಾಜಕೀಯ ಪ್ರವೇಶಿಸಿದರು. ಆದರೆ, ಚುನಾವಣೆಯಲ್ಲಿ ಸೋಲನುಭವಿಸಿದರು. ಈಗ ತಂದೆಯ ಪರಂಪರೆ ಮುಂದುವರಿಸುವ ಜವಾಬ್ದಾರಿ ಪಡೆದುಕೊಳ್ಳಬಹುದು.

ಜಯ್ ಪವಾರ್ ಪ್ರಸ್ತುತ ಕುಟುಂಬ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದು, ರಾಜಕೀಯದಿಂದ ದೂರವಿದ್ದಾರೆ. ಆದರೆ ಈಗ ತಂದೆಯ ಹಠಾತ್ ನಿರ್ಗಮನ ಸಂದರ್ಭದಲ್ಲಿ ಜಯ್ ಪವಾರ್ ರಾಜಕೀಯ ಪ್ರವೇಶ ಸಾಧ್ಯತೆ ತಳ್ಳಿ ಹಾಕುವಂತಿಲ್ಲ.

ಪತ್ನಿ ಸುನೇತ್ರಾ ಪವಾರ್ ಜತೆ ಅಜಿತ್ ಪವಾರ್

ಪುತ್ರರಾದ ಜಯ್ ಪವಾರ್, ಪಾರ್ಥ್ ಪವಾರ್

ಶರದ್ ಪವಾರ್ ಮುಂದಿನ ಹೆಜ್ಜೆ

ಬಿಜೆಪಿ-ಶಿವಸೇನೆ ಜತೆಗೂಡಿ 'ಮಹಾಯುತಿ ಸರಕಾರ' ರಚಿಸಲು ಅಜಿತ್ ಪವಾರ್ 'ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ'(ಎನ್‌ಸಿಪಿ)ವನ್ನೇ 2023ರ ಜುಲೈನಲ್ಲಿ ಒಡೆದರು. ಪಕ್ಷದ ಹೆಸರು ಮತ್ತು ಚಿಹ್ನೆ ಗಡಿಯಾರವನ್ನು ತಮ್ಮ ವಶವಾಗಿಸಿಕೊಳ್ಳಲು ಚಿಕ್ಕಪ್ಪನ ವಿರುದ್ಧವೇ ಕೋರ್ಟ್ ಮೆಟ್ಟಿಲೇರಿದರು. ಈಗ ಅಜಿತ್ ಅವರ ನಿಧನವು ಪವಾರ್ ಕುಟುಂಬವನ್ನು ಮತ್ತೊಮ್ಮೆ ಹತ್ತಿರಕ್ಕೆ ತಂದಿದೆ. ಎನ್‌ಸಿಪಿ ಎರಡು ಬಣಗಳು (ಅಜಿತ್ ಬಣ ಮತ್ತು ಶರದ್ ಪವಾರ್ ಬಣ) ಮತ್ತೆ ಒಂದಾಗುತ್ತವೆಯೇ? ಎಂಬ ಬಗ್ಗೆ ರಾಜಕೀಯ ವಲಯಗಳಲ್ಲಿ ಚರ್ಚೆ ನಡೆದಿವೆ. ಇತ್ತೀಚೆಗೆ ಎರಡೂ ಬಣಗಳ ನಾಯಕರಾದ ಶರದ್ ಪವಾರ್ ಪುತ್ರಿ, ಸಂಸದೆ ಸುಪ್ರಿಯಾ ಸುಳೆ ಮತ್ತು ಡಿಸಿಎಂ ಅಜಿತ್ ಪವಾರ್ ಬಿಎಂಸಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂದರ್ಭ ಜತೆಗೂಡಿದ್ದರು. ಒಂದೇ ವೇದಿಕೆಯಲ್ಲಿ ಜಂಟಿ ಪ್ರಣಾಳಿಕೆ ಪ್ರಕಟಿಸಿದ್ದರು. ಈಗ ಶರದ್ ಪವಾರ್ ನಡೆ ಏನಾಗಿರಲಿದೆ ಎಂಬ ಪ್ರಶ್ನೆ ಎದುರಾಗಿದೆ.

ಪವಾರ್ ಕುಟುಂಬದ ವಶದಲ್ಲಿ 'ಬಾರಾಮತಿ'

ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯಲ್ಲಿ ಬಾರಾಮತಿ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರವಿದೆ. ದಶಕಗಳ ಕಾಲದಿಂದಲೂ ಈ ಕ್ಷೇತ್ರದಲ್ಲಿ ಶರದ್ ಪವಾರ್

ಕುಟುಂಬದ ರಾಜಕೀಯ ಹಿಡಿತ ಬಲು ಬಿಗಿಯಾಗಿದೆ. ಪವಾರ್ ಕುಟುಂಬದ ಸದಸ್ಯರಲ್ಲದೇ ಮತ್ತೊಬ್ಬರು ಈ ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರಗಳಲ್ಲಿ ಗೆಲುವು ಕಾಣುವುದಕ್ಕೆ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ಇದೆ.

ಲೋಕಸಭೆ: ಪ್ರಸ್ತುತ ಬಾರಾಮತಿ ಲೋಕಸಭಾ ಕ್ಷೇತ್ರದ ಪ್ರತಿನಿಧಿಯಾಗಿ ಎನ್‌ಸಿಪಿ(ಶರದ್ ಬಣ) ಪಕ್ಷದ ನಾಯಕಿ, ಶರದ್ ಪವಾರ್ ಪುತ್ರಿ ಸುಪ್ರಿಯಾ ಸುಳೆ 2024ರ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. 2009ರಿಂದಲೂ ಈ ಲೋಕಸಭಾ ಕ್ಷೇತ್ರವನ್ನು ಸುಪ್ರಿಯಾ ಸುಳೆ ಅವರೇ ನಿರಂತರವಾಗಿ(4 ಚುನಾವಣೆ) ಪ್ರತಿನಿಧಿಸುತ್ತಾ ಬಂದಿದ್ದಾರೆ. ಅಚ್ಚರಿ ಎಂದರೆ ಇಲ್ಲಿ 2024ರಲ್ಲಿ ಸುಪ್ರಿಯಾ ಅವರಿಗೆ ಎದುರಾಳಿಯಾಗಿ ಸ್ಪರ್ಧೆ ಮಾಡಿದ್ದು ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್. ಇವರು ಸಂಬಂಧದಲ್ಲಿ ಸುಪ್ರಿಯಾ ಅವರಿಗೆ ಅತ್ತಿಗೆ. ಬಳಿಕ ಸುನೇತ್ರಾ ರಾಜ್ಯಸಭೆ ಸದಸ್ಯೆ ಆದರು ಎಂಬುದು ಗಮನಾರ್ಹ.

ವಿಧಾನಸಭೆ: ಬಾರಾಮತಿ ವಿಧಾನಸಭಾ ಕ್ಷೇತ್ರವನ್ನು 1991ರಿಂದ ಆರಂಭಗೊಂಡು 2024ರ ಚುನಾವಣೆಗಳವರೆಗೂ ಸತತವಾಗಿ (ಒಟ್ಟು 8 ಬಾರಿ) ಅಜಿತ್ ಪವಾರ್ ಅವರೇ ಗೆಲ್ಲುತ್ತಾ ಬಂದಿದ್ದಾರೆ.

ಬುಧವಾರ ಬೆಳಗ್ಗೆ ವಿಮಾನ ಅಪಘಾತದಲ್ಲಿ ಅಜಿತ್ ಪವಾರ್ ನಿಧನರಾಗಿದ್ದರಿಂದ ಬಾರಾಮತಿ ವಿಧಾನಸಭಾ ಕ್ಷೇತ್ರ ತೆರವಾಗಿದೆ. ಮುಂದಿನ 6 ತಿಂಗಳೊಳಗೆ ಚುನಾವಣೆ ನಡೆಯಬೇಕಿದ್ದು, ಪವಾರ್ ಕುಟುಂಬದಿಂದ ಯಾರು ಸ್ಪರ್ಧೆ ಮಾಡಲಿದ್ದಾರೆ ಎಂಬುದು ಇನ್ನಷ್ಟೇ ತಿಳಿದುಬರಬೇಕಿದೆ.

ರನ್‌ವೇ 100 ಮೀ. ಇದ್ದಾಗಲೇ ವಿಮಾನ ಪತನ

ಮುಂಬೈ: ವಿಮಾನ ರನ್ ವೇಯನ್ನು ಸಮೀಪಿಸುತ್ತಿದ್ದಾಗಲೇ ರನ್ ವೇ ಇನ್ನೇನು 100 ಮೀಟರ್ ದೂರವಿದ್ದಾಗಲೇ ವಿಮಾನ ಪತನಗೊಂಡು ಸ್ಫೋಟಿಸಿತು ಎಂದು ಪ್ರತ್ಯಕ್ಷದರ್ಶಿ ಹೇಳಿದ್ದಾರೆ.

ಪ್ರತ್ಯಕ್ಷದರ್ಶಿ

ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಪ್ರಯಾಣಿಸುತ್ತಿದ್ದ ಚಾರ್ಟರ್ಡ್ ವಿಮಾನ ಪತನಗೊಂಡಾಗ ಸ್ಥಳದ ಸಮೀಪದಲ್ಲೇ ಇದ್ದ ಪ್ರತ್ಯಕ್ಷದರ್ಶಿಯೊಬ್ಬರು, ವಿಮಾನ ನೆಲಕ್ಕೆ ಬಿದ್ದ ಕೂಡಲೇ ದೊಡ್ಡದಾಗಿ ಸ್ಫೋಟವಾಯಿತು. ನಂತರ 4-5 ಬಾರಿ ಮತ್ತೆ ಮತ್ತೆ ಸ್ಫೋಟಗಳು ಸಂಭವಿಸಿದವು ಎಂದು ಹೇಳಿದ್ದಾರೆ.

ವಿಮಾನ ಕೆಳಕ್ಕೆ ಬಿದ್ದು ಸ್ಫೋಟಗೊಂಡಿದ್ದನ್ನು ನೋಡಿದ ನಾವು ಕೂಡಲೇ ಸ್ಥಳಕ್ಕೆ ಧಾವಿಸಿ, ಅದರಲ್ಲಿದ್ದ ಪ್ರಯಾಣಿಕರನ್ನು ಹೊರತೆಗೆಯಲು ಪ್ರಯತ್ನಿಸಿದೆವು. ಆದರೆ ಬೆಂಕಿಯ ಜ್ವಾಲೆ ದೊಡ್ಡದಾಗಿದ್ದರಿಂದ ನಮಗೆ ಏನೂ ಮಾಡಲು ಸಾಧ್ಯವಾಗಲಿಲ್ಲ ಎಂದರು.

ಬುಧವಾರ ಬೆಳಗ್ಗೆ 8.10ಕ್ಕೆ ಮುಂಬೈನಿಂದ ಹೊರಟು ಬಾರಾಮತಿಯತ್ತ ಪ್ರಯಾಣಿಸಿದ ಖಾಸಗಿ ವಿಮಾನ ಬೆಳಗ್ಗೆ 8.45ರ ವೇಳೆ ಬಾರಾಮತಿಯಲ್ಲಿ ಲ್ಯಾಂಡ್ ಆಗುವುದಕ್ಕೆ ಕೆಲ ಕ್ಷಣಗಳಷ್ಟೇ ಮುನ್ನ ಅವಘಡಕ್ಕೀಡಾಯಿತು. ವಿಮಾನ ಬಹುತೇಕ ಸುಟ್ಟು ಹೋಗಿದೆ. ಅಪಘಾತದ ಭೀಕರತೆಗೆ ಸಾಕ್ಷಿಯಾಗಿದೆ. ಕೇವಲ ವಿಮಾನದ ಒಂದು ಭಾಗ ಮತ್ತು ರೆಕ್ಕೆಗಳ ಕೆಲವು ತುಣಕುಗಳಷ್ಟೇ ಬೆಂಕಿಯಲ್ಲಿ ಸುಟ್ಟು ಹೋಗದೇ ಉಳಿದುಕೊಂಡಿವೆ.

ಫೆಬ್ರವರಿಯಲ್ಲಿ ನಡೆಯಲಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮುನ್ನ ಪ್ರಚಾರ ಕಾರ್ಯಕ್ಕೆಂದು ತೆರಳಿದ್ದ ಡಿಸಿಎಂ ಅಜಿತ್ ಪವಾರ್ ಬಾರಾಮತಿಯಲ್ಲಿ 4 ಪ್ರಮುಖ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಬೇಕಿತ್ತು.

ಅಜಿತ್ ವಿಮಾನದ ಪೈಲಟ್ ಕ್ಯಾಪ್ಟನ್ ಶಾಂಭವಿ ಪಾಠಕ್

ಮುಂಬೈ: ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಜತೆಗೆ ಖಾಸಗಿ ಚಾರ್ಟರ್ಡ್ ವಿಮಾನ ಲಿಯರ್‌ಜೆಟ್ 45ರಲ್ಲಿ ಪ್ರಯಾಣಿಸುತ್ತಿದ್ದವರಲ್ಲಿ ಇಬ್ಬರು

ಪೈಲಟ್‌ಗಳು, ಪಿಎಸ್‌ಒ ಮತ್ತು ಸಿಬ್ಬಂದಿ ಸೇರಿ ಒಟ್ಟು ಐವರು ಮೃತಪಟ್ಟಿದ್ದಾರೆ. ವಿಮಾನದ ಪೈಲಟ್ ಇನ್ ಕಮಾಂಡ್ ಕ್ಯಾಪ್ಟನ್ ಆಗಿದ್ದವರು ಶಾಂಭವಿ ಪಾಠಕ್. ಮತ್ತೊಬ್ಬರು ಪೈಲಟ್ ಇನ್ ಕಮಾಂಡ್ ಕ್ಯಾಪ್ಟನ್ ಸುಮಿತ್ ಕಪೂರ್. ವಿಮಾನ ಪರಿಚಾರಕಿ ಪಿಂಕಿ ಮಾಲಿ ಹಾಗೂ ಅಜಿತ್ ಅವರ ವೈಯಕ್ತಿಕ ಭದ್ರತಾ ಅಧಿಕಾರಿ ವಿಧಿತ್ ಜಾಧವ್ ಕೂಡಾ ದುರಂತ'ದಲ್ಲಿ ಬಲಿಯಾಗಿದ್ದಾರೆ. ವಾಯುಪಡೆಯ ಬಾಲಭಾ ರತಿ ಶಾಲೆಯಲ್ಲಿ ಅಧ್ಯಯನ ಮಾಡಿದ ಶಾಂಭವಿ ಪಾಠಕ್, ನಂತರ ಮುಂಬೈ ವಿಶ್ವವಿದ್ಯಾಲಯದಿಂದ ಬಿಎಸ್‌ಸಿ, ಏರೋನಾಟಿಕ್ಸ್/ಏವಿಯೇಷನ್/ಏರೋಸ್ಪೇಸ್ ಸೈನ್ಸ್ ಮತ್ತು ಟೆಕ್ನಾಲಜಿ ವಿಷಯಗಳಲ್ಲಿ ಪದವಿ ಪಡೆದರು. ನಂತರ ನ್ಯೂಜಿಲೆಂಡ್ ಇಂಟರ್‌ನ್ಯಾಷನಲ್ ಕಮರ್ಷಿಯಲ್ ಪೈಲಟ್ ಅಕಾಡೆಮಿಯಲ್ಲಿ ತರಬೇತಿ ಪಡೆದುಕೊಂಡರು. ಬಳಿಕ 'ವಿಎಸ್‌ಆರ್ ವೆಂಚರ್ಸ್ ಪ್ರೈ.ಲಿ.' ಕಂಪನಿಯಲ್ಲಿ ಪೈಲಟ್ ಆಗಿ ಸೇವೆ ಸಲ್ಲಿಸಲಾರಂಭಿಸಿದ್ದರು.

ಅಜಿತ್ ಪವಾರ್ ನಿಧನಕ್ಕೆ ಕೈ ನಾಯಕರ ಸಂತಾಪ

ದೆಹಲಿ: ವಿಮಾನ ಅಪಘಾತದಲ್ಲಿ ಮೃತಪಟ್ಟ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಜನರತ್ತ ತಮ್ಮ ಜವಾಬ್ದಾರಿ ಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ, ಚಾಣಾಕ್ಷತನದ ಅನುಭವಿ ರಾಜಕಾರಣಿ ಎಂದು ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಜಿ ಮತ್ತು ಸಹ ಪ್ರಯಾಣಿಕರು ವಿಮಾನ ಅಪಘಾ ತದಲ್ಲಿ ನಿಧನರಾದ ಸುದ್ದಿ ಅತ್ಯಂತ ಹೃದಯ ವಿದ್ರಾವಕ. ಈ ದುಃಖದ ಕ್ಷಣದಲ್ಲಿ ಮಹಾರಾ ಷ್ಟ್ರದ ಜನರೊಂದಿಗಿ ರುವೆ. ಪವಾರ್ ಕುಟುಂಬ ಮತ್ತು ಅವರ ಪ್ರೀತಿಪಾತ್ರರಿಗೆ ನನ್ನ ಸಂತಾಪಗಳು ಎಂದು ಲೋಕಸಭೆ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ 'ಎಕ್ಸ್' ಸಂದೇ ಶದಲ್ಲಿ ಬರೆದಿದ್ದಾರೆ. ಮಹಾರಾಷ್ಟ್ರದಲ್ಲಿ ನಡೆದ ಭೀಕರ ವಿಮಾನ ಅಪಘಾತದಲ್ಲಿ ಮಡಿದ ಅಜಿತ್ ಪವಾರ್ ಮತ್ತು ಇತರೆ ಐವರ ಆತ್ಮಗಳಿ ಗೆ ಶಾಂತಿ ಸಿಗಲಿ. ಶರದ್ ಪವಾರ್ ಜಿ, ಸುಪ್ರಿಯಾ ಸುಳೆ ಮತ್ತು ಕುಟುಂ ಬಕ್ಕೆ, ಬೆಂಬಲಿ ಗರಿಗೆ ಸಂತಾಪಗಳು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಸಂದೇಶ ರವಾನಿಸಿದ್ದಾರೆ.

ವಿಮಾನ ಅಪಘಾತಕ್ಕೆ ಬಲಿಯಾದ ಭಾರತದ ರಾಜಕಾರಣಿಗಳು

ಮುಂಬೈ: ಭಾರತದಲ್ಲಿ ವಿಮಾನ ಅಪಘಾತಗಳ ಸರಣಿಯೇ ನಡೆದಿದ್ದು, ಹಲವಾರು ರಾಜಕೀಯ ನಾಯಕರು ಬಲಿಯಾಗಿದ್ದಾರೆ. ಸದ್ಯ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಚಾರ್ಟರ್ಡ್ ವಿಮಾನ ಅವಘಡದಲ್ಲಿ ಅಸು ನೀಗಿದ್ದಾರೆ. ಇದಕ್ಕೂ ಮುನ್ನ, ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಪುತ್ರ ಸಂಜಯ್ ಗಾಂಧಿ, ಗುಜರಾತ್ ಮುಖ್ಯಮಂತ್ರಿಯಾಗಿದ್ದ ವಿಜಯ್ ರೂಪಾನಿ, ಆಂಧ್ರಪ್ರದೇಶ ಸಿಎಂ ಆಗಿದ್ದ ವೈ.ಎಸ್.ರಾಜಶೇಖರ ರೆಡ್ಡಿ ಸೇರಿದಂತೆ ಹಲವು ಪ್ರಮುಖ ರಾಜಕೀಯ ನಾಯಕರು ವಿಮಾನ ಅಪಘಾತಗಳಿಗೆ ಬಲಿಯಾಗಿದ್ದಾರೆ.

ವಿಜಯ್ ರೂಪಾನಿ

ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ 2025ರ ಜೂ.12ರಂದು ಅಹಮದಾ ಬಾದ್‌ನಲ್ಲಿ ವಿಮಾನ ಅಪಘಾತದಲ್ಲಿ ನಿಧನರಾ ದರು. ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟು ಲಂಡನ್‌ನತ್ತ ತೆರಳುತ್ತಿದ್ದ ವಿಮಾನ ಕೆಲವೇ ಕ್ಷಣಗಳಲ್ಲಿ ಪತನಗೊಂಡಿತ್ತು. ರೂಪಾನಿ ಸೇರಿದಂತೆ ವಿಮಾನದಲ್ಲಿದ್ದ 242 ಜನರಲ್ಲಿ 241 ಜನರು ಸಾವನ್ನಪ್ಪಿದರು. ಒಬ್ಬ ಪ್ರಯಾಣಿಕ ಪವಾಡ ಸದೃಶ ರೀತಿ ಪಾರಾದರು.

ದೋರ್ಜಿ ಖಂಡು



ಅರುಣಾಚಲ ಪ್ರದೇಶ ಸಿಎಂ ಆಗಿದ್ದ ದೋರ್ಜಿ ಖಂಡು ಮತ್ತು ಇತರ ನಾಲ್ವರನ್ನು ತವಾಂಗ್‌ನಿಂದ ಇಟಾನಗರಕ್ಕೆ ಕರೆ ದೊಯ್ಯುತ್ತಿದ್ದ ಹೆಲಿಕಾಪ್ಟರ್ ರಾಜ್ಯದ ಪಶ್ಚಿಮ ಕಾಮೆಂಗ್ ಜಿಲ್ಲೆಯಲ್ಲಿ 2011ರ ಏ.30ರಂದು ಅಪಘಾತಕ್ಕೀಡಾಗಿ, ಐವರೂ ಸಾವನ್ನಪ್ಪಿದ್ದರು.

ವೈ.ಎಸ್.ರಾಜಶೇಖರ ರೆಡ್ಡಿ

ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ವೈ.ಎಸ್.ರಾಜಶೇಖರ ರೆಡ್ಡಿ 2009ರ ಸೆ.2ರಂದು ಪ್ರಯಾಣಿಸುತ್ತಿದ್ದ ಬಿಎಚ್‌ಇಎಲ್ ನಿರ್ಮಿತ 430 ಹೆಲಿಕಾಪ್ಟರ್ ಪ್ರತಿಕೂಲ ಹವಾಮಾನದ ಕಾರಣ ದಟ್ಟವಾದ ನಲ್ಲಮಲ ಕಾಡಿನಲ್ಲಿ ಅಪಘಾತಕ್ಕೀಡಾಯಿತು. ವೈಎಸ್ ಆರ್ ಸೇರಿದಂತೆ ಕಾಪ್ಟರ್‌ನಲ್ಲಿದ್ದ ಎಲ್ಲರೂ ನಿಧನರಾದರು.

ಜಿಂದಾಲ್-ಸುರೇಂದರ್ ಸಿಂಗ್



ಕೈಗಾರಿಕೋದ್ಯಮಿ ಮತ್ತು ಹರಿ ಯಾಣ ಸಚಿವ ಓಂ ಪ್ರಕಾಶ್ ಜಿಂದಾ ಲ್ ಮತ್ತು ಕೃಷಿ ಸಚಿವ ಸುರೇಂದರ್ ಸಿಂಗ್ ಜತೆಯಾಗಿ ದೆಹಲಿಯಿಂದ ಚಂಡೀಗಢಕ್ಕೆ ತೆರಳುತ್ತಿದ್ದಾಗ ಅವರಿದ್ದ ಹೆಲಿಕಾ ಪ್ಟರ್ ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ 2005ರಲ್ಲಿ ಅಪಘಾತಕ್ಕೀಡಾಯಿತು. ಹೆಲಿಕಾಪ್ಟರ್‌ನಲ್ಲಿದ್ದ ಎಲ್ಲರೂ ಬಲಿಯಾದರು.

ಸೌಂದರ್ಯ

ದಕ್ಷಿಣ ಭಾರತದ ಖ್ಯಾತ ಚಿತ್ರನಟಿ, ಕನ್ನಡತಿ ಸೌಂದರ್ಯ ಎಂದೇ ಜನಪ್ರಿಯರಾಗಿದ್ದ ಕೆ.ಎಸ್.ಸೌಮ್ಯ 2004ರ ಏ.17ರಂದು ಚುನಾವಣಾ ಪ್ರಚಾರಕ್ಕಾಗಿ ಸೋದರನೊಂದಿಗೆ ಬೆಂಗಳೂರಿನಿಂದ ಕರೀಂನಗರಕ್ಕೆ ಚಾರ್ಟರ್ಡ್ ವಿಮಾನದಲ್ಲಿ ತೆರಳುತ್ತಿದ್ದಾಗ ವಿಮಾನ ಪತನವಾಗಿ ಸಾವನ್ನಪ್ಪಿದರು.

ಸಂಜಯ್ ಗಾಂಧಿ

ಪ್ರಧಾನಿ ಇಂದಿರಾ ಗಾಂಧಿ ಅವರ ಪುತ್ರ, ಕಾಂಗ್ರೆಸ್ ನಾಯಕ ಸಂಜಯ್ ಗಾಂಧಿ, 1980ರ ಜೂ.23ರಂದು ಸಫ್ದರ್‌ಜಂಗ್ ವಿಮಾನ ನಿಲ್ದಾಣದ ಬಳಿ ದೆಹಲಿ ಫ್ಲೈಯಿಂಗ್ ಕ್ಲಬ್ ವಿಮಾನದಲ್ಲಿ ವೈಮಾನಿಕ ಸಾಹಸಕ್ಕೆ ಯತ್ನಿಸಿದಾಗ ನಿಯಂತ್ರಣ ಕಳೆದುಕೊಂಡ ವಿಮಾನ ಪತನಗೊಂಡಿದ್ದು, ಸಂಜಯ್ ಗಾಂಧಿ ಬಲಿಯಾದರು.

ಸಿಪ್ರಿಯನ್ ಸಂಗ್ಮಾ

ಮೇಘಾಲಯದ ಗ್ರಾಮೀಣಾಭಿ ವೃದ್ಧಿ ಸಚಿವ ಸಿಪ್ರಿಯನ್ ಸಂಗ್ಮಾ ಮತ್ತು ಇತರ 9 ಮಂದಿ ಪವನ್ ಹನ್ಸ್ ಹೆಲಿಕಾಪ್ಟರ್‌ನಲ್ಲಿ ಗುವಾಹಟಿ ಯಿಂದ ಶಿಲ್ಲಾಂಗ್‌ಗೆ ಹೋಗುತ್ತಿ ದ್ದಾಗ 2004ರ ಸೆ.22ರಂದು ಬಾರಾ ಪಾನಿ ಸರೋವರ ಬಳಿ ಅಪಘಾತಕ್ಕೀಡಾಗಿ ಸಾವನ್ನಪ್ಪಿದ್ದರು.

ಜಿಎಂಸಿ ಬಾಲಯೋಗಿ

ಲೋಕಸಭೆ ಸ್ಪೀಕರ್ ಆಗಿದ್ದ ತೆಲುಗು ದೇಶಂ ಪಕ್ಷದ ನಾಯಕ ಜಿಎಂಸಿ ಬಾಲಯೋಗಿ 2002ರ ಮಾ.3ರಂದು ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಭೀಮಾವ ರಂನಿಂದ ಪ್ರಯಾಣಿಸುತ್ತಿದ್ದ ಖಾಸಗಿ ಹೆಲಿಕಾಪ್ಟರ್ ಕೃಷ್ಣಂ ಜಿಲ್ಲೆಯ ಕೈಕಲೂರು ಬಳಿಯ ಕೊಳಕ್ಕೆ ಅಪ್ಪಳಿಸಿತು. ಆ ಅಪಘಾತದಲ್ಲಿ ಬಾಲಯೋಗಿ ಸಹಿತ ಕಾಪ್ಟರ್‌ನಲ್ಲಿದ್ದವರೆಲ್ಲರೂ ನಿಧನರಾದರು.

ಮಾಧವರಾವ್ ಸಿಂಧಿಯಾ

ಮಾಜಿ ನಾಗರಿಕ ವಿಮಾನಯಾನ ಸಚಿವ, ಹಿರಿಯ ಕಾಂಗ್ರೆಸ್ ನಾಯಕ ಮಾಧವರಾವ್ ಸಿಂಧಿಯಾ 2001ರ ಸೆ.30ರಂದು ಕಾನ್ಪುರದಲ್ಲಿ ರಾಜಕೀಯ ರ‍್ಯಾಲಿಗೆ ತೆರಳುತ್ತಿದ್ದಾಗ 10 ಆಸನಗಳ ಖಾಸಗಿ ವಿಮಾನ ಉತ್ತರ ಪ್ರದೇಶದ ಮಣಿಪುರಿ ಬಳಿ ಪ್ರತಿಕೂಲ ಹವಾಮಾನದಿಂದಾಗಿ ಅಪಘಾತಕ್ಕೀಡಾಯಿತು. ಸಿಂಧಿಯಾ ಅವಘಡದಲ್ಲಿ ಸಾವಿಗೀಡಾದರು.

2023: ಲಿಯರ್‌ಜೆಟ್ ಅಪಘಾತ

ಮುಂಬೈ: ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಅವರನ್ನು ಬುಧವಾರ ಬೆಳಗ್ಗೆ ಬಲಿತೆಗೆದುಕೊಂಡ ಲಿಯರ್‌ಜೆಟ್-45 ವಿಮಾನ 2023ರಲ್ಲಿಯೂ ಒಮ್ಮೆ ಅಪಘಾತಕ್ಕೀಡಾಗಿತ್ತು ಎಂಬ ಆಘಾತಕಾರಿ ಅಂಶ ತಿಳಿದುಬಂದಿದೆ.

ಇದೇ ಲಿಯರ್ಜೆಟ್ 45ಎಸ್‌ಆರ್ ಖಾಸಗಿ ವಿಮಾನ 2023ರ ಸೆಪ್ಟೆಂಬರ್ 14ರಂದು ಕೂಡ ಅಪಘಾತಕ್ಕೀಡಾಗಿತ್ತು. ಮುಂಬೈ ವಿಮಾನ ನಿಲ್ದಾಣದಲ್ಲಿ ಇಳಿಯುವಾಗಲೇ ಅಪಘಾತಕ್ಕೀಡಾಗಿತ್ತು. ವಿಶಾಖಪಟ್ಟಣದಿಂದ ಮುಂಬೈಗೆ ಹಾರಿಬಂದಿದ್ದ ಲಿಯರ್‌ಜೆಟ್ ವಿಮಾನಕ್ಕೆ ಲ್ಯಾಂಡಿಂಗ್ ಪರಿಸ್ಥಿತಿ ಜಟಿಲವಾಗಿತ್ತು. ಭಾರೀ ಮಳೆ ಮತ್ತು ಕಡಿಮೆ ಗೋಚರತೆ ಕಾರಣ ಹಾಗೂ ಗಾಳಿಯ ದಿಕ್ಕು ಹಠಾತ್ ಬದಲಾಗಿದ್ದರಿಂದ ರನ್‌ವೇಯಿಂದ ಪಕ್ಕಕ್ಕೆ ಜಾರಿ ಹೋಗಿತ್ತು. ಪರಿಣಾಮ ವಿಮಾನದಲ್ಲಿದ್ದ ಐವರು ಪ್ರಯಾಣಿಕರು, ಮೂವರು ಚಾಲಕ ಸಿಬ್ಬಂದಿ ಸೇರಿ 8 ಮಂದಿ ಗಾಯಗೊಂಡಿದ್ದರು. ಸುದೈವವಶಾತ್ ಯಾವುದೇ ಸಾವು ಉಂಟಾಗಿ ರಲಿಲ್ಲ. ಈಗ ಡಿಸಿಎಂ ಅಜಿತ್ ಪವಾರ್ ಮತ್ತು ನಾಲ್ವರನ್ನು ಬಲಿತೆಗೆದುಕೊಂಡ ಲಿಯರ್‌ಜೆಟ್ ವಿಮಾನದ ತಾಂತ್ರಿಕ ಸುರಕ್ಷತೆ, ನಿರ್ವಹಣೆ ಹಾಗೂ ಹಿಂದಿನ ಅಪಘಾತದ ನಂತರ ಮರು ಸೇವೆಗೆ ತಂದ ಕ್ರಮಗಳ ಬಗ್ಗೆ ಪ್ರಶ್ನೆಗಳು ಒಡ ಮೂಡಿದ್ದು, ನಾಗರಿಕ ವಿಮಾನಯಾನ ನಿರ್ದೇಶನಾಲಯ ತನಿಖೆ ಆರಂಭಿಸಿದೆ.

ಲಿಯರ್‌ಜೆಟ್-45ಎಕ್ಸ್ ಆರ್ ವಿಮಾನ

ಮುಂಬೈ: ಮಹಾರಾಷ್ಟ್ರದ 'ಮಹಾಯುತಿ' ಸರಕಾರದ ಉಪ ಮುಖ್ಯಮಂತ್ರಿ, ಎನ್‌ಸಿಪಿ(ಅಜಿತ್ ಬಣ) ನಾಯಕ ಅಜಿತ್ ಪವಾರ್ ಅವರನ್ನು ಬಲಿ ತೆಗೆದುಕೊಂಡ 'ಲೀಜರ್‌ಜೆಟ್-45ಎಕ್ಸ್‌ಆರ್' ವಿಮಾನವು 'ವಿಎಸ್‌ಆರ್ ವೆಂಚರ್ಸ್ ಪ್ರೈ.ಲಿ.' ಕಂಪನಿಯ ಒಡೆತನಕ್ಕೆ ಸೇರಿದ್ದಾಗಿದೆ. ಈ ಸಂಸ್ಥೆಯು ಭಾರತದ ಪ್ರಮುಖ ನಾನ್ ಷೆಡ್ಯೂಲ್ಡ್ ಏರ್‌ಕ್ರಾಫ್ಟ್ ಆಪರೇಟರ್ ಸಂಸ್ಥೆಗಳಲ್ಲೊಂದಾಗಿದೆ. ಲೀಜರ್‌ಜೆಟ್-45 ವಿಮಾನ ಪೈಲಟ್ ಹೊರತು 8 ಪ್ರಯಾಣಿಕರ ಸಾಮರ್ಥ್ಯದ, ಮಧ್ಯಮ ಗಾತ್ರದ ವಾಣಿಜ್ಯ ಬಳಕೆ ವಿಮಾನವಾಗಿದೆ. ಬಾಂಬಾರ್ಡಿಯರ್ ಏರೋಸ್ಪೇಸ್ ಕಂಪನಿಯಿಂದ 1998-2009ರ ಅವಧಿಯಲ್ಲಿ ತಯಾರಾಗಿದೆ. ಹನಿವೆಲ್ ಟಿಎಫ್‌ಇ731 ಮಾದರಿಯ 2 ಎಂಜಿನ್ ಮತ್ತು 47 ಅಡಿಗಳಷ್ಟು ಉದ್ದ ರೆಕ್ಕೆಗಳನ್ನು ಹೊಂದಿದ್ದು, ಗರಿಷ್ಠ 2235 ನಾಟಿಕಲ್ ಮೈಲ್ಸ್‌ವರೆಗೆ ಹಾಗೂ ಗರಿಷ್ಠ 51 ಸಾವಿರ ಅಡಿಗಳಷ್ಟು ಎತ್ತರದಲ್ಲಿ ಹಾರಾಟ ನಡೆಸಬಲ್ಲ ಸಾಮರ್ಥ್ಯದ್ದಾಗಿದೆ. ಗರಿಷ್ಠ 9752 ಕಿಲೊ ಭಾರ ಹೊತ್ತು ಸಾಗಬಲ್ಲದಾಗಿದೆ.

ಅಜಿತ್ ಪವಾರ್ ನಿಧನ

← ಮೊದಲಪುಟದಿಂದ

18 ತಿಂಗಳ ಹಿಂದೊಮ್ಮೆ ಅಜಿತ್, ಫಡ್ನವೀಸ್ ಪಾರು: 2024, ಜುಲೈನಲ್ಲಿ ಅಂದರೆ 18 ತಿಂಗಳ ಹಿಂದೊಮ್ಮೆ ಅಜಿತ್ ಪವಾರ್ ವಿಮಾನ ಅಪಘಾತದಿಂದ ಪಾರಾಗಿದ್ದರು. ಅಂದು ಅವರು ಆಗ ಡಿಸಿಎಂ ಆಗಿದ್ದ ದೇವೇಂದ್ರ ಫಡ್ನವೀಸ್ ಜೊತೆಗೆ ಮಹಾರಾಷ್ಟ್ರದ ನಾಗಪುರದಿಂದ ಗಡಚಿರೋಲಿಗೆ ಹಾರಿದ್ದರು. ವಿಮಾನ ಮೇಲೇರಿದ ಸ್ವಲ್ಪ ಹೊತ್ತಿನಲ್ಲೇ ದಟ್ಟ ಮೋಡ ಅಡ್ಡ ಬಂದು, ಮುಂದಿನ ದೃಶ್ಯಗಳೇ ಕಾಣಿಸದಂತಾಯಿತು. ಆ ಹೊತ್ತಿನಲ್ಲಿ ಅಂದೂ ಡಿಸಿಎಂ ಆಗಿದ್ದ ಅಜಿತ್ ಸ್ವತಃ ಫಡ್ನವೀಸ್ ಧೈರ್ಯ ಹೇಳಿ ಸಮಾಧಾನಿಸಿದ್ದರು. ಪೈಲಟ್ ಜಾಣ್ಮೆಯಿಂದ ವಿಮಾನವನ್ನು ಮೋಡಗಳಿಂದ ಹೊರ ತಂದಿದ್ದರು.

ವಿಮಾನ ಹಾರಾಟ ಯೋಗ್ಯ

ಅಜಿತ್ ಪವಾರ್ ಇದ್ದ ವಿಮಾನ ಹಾರಾಟಕ್ಕೆ ಯೋಗ್ಯವಾಗಿತ್ತು. ಅದರಲ್ಲಿದ್ದ ಇಬ್ಬರು ಪೈಲಟ್‌ಗಳು ವೈದ್ಯಕೀಯವಾಗಿ ಸರಿಯಾಗಿಯೇ ಇದ್ದರು. ಅವರದ್ದೇನು ಸಮಸ್ಯೆಯಿರಲಿಲ್ಲ ಎಂದು ಆರಂಭಿಕ ತನಿಖಾ ವರದಿಗಳಲ್ಲಿ ತಿಳಿಸಲಾಗಿದೆ. ದುರಂತದ ಯಾವುದೇ ಸುಳಿವನ್ನೂ ಪೈಲಟ್‌ಗಳು ನೀಡಿರಲಿಲ್ಲ ಎಂದು ತಿಳಿದುಬಂದಿದೆ.

ಬಾರಾಮತಿ ಪೂರ್ಣ ನಿಲ್ದಾಣವಲ್ಲ

ಪುಣೆಯ ಹೊರವಲಯದಲ್ಲಿರುವ ಬಾರಾಮತಿ ವಿಮಾನ ನಿಲ್ದಾಣ ಪೂರ್ಣಪ್ರಮಾಣದ ವಿಮಾನನಿಲ್ದಾಣವಲ್ಲ. ಸದ್ಯಕ್ಕೆ ಅದು ಪೈಲಟ್‌ಗಳ ತರಬೇತಿ ಸೇರಿದಂತೆ ಇತರೆ ಚಟುವಟಿಕೆಗಳಿಗೆ ಮಾತ್ರ ಬಳಕೆಯಾಗುತ್ತಿದೆ. ಇಲ್ಲಿ ಸೂಚನೆ ನೀಡುವವರು ವಿಮಾನ ಹಾರಾಟ ತರಬೇತಿ ನೀಡುವ ಸಂಸ್ಥೆಗಳ ಪೈಲಟ್‌ಗಳು.

ಮುಡಾ: ಸಿದ್ದು ನಿರ್ದೋಷಿ

← ಮೊದಲಪುಟದಿಂದ

ಆದರೆ ಮುಡಾ ಹಗರಣ ಅವರನ್ನು ಸುತ್ತಿಕೊಂಡಿದ್ದು, ರಾಜ್ಯ ರಾಜಕೀಯದಲ್ಲಿ ಭಾರೀ ಸದ್ದು ಮಾಡಿತ್ತು. ಇದೀಗ ಈ ಪ್ರಕರಣದಲ್ಲಿ ಕೋರ್ಟ್ ನೀಡಿದ ಆದೇಶದಿಂದಾಗಿ ಸಿಎಂ ಸಿದ್ದರಾಮಯ್ಯ ಸಮಾಧಾನಗೊಂಡಿದ್ದಾರೆ.

ಸುಪ್ರೀಂನಲ್ಲೂ ಸಿಎಂಗೆ ಗೆಲುವು: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ದಾಖಲಿಸಿಕೊಂಡಿದ್ದ ಪ್ರಕರಣವನ್ನು ಈಗಾಗಲೇ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ರದ್ದುಗೊಳಿಸಿವೆ. ಸಿಎಂ ಪತ್ನಿ ಪಾರ್ವತಿ ಹಾಗೂ ನಗರಾಭಿವೃದ್ಧಿ ಖಾತೆ ಸಚಿವ ಭೈರತಿ ಸುರೇಶ್ ಅವರಿಗೆ ಇಡಿ ನೀಡಿದ್ದ ಸಮನ್ಸ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ. ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶ ಮಾಡಲ್ಲ ಎಂದು ಸುಪ್ರೀಂಕೋರ್ಟ್ ಕೂಡ ಹೇಳಿದೆ. ಹೈಕೋರ್ಟ್ ಆದೇಶದ ವಿರುದ್ಧ ಇಡಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಆದರೆ ಆ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ಹೀಗಾಗಿ ಮುಡಾ ಪ್ರಕರಣದಲ್ಲಿ ಸಿಎಂ, ಪತ್ನಿ ಪಾರ್ವತಿ ಹಾಗೂ ನಗರಾಭಿವೃದ್ಧಿ ಖಾತೆ ಸಚಿವ ಭೈರತಿ ಸುರೇಶ್ ವಿರುದ್ಧ ಇಡಿ ಪ್ರಕರಣ ರದ್ದುಗೊಂಡಿದೆ.

ಜಮ್ಮು-ಕಾಶ್ಮೀರದ ಗಂಧೇರ್‌ಬಲ್ ಜಿಲ್ಲೆಯ ಸೋನಾಮಾರ್ಗ್‌ನಲ್ಲಿ ಪ್ರವಾಸಿಗರು ತಂಗಿದ್ದ ರೆಸಾರ್ಟ್ ಮೇಲೆಯೇ ಮಂಗಳವಾರ ಮಧ್ಯರಾತ್ರಿ ಮತ್ತು ಬುಧವಾರ ನಸುಕಿನಲ್ಲಿ ಭಾರೀ ಹಿಮಪಾತವಾಗಿದ್ದು, ಕಟ್ಟಡಗಳೆಲ್ಲವೂ ಮಂಜಿನ ರಾಶಿಯಡಿ ಮುಚ್ಚಿಹೋಗಿವೆ. ಸುದೈವವಶಾತ್ ಯಾವುದೇ ಜೀವಹಾನಿಯಾಗಿಲ್ಲ. ಸ್ಥಳೀಯ ಜಿಲ್ಲಾಡಳಿತವು ಕಟ್ಟಡಗಳ ಮೇಲೆಲ್ಲಾ ಆವರಿಸಿದ್ದ ಹಿಮವನ್ನು ನಿವಾರಿಸಿದ್ದು, ಪ್ರವಾಸಿಗರನ್ನು ರಕ್ಷಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಫೆ.1ಕ್ಕೆ ದಾಸ ನಿರಂತರ ಸಂಗೀತೋತ್ಸವ


ಪಂ.ವಾಗೀಶ್ ಭಟ್

ಬೆಂಗಳೂರು: ಸತತ 12 ಗಂಟೆಗಳ ಕಾಲ ನಿರಂತರ ದಾಸ ಸಂಗೀತೋತ್ಸವ ಮತ್ತು ಪಂಡಿತ್ ಆರ್.ವಿ. ಶೇಷಾದ್ರಿ, ಗವಾಯಿ ಪ್ರಶಸ್ತಿ ಸಮಾರಂಭ ಕಾರ್ಯಕ್ರಮ ಫೆ.1 ರಂದು ಜಯನಗರದ ಜೆಎಸ್‌ಎಸ್ ಆವರಣದ ರಾಜೇಂದ್ರ ಚಿಂತನ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಸತೀಶ್ ಹಂಪಿಹೊಳೆ ಮ್ಯೂಜಿಕ್ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ಪಂ.ಸತೀಶ್ ಹಂಪಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ವೇಳೆ ಹಿಂದೂಸ್ತಾನಿ ಗಾಯಕ ಪಂ. ವಾಗೀಶ್ ಭಟ್ ಅವರಿಗೆ ಪಂಡಿತ್ ಆರ್.ವಿ.ಶೇಷಾದ್ರಿ, ಗವಾಯಿ ಪುರಸ್ಕಾರ ಪ್ರದಾನ ಮಾಡಲಾಗುವುದು. ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗಡೆ, ನಟ ಶ್ರೀನಿವಾಸ ಪ್ರಭು, ಕವಯಿತ್ರಿ ರಂಜನಿ ಪ್ರಭು, ಕಥಕ್ ನೃತ್ಯಗಾರ್ತಿ ಪೂರ್ಣಾ ಆಚಾರ್ಯ, ಉದ್ಯಮಿ ಶೈಲೇಂದ್ರ ಶರ್ಮಾ, ಹಿಂದೂಸ್ತಾನಿ ಗಾಯಕ ಅಶ್ವಿನ್ ಬಾಳಿಗ, ಪಂ.ಅನಂತ್ ಭಾಗವತ್, ಅನನ್ಯ ಭಾರ್ಗವ್, ಶಿವಕುಮಾರ್ ಮಹಾಂತ್, ಅಮೃತೇಶ್ ಕುಲಕರ್ಣಿ, ವಿದ್ವಾನ್ ನಾಗೇಂದ್ರ, ರಾಣಾಪೂರ್, ಉಮಾ ಕುಲಕರ್ಣಿ, ಶ್ರೀನಿವಾಸ್ ಭಾಗವತ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಗೆ ತಿಳಿಸಿದೆ.

ಪಿಸ್ತೂಲ್ ತೋರಿಸಿ ಆಭರಣದಂಗಡಿ ಲೂಟಿ

ಬೆಂಗಳೂರು: ಚಿನ್ನಾಭರಣ ಖರೀದಿ ನೆಪದಲ್ಲಿ ಬಂದು, ಪಿಸ್ತೂಲ್ ತೋರಿಸಿ 30 ಗ್ರಾಂ ಚಿನ್ನಾಭರಣ ಹಾಗೂ 50 ಸಾವಿರ ನಗದು ದೋಚಿ ಪರಾರಿಯಾಗಿರುವ ಘಟನೆ ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಪುರದ ರಾಮದೇವ್ ಜ್ಯುವೆಲ್ಲರಿ ಶಾಪ್‌ನಲ್ಲಿ ನಡೆದಿದೆ. ಮಂಗಳವಾರ ಸಂಜೆ 5:30ರ ಸುಮಾರಿಗೆ ಎರಡು ಬೈಕ್‌ನಲ್ಲಿ ಮೂವರು ಆರೋಪಿಗಳು ಬಂದಿದ್ದಾರೆ. ಇಬ್ಬರು ಜ್ಯುವೆಲ್ಲರಿ ಶಾಪ್‌ನೊಳಗೆ ಪ್ರವೇಶಿಸಿದ್ದಾರೆ. ಇನ್ನೋರ್ವ ಹೊರಗಿದ್ದ. ಶಾಪ್‌ಗೆ ಬಂದವರು ಕಿವಿ ಓಲೆ ತೋರಿಸಿ, ಇಂಥದ್ದೇ ಡಿಸೈನ್ ಬೇಕು ಎಂದೆಲ್ಲಾ ಹೇಳಿದ್ದಾರೆ. ಜ್ಯುವೆಲ್ಲರಿ ಶಾಪ್ ಮಾಲೀಕರ ಮಕ್ಕಳಾದ ವಿಷ್ಣು ಮತ್ತು ಗೌತಮ್ ಅಂಥ ಡಿಸೈನ್ ನಮ್ಮ ಬಳಿ ಇಲ್ಲ ಎಂದಿದ್ದಾರೆ. ಈ ವೇಳೆ ಒಬ್ಬ ಪಿಸ್ತೂಲ್ ತೋರಿಸಿ ಬೆದರಿಸಿದ್ದಾನೆ. ಇನ್ನಿಬ್ಬರು ಚಿನ್ನಾಭರಣ ಮತ್ತು ನಗದು ಹಣವನ್ನು ಬ್ಯಾಗ್‌ನಲ್ಲಿ ತುಂಬಿಸಿಕೊಂಡಿದ್ದಾರೆ. ಇದರಿಂದ ಆತಂಕಗೊಂಡು ಮಕ್ಕಳು ಕಿರುಚಿಕೊಂಡಿದ್ದಾರೆ. ಒಬ್ಬ ಆರೋಪಿ, ಬಾಲಕನ ಮುಖ ಕೈಗೆ ಹೊಡೆದು ಹಲ್ಲೆ ಮಾಡಿದ್ದಾನೆ. ಮಹಿಳೆಯರ ಗುಂಪು ಶಾಪ್‌ನತ್ತ ಬರುವುದನ್ನು ಗಮನಿಸಿದ ಆರೋಪಿಗಳು ಬೈಕ್‌ನಲ್ಲಿ ಪರಾರಿಯಾಗಿದ್ದಾರೆ. ಮಾಲೀಕರಾದ ಮಾಣಿಕ್ ರಾಮ್ ಪೊಲೀಸರಿಗೆ ದೂರು ನೀಡಿದ್ದು, ಸಿಸಿಟಿವಿ ದೃಶ್ಯ ಆಧರಿಸಿ ಆರೋಪಿಗಳಿಗೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಲೈಂಗಿಕ ಕಿರುಕುಳ ನಿರ್ಲಕ್ಷಿಸಬೇಡಿ

ಬೆಂಗಳೂರು: ಲೈಂಗಿಕ ಕಿರುಕುಳಕ್ಕೆ ಲಿಂಗ ಭೇದವಿಲ್ಲ, ಉದ್ಯೋಗ ಸ್ಥಳದಲ್ಲಿ ಮಹಿಳೆಯರಿಗೆ ಸುರಕ್ಷಿತ, ಉತ್ತಮ ವಾತವರಣ ನಿರ್ಮಾಣವಾಗಬೇಕು. ಕಾರ್ಯಕ್ಷೇತ್ರದಲ್ಲಿ ಪರಸ್ಪರ ಭ್ರಾತೃತ್ವ, ಅನ್ಯೋನತೆ ವಾತಾವರಣ ಹೊಂದಿದರೆ ಲಿಂಗ ಆಧಾರಿತ ಹಿಂಸೆ ತಡೆಗಟ್ಟಬಹುದು ಎಂದು ಸಾಮಾಜಿಕ ಹೋರಾಟಗಾರ್ತಿ ಮತ್ತು ವಕೀಲ ಡಾ. ವಸಂತ ಕವಿತಾ ತಿಳಿಸಿದರು. ಬೆಂಗಳೂರು ವಿವಿಯ ಜ್ಞಾನಭಾರತಿ ಆವರಣದಲ್ಲಿ ಲಿಂಗ ಆಧಾರಿತ ಹಿಂಸೆ ಮತ್ತು ಲಿಂಗ ಸಂವೇದನಾ ಕೋಶದ ವತಿಯಿಂದ ಆಯೋಜಿಸಿದ್ದ ಲಿಂಗ ಸಂವೇದನೆ ಹಾಗೂ ಪೋಶ್ ಕಾಯಿದೆ ಜಾಗೃತಿ' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿ, ಉದ್ಯೋಗ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗೆ ಕೇಂದ್ರ ಸರಕಾರ 2013 ರಲ್ಲಿ ಪೋಶ್ ಕಾಯಿದೆ ಜಾರಿಗೆ ತಂದಿದೆ. ಹಾಗೂ ಆಂತರಿಕ ದೂರು ಸಮಿತಿ ರಚನೆ ಕುರಿತು ಗಂಭೀರ ಕ್ರಮಗಳನ್ನು ಕೈಗೊಂಡಿದೆ. ಐಸಿಸಿ ಸಮಿತಿಯು ಸಾಕಷ್ಟು ಪ್ರಬಲವಾಗಿದ್ದು ಯಾವುದೇ ಒತ್ತಡಗಳಿಗೂ ಒಳಗಾಗದೇ ಕಾರ್ಯ ನಿರ್ವಹಿಸುತ್ತದೆ. ಉದ್ಯೋಗ ಸ್ಥಳದಲ್ಲಿ ಯಾವುದೇ ಲೈಂಗಿಕ ಕಿರುಕುಳ, ದುರ್ವರ್ತನೆ, ಅಶ್ಲೀಲ ನಡುವಳಿಕೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಡೆದರೆ ಆಂತರಿಕ ದೂರು ಸಮಿತಿ ಗಮನಕ್ಕೆ ತರಬೇಕಾಗುತ್ತದೆ. ಸಮಿತಿಯು ಯಾವುದೇ ಹಂತದ ಅಧಿಕಾರಿಯಾಗಿದ್ದರೂ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತದೆ. ಕಾನೂನು ವ್ಯವಸ್ಥೆ ಈ ವಿಚಾರದಲ್ಲಿ ಸಾಕಷ್ಟು ಗಂಭೀರವಾಗಿದ್ದು ಯಾವುದೇ ಹೆದರಿಕೆ, ಸಂಕೋಚಗಳಿಗೆ ಒಳಗಾಗದೆ ದೂರು ದಾಖಲಿಸಬೇಕು ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕೋಶದ ಸದಸ್ಯರುಗಳಾದ ಪ್ರೊ.ಬಿ.ಎಲ್. ಮುರುಳಿಧರ, ಪ್ರೊ.ಶೋಭಾ ಎಂ ಮತ್ತಿತರರಿದ್ದರು.

ವಿರಾಮ
ಪ್ರತಿ ಭಾನುವಾರ

ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ ಇಬ್ಬರು ಎಂಜಿನಿಯರ್‌ಗಳು, ಕಾನೂನು ವಿದ್ಯಾರ್ಥಿ, ಬೌನ್ಸರ್

4 ಕೋಟಿ ರು. ಮೌಲ್ಯದ ಡ್ರಗ್ಸ್ ವಶ: ಹತ್ತು ಮಂದಿ ಬಂಧನ

ಬೆಂಗಳೂರು: ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದ ಇಬ್ಬರು ಎಂಜಿನಿಯರ್‌ಗಳು, ಕಾನೂನು ವಿದ್ಯಾರ್ಥಿ, ಬೌನ್ಸರ್ ಸೇರಿ ಹತ್ತು ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ ಭರ್ಜರಿ ಬೇಟೆಯಾಡಿರುವ ಅಮೃತಹಳ್ಳಿ ಪೊಲೀಸರು 4 ಕೋಟಿ ಮೌಲ್ಯದ ಮಾಲುಗಳನ್ನು ಜಪ್ತಿ ಮಾಡಿದ್ದಾರೆ.

ಬಂಧಿತ ಆರೋಪಿಗಳಿಂದ 36 ಸಾವಿರ ನಗದು, 3 ಕೆ.ಜಿ ಹೈಡ್ರೋ ಗಾಂಜಾ, 50 ಗ್ರಾಂ ಎಂಡಿಎಂಎ, 500 ಗ್ರಾಂ ಚರಸ್, 500 ಎಲ್‌ಎಸ್ ಡಿ ಸ್ಟ್ರಿಪ್ಸ್‌ಗಳು, 10 ಕೆ.ಜಿ ಗಾಂಜಾ, 2 ಕಾರುಗಳು, 14 ಮೊಬೈಲ್‌ಗಳು ಸೇರಿ 4 ಕೋಟಿ ಮೌಲ್ಯದ ಮಾಲುಗಳನ್ನು ವಶಪಡಿಸಿಕೊಂಡು ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೋಗಿಲು ಲೇಔಟ್‌ನ ಎರೋನಾಟಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿ ಕುಶಾಲ್‌ಗೌಡ(23), ರಾಜಾನುಕುಂಟೆಯ ಕಾನೂನು ವಿದ್ಯಾರ್ಥಿ ಶಶಾಂಕ್(28), ಮರಳವಾಡಿಯ ಬೌನ್ಸರ್ ಸಾಗರ್ (29), ದೊಡ್ಡಕಮ್ಮನಹಳ್ಳಿಯ ಕ್ಯಾಬ್ ಚಾಲಕ ವಿಲ್ಸನ್ (48), ಅಕ್ಷಯನಗರದ ಆಶಿರ್ ಅಲಿ(36), ರಿಯಾಸ್(38), ಬೇಗೂರಿನ ಸಜಾದ್(34), ಎಲೆಕ್ಟ್ರಾನಿಕ್ ಸಿಟಿಯ ಶಿಹಾಬ್. (30), ದೊಡ್ಡಗಮ್ಮನಹಳ್ಳಿಯ ಅಬ್ದುಲ್ ನಾಸಿರ್(28), ದೇವರಾಜ ಅರಸು ನಗರದ ಸಾಫ್ಟ್‌ವೇರ್ ಎಂಜಿನಿಯರ್ ಅಭಿನವ್ (21) ಬಂಧಿತ ಆರೋಪಿಗಳು.

ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಕನಕಪುರ ರಸ್ತೆಯ ಕಗ್ಗಲಿಪುರದಲ್ಲಿ ಐವರು ವಶಕ್ಕೆ ಪಡೆದು ವಿಚಾರಣೆ ನಡೆಸಿ ಅವರಿಂದ ಜಿಕೆವಿಕೆ ಮೈದಾನದಲ್ಲಿ 2 ಕೆ.ಜಿ ಹೈಡ್ರೋ ಗಾಂಜಾ, 1 ಕಾರು, 8 ಮೊಬೈಲ್‌ಗಳು 36 ಸಾವಿರ ನಗದನ್ನು ವಶಪಡಿಸಿಕೊಳ್ಳಲಾಗಿದೆ. ಅವರ ಮಾಹಿತಿಯ ಮೇರೆಗೆ ಹೊರ ರಾಜ್ಯದ ಒಬ್ಬನನ್ನು ಮೈಸೂರು ರಸ್ತೆಯ ಸ್ಯಾಟ್‌ಲೈಟ್ ಬಸ್ ನಿಲ್ದಾಣದ ಬಳಿ 500 ಎಲ್‌ಎಸ್‌ಡಿ ಸ್ಟ್ರಿಪ್ಟ್, 2 ಕೆ.ಜಿ ಗಾಂಜಾ ಸಮೇತ ವಶಕ್ಕೆ ಪಡೆದುಕೊಂಡು ಬಂಧಿಸಲಾಗಿದೆ. ಈಶಾನ್ಯ ವಿಭಾಗದ ಡಿಸಿಪಿ ಜಿ.ಕೆ ಮಿಥುನ್ ಕುಮಾರ್ ಮಾರ್ಗದರ್ಶನದಲ್ಲಿ, ಅಮೃತಹಳ್ಳಿ ಪೊಲೀಸ್ ಇನ್‌ಸ್ಪೆಕ್ಟರ್ ಅಂಬರೀಶ್ ಮತ್ತವರ ಸಿಬ್ಬಂದಿ ಪ್ರಕರಣ ಬೇಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು.

ಬಂಧಿತರಿಂದ ಜಪ್ತಿ ಮಾಡಿದ ಮಾದಕ ಪದಾರ್ಥ ಪರಿಶೀಲಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು.

7 ಮಂದಿ ಕೇರಳ, ಇಬ್ಬರು ಬೆಂಗಳೂರಿನವರು

ಬಂಧಿತರಲ್ಲಿ ಒಬ್ಬ ದೆಹಲಿ, 7 ಮಂದಿ ಕೇರಳದವರು ಸೇರಿದ್ದಾರೆ ಇನ್ನಿಬ್ಬರು ಬೆಂಗಳೂರಿನವರಾಗಿದ್ದು, ಗ್ಯಾಂಗ್ ಕಟ್ಟಿಕೊಂಡು ಕೃತ್ಯದಲ್ಲಿ ತೊಡಗಿದ್ದರು. ಮಾರತ್‌ಹಳ್ಳಿಯ ಜಕ್ಕೂರು ರೈಲ್ವೆ ಟ್ರ್ಯಾಕ್ ಬಳಿ ನಾಲ್ವರು ವ್ಯಕ್ತಿಗಳು ಡ್ರಗ್ಸ್ ಮಾರಾಟಕ್ಕೆ ಯತ್ನಿಸಿದ ಮಾಹಿತಿಯನ್ನಾಧರಿಸಿ ದಾಳಿ ಮಾಡಿ, ಹೊರ ರಾಜ್ಯದ ಇಬ್ಬರು ವ್ಯಕ್ತಿಗಳು ಸೇರಿ ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಹೆಚ್ಚಿನ ಹಣಗಳಿಸುವ ಉದ್ದೇಶದಿಂದ ವಿದೇಶ ಮತ್ತು ಹೊರ ರಾಜ್ಯದಿಂದ ಅಪರಿಚಿತ ವ್ಯಕ್ತಿಗಳಿಂದ ಕಡಿಮೆ ಬೆಲೆಗೆ ಹೈಡ್ರೋ ಗಾಂಜಾ, ಎಂಡಿಎಂಎ. ಚರಸ್, ಎಲ್‌ಎಸ್‌ಡಿ ಸ್ಟೀಪ್‌ಗಳು ಹಾಗೂ ಗಾಂಜಾವನ್ನು ಖರೀದಿಸಿ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದನ್ನು ಒಪ್ಪಿಕೊಂಡಿದ್ದು, ಅವರನ್ನು ಬಂಧಿಸಲಾಗಿದೆ.

ನೇಮಕಾತಿ ಆದೇಶ ಪತ್ರ ನೀಡಿದ ಸಿಎಂ ಸಿದ್ದರಾಮಯ್ಯ

ಅನುಕಂಪದ ಆಧಾರದಲ್ಲಿ ಬೀಳಗಿ ಪುತ್ರಿಗೆ ಉದ್ಯೋಗ

ಮೃತ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಪುತ್ರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೇಮಕಾತಿ ಮಾಡಲಾಗಿದ್ದು, ಸಿಎಂ ಸಿದ್ದರಾಮಯ್ಯ ಆದೇಶ ಪತ್ರ ವಿತರಿಸಿದರು. ಸಚಿವ ಎಚ್.ಕೆ.ಪಾಟೀಲ್, ಶಾಸಕ ಅಶೋಕ ಪಟ್ಟಣ್, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ಬೆಂಗಳೂರು: ಇತ್ತೀಚಿಗೆ ಭೀಕರ ಕಾರು ಅಪಘಾತದಲ್ಲಿ ಮೃತಪಟ್ಟ ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಪುತ್ರಿ ಚೈತನ್ಯಾ ಬೀಳಗಿ ಅವರಿಗೆ ಅನುಕಂಪದ ಆಧಾರದ ಮೇಲೆ ಸರಕಾರಿ ಕೆಲಸ ನೀಡಿ ರಾಜ್ಯ ಸರಕಾರ ಬುಧವಾರ ಆದೇಶಿಸಿದೆ.

ಚೈತನ್ಯಾ ಬೀಳಗಿ ಅವರಿಗೆ ಕರ್ನಾಟಕ ಸರಕಾರದ ಸಚಿವಾಲಯದಲ್ಲಿ ಸಹಾಯಕ ಉದ್ಯೋಗ ನೀಡಲಾಗಿದ್ದು, ಸಿಎಂ ಸಿದ್ದರಾಮಯ್ಯ ಅವರು ಬುಧವಾರ ನೇಮಕ ಆದೇಶ ಪತ್ರವನ್ನು ಹಸ್ತಾಂತರಿಸಿದರು. ಈ ವೇಳೆ ಸಚಿವರಾದ ಎಚ್.ಕೆ. ಪಾಟೀಲ್, ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್, ಕಾಂಗ್ರೆಸ್ ಪಕ್ಷದ ಮುಖ್ಯ ಸಚೇತಕರಾದ ಅಶೋಕ್ ಪಟ್ಟಣ್, ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು ಉಪಸ್ಥಿತರಿದ್ದರು.

ಈ ಬಗ್ಗೆ ಪೋಸ್ಟ್ ಮಾಡಿರುವ ಸಿದ್ದರಾಮಯ್ಯ ಅವರು, ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರು ಸೇವೆಯಲ್ಲಿರುವಾಗಲೇ ನಿಧನ ಹೊಂದಿದ ಹಿನ್ನೆಲೆಯಲ್ಲಿ ಅವರ ಪುತ್ರಿ ಚೈತನ್ಯಾ ಎಮ್.ಬೀಳಗಿ ಅವರಿಗೆ ಅನುಕಂಪದ ಆಧಾರದ ಮೇಲೆ ಸರಕಾರಿ ಉದ್ಯೋಗದ ನೇಮಕಾತಿ ಪತ್ರವನ್ನು ಹಸ್ತಾಂತರಿಸಿ, ತಂದೆಯಂತೆಯೇ ಸಮಾಜಮುಖಿಯಾಗಿ ಕರ್ತವ್ಯ ನಿರ್ವಹಿಸುವಂತೆ ಶುಭ ಕೋರಿದೆ ಎಂದು ತಿಳಿಸಿದ್ದಾರೆ. ಕಳೆದ ವರ್ಷ ನ.25ರಂದು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಗೌನಳ್ಳಿ ಕ್ರಾಸ್ ಬಳಿ ಸಂಭವಿಸಿದ ಕಾರು ಅಪಘಾತದಲ್ಲಿ ಕರ್ನಾಟಕ ರಾಜ್ಯ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಮಹಾಂತೇಶ್ ಬೀಳಗಿ ಅವರು ಮೃತಪಟ್ಟಿದ್ದರು.

ಒತ್ತುವರಿಯಾಗುತ್ತಿದ್ದರೂ ಅಧಿಕಾರಿಗಳು ಏನು ಮಾಡ್ತಿದ್ದಾರೆ?: ಸಚಿವ ಕೃಷ್ಣಬೈರೇಗೌಡ

ಸರಕಾರಿ ಖಾಲಿ ಜಾಗಕ್ಕೆ ಬೇಲಿ ಹಾಕಲು ಸೂಚನೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿರುವ ಸರಕಾರದ ಖಾಲಿ ನಿವೇಶನಗಳಿಗೆ ಬೇಲಿ ಹಾಕುವಂತೆ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಸೂಚನೆ ನೀಡಿದ್ದಾರೆ.

ನಗರ ವ್ಯಾಪ್ತಿಯ ಸರಕಾರಿ ಜಮೀನು ಒತ್ತುವರಿ ತೆರವು ಸಂಬಂಧ ನಡೆದ ಸಭೆಯಲ್ಲಿ, ಬೆಂಗಳೂರಿನಲ್ಲಿ ನಿತ್ಯ ಅಕ್ರಮ ಲೇಔಟ್‌ಗಳು ತಲೆ ಎತ್ತುತ್ತಿದ್ದರೂ ಅಧಿಕಾರಿಗಳು ಏನು ಮಾಡುತ್ತೀದ್ದೀರಾ? ಕಾನೂನು ಉಲ್ಲಂಘಿಸಿ ಲೇಔಟ್ ಮಾಡುವವರ ಬಗ್ಗೆ ಕರುಣೆ ತೋರುವ ಅಗತ್ಯವಿಲ್ಲ. ಅನುಮತಿ ನೀಡಿದ ಪ್ರದೇಶಕ್ಕೂ ಮೀರಿ ಅನಧಿಕೃತ ಬಡಾವಣೆ ಮಾಡಿದವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಅಕ್ರಮ ಲೇಔಟ್ ನಿರ್ಮಿಸಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಸೂಚನೆ ನೀಡಿದ ನಂತರವೂ ಗೋಮಾಳಗಳಲ್ಲಿ ಬಡಾ ವಣೆ ಮಾಡಿದವರ ವಿರುದ್ಧ ಏಕೆ ಕ್ರಮ ಜರುಗಿಸಿಲ್ಲ ಎಂದು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಲ್ಯಾಂಡ್ ಬೀಟ್ ಆ್ಯಪ್‌ನಲ್ಲಿ ಶೇ.97 ರಷ್ಟು ಸರಕಾರಿ ಭೂಮಿಯನ್ನು ಗುರುತಿಸಿ ಡೇಟಾ ಎಂಟ್ರಿ ಮಾಡಲಾಗಿದೆ. ಈ ಮಾಹಿತಿ ಉಪಯೋಗಿಸಿಕೊಂಡು ನೈಜಸ್ಥಿತಿಯನ್ನು ದಿಶಾ ಆ್ಯಪ್‌ನಲ್ಲಿ ಅಪ್‌ಡೇಟ್ ಮಾಡಬೇಕು.
– ಕೃಷ್ಣಬೈರೇಗೌಡ ಕಂದಾಯ ಸಚಿವ

ಬೆಂಗಳೂರು ಹಾಗೂ ಸುತ್ತಮುತ್ತ ಪ್ರದೇಶದಲ್ಲಿ ತಲೆ ಎತ್ತಿರುವ ಅಕ್ರಮ ಬಡಾವಣೆ ಗಳಲ್ಲಿ ನಿರ್ಮಿಸಿರುವ ಎಷ್ಟು ಮನೆಗಳನ್ನು ನೆಲಸಮ ಮಾಡಿ ಪ್ರಕರಣಗಳನ್ನು ದಾಖಲಿಸಿದ್ದೀರಿ? ನಕಲಿ ದಾಖಲೆ ಸೃಷ್ಟಿಸುವವರು ತಮ್ಮ ಕೆಲಸ ಮುಂದುವರಿಸಿದ್ದಾರೆ. ಗೋಮಾಳಗಳಲ್ಲಿ ಅವೈಜ್ಞಾನಿಕವಾಗಿ ನಿರ್ಮಾಣವಾಗಿರುವ ಲೇಔಟ್‌ಗಳ ವಿರುದ್ಧ ಕ್ರಮವಹಿಸಲು ಅಧಿಕಾರಿ ಗಳು ಏಕೆ ವಿಳಂಬಧೋರಣೆ ಅನುಸರಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಖಾಲಿ ಜಾಗ, ಸರಕಾರಿ ಜಮೀನಿಗೆ ಬೇಲಿ ಇಲ್ಲವೇ ರಕ್ಷಣಾ ಗೋಡೆ ಹಾಕಲೇಬೇಕು. ನಕಾಶೆ ರಸ್ತೆ ಎಷ್ಟು ಒತ್ತುವರಿ ಆಗಿದೆ ಎಂಬ ಕುರಿತು ಮೊದಲು ಮಾಹಿತಿ ಸಂಗ್ರಹಿಸಬೇಕು. ಮತ್ತೆ ಒತ್ತುವರಿ ಆದರೆ ತಹಸೀಲ್ದಾರ್ ಅವರೇ ಜವಾಬ್ದಾರರಾಗುತ್ತಾರೆ ಎಂದು ಎಚ್ಚರಿಸಿದರು.

ಬೈರತಿ ಬಸವರಾಜ್ ನಿರೀಕ್ಷಣಾ ಜಾಮೀನಿಗೆ ಆಕ್ಷೇಪ

ಸಿಐಡಿ ಪರ ವಕೀಲರು ಹೈಕೋರ್ಟ್‌ನಲ್ಲಿ ವಾದ | ಸುಪ್ರೀಂ ಮೊರೆಗೆ ಸಿಐಡಿ ಸಿದ್ಧತೆ?

ಬೆಂಗಳೂರು: ರೌಡಿಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣದ 5ನೇ ಆರೋಪಿ ಕೆ.ಆರ್.ಪುರ ಶಾಸಕ ಬೈರತಿ ಬಸವ ರಾಜ್ ಅವರ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆದಿದ್ದು, ಸಿಐಡಿ ಪರ ವಕೀಲರು ಶಾಸಕರಿಗೆ ನೀಡಿರುವ ಮಧ್ಯಂತರ ಜಾಮೀನು ನ್ಯಾಯಯುತವಾಗಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬುಧವಾರ ಹೈಕೋರ್ಟ್‌ನಲ್ಲಿ ವಿಚಾರಣೆ ವೇಳೆ ಸಿಐಡಿ ಪರ ವಾದ ಮಂಡಿಸಿದ ಸರಕಾರಿ ಅಭಿಯೋಜಕರು, ಈ ಹಿಂದೆ ಸಲ್ಲಿಸಲಾಗಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಾಲಯ ಈಗಾಗಲೇ ವಜಾಗೊಳಿಸಿದೆ. ಈಗ ಹೊಸದಾಗಿ ಅರ್ಜಿ ಸಲ್ಲಿಸಲು ಯಾವುದೇ ಪರಿಸ್ಥಿತಿ ಬದಲಾಗಿಲ್ಲ. ಅರ್ಜಿದಾರರು ಪ್ರಭಾವಿ ವ್ಯಕ್ತಿಯಾಗಿದ್ದು, ಜಾಮೀನು ನೀಡಿದರೆ ಸಾಕ್ಷಿಗಳ ಮೇಲೆ ಒತ್ತಡ ಹೇರುವ ಮತ್ತು ತನಿಖೆಗೆ ಅಡ್ಡಿಪಡಿಸುವ ಸಾಧ್ಯತೆಯಿದೆ ಎಂದು ವಾದಿಸಿದರು.

ಪ್ರತಿಯಾಗಿ ವಾದ ಮಾಡಿದ ಶಾಸಕರ ಪರ ವಕೀಲರು, ಪೊಲೀಸರ ಬಳಿ ಯಾವುದೇ ಸಾಕ್ಷ್ಯವಿಲ್ಲ. ಪ್ರಕರಣದ ಮೊದಲ ಆರೋಪಿ ಜಗದೀಶ್ ಮತ್ತು ಬಸವರಾಜ್ ನಡುವೆ ಸಂಭಾಷಣೆ ನಡೆದಿದೆ ಎನ್ನಲು ಯಾವುದೇ ಸಿಡಿಆರ್ ದಾಖಲೆಗಳಿಲ್ಲ. ಯಾವುದೇ ನೇರ ಅಥವಾ ಸಾಂದರ್ಭಿಕ ಸಾಕ್ಷ್ಯಗಳು ಸಿಐಡಿ ಬಳಿ ಇಲ್ಲ. ಸಿಐಡಿ ತನಿಖೆ ಆರಂಭವಾದಾಗಿನಿಂದ ಈವರೆಗೆ ಶಾಸಕರಿಗೆ ವಿಚಾರಣೆಗೆ ಹಾಜರಾಗುವಂತೆ ಒಂದೇ ಒಂದು ನೋಟಿಸ್ ನೀಡಿಲ್ಲ. ಅಷ್ಟೇ ಅಲ್ಲದೆ, ಇತರ ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿರುವ ಪೊಲೀಸರು, ಬಸವರಾಜ್ ವಿರುದ್ಧ ಮಾತ್ರ ಯಾವುದೇ ದೋಷಾರೋಪ ಪಟ್ಟಿ ಸಲ್ಲಿಸಿಲ್ಲ ಎಂದರು.

ಸುಪ್ರೀಂಕೋರ್ಟ್‌ಗೆ ತೆರಳುವಂತೆ ವಾದ

ಶಾಸಕ ಬೈರತಿ ಬಸವರಾಜ್‌ಗೆ ಮಧ್ಯಂತರ ಜಾಮೀನು ನೀಡಿರುವುದು ಅನ್ಯಾಯ ಎಂದು ತನಿಖಾಧಿಕಾರಿಗಳಿಗೆ ಅನಿಸಿದರೆ ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಿ. ಅಲ್ಲದೆ, ಪೊಲೀಸರು ಶಾಸಕರ ಜತೆ ಕೈಜೋಡಿಸಿದ್ದಾರೆ ಎಂಬ ಸರಕಾರಿ ಅಭಿಯೋಜಕರ ಹೇಳಿಕೆಯು ಸ್ವತಃ ತಮ್ಮದೇ ಇಲಾಖೆಯ ವಿರುದ್ಧ ಮಾಡಿದ ಆರೋಪದಂತಿದೆ ಎಂದು ಶಾಸಕರ ಪರ ವಕೀಲರು ಟೀಕಿಸಿದರು.

ಚುನಾವಣಾ ಫಲಿತಾಂಶದ ತಕರಾರು ಅರ್ಜಿ ಅಸಿಂಧುಗೊಳಿಸಲು ಕೋರಿದ ಮನವಿ ತಿರಸ್ಕಾರ

ಶಾಸಕ ರಾಮಮೂರ್ತಿಗೆ ಸುಪ್ರೀಂನಲ್ಲೂ ಹಿನ್ನಡೆ

ಬೆಂಗಳೂರು: ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ, ಹೈಕೋರ್ಟ್ ಆದೇಶ ಪ್ರಶ್ನಿಸಿ ಜಯನಗರ ಶಾಸಕ ಸಿ.ಕೆ ರಾಮ ಮೂರ್ತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರಿಂ ಕೋರ್ಟ್ ವಜಾಗೊಳಿಸಿದೆ. ಪ್ರಕರಣದ ವಿಚಾರಣೆಗೆ ತಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯ ಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ. ಅಂಜಾ ರಿಯಾ ಅವರಿದ್ದ ತ್ರಿಸದಸ್ಯ ಪೀಠವು ವಜಾಗೊಳಿಸಿದೆ.

ಜಯನಗರ ಕ್ಷೇತ್ರದಿಂದ 2023ರ ಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದ ಅಭ್ಯರ್ಥಿ ಸಿ.ಕೆ ರಾಮಮೂರ್ತಿ ಅವರ ಆಯ್ಕೆ ಅಸಿಂಧುಗೊಳಿಸಬೇಕೆಂದು ಕೋರಿ, ಸೌಮ್ಯಾರೆಡ್ಡಿ ಅವರು ಹೈಕೋರ್ಟ್‌ಗೆ ಸಲ್ಲಿಸಿದ ಚುನಾವಣಾ ತಕರಾರು ಅರ್ಜಿಯಲ್ಲಿ ಮನವಿ ಮಾಡಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಕೇವಲ 16 ಮತಗಳಿಂದ ಸೋತಿದ್ದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ, ಚುನಾವಣೆಯಲ್ಲಿ ಗೆದ್ದಿದ್ದ ಬಿಜೆಪಿಯ ಸಿ.ಕೆ.ರಾಮಮೂರ್ತಿ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಕುರಿತು ಸೂಕ್ತ ದಾಖಲೆ ಗಳನ್ನು ಸಲ್ಲಿಸುವಂತೆ ಸೌಮ್ಯಾರೆಡ್ಡಿ ಅವರಿಗೆ ಹೈಕೋರ್ಟ್ ಸೂಚನೆ ನೀಡಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿ.ಕೆ ರಾಮಮೂರ್ತಿ ಸುಪ್ರೀಂ ಕೋರ್ಟ್ ಕದ ತಟ್ಟಿದ್ದರು. ಅಲ್ಲದೇ ಪ್ರಕರಣದ ವಿಚಾರಣೆಗೆ ತಡೆ ಕೋರಿ ಅರ್ಜಿ ಸಲ್ಲಿಸಿದ್ದರು. ಇದೀಗ ಅರ್ಜಿ ವಜಾಗೊಂಡಿದೆ.

16 ಮತಗಳಿಂದ ಸೌಮ್ಯಾ ರೆಡ್ಡಿ ಪರಾಭವ

2023ರಲ್ಲಿ ನಡೆದಿದ್ದ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಜಯನಗರ ಕ್ಷೇತ್ರದಿಂದ ಸಿ.ಕೆ. ರಾಮಮೂರ್ತಿ ಬಿಜೆಪಿ ಅಭ್ಯರ್ಥಿಯಾಗಿ ಮತ್ತು ಸೌಮ್ಯಾ ರೆಡ್ಡಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಕೇವಲ 16 ಮತಗಳಿಂದ ಪರಾಭವಗೊಂಡಿದ್ದರು. ಆದರೆ ಸಿ.ಕೆ.ರಾಮಮೂರ್ತಿ ಅವರ ಆಯ್ಕೆ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಸೌಮ್ಯಾ ರೆಡ್ಡಿ, ಮತಎಣಿಕೆ ಪ್ರಕ್ರಿಯೆಯಲ್ಲಿ ಏನೋ ವ್ಯತ್ಯಾಸವಾಗಿದೆ ಎಂದು ಅನುಮಾನ ವ್ಯಕ್ತಪಡಿಸಿದ್ದರು. ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಮತ ಎಣಿಕೆಯಲ್ಲಿ ನಾನು ಮುನ್ನಡೆ ಸಾಧಿಸಿದ್ದೆ. ಆದರೆ ಅಂಚೆ ಮತಗಳ ಎಣಿಕೆಯಲ್ಲಿ ವ್ಯತ್ಯಾಸವಾಗಿದೆ. ಒಟ್ಟು 827 ಅಂಚೆ ಮತಗಳಲ್ಲಿ ವ್ಯತ್ಯಾಸವಾಗಿದ್ದು, ಪ್ರತಿ ಬಾರಿ ಮರು ಎಣಿಕೆ ಮಾಡಿದಾಗಲೂ ಪ್ರತ್ಯೇಕ ಅಂಕಿ-ಅಂಶ ಬಂದಿದೆ. ಮತ ಎಣಿಕೆ ಆರಂಭವಾದ ನಂತರವೂ ಅಂಚೆ ಮೂಲಕ ಬಂದಿದ್ದ ಮತ ಪತ್ರಗಳನ್ನು ಎಣಿಕೆಗೆ ಪರಿಗಣಿಸಲಾಗಿದೆ ಎಂದು ಸೌಮ್ಯಾರೆಡ್ಡಿ ಆರೋಪಿಸಿದ್ದರು.

18 ಕೋಟಿ ಮೌಲ್ಯದ ಚಿನ್ನ ದೋಚಿದ ದಂಪತಿಗಾಗಿ ನೇಪಾಳದಲ್ಲಿ ಹುಡುಕಾಟ

ಕೆಲಸಕ್ಕಿದ್ದ ಬಿಲ್ಡರ್ ಮನೆಗೆ ಕನ್ನ

ಬೆಂಗಳೂರು: ಬಿಲ್ಡರ್ ಮನೆಯಲ್ಲಿ ಹಣ ಸೇರಿದಂತೆ 18 ಕೋಟಿ ಮೌಲ್ಯದ ಚಿನ್ನ, ವಜ್ರಾಭರಣಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ನೇಪಾಳ ಮೂಲದ ದಂಪತಿಗಾಗಿ ವೈಟ್‌ಫೀಲ್ಡ್ ವಿಭಾಗದ ಪೊಲೀಸರು ನೇಪಾಳ ಗಡಿ ಭಾಗದಲ್ಲಿ ಶೋಧ ನಡೆಸುತ್ತಿದ್ದಾರೆ.

ಆರೋಪಿ ದಂಪತಿಯ ಬಂಧನಕ್ಕಾಗಿ ಮೂರು ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿದೆ. ಒಂದು ತಂಡ ನೇಪಾಳ ಗಡಿ ಭಾಗದಲ್ಲಿ ಕಾರ್ಯಾಚರಣೆ ಕೈಗೊಂಡಿದ್ದರೆ, ಮತ್ತೊಂದು ತಂಡ ದೆಹಲಿಯ ರೈಲ್ವೆ ನಿಲ್ದಾಣಗಳಲ್ಲಿ ಶೋಧ ಕಾರ್ಯಕೈಗೊಂಡಿದೆ. ಇನ್ನೊಂದು ತಂಡ ನಗರದಾದ್ಯಂತ ದಂಪತಿ ಪತ್ತೆ ಕಾರ್ಯದಲ್ಲಿ ತೊಡಗಿದ್ದು, ಉದ್ಯಮಿ ಮನೆಯ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸುತ್ತಿದೆ.

ಕೆಲ ಸಮಯದ ಬಳಿಕ ಇವರ ಮನೆಯ ಇತರೆ ಕೆಲಸಗಾರರು ಗಮನಿಸಿ ಮನೆಯಲ್ಲಿ ಕಳ್ಳತನವಾಗಿದೆ ಎಂದು ಮಾಲೀಕರಿಗೆ ದೂರವಾಣಿ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ತಕ್ಷಣ ಶಿವಕುಮಾರ್ ಅವರು ಮನೆಗೆ ವಾಪಸ್ ಆಗಿ ನೋಡಿದಾಗ ಲಾಕರ್‌ಗಳನ್ನು ಕಬ್ಬಿಣದ ಸಲಾಕೆಯಿಂದ ಮೀಟಿ ಹಣ ಹಾಗೂ ಚಿನ್ನಾಭರಣ ಕಳ್ಳತನವಾಗಿರುವುದು ಕಂಡುಬಂದಿದೆ. ಕಳ್ಳತನವಾಗಿರುವ ಆಭರಣಗಳ ಒಟ್ಟು ಮೌಲ್ಯ 18 ಕೋಟಿ ರು.ಗಳೆಂದು ಅಂದಾಜಿಸಲಾಗಿದೆ. ಮಾರತಹಳ್ಳಿ ಪೊಲೀಸ್ ಠಾಣೆಗೆ ಅವರು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿ ದಂಪತಿಗಾಗಿ ಶೋಧ ಕೈಗೊಂಡಿದ್ದಾರೆ.



ಕೆಲಸಕ್ಕೆ ಸೇರಿದ 20 ದಿನದಲ್ಲೇ ಕಳವು

ಯಮಲೂರಿನ ನಿವಾಸಿ, ಬಿಲ್ಡರ್ ಶಿವಕುಮಾರ್ ಎಂಬುವವರ ಮನೆಯಲ್ಲಿ 20 ದಿನಗಳ ಹಿಂದೆಯಷ್ಟೆ ನೇಪಾಳ ಮೂಲದ ದಿನೇಶ್ ಮತ್ತು ಕಮಲ ಎಂಬ ದಂಪತಿ ಕೆಲಸಕ್ಕೆ ಸೇರಿಕೊಂಡಿದ್ದರು. ಜ.25 ರಂದು ಶಿವಕುಮಾರ್ ಕುಟುಂಬದವರೆಲ್ಲಾ ಹೊರಗೆ ಹೋಗಿದ್ದಾಗ ಇವರ ಮನೆಯಲ್ಲಿ ಕೆಲಸಕ್ಕಿದ್ದ ದಂಪತಿ ನೆಲಮಹಡಿ ಹಾಗೂ ಮೊದಲ ಮಹಡಿಯ ಲಾಕರ್ ಮುರಿದು ಒಳ ನುಗ್ಗಿ ವಾರ್ಡ್‌ರೋಬ್‌ನಲ್ಲಿದ್ದ 11.5 ಲಕ್ಷ ನಗದು, 5 ಕೆಜಿ ಬೆಳ್ಳಿ ವಸ್ತುಗಳು ಹಾಗೂ 11 ಕೆಜಿ ಚಿನ್ನ, ವಜ್ರಾಭರಣಗಳನ್ನು ದೋಚಿ ಕೊಂಡು ಪರಾರಿಯಾಗಿದ್ದಾರೆ.

ಕೆಲಸಕ್ಕಿದ್ದ ಮನೆಯಲ್ಲೇ 1 ಕೋಟಿ ರು. ಮೌಲ್ಯದ ವಸ್ತುಗಳ ಕಳವು: ಬಂಧನ

ಬೆಂಗಳೂರು: ತಾನು ಕೆಲಸ ಮಾಡುತ್ತಿದ್ದ ಮನೆಯಲ್ಲೇ ಕಳ್ಳತನ ಮಾಡಿದ್ದ ಆರೋಪಿಯನ್ನು ಜೀವನ್ ಭೀಮಾ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಚಂದನ್ ರೌಲ್ ಬಂಧಿತ ಆರೋಪಿ. ಅಮೆರಿಕದ ಮೆರಿಯಲ್ ಮೊರೆನೋ ಎಂಬವರ ಮನೆಯಲ್ಲಿ ಆರೋಪಿ ಕದ್ದ ಚಿನ್ನಾಭರಣ ಹಾಗೂ ನಗದು ಸೇರಿ ಅಂದಾಜು ಒಂದು ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಟೆಕ್ಸಾಸ್‌ನ ಮೆರಿಯಲ್ ಮೊರೆನೋ ದಂಪತಿ ನಗರದಲ್ಲಿ ಸಾಫ್ಟ್‌ವೇರ್ ಉದ್ಯೋಗಿಗಳಾಗಿ ಕೆಲಸ ಮಾಡಿಕೊಂಡು ಕೋಡಿಹಳ್ಳಿಯ ರುಸ್ತುಂಭಾಗ್ ಮುಖ್ಯ ರಸ್ತೆಯ ವಿಲ್ಲಾವೊಂದರಲ್ಲಿ ಬಾಡಿಗೆಗೆ ವಾಸವಿದ್ದರು. ಅದೇ ಮನೆಯಲ್ಲಿ ಚಂದನ್ ರೌಲ್ ಕೆಲಸ ಮಾಡುತ್ತಿದ್ದ. ಜನವರಿ 21ರಂದು ಮೆರಿಯಲ್ ಕೆಲಸಕ್ಕೆ ಹೋಗಿದ್ದಾಗ ಆರೋಪಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದ.

ಕಳ್ಳತನವಾಗಿರುವುದನ್ನು ತಿಳಿದ ಮೆರಿಯಲ್ ಆ ಸಂದರ್ಭದಲ್ಲಿ ಅಮೆರಿಕಕ್ಕೆ ತೆರಳಿದ್ದ ತಮ್ಮ ಪತಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ತಕ್ಷಣ ಪತಿ ಭಾರತದಲ್ಲಿರುವ ಅಮೆರಿಕದ ಎಂಬೆಸ್ಸಿಯ ನೆರವಿನೊಂದಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಗೆ ದೂರು ನೀಡಿದ್ದರು. ಮೆರಿಯಲ್ ಅವರಿಂದ ದೂರು ಪಡೆದ ಜೀವನ್ ಭೀಮಾನಗರ ಠಾಣೆ ಪೊಲೀಸರು ಆರೋಪಿ ಚಂದನ್ ರೌಲ್‌ನನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ. ಯುಎಸ್ ಡಾಲರ್‌ಗಳನ್ನು ಭಾರತೀಯ ಕರೆನ್ಸಿಗೆ ಕನ್ವರ್ಟ್ ಮಾಡಿ ಪರಾರಿಯಾಗಲು ಯತ್ನಿಸುತ್ತಿದ್ದ ಆರೋಪಿಯನ್ನು ಬಂಧಿಸಲಾಗಿದ್ದು, ಒಂದು ಕೋಟಿ ಮೌಲ್ಯದ ಚಿನ್ನಾಭರಣ, ವಜ್ರ, ನಗದು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಣರಾಜ್ಯೋತ್ಸವದಲ್ಲಿ ರಾಜ್ಯದ ಎನ್‌ಜಿಒ ಭಾಗಿ

ದೆಹಲಿಯ ಗಣರಾಜ್ಯೋತ್ಸವದಲ್ಲಿ ಸಿಎಡಿ ಎಂಎಸ್ ಟ್ರಸ್ಟ್ ಸಂಸ್ಥೆಯ ಸ್ಥಾಪಕ ಶ್ರೀಧರ ಕೆ.ಸಿ. ಪಾಲ್ಗೊಂಡಿದ್ದರು.

ಬೆಂಗಳೂರು: ಅಂಚಿನಲ್ಲಿರುವ ಸಮುದಾಯಗಳ ಕಲ್ಯಾಣ, ಪುನರ್ವಸತಿ ಹಾಗೂ ಸಾಮಾಜಿಕ ಒಳಗೊಳ್ಳುವಿಕೆಗೆ ನೀಡಿದ ನಿರಂತರ ಮತ್ತು ಸಮರ್ಪಿತ ಸೇವೆಗಳನ್ನು ಗುರುತಿಸಿ, ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಗರಿಮಾ ಗೃಹ (ತೃತೀಯ ಲಿಂಗಿಗಳ ಪುನರ್ವಸತಿ) ಯೋಜನೆ – ಕರ್ನಾಟಕ ಮತ್ತು ಭಿಕ್ಷಾಟನೆ ಪುನರ್ವಸತಿ ಯೋಜನೆ- ಮೈಸೂರುಗಳ ಅನುಷ್ಠಾನ ಸಂಸ್ಥೆಯಾಗಿರುವ ಸಿಎಡಿಎಂಎಸ್ ಟ್ರಸ್ಟ್ ಅನ್ನು ನವದೆಹಲಿ ಯಲ್ಲಿ ಆಯೋಜಿಸಲಾದ 77ನೇ ಗಣರಾಜ್ಯೋತ್ಸವದಲ್ಲಿ ಭಾಗವಹಿಸಲು ಆಹ್ವಾನಿಸಿತ್ತು.

ಆಹ್ವಾನ ಸ್ವೀಕರಿಸಿದ ಸಂಸ್ಥೆಯ ಸ್ಥಾಪಕ ಹಾಗೂ ಅಧ್ಯಕ್ಷ ಶ್ರೀಧರ ಕೆ.ಸಿ. ಕರ್ನಾಟಕವನ್ನು ಪ್ರತಿನಿಧಿಸಿ, ಜನವರಿ 26ರಂದು ನವದೆಹಲಿಯ ಕರ್ತವ್ಯ ಪಥದಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ತೃತೀಯ ಲಿಂಗಿ ಯೋಜನೆ (ದೀಪಾಶ್ರೀ ಗರಿಮಾ ಗೃಹ) ಅಡಿಯಲ್ಲಿ ಪುನರ್ವಸತಿಗೊಂಡ ಲಾಭಾರ್ಥಿಗಳು, ಭಿಕ್ಷಾಟನೆ ಪುನರ್ವಸತಿ ಯೋಜನೆಯ ಲಾಭಾರ್ಥಿಗಳು ಉಪಸ್ಥಿತರಿದ್ದರು. ಭೇಟಿಯ ಸಂದರ್ಭದಲ್ಲಿ ಡಾ.ಶ್ರೀಧರ ಕೆ.ಸಿ. ಲಾಭಾರ್ಥಿಗಳೊಂದಿಗೆ ಸಂವಾದ ನಡೆಸಿ, ಆಯುಷ್ಮಾನ್ ಯೋಜನೆಯ ಅಡಿಯಲ್ಲಿ ತೃತೀಯ ಲಿಂಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆ ಒದಗಿಸುವ ಬಗ್ಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾದ ಡಾ. ವೀರೇಂದ್ರ ಕುಮಾರ್ ಅವರಿಗೆ ಸಲಹೆ ಗಳನ್ನು ನೀಡಿದರು. ಈ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಧಿಕಾರಿಗಳು, ಭಾರತಿ ಸೇರಿ ಇತರರು ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಮೊಹಮ್ಮದ್ ರಿಜ್ವಾನ್ ಅಹ್ಮದ್ ನೇಮಕ

ಕಲಬುರಗಿ: ಜಿಲ್ಲಾ ಜನತಾದಳ (ಜಾತ್ಯಾತೀತ) ಪಕ್ಷದ ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷರನ್ನಾಗಿ ಮೊಹಮ್ಮದ್ ರಿಜ್ವಾನ್ ಅಹ್ಮದ್ ಅವರನ್ನು ನೇಮಕ

ಮಾಡಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಬಾಲರಾಜ ಗುತ್ತೇದಾರ್ ಅವರು ತಿಳಿಸಿದ್ದಾರೆ. ತಾವು ಈ ಗುರುತರವಾದ ಜವಾಬ್ದಾರಿಯನ್ನು ವಹಿಸಿಕೊಂಡು, ಪಕ್ಷದ ತತ್ವ ಹಾಗೂ ಸಿದ್ಧಾಂತಗಳಿಗೆ ಬದ್ಧರಾಗಿ, ಪಕ್ಷದ ಮುಖಂಡರನ್ನು ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಕಲಬುರಗಿ ಜಿಲ್ಲೆಯಲ್ಲಿ ಜನತಾದಳ (ಜಾತ್ಯಾತೀತ) ಪಕ್ಷವನ್ನು ಪರಿಣಾಮಕಾರಿಯಾಗಿ ಸಂಘಟಿಸಿ, ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುತ್ತಿರೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರ ಸಂಘದ ಕಾರ್ಯದರ್ಶಿ ಅಮಾನತು

ಕಲಬುರಗಿ: ಶಾಲಾ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ 4.42 ಲಕ್ಷ ಸರಕಾರಿ ಹಣವನ್ನು ದುರ್ಬಳಕೆ ಮಾಡಿಕೊಂಡ ಆರೋಪದ ಮೇಲೆ

ಪ್ರಭಾರ ಮುಖ್ಯಶಿಕ್ಷಕ ನವನಾಥ ಶಿಂಧೆ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಸಾವಳಗಿ (ಬಿ) ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿದ್ದ ನವನಾಥ, 2024ರ ಏಪ್ರಿಲ್‌ನಿಂದ 2025ರ ಸೆಪ್ಟೆಂಬರ್‌ವರೆಗೆ ಪ್ರಭಾರ ಮುಖ್ಯ ಶಿಕ್ಷಕರಾಗಿ ಜವಾಬ್ದಾರಿ ನಿರ್ವಹಿಸಿದ್ದರು. ಈ ಅವಧಿಯಲ್ಲಿ ಸರಕಾರದ ಅನುದಾನವನ್ನು ವೈಯಕ್ತಿಕ ಉದ್ದೇಶಕ್ಕೆ ಬಳಸಿದ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ರಾಜಕುಮಾರ್ ಪಾಟೀಲ್ ಹಾಗೂ ಬಸಪ್ಪ ಬಿರಾದಾರ್ ನೇತೃತ್ವದ ತನಿಖಾ ತಂಡವು ನಡೆಸಿದ ವಿಚಾರಣೆಯಲ್ಲಿ ಅಕ್ರಮ ನಡೆದಿರುವುದು ದೃಢಪಟ್ಟಿದೆ. ವಿದ್ಯಾರ್ಥಿಗಳ ಏಳಿಗೆಗೆ ಬರಬೇಕಿದ್ದ ಹಣವನ್ನು ಬೇಕಾಬಿಟ್ಟಿ ಖರ್ಚು ಮಾಡಿ ಕರ್ತವ್ಯ ಲೋಪ ಎಸಗಿದ ಕಾರಣಕ್ಕೆ, ಕಲಬುರಗಿ ದಕ್ಷಿಣ ವಲಯದ ಬಿಇಒ ವಿಜಯಕುಮಾರ ಜಮಖಂಡಿ ಅವರು ಅಮಾನತಿನ ಆದೇಶ ಹೊರಡಿಸಿದ್ದಾರೆ. ಅಮಾನತುಗೊಂಡ ಶಿಕ್ಷಕರು ಪ್ರಸ್ತುತ ದಕ್ಷಿಣ ವಲಯದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿದ್ದು, ಶೈಕ್ಷಣಿಕ ವಲಯದಲ್ಲಿ ಈ ಪ್ರಕರಣ ತೀವ್ರ ಚರ್ಚೆಗೆ ಕಾರಣವಾಗಿದೆ.

ಆರು ಸಾಧಕರಿಗೆ 'ಅವ್ವ ಪ್ರಶಸ್ತಿ'

ಕಲಬುರಗಿ: ಜಿಲ್ಲೆಯ ಡೊಂಗರಗಾಂವದ ಮಾತೋಶ್ರೀ ಈರಮ್ಮ ವಡ್ಡನಕೇರಿ ಪ್ರತಿಷ್ಠಾನದ ವತಿಯಿಂದ ನೀಡಲಾಗುವ ಹತ್ತನೇ ವರ್ಷದ (2025ನೇ ಸಾಲಿನ) ಪ್ರತಿಷ್ಠಿತ

'ಅವ್ವ ಪ್ರಶಸ್ತಿ'ಗೆ ಹಾರಕೂಡದ ಡಾ. ಚನ್ನವೀರ ಶಿವಾಚಾರ್ಯ ಶ್ರೀಗಳು ಹಾಗೂ ಡಾ. ದಾಕ್ಷಾಯಣಿ ಅಪ್ಪ ಸೇರಿದಂತೆ ಆರು ಗಣ್ಯರನ್ನು ಆಯ್ಕೆ ಮಾಡಲಾಗಿದೆ. ಈ ಕುರಿತು ಪ್ರತಿಷ್ಠಾನದ ಅಧ್ಯಕ್ಷ ಡಾ. ಶರಣಬಸಪ್ಪ ವಡ್ಡನಕೇರಿ ಹಾಗೂ ಸಂಚಾಲಕ ಡಾ. ನಾಗಪ್ಪ ಗೋಗಿ ಅವರು ಆಯ್ಕೆ ಪಟ್ಟಿ ಪ್ರಕಟಿಸಿ, ಸಾಹಿತ್ಯ ಕ್ಷೇತ್ರದಲ್ಲಿ ಹಾರಕೂಡದ ಷ.ಬ್ರ.ಶ್ರೀ ಡಾ. ಚನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳ ಅಂಕಣ ಬರಹಗಳ ಸಂಕಲನ 'ಚನ್ನಶ್ರೀವಾಣಿ' ಹಾಗೂ ಸಾಹಿತಿ ಗೊರೂರು ಪಂಕಜ ಅವರ 'ಬೆರಗು ರೇಖೆಗಳು' ಕವನ ಸಂಕಲನಕ್ಕೆ ಈ ಗೌರವ ಸಂದಿದೆ ಎಂದಿದ್ದಾರೆ. ಅದೇ ರೀತಿ, ಶಿಕ್ಷಣ ಮತ್ತು ದಾಸೋಹ ಕ್ಷೇತ್ರದಲ್ಲಿನ ಅಮೂಲ್ಯ ಸೇವೆಗಾಗಿ ಶರಣಬಸವೇಶ್ವರ ಸಂಸ್ಥಾನದ ಡಾ. ದಾಕ್ಷಾಯಣಿ ಶರಣಬಸವಪ್ಪ ಅಪ್ಪ ಅವರನ್ನು ಆಯ್ಕೆ ಮಾಡಲಾಗಿದೆ. ಉಳಿದಂತೆ ಸಾಹಿತ್ಯ ಕ್ಷೇತ್ರದಲ್ಲಿ ಭಾಷಾ ವಿಜ್ಞಾನಿ ಪ್ರೊ. ವಿ.ಜಿ. ಪೂಜಾರ, ಕಾನೂನು ಕ್ಷೇತ್ರದಲ್ಲಿ ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಿವಕುಮಾರ ಪಸಾರ ಹಾಗೂ ಉದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶರಣಮ್ಮ ಬಿ. ಪಾಟೀಲ ಅವರಿಗೆ ಪ್ರಶಸ್ತಿ ಒಲಿದಿದೆ ಎಂದು ಹೇಳಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವು ಫೆ.16ರ ಸೋಮವಾರದಂದು ಹಾರಕೂಡ ಶ್ರೀಮಠದಲ್ಲಿ ಅದ್ದೂರಿಯಾಗಿ ಜರುಗಲಿದೆ. ಪ್ರಶಸ್ತಿಯು ಸ್ಮರಣಿಕೆ, ಪ್ರಶಸ್ತಿ ಪತ್ರ ಹಾಗೂ ಸನ್ಮಾನಗಳನ್ನು ಒಳಗೊಂಡಿರಲಿದೆ ಎಂದು ಪ್ರತಿಷ್ಠಾನ ತಿಳಿಸಿದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಸಾಧಕರನ್ನು ಈ ಪ್ರಶಸ್ತಿ ಮೂಲಕ ಗೌರವಿಸಲಾಗುತ್ತಿದೆ ಎಂದು ಹೇಳಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕಲ್ಯಾಣ ಕರ್ನಾಟಕ ಭಾಗದ ಬಡ, ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸಿಗೆ ಆಸರೆ | 5 ಕೋಟಿ ಶಿಷ್ಯವೇತನ

ಎಸ್‌ಬಿಆರ್-ಸಿಇಟಿ ಪ್ರವೇಶ ಪರೀಕ್ಷೆ ಘೋಷಣೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸಿಗೆ ಆಸರೆಯಾಗಲು ಶರಣಬಸವೇಶ್ವರ ವಿದ್ಯಾವರ್ಧಕ ಸಂಘವು ಮಹತ್ವದ ಯೋಜನೆ ಪ್ರಕಟಿಸಿದೆ. ಸಂಘದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಅವರ ಹೆಸರಿನಲ್ಲಿ ನೀಡಲಾಗುವ 5 ಕೋಟಿ ಮೊತ್ತದ ಬೃಹತ್ ಶಿಷ್ಯವೇತನಕ್ಕಾಗಿ 'ಎಸ್.ಬಿ.ಆರ್- ಸಿಇಟಿ ಪ್ರವೇಶ ಪರೀಕ್ಷೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ. ದಾಕ್ಷಾಯಿಣಿ ಎಸ್. ಅಪ್ಪ ತಿಳಿಸಿದರು.

ಬುಧವಾರ ನಗರದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 12 ವರ್ಷಗಳಿಂದ ನಿರಂತರವಾಗಿ ಈ ಯೋಜನೆಯಡಿ ಸಾವಿರಾರು ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ. ಈ ಬಾರಿ ಫಲಾನುಭವಿ ವಿದ್ಯಾರ್ಥಿಗಳ ಸಂಖ್ಯೆಯನ್ನು 120 ರಿಂದ 180ಕ್ಕೆ ಹೆಚ್ಚಿಸಲಾಗಿದೆ ಎಂದು ಘೋಷಿಸಿದರು.

ಸುದ್ದಿಗೋಷ್ಠಿಯಲ್ಲಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ. ದಾಕ್ಷಾಯಿಣಿ ಎಸ್. ಅಪ್ಪ ಮಾತನಾಡಿದರು.

ಪರೀಕ್ಷಾ ವೇಳಾಪಟ್ಟಿ ಮತ್ತು ನೋಂದಣಿ: ವಿವಿಧ ಪಠ್ಯಕ್ರಮದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪರೀಕ್ಷೆಯನ್ನು ಮೂರು ಹಂತಗಳಲ್ಲಿ ನಡೆಸಲಾಗುತ್ತಿದೆ. ಸಿಬಿಎಸ್‌ಇ ವಿದ್ಯಾರ್ಥಿಗಳಿಗೆ ಮಾರ್ಚ್ 15 ರಂದು ಪರೀಕ್ಷೆ ನಡೆಯಲಿದ್ದು, ಮಾ. 13 ರೊಳಗೆ ನೋಂದಾಯಿಸಿಕೊಳ್ಳಬೇಕು. ಐಸಿಎಸ್ ಇ ವಿದ್ಯಾರ್ಥಿಗಳಿಗೆ ಏಪ್ರಿಲ್ 05 ರಂದು ಪರೀಕ್ಷೆ ಇದ್ದು, ಏ. 03 ರೊಳಗೆ ನೋಂದಣಿಗೆ ಅವಕಾಶವಿದೆ.

ಇನ್ನು, ಕರ್ನಾಟಕ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಏಪ್ರಿಲ್ 12 ರಂದು ಪರೀಕ್ಷೆ ನಿಗದಿಯಾಗಿದ್ದು, ಏ. 10 ರೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ. ವಿದ್ಯಾರ್ಥಿಗಳು ಆನ್‌ಲೈನ್ ಅಥವಾ ಅಧಿಕೃತ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

> ದೊಡ್ಡಪ್ಪ ಅಪ್ಪ ಅವರ ಆಶಯದಂತೆ ಈ ಬಾರಿ 180 ಪ್ರತಿಭಾವಂತರಿಗೆ 5 ಕೋಟಿ ಶಿಷ್ಯವೇತನ ನೀಡಲಾಗುತ್ತಿದೆ. ಎಸ್.ಬಿ.ಆರ್. ಸಂಸ್ಥೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಇಂದು ಜಗತ್ತಿನಾದ್ಯಂತ ಸಾಧನೆ ಮಾಡುತ್ತಿದ್ದಾರೆ. ಅದೇ ಹಾದಿಯಲ್ಲಿ ನಮ್ಮ ಭಾಗದ ವಿದ್ಯಾರ್ಥಿಗಳು ಬೆಳೆಯಲಿ ಎಂಬುದು ನಮ್ಮ ಸದಾಶಯವಾಗಿದೆ.
> – ಮಾತೋಶ್ರೀ ಡಾ. ದಾಕ್ಷಾಯಿಣಿ ಎಸ್. ಅಪ್ಪ, ಅಧ್ಯಕ್ಷೆ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ

ಶುಲ್ಕ ವಿನಾಯಿತಿ ವಿವರ: ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ 180 ವಿದ್ಯಾರ್ಥಿಗಳಿಗೆ ಮೂರು ಹಂತದಲ್ಲಿ ವಿನಾಯಿತಿ ಸಿಗಲಿದೆ. ಟಾಪ್ 60 ರ‍್ಯಾಂಕ್ ಗಳಿಸಿದವರಿಗೆ ಕಾಲೇಜು ಮತ್ತು ವಸತಿ ನಿಲಯದ ಸಂಪೂರ್ಣ ಶುಲ್ಕ ವಿನಾಯಿತಿ ಇರಲಿದೆ. ನಂತರದ 60 ವಿದ್ಯಾರ್ಥಿಗಳಿಗೆ ಶೇ. 50ರಷ್ಟು ಹಾಗೂ ಕೊನೆಯ 60 ವಿದ್ಯಾರ್ಥಿಗಳಿಗೆ ಶೇ. 25ರಷ್ಟು ಶುಲ್ಕ ವಿನಾಯಿತಿ ದೊರೆಯಲಿದೆ ಎಂದರು.

> ಕಲ್ಯಾಣ ಕರ್ನಾಟಕದ ಗ್ರಾಮೀಣ ಭಾಗದ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಈ ಸಿಇಟಿ ಪರೀಕ್ಷೆ ಪೂರಕವಾಗಿದೆ. ಕಳೆದ ಬಾರಿ 9,000 ವಿದ್ಯಾರ್ಥಿಗಳು ಭಾಗವಹಿಸಿದ್ದರು, ಈ ಬಾರಿ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಅರ್ಹ ವಿದ್ಯಾರ್ಥಿಗಳು ಈ ಅವಕಾಶದ ಸದುಪಯೋಗ ಪಡೆದುಕೊಳ್ಳಬೇಕು.
> – ಬಸವರಾಜ್ ದೇಶಮುಖ,ಕಾರ್ಯದರ್ಶಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ

ಸುದ್ದಿಗೋಷ್ಠಿಯಲ್ಲಿ ಶಿಷ್ಯವೇತನದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಬಸವರಾಜ್ ದೇಶಮುಖ, ಪಿಯು ಕಾಲೇಜಿನ ಪ್ರಾಚಾರ್ಯ ಡಾ. ಎನ್.ಎಸ್. ದೇವಾರ, ಸಂಘದ ಆಪ್ತ ಕಾರ್ಯದರ್ಶಿ ಲಿಂಗರಾಜ್ ಶಾಸ್ತ್ರಿ, ಸಂಗಮನಾಥ ಪಾಟೀಲ್ ಸೇರಿದಂತೆ ಇತರ ಗಣ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ವೇತನವಿಲ್ಲದೆ ಅಡುಗೆ ಸಹಾಯಕರ ಆಕ್ರೋಶ

ಕಲಬುರಗಿ: ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಕಳೆದ 15-20 ವರ್ಷಗಳಿಂದ ಅಡುಗೆ ಸಹಾಯಕರಾಗಿ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರಿಗೆ ಕಳೆದ ಐದು ತಿಂಗಳಿಂದ ವೇತನ ಪಾವತಿಯಾಗಿಲ್ಲ ಎಂದು ಆರೋಪಿಸಿ, ದಿನಗೂಲಿ ನೌಕರರ ಸಂಘದ ನೇತೃತ್ವದಲ್ಲಿ ಬುಧವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಮುಂದೆ ಜಮಾಯಿಸಿದ ನೌಕರರು, ಸರಕಾರದ ವಿಳಂಬ ನೀತಿಯ ವಿರುದ್ಧ ಘೋಷಣೆ ಕೂಗುತ್ತಾ ಧರಣಿ ಸತ್ಯಾಗ್ರಹ ನಡೆಸಿದರು. ದಶಕಗಳಿಂದ ಸೇವೆ ಸಲ್ಲಿಸುತ್ತಿದ್ದರೂ ಕನಿಷ್ಠ ವೇತನ ಹಾಗೂ ಸಕಾಲಕ್ಕೆ ಸಂಬಳ ನೀಡದೆ ಇಲಾಖೆಯು ಕಾರ್ಮಿಕರ ಬದುಕಿನ ಜೊತೆ ಆಟವಾಡುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

5 ತಿಂಗಳಿಂದ ವೇತನವಿಲ್ಲದೆ ಕುಟುಂಬ ನಿರ್ವಹಣೆ ಮಾಡುವುದು ದುಸ್ತರವಾಗಿದೆ. ಸಾಲದ ಸುಳಿಗೆ ಸಿಲುಕಿರುವ ನೌಕರರ ಹಿತದೃಷ್ಟಿಯಿಂದ ಬಾಕಿ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು ಮತ್ತು ನಮ್ಮ ಇತರೆ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಸಂಘದ ಮುಖಂಡರು ಒತ್ತಾಯಿಸಿದರು .

ಈ ಸಂದರ್ಭದಲ್ಲಿ ಮುಖಂಡರಾದ ದಶರಥ ಕಲಗುರ್ತಿ, ಅಣ್ಣಾರಾಯ ಜಾಡಿ, ಭೀಮಾಶಂಕರ್ ದಂಡೆ, ಮಹೇಶ್, ಮಲ್ಲಿಕಾರ್ಜುನ್, ಪುಂಡಲಿಕ, ಚಂದ್ರಶೇಖರ ಸೇರಿದಂತೆ ಹಲವು ಕಾರ್ಮಿಕರು ಉಪಸ್ಥಿತರಿದ್ದರು.

ನಗರದ ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಮುಂದೆ ಜಮಾಯಿಸಿದ ನೌಕರರು, ಸರಕಾರದ ವಿಳಂಬ ನೀತಿಯ ವಿರುದ್ಧ ಘೋಷಣೆ ಕೂಗುತ್ತಾ ಧರಣಿ ಸತ್ಯಾಗ್ರಹ ನಡೆಸಿದರು.

ವಿವಿಧ ಹುದ್ದೆಗೆ ನೇರ ಸಂದರ್ಶನ ಜ.31ರಂದು

ಕಲಬುರಗಿ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಜ.31ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಲಬುರಗಿ ಸರಕಾರಿ ಐ.ಟಿ.ಐ. ಕಾಲೇಜು ಹಿಂದುಗಡೆಯಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಆದಿ ಟ್ರೇಡ್ ಮಾರ್ಟ್ ಪ್ರೈ ಲಿಮಿಟೆಡ್‌ದಲ್ಲಿ ಟೆಲಿಕಾಲರ್ ಹುದ್ದೆಗೆ ಪಿ.ಯು. ಸಿ, ಪದವಿ ಪಾಸಾಗಿರಬೇಕು. ವಯೋಮಿತಿ 18 ರಿಂದ 24 ವರ್ಷದೊಳಗಿರಬೇಕು. ಸ್ಫ್ರೈಡ್ಸ್ ಫಾರ್ಮಾದಲ್ಲಿ ಆಪರೇಟರ್ ಹುದ್ದೆಗೆ ಪಿ.ಯು.ಸಿ, ಐಟಿಐ, ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ರಿಂದ 22 ವರ್ಷ ದೊಳಗಿರಬೇಕು. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಎಲ್ಲಾ ಅಂಕಪಟ್ಟಿಗಳ ಝೆರಾಕ್ಸ್, ರೆಸ್ಯೂಮ್ ಭಾವಚಿತ್ರಗಳು ಹಾಗೂ ಆಧಾರ್ ಕಾರ್ಡ್‌ದೊಂದಿಗೆ ಮೇಲ್ಕಂಡ ದಿನದಂದು ನೇರ ಸಂದರ್ಶನದಲ್ಲಿ ಭಾಗವಹಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ತರಹದ ಭತ್ಯೆಯನ್ನು ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಹಾಗೂ ಕಚೇರಿ ದೂ.ಸಂ 08472-274846ಗೆ ಸಂಪರ್ಕಿಸಲು ಕೋರಲಾಗಿದೆ.

ಅಂಕಗಳಿಗೆ ಸೀಮಿತವಾಗದೆ ಮೌಲ್ಯಗಳ ಅಳವಡಿಸಿಕೊಳ್ಳಿ

ಸರ್ವಜ್ಞ ಕಾಲೇಜಿನಲ್ಲಿ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ವಿಶೇಷ ಆಶೀರ್ವಚನ

ನಗರದ ಸರ್ವಜ್ಞ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ವಿಶೇಷ ಆಶೀರ್ವಚನ ಕಾರ್ಯಕ್ರಮದಲ್ಲಿ ಶ್ರೀ ಉತ್ತರಾದಿ ಮಠದ ಪೀಠಾಧೀಶ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಪಾಲ್ಗೊಂಡು ಜ್ಞಾನಾರ್ಜನೆ ಮತ್ತು ನೈತಿಕತೆಯ ಕುರಿತು ವಿದ್ಯಾರ್ಥಿಗಳಿಗೆ ದಿಕ್ಸೂಚಿ ಭಾಷಣ ಮಾಡಿದರು.

ಕಲಬುರಗಿ: ವಿದ್ಯಾರ್ಥಿ ದೆಸೆಯಲ್ಲಿ ಕೇವಲ ಅಂಕಗಳಿಕೆಗೆ ಸೀಮಿತವಾಗದೆ, ಜೀವನದಲ್ಲಿ ಧರ್ಮ, ನ್ಯಾಯ ಮತ್ತು ನೀತಿಯನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ. ಮನುಷ್ಯನು ಲೌಕಿಕವಾಗಿ ಸಮಾಜದ ಕಣ್ಣು ತಪ್ಪಿಸಿ ತಪ್ಪು ಮಾಡಬಹುದು, ಆದರೆ ಸರ್ವಜ್ಞನಾದ ಪರಮಾತ್ಮನ ಕಣ್ಣು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಶ್ರೀ ಉತ್ತರಾದಿ ಮಠದ ಪೀಠಾಧೀಶ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಮಾರ್ಮಿಕವಾಗಿ ನುಡಿದರು.

ನಗರದ ಸರ್ವಜ್ಞ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ವಿಶೇಷ ಆಶೀರ್ವಚನ ಕಾರ್ಯಕ್ರಮದಲ್ಲಿ ಶ್ರೀಗಳು ಪಾಲ್ಗೊಂಡು ಜ್ಞಾನಾರ್ಜನೆ ಮತ್ತು ನೈತಿಕತೆಯ ಕುರಿತು ವಿದ್ಯಾರ್ಥಿಗಳಿಗೆ ದಿಕ್ಸೂಚಿ ಭಾಷಣ ಮಾಡಿ, ನಾಡೋಜ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನ ಮೌಲ್ಯಗಳು ಹಾಗೂ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಸರ್ವಜ್ಞ ಶಿಕ್ಷಣ ಸಂಸ್ಥೆಯ ಸಂಸ್ಕಾರಭರಿತ ಕಾರ್ಯವೈಖರಿಯನ್ನು ಶ್ರೀಗಳು ಮುಕ್ತಕಂಠದಿಂದ ಶ್ಲಾಘಿಸಿದರು.

ಸರ್ವಜ್ಞನ ಕಣ್ಣು ತಪ್ಪಿಸಲು ಸಾಧ್ಯವಿಲ್ಲ: ಯುವ ಪೀಳಿಗೆಯು ಅತೀ ಆಸೆಗೆ ಬಲಿಯಾಗಿ ಅಥವಾ ತಾತ್ಕಾಲಿಕ ಸುಖಕ್ಕಾಗಿ ಹೆತ್ತವರ ಮತ್ತು ಗುರುಗಳ ಕಣ್ಣು ತಪ್ಪಿಸಿ ತಪ್ಪು ದಾರಿ ತುಳಿಯಬಾರದು. ನಾವು ಮಾಡುವ ಪ್ರತಿಯೊಂದು ಕಾರ್ಯಕ್ಕೂ ಭಗವಂತನೇ ಸಾಕ್ಷಿಯಾಗಿರುತ್ತಾನೆ. ಯಾರೂ ಇಲ್ಲದ ಜಾಗದಲ್ಲಿ ಹಣ್ಣು ತಿನ್ನಲು ಗುರುಗಳು ಹೇಳಿದಾಗ, ಎಲ್ಲೆಡೆ ಭಗವಂತನಿದ್ದಾನೆ ಎಂದು ಹಣ್ಣು ತಿನ್ನದ ಕನಕದಾಸರ ಭಕ್ತಿ ನಮಗೆ ಆದರ್ಶವಾಗಬೇಕು. ಏಕಾಂತದಲ್ಲೂ ತಪ್ಪು ಮಾಡದಂತೆ ನಮ್ಮ ಮನಸ್ಸನ್ನು ನಿಯಂತ್ರಿಸಿಕೊಳ್ಳುವುದೇ ನಿಜವಾದ ಸುಸಂಸ್ಕೃತಿ ಎಂದು ಅವರು ವಿವರಿಸಿದರು.

ವಿದ್ಯೆಗೆ ಮೂವರು ಶತ್ರುಗಳು: ಜ್ಞಾನಾರ್ಜನೆಯ ಹಾದಿಯಲ್ಲಿ ಮನುಷ್ಯ ಎದುರಿಸುವ ಮೂರು ಅಡೆತಡೆಗಳ ಕುರಿತು ಶ್ರೀಗಳು ಎಚ್ಚರಿಸಿದರು. ಗುರುಗಳ ಸೇವೆ ಮತ್ತು ಆಜ್ಞೆಯನ್ನು ಗೌರವಿಸದಿರುವುದು. ವಿದ್ಯೆಯನ್ನು ಶಾರ್ಟ್‌ಕಟ್ ಮೂಲಕ ಪಡೆಯಲು ಸಾಧ್ಯವಿಲ್ಲ. ಶ್ರದ್ಧೆ ಮತ್ತು ನಿಧಾನದ ಕಲಿಕೆಯಿಂದ ಮಾತ್ರ ಸಿದ್ಧಿ ಸಾಧ್ಯ. ಪ್ರಶಂಸೆಗೆ ಮರುಳಾದಾಗ ಅಹಂಕಾರ ಮನೆ ಮಾಡುತ್ತದೆ, ಇದು ಜ್ಞಾನದ ಹಾದಿಯನ್ನು ಮುಚ್ಚುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸರ್ವಜ್ಞ ಮತ್ತು ಜಸ್ಟಿಸ್ ಶಿವರಾಜ್ ವಿ. ಪಾಟೀಲ್, ಕಾಲೇಜಿನ ಸಂಸ್ಥಾಪಕ ಪ್ರೊ. ಚನ್ನಾರೆಡ್ಡಿ ಪಾಟೀಲ್, ಪ್ರಾಂಶುಪಾಲ ಪ್ರಶಾಂತ್ ಕುಲಕರ್ಣಿ, ಪ್ರಮುಖರಾದ ವಿನುತಾ ಆರ್. ಬಿ., ಅನಿತಾ ಕುಲಕರ್ಣಿ, ಪ್ರಭುಗೌಡ ಸಿದ್ದಾರೆಡ್ಡಿ, ಲಕ್ಷ್ಮಿ ಕುಲಕರ್ಣಿ ಹಾಗೂ ಕರುಣೇಶ್ ಹಿರೇಮಠ್ ಉಪಸ್ಥಿತರಿದ್ದರು. ಶ್ರೀ ಉತ್ತರಾದಿ ಮಠದ ವ್ಯವಸ್ಥಾಪಕ ಘಂಟಿ ರಾಮಾಚಾರ್, ಉಪನ್ಯಾಸಕರು ಹಾಗೂ ನೂರಾರು ವಿದ್ಯಾರ್ಥಿಗಳು ಈ ಜ್ಞಾನದೀಪ್ತಿಯ ಸಂದರ್ಭಕ್ಕೆ ಸಾಕ್ಷಿಯಾದರು.

> **ವಿನಯವೇ ವಿದ್ಯೆಯ ಭೂಷಣ**
> ಸಂಪತ್ತು ಹೋದರೆ ಮರಳಿ ಗಳಿಸಬಹುದು, ಆರೋಗ್ಯ ಹೋದರೆ ಚಿಕಿತ್ಸೆಯಿಂದ ಸರಿಪಡಿಸಿಕೊಳ್ಳಬಹುದು. ಆದರೆ ಒಮ್ಮೆ ಚಾರಿತ್ರ್ಯ ಕಳೆದುಕೊಂಡರೆ ಮನುಷ್ಯ ಎಲ್ಲವನ್ನೂ ಕಳೆದುಕೊಂಡಂತೆ ಎಂದು ಎಚ್ಚರಿಸಿದ ಶ್ರೀಗಳು, ವಿದ್ಯಾರ್ಥಿಗಳು ಉತ್ತಮ ನಾಗರಿಕರಾಗಿ ಬೆಳೆಯಲು ವಿನಯ ಮತ್ತು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಶ್ರೀಗಳು ಹರಸಿದರು.

ಸತ್ಯಾತ್ಮತೀರ್ಥರ ಸಾನ್ನಿಧ್ಯದಲ್ಲಿ ಲಕ್ಷ ಸುಮಧ್ವವಿಜಯ ಪಾರಾಯಣ

ಸೇಡಂ: ತಾಲೂಕಿನ ಐತಿಹಾಸಿಕ ಪುಣ್ಯಕ್ಷೇತ್ರ ಮಳಖೇಡದ ಉತ್ತರಾದಿ ಮಠದಲ್ಲಿ ಮಧ್ವ ನವಮಿ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ 'ಲಕ್ಷ ಸುಮಧ್ವವಿಜಯ ಪಾರಾಯಣ' ಅತ್ಯಂತ ವೈಭವ ಮತ್ತು ಭಕ್ತಿಯಿಂದ ನೆರವೇರಿತು. ಉತ್ತರಾದಿ ಮಠದ ಪೀಠಾಧಿಪತಿ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಸಂಕಲ್ಪದಂತೆ ನಡೆದ ಈ ಮಹಾ ಪಾರಾಯಣ ಯಜ್ಞದಲ್ಲಿ ದೇಶದ ವಿವಿಧ ಮೂಲೆಗಳಿಂದ ಬಂದ ಸಾವಿರಾರು ಭಕ್ತರು ಪಾಲ್ಗೊಂಡು ಪುನೀತರಾದರು.

ಉತ್ತರಾದಿ ಮಠದ ಪ್ರಮೇಯ ರತ್ನಮಾಲಿಕೆ ಹಾಗೂ ಶ್ರೀ ಜಯತೀರ್ಥರ (ಟೀಕಾಕೃತ್ಪಾದರ) ಮೂಲ ಬೃಂದಾವನ ಸನ್ನಿಧಿಯಲ್ಲಿ ನಡೆದ ಈ ಜ್ಞಾನ ಸತ್ರಕ್ಕೆ ಕರ್ನಾಟಕ ಮಾತ್ರವಲ್ಲದೆ ನೆರೆಯ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಹಾಗೂ ತಮಿಳುನಾಡುಗಳಿಂದ ಸುಮಾರು 25 ಸಾವಿರಕ್ಕೂ ಹೆಚ್ಚು ಭಕ್ತರು ಸಾಗರೋಪಾದಿಯಲ್ಲಿ ಹರಿದು ಬಂದಿದ್ದರು. ಬೆಳಗ್ಗೆ 7.30ರಿಂದಲೇ ಸಾಮೂಹಿಕವಾಗಿ ಆರಂಭವಾದ ಸುಮಧ್ವವಿಜಯ ಪಾರಾಯಣವು ಬೆಳಗ್ಗೆ 11ರ ವರೆಗೆ ಸತತವಾಗಿ ನಡೆಯಿತು. ಭಕ್ತರೆಲ್ಲರೂ ಏಕಕಂಠದಿಂದ ಪಠಿಸಿದ ಪಾರಾಯಣದ ಮಂತ್ರಘೋಷಗಳು ಮಳಖೇಡದಾದ್ಯಂತ ಮೊಳಗಿದವು.

ಸೇಡಂ ತಾಲೂಕಿನ ಸತ್ಯಾತ್ಮತೀರ್ಥರ ಸಾನ್ನಿಧ್ಯದಲ್ಲಿ ಲಕ್ಷ ಸುಮಧ್ವವಿಜಯ ಪಾರಾಯಣ ಅತ್ಯಂತ ವೈಭವ ಮತ್ತು ಭಕ್ತಿಯಿಂದ ನೆರವೇರಿತು.

ವಿಶೇಷ ಪೂಜೆ ಮತ್ತು ಅಭಿಷೇಕ: ಪಾರಾಯಣದ ಮಂಗಳೋತ್ಸವದ ನಂತರ ಶ್ರೀ ಮಧ್ವಾಚಾರ್ಯರ ಮೂರ್ತಿಗೆ 108 ಕೆಜಿ ಶುದ್ಧ ಜೇನುತುಪ್ಪದಿಂದ ಮಹಾ ಅಭಿಷೇಕವನ್ನು ನೆರವೇರಿಸಲಾಯಿತು. ನಂತರ ಶ್ರೀ ಸತ್ಯಾತ್ಮತೀರ್ಥರು ದಿಗ್ವಿಜಯ ಮೂಲರಾಮದೇವರ ಪೂಜೆಯನ್ನು ವಿಧಿವಿಧಾನಗಳೊಂದಿಗೆ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಶ್ರೀರಾಮದೇವರಿಗೆ ಲಕ್ಷ ತುಳಸಿ ಅರ್ಚನೆ ಮಾಡಿ ಲೋಕಕಲ್ಯಾಣಕ್ಕಾಗಿ ಪ್ರಾರ್ಥಿಸಲಾಯಿತು.

ಮೋಕ್ಷಕ್ಕೆ ಗುರುಗಳ ಮಾರ್ಗದರ್ಶನ ಅಗತ್ಯ: ಸಮಾರಂಭದಲ್ಲಿ ಆಶೀರ್ವಚನ ನೀಡಿದ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು, ಶ್ರೀಮಧ್ವಾಚಾರ್ಯರು ಸಾರಿದ ಸತ್ ಸಿದ್ಧಾಂತವು ಮಾನವಕುಲಕ್ಕೆ ಲಭಿಸಿದ ಅನನ್ಯ ಕೊಡುಗೆಯಾಗಿದೆ. ಮೋಕ್ಷವನ್ನು ಭಗವಂತನು ನೀಡುತ್ತಾನಾದರೂ, ಆ ಭಗವಂತನ ಹಾದಿಯನ್ನು ತೋರಿಸುವ ಶಕ್ತಿ ಗುರುಗಳಿಗೆ ಮಾತ್ರ ಇರುತ್ತದೆ. ಗುರುಗಳಲ್ಲಿ ಭಕ್ತಿ ಇಟ್ಟಾಗ ಮಾತ್ರ ಮುಕುಂದನ ಕೃಪೆ ಲಭಿಸಲು ಸಾಧ್ಯ ಎಂದು ಮಾರ್ಮಿಕವಾಗಿ ನುಡಿದರು.

ಈ ಸಂದರ್ಭದಲ್ಲಿ ಮಠದ ವ್ಯವಸ್ಥಾಪಕ ಪಂ. ವೆಂಕಣ್ಣಾಚಾರ್ಯ ಪೂಜಾರ, ಪಂ. ಗೋಪಾಲಾಚಾರ್ಯ ಅಕಮಂಚಿ, ಪಂ. ಗುರುಮಧ್ವಾಚಾರ್ಯ ನವಲಿ, ಮಠಾಧಿಕಾರಿ ರಾಮಾಚಾರ್ಯ ಘಂಟಿ ಸೇರಿದಂತೆ ಮಠದ ಸಿಬ್ಬಂದಿ ವರ್ಗ ಹಾಗೂ ಲಕ್ಷಾಂತರ ಭಕ್ತರು ಉಪಸ್ಥಿತರಿದ್ದರು.

> ಜೀವೋತ್ತಮರಾದ ವಾಯುದೇವರ ಅವತಾರವಾದ ಮಧ್ವಾಚಾರ್ಯರನ್ನು ಪೂರ್ಣವಾಗಿ ಅರಿತುಕೊಳ್ಳುವುದು ಸಾಮಾನ್ಯರಿಗೆ ಸುಲಭವಲ್ಲ. ಸಹಸ್ರಾರು ಭಕ್ತರು ಸೇರಿ ಲಕ್ಷ ಬಾರಿ ಸುಮಧ್ವವಿಜಯ ಪಾರಾಯಣ ಮಾಡಿ ಸಮರ್ಪಿಸಿರುವುದು ಅತೀವ ಪುಣ್ಯದ ಕಾರ್ಯ. ಇಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಧರ್ಮ ಜಾಗೃತಿ ಮೂಡಿಸುತ್ತವೆ.
> - ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು, ಉತ್ತರಾದಿ ಮಠದ ಪೀಠಾಧಿಪತಿಗಳು ಕೊಪ್ಪಳ

ಬಂಗಾರ ಬೆಲೆ ಏರಿಕೆ: ವಿಶ್ವಕರ್ಮ ಕುಲಕಸುಬು ಉಳಿಸಲು ಆಗ್ರಹ

ಕಲಬುರಗಿ: ಚಿನ್ನ ಮತ್ತು ಬೆಳ್ಳಿ ದರಗಳ ವಿಪರೀತ ಏರಿಕೆಯಿಂದಾಗಿ ವಿಶ್ವಕರ್ಮ ಸಮಾಜದ ಕುಲಕಸುಬು ಅಪಾಯದಲ್ಲಿದ್ದು, ಸರಕಾರ ತಕ್ಷಣವೇ ಮಧ್ಯಪ್ರವೇಶಿಸಿ ಈ ಸಣ್ಣ ವ್ಯಾಪಾರಸ್ಥರಿಗೆ ಆರ್ಥಿಕ ನೆರವು ನೀಡಬೇಕು ಎಂದು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ಸುಜ್ಞಾನಮೂರ್ತಿ ಆಗ್ರಹಿಸಿದರು.

ನಗರದಲ್ಲಿ ಸರಾಫ್ ಬಜಾರ್‌ನಲ್ಲಿ ಬಂಗಾರದ ಮಳಿಗೆಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಬೆಲೆ ಏರಿಕೆಯು ಬಂಡವಾಳಶಾಹಿಗಳ ಲಾಭಕ್ಕೆ ಕಾರಣವಾಗುತ್ತಿದೆ. ಆದರೆ, ಜನರೊಂದಿಗೆ ನೇರ ಸಂಪರ್ಕ ಹೊಂದಿರುವ ಸಣ್ಣಪುಟ್ಟ ವಿಶ್ವಕರ್ಮ ಕುಲಕಸುಬುಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿಂದೆ 1969ರ 'ಗೋಲ್ಡ್ ಕಂಟ್ರೋಲ್ ಆ್ಯಕ್ಟ್' ಸಮಯದಲ್ಲಿ ಉಂಟಾದಂತಹ ಆತ್ಮಹತ್ಯೆಯಂತಹ ದುಸ್ಥಿತಿ ಮತ್ತೆ ಮರುಕಳಿಸದಂತೆ ಸರಕಾರ ಎಚ್ಚರಿಕೆ ವಹಿಸಬೇಕು ಎಂದು ಒತ್ತಾಯಿಸಿದರು.

ಸರಕಾರ ಚಿನ್ನ-ಬೆಳ್ಳಿ ವಹಿವಾಟಿನಿಂದ ಸಂಗ್ರಹಿಸುವ ಜಿಎಸ್‌ಟಿ ಹಣದ ಒಂದು ಭಾಗವನ್ನು ಸಮಾಜದ ಕುಲಕಸುಬುಗಾರರ ಅಭಿವೃದ್ಧಿಗೆ ಬಳಸಬೇಕು. ದೊಡ್ಡ ವ್ಯಾಪಾರಿಗಳೊಂದಿಗೆ ಸ್ಪರ್ಧಿಸಲು ಸಣ್ಣ ವ್ಯಾಪಾರಸ್ಥರಿಗೆ ಸಾಧ್ಯವಾಗುತ್ತಿಲ್ಲ, ಹೀಗಾಗಿ ಸರಕಾರ ಸ್ಪಷ್ಟ ನೀತಿ ರೂಪಿಸಬೇಕು ಎಂದರು.

ಸುದ್ದಿಗಾರರೊಂದಿಗೆ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ಸುಜ್ಞಾನಮೂರ್ತಿ ಮಾತನಾಡಿದರು.

ವಿಶ್ವಕರ್ಮ ಹೋರಾಟ ಸಮಿತಿ ಅಧ್ಯಕ್ಷ ದೇವೇಂದ್ರ ದೇಸಾಯಿ ಮಾತನಾಡಿ, ಬಡ ವಿಶ್ವಕರ್ಮರಿಗೆ ನಿಗಮದಿಂದ ಹೆಚ್ಚಿನ ಸೌಲಭ್ಯ ನೀಡಬೇಕು, ಇಲ್ಲವಾದಲ್ಲಿ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು.

ಮಾಜಿ ಅಧ್ಯಕ್ಷ ಲೋಹಿತ ಕಲ್ಲೂರ ಸೇರಿದಂತೆ ಸಮುದಾಯದ ಪ್ರಮುಖರು ಉಪಸ್ಥಿತರಿದ್ದರು.

ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ ವೈಭವದ 'ಮೋಘಾ ರಾಮಲಿಂಗೇಶ್ವರ'

ನಿರ್ಲಕ್ಷ್ಯದ ಸುಳಿಯಲ್ಲಿ ಎರಡನೇ ಪೂರಿ ಜಗನ್ನಾಥ ಸನ್ನಿಧಿ | ಕಲ್ಯಾಣ ಚಾಲುಕ್ಯರ ಕಾಲದ ಅದ್ಭುತ ಶಿಲ್ಪಕಲೆಯ ಕಣಜ

ಶ್ರೀಮಂತ ಆರ್. ಮೇಳಕುಂದಿ ಕಾಳಗಿ

ಕಲಬುರಗಿ ಜಿಲ್ಲೆಯ ಕಾಳಗಿ ತಾಲೂಕಿನ ಮೋಘಾ ಗ್ರಾಮದಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ ಅದ್ಭುತ ಶಿಲ್ಪಕಲೆಯ ಕಣಜವಾಗಿದೆ. ಒಡಿಶಾದ ಸುಪ್ರಸಿದ್ಧ ಪೂರಿ ಜಗನ್ನಾಥ ದೇವಾಲಯದ ಶೈಲಿಯನ್ನು ಹೋಲುವ ಇಲ್ಲಿನ ಶಿಖರ ಮತ್ತು ಶಿಲ್ಪಕಲೆಯು ಪ್ರವಾಸಿಗರ ಕಣ್ಮನ ಸೆಳೆಯುವಂತಿದ್ದರೂ, ಸರಿಯಾದ ಸಂರಕ್ಷಣೆ ಮತ್ತು ಪ್ರಚಾರದ ಕೊರತೆಯಿಂದಾಗಿ ಈ ಐತಿಹಾಸಿಕ ಸ್ಮಾರಕವು ಅನಾಥ ಪ್ರಜ್ಞೆಯಲ್ಲಿ ಮುಳುಗಿದೆ.

ಶಿಲ್ಪಕಲೆಯ ಶ್ರೀಮಂತಿಕೆ: ಈ ದೇವಾಲಯವು ಶಿಲ್ಪಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಅತ್ಯಂತ ಮಹತ್ವ ಪಡೆದಿದೆ. ಇಲ್ಲಿನ ನವರಂಗ, ದೇವಕೋಷ್ಠಕಗಳು ಹಾಗೂ ಸೂಕ್ಷ್ಮ ಕೆತ್ತನೆಗಳು ಅಂದಿನ ಶಿಲ್ಪಿಗಳ ನೈಪುಣ್ಯಕ್ಕೆ ಸಾಕ್ಷಿಯಾಗಿವೆ. ದೇವಾಲಯದ ಆವರಣದಲ್ಲಿ ನಟರಾಜ, ವಿಷ್ಣು, ಬ್ರಹ್ಮ, ಗಣಪತಿ ಹಾಗೂ ಉಗ್ರ ನರಸಿಂಹನ ಅದ್ಭುತ ಮೂರ್ತಿಗಳನ್ನು ಕಾಣಬಹುದಾಗಿದೆ. ದೇವಾಲಯದ ಪಕ್ಕದಲ್ಲಿರುವ ಪುಷ್ಕರಣಿಯು ಈ ಕ್ಷೇತ್ರದ ಧಾರ್ಮಿಕ ಮತ್ತು ಸಾಂಸ್ಕೃತಿಕ ಘನತೆಯನ್ನು ಇಮ್ಮಡಿಗೊಳಿಸಿದೆ. ಹೀಗಾಗಿಯೇ ಸ್ಥಳೀಯವಾಗಿ ಇದನ್ನು 'ಎರಡನೇ ಪೂರಿ ಜಗನ್ನಾಥ್ ದೇವಸ್ಥಾನ' ಎಂದೇ ಕರೆಯಲಾಗುತ್ತದೆ.

ಸಂರಕ್ಷಣೆಯ ಕೊರತೆ: ರಾಜ್ಯ ಸರಕಾರವು ಇದನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸಿದ್ದರೂ, ವಾಸ್ತವದಲ್ಲಿ ವೈಜ್ಞಾನಿಕ ನಿರ್ವಹಣೆಯ ಕೊರತೆ ಎದ್ದು ಕಾಣುತ್ತಿದೆ. ದೇವಾಲಯದ ಗೋಡೆಗಳು ಮತ್ತು ಶಿಖರದ ಮೇಲೆ ಹಾನಿಯಾಗುತ್ತಿದ್ದು, ಅತಿಕ್ರಮಣ ಮತ್ತು ಸ್ವಚ್ಛತೆಯ ಕೊರತೆ ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ. ಪುರಾತತ್ವ ಇಲಾಖೆಯು ಇಲ್ಲಿ ಸಮಗ್ರ ಸಂಶೋಧನೆ ನಡೆಸಿ, ಈ ಪರಂಪರೆಯನ್ನು ಗ್ರಂಥ ರೂಪದಲ್ಲಿ ದಾಖಲಿಸಬೇಕಾದ ತುರ್ತು ಅಗತ್ಯವಿದೆ.

ಪ್ರವಾಸಿ ತಾಣವಾಗುವ ಸಾಧ್ಯತೆ: ಮೋಘಾ ರಾಮಲಿಂಗೇಶ್ವರ ದೇವಾಲಯವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಅಪಾರ ಸಾಧ್ಯತೆಗಳಿವೆ. ಸೂಕ್ತ ರಸ್ತೆ ಸಂಪರ್ಕ, ಮಾಹಿತಿ ಫಲಕಗಳು, ಕುಡಿಯುವ ನೀರು ಹಾಗೂ ಶೌಚಾಲಯದಂತಹ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದರೆ, ಇದು ನಾಡಿನ ಪ್ರಮುಖ ಪ್ರವಾಸಿ ಕೇಂದ್ರವಾಗಿ ಹೊರಹೊಮ್ಮಬಲ್ಲದು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮಾಹಿತಿ ಫಲಕಗಳನ್ನು ಅಳವಡಿಸುವುದು ಹಾಗೂ ವಿದ್ಯಾರ್ಥಿಗಳಿಗೆ ಅಧ್ಯಯನ ಪ್ರವಾಸಗಳನ್ನು ಏರ್ಪಡಿಸುವುದು ಇತಿಹಾಸದ ಅರಿವು ಮೂಡಿಸಲು ಸಹಕಾರಿಯಾಗಲಿದೆ.

> ಮೋಘಾ ಗ್ರಾಮದ ಪುರಾತನ ರಾಮಲಿಂಗೇಶ್ವರ ದೇವಾಲಯದಲ್ಲಿ ನಿಧಿಗಳ್ಳರು ಅಗೆದು ಹಾನಿ ಮಾಡುತ್ತಿರುವುದು ಆತಂಕಕಾರಿ. ಈ ಕೃತ್ಯದಿಂದ ಐತಿಹಾಸಿಕ ಸ್ಮಾರಕದ ಭದ್ರತೆಗೆ ಅಪಾಯ ಎದುರಾಗಿದೆ. ಪುರಾತತ್ವ ಇಲಾಖೆ ಹಾಗೂ ಸಂಬಂಧಿತ ಅಧಿಕಾರಿಗಳು ತಕ್ಷಣ ಎಚ್ಚೆತ್ತುಕೊಂಡು, ದೇವಾಲಯದ ರಕ್ಷಣೆ ಮತ್ತು ಸಂರಕ್ಷಣೆಗೆ ಬಿಗಿ ಕ್ರಮ ಕೈಗೊಳ್ಳಬೇಕು.
> - ಚನ್ನಪ್ಪ ವಚ್ಚಾ, ಮಾಜಿ ಗ್ರಾ.ಪಂ ಸದಸ್ಯ, ಮೋಘಾ

ಒಟ್ಟಾರೆಯಾಗಿ, ಸರಕಾರ ಮತ್ತು ಪುರಾತತ್ವ ಇಲಾಖೆ ಎಚ್ಚೆತ್ತುಕೊಂಡು ಈ ಅಪರೂಪದ ಸ್ಮಾರಕಕ್ಕೆ ಯೋಗ್ಯ ಗೌರವ ಹಾಗೂ ರಕ್ಷಣೆ ನೀಡಬೇಕಿದೆ. ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಈ ಐತಿಹಾಸಿಕ ಸಂಪತ್ತನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

{ಡಾ. ಫಾರೂಕ್‌ಮಣೂರು} ಸಮಾಜ ಸೇವಕ

ಹೆಣ್ಣು ಮಕ್ಕಳಿಗೆ ಶಿಕ್ಷಣ ಬಹಳ ಮುಖ್ಯ, ಮದುವೆ ಮಾಡಿ, ಮಕ್ಕಳನ್ನು ಹೆರಲು ಹೆಣ್ಣು ಮಕ್ಕಳು ಜನ್ಮ ತಾಳ್ಳಲ್ಲ. ಬದಲಿಗೆ ಹೆಣ್ಣು ಮಕ್ಕಳು ಶಿಕ್ಷಣವಂತರಾಗಿ, ನಾಡಿಗೆ ಕೀರ್ತಿ ತರುವ ಐಎಎಸ್, ಐಪಿಎಸ್, ವೈದ್ಯರು, ಪೊಲೀಸ್ ಅಧಿಕಾರಿಗಳು ಆಗಬೇಕು. ಹೀಗಾಗಿ ಮಕ್ಕಳಿಗೆ ವಿದ್ಯಾಭ್ಯಾಸ ಬಹಳ ಮುಖ್ಯ.

POONAWALLA FINCORP

ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್
ಕಾರ್ಪೋರೇಟ್ ಕಚೇರಿ : ಯುನಿಟ್ ನಂ. 2401, 24ನೇ ಮಹಡಿ, ಅಲ್ಟಿಮಸ್, ಡಾ. ಜಿ ಎಂ ಭೋಸ್ಲೆ ಮಾರ್ಗ್, ವರ್ಲಿ, ಮುಂಬಯಿ 400 018 (ಮಹಾರಾಷ್ಟ್ರ)
ನೋಂದಾಯಿತ ಕಚೇರಿ: 201 ಮತ್ತು 202, 2ನೇ ಮಹಡಿ, ಎಪಿ81, ಕೋರೆಗಾಂನ್ ಪಾರ್ಕ್ ಅನೆಕ್ಸ್ ಮುಂಡ್ವಾ, ಪುಣೆ 411 036 (ಮಹಾರಾಷ್ಟ್ರ)

ಸೆಕ್ಷನ್ 13(2) ರ ಸರ್ಫೇಸಿ ಕಾಯಿದೆ, 2002 ರ ಅಡಿ ತಗಾದೆ ಸೂಚನೆ

ನೀವು, ಈ ಕೆಳಗೆ ಹೆಸರಿಸಿರುವ ಸಾಲಗಾರ/ಸಹ–ಸಾಲಗಾರರು ಗೃಹ ಸಾಲ/ಆಸ್ತಿ ಮೇಲೆ ಸಾಲವನ್ನು ನಿಮ್ಮ ಸ್ಥಿರಾಸ್ತಿ/ಗಳನ್ನು ಮ್ಯಾಗ್ನಾ ಫಿನ್‌ಕಾರ್ಪ್ ಲಿಮಿಟೆಡ್ ಎಮ್‌ಎಫ್‌ಎಲ್ ಎಂದು ಕರೆಯಲ್ಪಡುವ ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ ಗೆ ಅಡಮಾನ ಮಾಡಿ ಪಡೆದುಕೊಂಡಿರುತ್ತೀರಿ. ನೀವು ಮರುಪಾವತಿಸದೆ ಸುಸ್ತಿದಾರರಾಗಿರುವುದರಿಂದ, ನಿಮ್ಮ ಸಾಲ/ಗಳ ಖಾತೆಯನ್ನು ಅನುತ್ಪಾದಕ ಅಸ್ತಿ ಎಂದು ವರ್ಗೀಕರಿಸಲಾಗಿದೆ. ಸೆಕ್ಷನ್ 13(2) ರ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002 ರ ಅಡಿ ತಗಾದೆ ಸೂಚನೆಯನ್ನು ನಮಗೆ ತಿಳಿದ ಇತ್ತೀಚಿನ ವಿಳಾಸಕ್ಕೆ ಕಳುಹಿಸಲಾಗಿದ್ದು, ಅದು ನಿಮ್ಮಿಂದ ಸ್ವೀಕೃತಿಯಾಗದೆ ಹಿಂತಿರುಗಿ ಬಂದಿರುತ್ತದೆ. ಆದುದರಿಂದ ಅದರ ವಿವರಗಳನ್ನು ಸೆಕ್ಷನ್ 13(2) ರ ಕಾಯಿದೆ ನಿಯಮ 3(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ನಿಮಗೆ ಬದಲಿ ಸೂಚನೆಯಾಗಿ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ.
ಸಾಲಗಾರರ, ಸಹ–ಸಾಲಗಾರರ, ಭದ್ರತೆಗಳು, ಬಾಕಿ ವಿವರಗಳು, ಸೆಕ್ಷನ್ 13(2) ರ ಅಡಿ ನೀಡಲಾದ ತಗಾದೆ ಸೂಚನೆ ಮತ್ತು ಕ್ಲೈಮು ಮಾಡಲಾದ ಮೊತ್ತದ ವಿವರಗಳು ಈ ಕೆಳಗಿನಂತಿದೆ.

ಕ್ರ. ಸಂ.	ಸಾಲಗಾರರ, ಸಹ–ಸಾಲಗಾರರ, ಜಾಮೀನುದಾರರ ಹೆಸರು ಮತ್ತು ಸಾಲದ ಮೊತ್ತ	ಭದ್ರತಾ ಸ್ವತ್ತಿನ ವಿವರ	ತಗಾದೆ ಸೂಚನೆ ದಿನಾಂಕ	ಬಾಕಿ ಮೊತ್ತ ರೂ.ಗಳಲ್ಲಿ
01.	**ಸಾಲಗಾರರು, ಸಹ–ಸಾಲಗಾರರು:** ಪದ್ಮ ವ್ಯಾಪಾರಿಗಳು, ರಂಜೀತಾ ಕುಮಾರಿ ಎಂ, ಮನೋಜ್ ಕುಮಾರ್ ಓಸ್ವಾಲ್ **ಸಾಲದ ಮೊತ್ತ :** ರೂ. 1,35,00,000/– (ಒಂದು ಕೋಟಿ ಮೂವತ್ತೈದು ಲಕ್ಷ ರೂಪಾಯಿಗಳು ಮಾತ್ರ) **ಸಾಲದ ಸಂ.** LAP0113100000007529140	**ಆಸ್ತಿಯ ಷೆಡ್ಯೂಲ್ :** ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ. ಎಎ803, ಎಂಟನೇ ಮಹಡಿಯಲ್ಲಿದ್ದು, ವಿಂಗ್–ಎ ಹಂತ 3 ಮಲ್ಬರಿ ಟವರ್, ಹಂತ 1 ವಾಸಯೋಗ್ಯವಾಗಿ ಅಭಿವೃದ್ಧಿಯಾದ ಯೋಜನೆಯನ್ನು "ಪಾರ್ಕ್ ವೆಸ್ಟ್" ನ ಸುಪರ್ ಬಿಲ್ಟಪ್ ಪ್ರದೇಶ 150.41 ಷದರ ಮೀಟರ್ ಜೊತೆಗೆ ಭಾಗ ಮಾಡಲಾಗದ ಪ್ರದೇಶ 487.63 ಚದರ ಅಡಿ ಹಾಫೂ ಒಂದು ಕಾರು ನಿಲುಗಡೆ ಪ್ರದೇಶವನ್ನು ಒಳಗೊಂಡಿದ್ದು, ಭಾಗ ಮಾಡಲಾಗದ ಪಾಲು ಮುನ್ಸಿಪಲ್ ನಂ. 1/1 (ಪಿಐಡಿ ನಂ. 31–42–1/1) ವಿಸ್ತೀರ್ಣ 52.8337 ಎಕರೆಗಳು ಬಿನ್ನಿಪೇಟೆ ವಾಸಯೋಗ್ಯ ಕ್ವಾರ್ಟರ್ಸ್, ಬಿನ್ನಿಪೇಟೆ, ವಾರ್ಡ್ ನಂ. 31, ಸರ್ವೆ ನಂ. 10, 11, 12 ಭೋಗನಹಳ್ಳಿ ಗ್ರಾಮ ಮತ್ತು ಸರ್ವೆನಂ. 32 ಗುಟ್ಟಹಳ್ಳಿ ಗ್ರಾಮ, ಹಲಸೂರು ಹೋಬಳಿ, ಬೆಂಗಳೂರು ತಾಲೂಕು ಇಲ್ಲಿದ್ದು ಮತ್ತು ಸರ್ವೆ ನಂ. 42–47, ಜೋಡಿ ಕೆಂಪಾಪುರ ಗ್ರಾಮ, ಹಲಸೂರು ಹೋಬಳಿ, ಬೆಂಗಳೂರು ತಾಲೂಕು ಮತ್ತು **ಚಕ್ಕುಬಂದಿ:** ಪೂರ್ವ: ಹೊಸಕೆರೆ ರಸ್ತೆ (ಟ್ಯಾಂಕ್‌ಬಂಡ್ ರಸ್ತೆ ಸಿರ್ಸಿ ವೃತ್ತದಿಂದ ಮೈಸೂರು ರಸ್ತೆಗೆ), ಪಶ್ಚಿಮ: ಗೋರಿಪಾಳ್ಯ ರಂಗನಾಥ ಕಾಲೋನಿ ಮತ್ತು ನ್ಯೂ ಬಿನ್ನಿ ಲೇಔಟ್, ಉತ್ತರ: ನ್ಯೂ ಬಿನ್ನಿ ಲೇಔಟ್ ರಸ್ತೆ, ಖಾಸಗಿ ಆಸ್ತಿ ಮತ್ತು ಪುರಸಭೆ ಸಂಖ್ಯೆ 1/1 ರ ಭಾಗ ಇಟಿಎ ಕರ್ನಾಟಕ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಉಳಿಸಿಕೊಳ್ಳಲ್ಪಟ್ಟಿದೆ, ದಕ್ಷಿಣ: ಗೋರಿಪಾಳ್ಯ.	31.12.2025	ರೂ. 1,32,72,931/– (ಒಂದು ಕೋಟಿ ರೂಪಾಯಿಗಳು ಮೂವತ್ತೆರಡು ಲಕ್ಷ ಎಪ್ಪತ್ತೆರಡು ಸಾವಿರ ಒಂಬತ್ತು ನೂರ ಮೂವತ್ತು ಒಂದು ಮಾತ್ರ) **ಜೊತೆಗೆ 10.00%** ಭವಿಷ್ಯದ ವಾರ್ಷಿಕ ಬಡ್ಡಿ 31.12.2025 ರಿಂದ ಹಣ ಸಂಪೂರ್ಣ ಪಾವತಿಯಾಗುವವರೆಗೆ.

ನೀವುಗಳಾದ ಸಾಲಗಾರ ಮತ್ತು ಸಹ–ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲೆ ತಿಳಿಸಿದ ತಗಾದೆ ಮೊತ್ತ ಹಾಗೂ ಮೇಲೆ ತಿಳಿಸಿದಂತೆ ನಂತರದ ಬಡ್ಡಿಯನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗಾಗಿ ಪಾವತಿ ಮಾಡಬೇಕು, ತಪ್ಪಿದಲ್ಲಿ ಕೆಳಸಹಿದಾರರು ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲೆ ಹೇಳಲಾದ ಭದ್ರತೆಗಳ ಮೇಲೆ ಜಾರಿ ಕಾಯಿದೆ ಅನ್ವಯ ಕ್ರಮ ಕೈಗೊಳ್ಳಲಿರುವರು. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಸೆಕ್ಷನ್ 13(13) ರ ಹೇಳಲಾದ ಕಾಯಿದೆಯಂತೆ ಮೇಲೆ ಹೇಳಲಾದ ಭದ್ರತೆಗಳನ್ನು ಮಾರಾಟ, ಭೋಗ್ಯ ಅಥವಾ ಇನ್ನಿತರೆ ರೂಪದಲ್ಲಿ ನಮ್ಮ ಅನುಮತಿ ಇಲ್ಲದೆ ವರ್ಗಾಯಿಸುವುದನ್ನು ನಿರ್ಬಂಧಿಸಲಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 29.01.2026
ಅಧಿಕೃತ ಅಧಿಕಾರಿ
ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ ಪರವಾಗಿ

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 18.02.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 4,10,00,932.73 ಜೊತೆಗೆ ದಿನಾಂಕ: 12.01.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: (1) **ಶ್ರೀಮತಿ. ಬಿ ಕೆ ಪ್ರೇಮಾ** ಕೋಂ ಟಿ ವರದರಾಜು, (2) **ಶ್ರೀ. ವರದರಾಜ್ ಟಿ** ಬಿನ್ ತಿಮ್ಮರಾಯಪ್ಪ, **ಇವರಿಬ್ಬರ ವಿಳಾಸ:** ನಲ್ಲೂರು ಗ್ರಾಮ, ಹನುಮನಹಳ್ಳಿ ಅಂಚೆ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆ–563127. (3) **ಶ್ರೀ.ರಘು ಕೆ** ಬಿನ್ ಜಿ ಕೃಷ್ಣಪ್ಪ, ಎಪಿಎಂಸಿ ಯಾರ್ಡ್ ಎದುರು, ಸೇಂಟ್ ಆನ್ಸ್ ಸ್ಕೂಲ್ ಮುಖ್ಯರಸ್ತೆ, ಮುಳಬಾಗಲು, ಕೋಲಾರ ಜಿಲ್ಲೆ–563131, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 17.02.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಖಾಲಿ ಭೂಮಿ ನಿವೇಶನ ನಂ.44 ಹಳೆಯ ಖಾತಾ ಸಂಖ್ಯೆ.9913/1, ಪಿಐಡಿ ಸಂಖ್ಯೆ.30–9–3ಕೆ ಸರ್ವೆ ಸಂಖ್ಯೆ.32/1ಎ, ಈ ಆಸ್ತಿಯು ಶಿವಕೇಶವನಗರ, ಸೊನ್ನವಾಡಿ ಗ್ರಾಮ, ಕಸಬಾ ಹೋಬಳಿ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 1200 ಚದರ ಅಡಿ. **Coordinates of the property Latitude- 13.155463, Longitude- 78.406282**	₹. 6.70	₹. 0.67	₹. 0.50
2	ಖಾಲಿ ಭೂಮಿ ನಿವೇಶನ ನಂ.19 & 20, ಹಳೆಯ ಖಾತಾ ನಂ.9913/1 ಪಿಐಡಿ ಸಂಖ್ಯೆ.30–9–3ಕೆ ಸರ್ವೆ. ಸಂ.32/1ಎ. ಈ ಆಸ್ತಿಯು ಶಿವಕೇಶವನಗರ, ಸೊನ್ನವಾಡಿ ಗ್ರಾಮ, ಕಸಬಾ ಹೋಬಳಿ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 2400 ಚದರ ಅಡಿ. **Coordinates of the property Latitude- 13.155598, Longitude- 78.406136**	₹. 13.10	₹. 1.31	₹. 0.50
3	ಭೂಮಿ ಮತ್ತು ಕಟ್ಟಡದ ನಿವೇಶನ ನಂ.135/1, ಈ ಆಸ್ತಿಯು ದುಗಸಂದ್ರ ಹೋಬಳಿ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 1 ಎಕರೆ 37 ಗುಂಟೆಗಳು ಮತ್ತು ಪ್ಲಾಟ್‌ನ ಒಟ್ಟು ವಿಸ್ತೀರ್ಣ 1.925 ಎಕರೆ. **Coordinates of the property Latitude- 13.162750, Longitude- 78.267083**	₹. 173.10	₹. 17.31	₹. 1.00
	ಒಟ್ಟು	₹. 192.90		

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: ದೂರವಾಣಿ ಸಂಖ್ಯೆ : 8598009010, 9966397756,8949226557 ಮತ್ತು 9039609346)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 28.01.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್‌ಸಿ ಕನಕಪುರ
ಸಿ.ಮಿಸ್ ನಂ: 804/2025

ಅರ್ಜಿದಾರರು: ಶ್ರೀಮತಿ ಗೌರಮ್ಮ ಮತ್ತು ಇತರರು ಕೋಂ ಮುನಿಬೈರಯ್ಯ ವಯಸ್ಸು 60 ವರ್ಷ ವಾಸ: ದೊಡ್ಡ ಏರಂಗೆರೆ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ತೋಕಸಂದ್ರ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 2ನೇ ಅರ್ಜಿದಾರರ ಅತ್ತೆ, ಹಾಗೂ 1,3 ಮತ್ತು 4ನೇ ಅರ್ಜಿದಾರರ ತಾಯಿಯವರಾದ ಸಿದ್ದಮ್ಮ ಕೋಂ ಲೇಟ್ ಮಾದಯ್ಯ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಗುತ್ತಲಹುಣಸೆ ಗ್ರಾಮದಲ್ಲಿ ದಿನಾಂಕ:13.07.2021 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ 07/03/2026ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2026 ರ ಜನವರಿ 13 ನೇ ತಾರೀಖು ಈ ದಿವಸ ನನ್ನ ಸಹಿ ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸುರೇಶ್ ಕುಮಾರ್.ಎಸ್
ವಕೀಲರು, ಕನಕಪುರ
ದಿನಾಂಕ: 30–12–2025
ಸ್ಥಳ: ಕನಕಪುರ

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ.532/2025

ಅರ್ಜಿದಾರರು: ಶ್ರೀಮತಿ ಚನ್ನವೀರಮ್ಮ ಕೋಂ ಲೇಟ್ ಸಿದ್ದೇಗೌಡ ವಯಸ್ಸು 77 ವರ್ಷ, ವಾಸ: ಕಪನೀಗೌಡನದೊಡ್ಡಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಕಪನೀಗೌಡನದೊಡ್ಡಿ ಗ್ರಾಮ, ಮಹಿಮನಹಳ್ಳಿ ದಾಖ್ಲೆ, ದೊಡ್ಡಆಲಹಳ್ಳಿ ವೃತ್ತ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ, ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅತ್ತೆ, 2,3,4 &5ನೇ ಅರ್ಜಿದಾರರ ಅಜ್ಜಿ ಹಾಗೂ 6ನೇ ಅರ್ಜಿದಾರರ ತಾಯಿಯವರಾದ ಮೃತ ವ್ಯಕ್ತಿ ಶ್ರೀಮತಿ ಕೆಂಪಮ್ಮ ಕೋಂ ಲೇಟ್ ನಾಗೇಗೌಡ ರವರು ದಿನಾಂಕ 20.02.1965 ರಂದು (ರಾಮನಗರ ಜಿಲ್ಲೆ) ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಕಪನಿಗೌಡನದೊಡ್ಡಿ ಸ್ವಗ್ರಾಮದಲ್ಲಿ ಮರಣ ಹೊಂದಿದ್ದು, ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ, ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ, ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 05.03.2026 ರ ಬೆಳಿಗ್ಗೆ ಸರಿಯಾಗಿ 11–00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
2026ರ ಜನವರಿ 22ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಪಿ.ಮಹೇಶ್, ವಕೀಲರು
ಸ್ಥಳ : ಕನಕಪುರ
ದಿನಾಂಕ : 22/01/2026

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 17.02.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 95,66,93,113.43 (ರೂಪಾಯಿ ತೊಂಭತ್ತೈದು ಕೋಟಿ ಅರವತ್ತಾರು ಲಕ್ಷದ ತೊಂಭತ್ತಮೂರು ಸಾವಿರದ ಒಂದುನೂರ ಹದಿಮೂರು ನಲವತ್ತಮೂರು ಪೈಸೆ ಮಾತ್ರ) ಜೊತೆಗೆ ದಿನಾಂಕ: 01.12.2025** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: (1) **ಮೆ॥ ಕಶ್ಯಪ್ ಕನ್ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್,** ನಂ.216/1, 1ನೇ ಮಹಡಿ, 3ನೇ ಹಂತ 100 ಅಡಿ ರಿಂಗ್ ರಸ್ತೆ, ಬಿಎಸ್‌ಕೆ 3ನೇ ಹಂತ, ಬೆಂಗಳೂರು–560085, (2) **ಸಂತೋಷ್ ಎಲ್ ಎಸ್,** (3) **ಶ್ರೀರಂಗರಾಜು ಎಲ್ ವಿ,** (4) **ಭಾರತಿ ಬಿ ಆರ್,** (5) **ಶ್ರೀಮತಿ. ವಾಣಿ ಎಂ, ಕ್ರ ಸಂ 2 ರಿಂದ 5 ಇವರೆಲ್ಲರ ವಿಳಾಸ:** ಸಂಖ್ಯೆ 537, ಜ್ಯೇಷ್ಠ, 3ನೇ ಮುಖ್ಯ ರಸ್ತೆ, ಹೊಸಕೆರೆಹಳ್ಳಿ ಕ್ರಾಸ್, ಬಿಎಸ್‌ಕೆ 3ನೇ ಹಂತ, ಗಿರಿನಗರ, ಬೆಂಗಳೂರು – 560085, (6) **ಶ್ರೀ. ಅಶೋಕ್ ರಾಜ್ ಎ,** (7) **ಶ್ರೀಮತಿ. ಜೋಸಿಮೆಟ್ಲೆಡಾ ಕ್ರ ಸಂ 6 ರಿಂದ 7 ಇವರುಗಳ ವಿಳಾಸ:** ನಂ 8, 13 ನೇ ಕ್ರಾಸ್, ರಮೇಶ್ ನಗರ, ಮಾರತಹಳ್ಳಿ, ಬೆಂಗಳೂರು–560037, (8) **ವೆಂಕಟೇಶ್ವರ ರವಿ ಪ್ರಸಾದ್ ಜೆ,** ಹೆಚ್ ನಂ 51/936–ಸಿ, ಹೊಸ ಬಸ್ ನಿಲ್ದಾಣದ ಎದುರು, ಬಳ್ಳಾರಿ ರಸ್ತೆ, ಕರ್ನೂಲ್–518001, (9) **ಬಸವರ ಪಟೇಲ್,** ನಂ.32, ಶಂಕರ್ 4ನೇ ಕ್ರಾಸ್, 1ನೇ ಮೇನ್ ಆರ್‌ಕೆ ಗಾರ್ಡನ್, ಹೊಸ ಬಿಇಎಲ್ ರಸ್ತೆ, ಬೆಂಗಳೂರು 560054. (10) **ಜೆ. ಗೋಪಾಲ್,** (11) **ಭಾಸ್ಕರ್ ಜೆ, ಕ್ರ ಸಂ 10 ರಿಂದ 11 ಇವರುಗಳ ವಿಳಾಸ:** ಸಂಖ್ಯೆ 51/913–ಎ, ಎದುರು. ಹೊಸ ಬಸ್ ನಿಲ್ದಾಣ ಬಳ್ಳಾರಿ ರಸ್ತೆ ಕರ್ನೂಲ್ 518001. (12) **ಶ್ರೀ ಜೆ ಸುಧಾಕರ್** ಬಿನ್ ಜೂಟೂರು ಚಿನ್ನ ಶೇಷಯ್ಯ ಶೆಟ್ಟಿ, ನಂ 51/1967–ಎ7 ಇಲ್ಲೂರು ನಗರ, ಕರ್ನೂಲ್ 518001. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **E-Wallet of M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 16.02.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ ಸಂ	ಆಸ್ತಿಯ ವಿವರ :	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಇಎಂಟಿ ಕಮರ್ಷಿಯಲ್ ಕಟ್ಟಡದ ಡೋರ್ ನಂ.51/936 ಜಿ, ಸರ್ವೆ ನಂ.403/2ಎ3, 404ಬಿ/2ಸಿ & 404/ಎ3, 51ನೇ ವಾರ್ಡ್, ಹೊಸ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಬಳ್ಳಾರಿ ರಸ್ತೆ, ಕರ್ನೂಲ್‌ನಲ್ಲಿದೆ. ಈ ಆಸ್ತಿಯು ಜೆ ಗೋಪಾಲ್, ಜೆ ಭಾಸ್ಕರ್, ಜೆ ಸುಧಾಕರ್, ಜೆ ವೆಂಕಟೇಶ್ವರ ರವಿ ಪ್ರಸಾದ್ ಅವರ ಜಂಟಿ ಹೆಸರಿನಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 3702.28 ಚದರ ಅಡಿ. **Coordinates of the property Latitude- 15.8255150, Longitude- 78.0279510**	₹. 990.00	₹. 99.00	₹. 1.00
2	ಇಎಂಟಿ ಕಮರ್ಷಿಯಲ್ ಕಟ್ಟಡದ ಡೋರ್ ನಂ.51/939 ಎ, ಸರ್ವೆ ನಂ.403/2ಎ3, 404ಬಿ/2ಸಿ & 404/ಎ3, 51ನೇ ವಾರ್ಡ್, ಹೊಸ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ, ಬಳ್ಳಾರಿ ರಸ್ತೆ, ಕರ್ನೂಲ್‌ನಲ್ಲಿದೆ. ಈ ಆಸ್ತಿಯು ಜೆ ಗೋಪಾಲ್, ಜೆ ಭಾಸ್ಕರ್, ಜೆ ಸುಧಾಕರ್, ಜೆ ವೆಂಕಟೇಶ್ವರ ರವಿ ಪ್ರಸಾದ್ ಅವರ ಜಂಟಿ ಹೆಸರಿನಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 6529.50 ಚದರ ಅಡಿ. **Coordinates of the property Latitude- 15.825509, Longitude- 78.028149**	₹. 720.00	₹. 72.00	₹. 1.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **E-Wallet of M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **080–25310066, 9483544116 ಮತ್ತು 8508442767** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 28.01.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಫೆ.2–17ರವರೆಗೆ ರಾಜ್ಯವ್ಯಾಪಿ ಚಳವಳಿ

ಬೆಂಗಳೂರು: ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತ ಹಾಗೂ ಗುಣಮಟ್ಟದ ಔಷಧಗಳ ಲಭ್ಯತೆ ಖಚಿತಪಡಿಸುವುದು ಮತ್ತು ಕರ್ನಾಟಕದಲ್ಲಿ ಆರೋಗ್ಯ ಹಕ್ಕು ಕಾಯಿದೆ ಜಾರಿಗೊಳಿಸುವುದರ ಬೇಡಿಕೆಗಳೊಂದಿಗೆ ಫೆ.2 ರಿಂದ 17 ರವರೆಗೆ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಆರೋಗ್ಯ ಹಕ್ಕಿನ ಜಾಥಾ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಾರ್ವತ್ರಿಕ ಆರೋಗ್ಯ ಆಂದೋಲನ–ಕರ್ನಾಟಕ ಸಂಘದ ಸದಸ್ಯೆ ಡಾ. ಎಸ್.ಬಿ.ಸ್ವಾತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿನ ದೋಷಗಳ ವಿರುದ್ಧ ಜನಜಾಗೃತಿ ಮೂಡಿಸುವುದೇ ಇದರ ಉದ್ದೇಶವಾಗಿದೆ. ಒಬ್ಬ ವ್ಯಕ್ತಿಯು ಹೊರರೋಗಿ ಚಿಕಿತ್ಸೆ ಪಡೆಯುವಾಗ ಒಟ್ಟು ವೆಚ್ಚದ ಶೇ.60ರಿಂದ 70ರಷ್ಟು ಹಣ ಔಷಧಗಳಿಗೆ ಖರ್ಚಾಗುತ್ತದೆ. ಸರಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆಯಿಂದ ರೋಗಿಗಳನ್ನು ಖಾಸಗಿ ಮೆಡಿಕಲ್ ಶಾಪ್‌ಗಳಿಗೆ ಕಳುಹಿಸಲಾಗುತ್ತಿದೆ. 2024ರಲ್ಲಿ 12 ಜಿಲ್ಲೆಗಳಲ್ಲಿ ನಡೆಸಿದ ತ್ವರಿತ ಸಮೀಕ್ಷೆಯಲ್ಲಿ 568 ಜನರು ಕೇವಲ ಅರ್ಧ ಗಂಟೆಯೊಳಗೆ ಔಷಧಗಳಿ ಗಾಗಿ 4.05 ಲಕ್ಷ ರು. ಖರ್ಚು ಮಾಡಿದ್ದಾರೆ ಎಂದರು. ತಮಿಳುನಾಡು, ಕೇರಳ ಮತ್ತು ರಾಜಸ್ಥಾನ ರಾಜ್ಯಗಳು ಉಚಿತ ಔಷಧ ವಿತರಣೆಗೆ ಬಲಿಷ್ಠ ವ್ಯವಸ್ಥೆ ರೂಪಿಸಿಕೊಂಡಿದ್ದರೂ, ಕರ್ನಾಟಕ ದಲ್ಲಿ 2003ರಲ್ಲಿ ಸ್ಥಾಪನೆಯಾದ ಕೆಎಸ್‌ಎಂಎಸ್‌ಸಿಎಲ್ ನಿರೀಕ್ಷಿತ ಫಲ ನೀಡಿಲ್ಲ. 2024ರ ಸಿಎಜಿ ವರದಿ ಸರಕಾರ ಔಷಧ ಖರೀದಿ ವ್ಯವಸ್ಥೆಯಲ್ಲಿನ ಗಂಭೀರ ದೋಷಗಳನ್ನು ಬಹಿರಂಗಪಡಿಸಿದೆ. ಸರಕಾರ ಆಸ್ಪತ್ರೆಗಳ ಮುಂದೆ ಖಾಸಗಿ ಫಾರ್ಮಸಿಗಳು ರಾಜಾರೋಷವಾಗಿ ವ್ಯಾಪಾರ ನಡೆಸುತ್ತಿರುವುದು ಈ ವಿಫಲತೆಯ ಸ್ಪಷ್ಟ ಸಾಕ್ಷಿ ಎಂದರು.

ಮಾಂಸ ಮಾರಾಟ ನಿಷೇಧ ನಾಳೆ

ಬೆಂಗಳೂರು: ಸರ್ವೋದಯ ದಿನದ ಪ್ರಯುಕ್ತ ಜ.30ರಂದು (ಶುಕ್ರವಾರ) ಜಿಬಿಎ ವ್ಯಾಪ್ತಿಯ ಕಸಾಯಿಖಾನೆಗಳಲ್ಲಿ ಪ್ರಾಣಿವಧೆ ಹಾಗೂ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಉಪ ನಿರ್ದೇಶಕರು ತಿಳಿಸಿದ್ದಾರೆ.

ತಂಬಾಕು ಜಾಹೀರಾತು ವಿರುದ್ಧ ಆಕ್ರೋಶ

ಬೆಂಗಳೂರು: ಬಿಎಂಟಿಸಿ ಬಸ್‌ಗಳ ಮೇಲೆ ಪ್ರದರ್ಶಿಸಲಾಗುತ್ತಿರುವ ತಂಬಾಕು ಮತ್ತು ಗುಟ್ಕಾ ಜಾಹೀರಾತುಗಳ ವಿರುದ್ಧ ಕನ್ನಡ ಪರ ಸಂಘಟನೆಗಳು ರೊಚ್ಚಿಗೆದ್ದಿದ್ದು, ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿ ಬಸ್‌ಗಳ ಮೇಲಿದ್ದ ಜಾಹೀರಾತುಗಳನ್ನು ಹರಿದು ಹಾಕಿ ಸಾರಿಗೆ ಸಂಸ್ಥೆಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಯುವ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಈ ಪ್ರತಿಭಟನೆಯ ನೇತೃತ್ವ ವಹಿಸಿ ದ್ದರು. ಸಾರಿಗೆ ಸಂಸ್ಥೆ ಕೇವಲ ಹಣದ ಆಸೆಗೆ ಬಿದ್ದು ನಗರದ ಸ್ವಚ್ಛತೆ ಮತ್ತು ಯುವ ಜನತೆಯ ಆರೋಗ್ಯದ ಜತೆ ಚೆಲ್ಲಾಟವಾಡುತ್ತಿದೆ. ವಿಮಲ್, ಆರ್‌ಎಂಡಿ ಸೇರಿ ಗುಟ್ಕಾ ಉತ್ಪನ್ನಗಳ ಬೃಹತ್ ಸ್ಟಿಕ್ಕರ್‌ಗಳನ್ನು ಬಸ್‌ಗಳಿಗೆ ಅಂಟಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದೆ.

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್

ನೋಂದಾಯಿತ ಮತ್ತು ಕಾರ್ಪೊರೇಟ್ ಕಛೇರಿ: ಅಗರ ಗ್ರಾಮದ ಸರ್ವೆ ಸಂಖ್ಯೆ 28/P16 ಮತ್ತು ಬಿ.ಎಮ್ ಕಾವಲ್ ಗ್ರಾಮದ ಸರ್ವೆ ಸಂಖ್ಯೆ 85/P6, ಕೆಂಗೇರಿ ಹೋಬಳಿ, ಬೆಂಗಳೂರು 560 082, ಕರ್ನಾಟಕ, ಭಾರತ
ಜಾಲತಾಣ: www.sjsindia.com | **ಇಮೇಲ್:** compliance@sjsindia.com | **ದೂರವಾಣಿ :** +91 80 6194 0777
CIN: L51909KA2005PLC036601

31ನೇ ಡಿಸೆಂಬರ್ 2025ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳು ಪರಿಷ್ಕರಿಸಿರದ ಸಂಯೋಜಿತ ಆರ್ಥಿಕ ಫಲಿತಾಂಶಗಳ ಸಾರ

(ಪ್ರತಿ ಷೇರಿನ ಡೇಟಾವನ್ನು ಹೊರತುಪಡಿಸಿ ಮಿಲಿಯನ್‌ಗಳಲ್ಲಿ ರೂಪಾಯಿಗಳು)

ಕ್ರಮ ಸಂಖ್ಯೆ	ವಿವರಗಳು	ತ್ರೈಮಾಸಿಕ ಕೊನೆಗೊಂಡಾಗ			ಒಂಬತ್ತು ತಿಂಗಳು ಕೊನೆಗೊಂಡಾಗ		ವರ್ಷ ಮುಗಿದಾಗ
		31.12.2025	30.09.2025	31.12.2024	31.12.2025	31.12.2024	31.03.2025
		ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಪರಿಶೋಧಿಸಲಾಗಿದೆ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	2435.31	2417.57	1785.62	6949.46	5599.74	7,604.86
2	ನಿವ್ವಳ ಲಾಭ ಅವಧಿಗೆ (ತೆರಿಗೆ ಅಸಾಧಾರಣ ವಸ್ತುಗಳ ಮೊದಲು)	602.54	580.46	358.58	1642.37	1122.65	1,528.64
3	ನಿವ್ವಳ ಲಾಭ ತೆರಿಗೆಗೆ ಮುಂಚಿನ ಅವಧಿಗೆ (ಅಸಾಧಾರಣ ವಸ್ತುಗಳ ನಂತರ)	602.54	580.46	358.58	1642.37	1122.65	1,528.64
4	ತೆರಿಗೆಯ ನಂತರ ಹಾಗೂ ಅಪವಾದಾತ್ಮಕ (ಅನಾಧಾರಣ) ಐಟಮ್ಗಳ ನಂತರದ ಅವಧಿಗಾಗಿ ನಿವ್ವಳ ಲಾಭ	450.39	432.69	277.11	1229.24	850.98	1,188.32
5	ಅವಧಿಗೆ ಒಟ್ಟು ಸಮಗ್ರ ಆದಾಯ ಅವಧಿಯ ಲಾಭ [(ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	451.89	437.43	276.25	1226.52	839.16	1,178.83
6	ಇಕ್ವಿಟಿ ಶೇರ್ ಕ್ಯಾಪಿಟಲ್ (ತಲಾ - ರೂ.10/- ರ ಮುಖ ಬೆಲೆ)	319.49	313.87	313.20	319.49	313.20	313.26
7	ಇತರ ಇಕ್ವಿಟಿ	-	-		-		6,458.54
8	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 10/- ರಂತೆ)	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿದೆ
	1. ಬೇಸಿಕ್ (ವಾರ್ಷಿಕಗೊಳಿಸಲಾಗಿಲ್ಲ)	14.05	13.73	8.83	38.83	27.14	37.82
	2. ಡೈಲ್ಯೂಟೆಡ್ (ವಾರ್ಷಿಕಗೊಳಿಸಲಾಗಿಲ್ಲ)	13.77	13.32	8.58	38.14	26.48	36.88

ಟಿಪ್ಪಣಿಗಳು
1. ಕಂಪನಿಯ ಪ್ರಮುಖ ಸ್ವತಂತ್ರ ಹಣಕಾಸು ಮಾಹಿತಿಯನ್ನು ಕೆಳಗೆ ನೀಡಲಾಗಿದೆ:

(ಮಿಲಿಯನ್‌ಗಳಲ್ಲಿ ರೂಪಾಯಿಗಳು)

ಕ್ರಮ ಸಂಖ್ಯೆ	ವಿವರಗಳು	ತ್ರೈಮಾಸಿಕ ಕೊನೆಗೊಂಡಾಗ			ಒಂಬತ್ತು ತಿಂಗಳು ಕೊನೆಗೊಂಡಾಗ		ವರ್ಷ ಮುಗಿದಾಗ
		31.12.2025	30.09.2025	31.12.2024	31.12.2025	31.12.2024	31.03.2025
		ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಪರಿಶೋಧಿಸಲಾಗಿದೆ
1	ಒಟ್ಟು ಆದಾಯ / ಕಾರ್ಯಾಚರಣೆಗಳಿಂದ ಆದಾಯ	1486.26	1453.06	928.64	4176.54	2951.79	3,980.05
2	ತೆರಿಗೆಗೆ ಮುಂಚಿನ ಲಾಭ	456.72	434.04	265.62	1256.01	867.29	1128.59
3	ತೆರಿಗೆಯ ನಂತರದ ಲಾಭ	340.74	323.19	209.88	937.06	674.37	919.93
4	ಒಟ್ಟು ಸಮಗ್ರ ಆದಾಯ	341.15	327.70	207.96	935.04	665.47	914.53

2. 31 ಡಿಸೆಂಬರ್ 2025ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಸಲುವಾಗಿ ಪರಿಷ್ಕರಿಸಿರದ ಈ ಮೇಲಿನ ಸಂಯೋಜಿತ ಮತ್ತು ಸ್ವತಂತ್ರ ಆರ್ಥಿಕ ಫಲಿತಾಂಶಗಳು ಅಡಿಟ್ ಕಮಿಟಿಯಿಂದ ಪುನರಾವಲೋಕನೆ ಮಾಡಲ್ಪಟ್ಟಿದೆ ಮತ್ತು ಆ ಬಳಿಕ ನಿರ್ದೇಶಕರ ಮಂಡಳಿಯಿಂದ 28ನೇ ಜನವರಿ 2026 ರಂದು ಜರಗಿದ ಅವರ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿದೆ.
3. ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಮಾವಳಿ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್ ಗಳಿಗೆ ಸಲ್ಲಿಸಲಾದ ಪರಿಶೋಧಿಸಿರದ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಹಣಕಾಸು ಫಲಿತಾಂಶಗಳ ಸಾರ ಮೇಲೆ ನೀಡಲಾಗಿದೆ. ವಿವರವಾದ ಲೆಕ್ಕಪರಿಶೋಧನೆಯಿಲ್ಲದ ತ್ರೈ ಮಾಸಿಕ ಹಣಕಾಸು ಫಲಿತಾಂಶಗಳು ಬಿಎಸ್‌ಇ ಲಿಮಿಟೆಡ್ ವೆಬ್‌ಸೈಟ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ವೆಬ್ ಸೈಟ್ www.nseindia.com ನಲ್ಲಿ ಮತ್ತು ಕಂಪೆನಿಯ ವೆಬ್‌ಸೈಟ್ www.sjsindia.com ನಲ್ಲಿಯೂ ಲಭ್ಯವಿದೆ.

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಕೆ ಎ ಜೋಸೆಫ್
ಮ್ಯಾನೇಜಿಂಗ್ ಡೈರೆಕ್ಟರ್
ಡಿನ್: 00784084

ಸ್ಥಳ: ಬೆಂಗಳೂರು
ದಿನಾಂಕ: 28ನೇ ಜನವರಿ 2026

CONCEPT

Aadhar Housing Finance Ltd
GHAR BANEGA, TOH DESH BANEGA.

AADHAR HOUSING FINANCE LIMITED

CIN: L66010KA1990PLC011409. Registered Office: No. 3, JVT Towers, 2nd floor, 8th 'A' Main Road, Sampangi Rama Nagar, Bengaluru, Karnataka, 560027.Number: 022-41689900;
Email : complianceofficer@aadharhousing.com; Website: https://aadharhousing.com

Recommendations of the Committee of Independent Directors (**"IDC"**) of Aadhar Housing Finance Limited(**"Target Company"**) under Regulation 26(7) of Securities and Exchange Board of India (Substantial Acquisition of Shares and Takeovers) Regulations, 2011, as amended (**"SEBI (SAST) Regulations"**) to the public shareholders of the Target Company in relation to the open offer made by BCP Asia II Holdco VII Pte. Ltd. (**"Acquirer"**) together with Blackstone Capital Partners (CYM) IX AIV - F L.P. (**"PAC 1"**) and Blackstone Capital Partners Asia II L.P. (**"PAC 2"**) (together, the **"PACs"**) in their capacity as the persons acting in concert with the Acquirer for the purpose of the open offer made to the public shareholders of the Target Company (**"Open Offer"**)

1	Date	January 27, 2026
2	Name of the Target Company (TC)	Aadhar Housing Finance Limited
3	Details of the Offer pertaining to TC	The Open Offer is being made by the Acquirer along with the PACs to the public shareholders of the Target Company under Regulations 3, 4 and other applicable regulations of the SEBI (SAST) Regulations, for acquisition of up to 11,35,25,761 (eleven crore thirty five lakh twenty five thousand seven hundred and sixty one) fully paid up equity shares of the Target Company having face value of INR 10/- (Indian Rupees Ten) each (**"Equity Shares"**), representing 25.82% of the expanded voting share capital of the Target Company, from the public shareholders of the Target Company for cash at a price of INR 469.97 (Indian Rupees Four Hundred and Sixty Nine point Nine Seven) along with applicable interest of INR 2.71/- (Indian Rupees Two point seven one) per Equity Share (**"Applicable Interest"**) amounting to INR 472.68 (Indian Rupees Four Hundred Seventy Two point six eight) (**"Offer Price"**). The public announcement dated July 25, 2025 (**"PA"**), the detailed public statement dated July 31, 2025 (**"DPS"**), the draft letter of offer filed with SEBI on August 8, 2025 (**"DLOF"**), and the letter of offer dated January 24, 2026 (**"LOF"**) issued by JM Financial Limited, the manager (**"Manager"**) to the Open Offer on behalf of the Acquirer and the PACs.
4	Name(s) of the Acquirer and PACs with the Acquirer	**Acquirer:** BCP Asia II Holdco VII Pte. Ltd. **PACs:** a) Blackstone Capital Partners (CYM) IX AIV - F L.P. b) Blackstone Capital Partners Asia II L.P.
5	Name of the Manager to the Open Offer	**JM Financial Limited** **Address:** 7th Floor, Cnergy, Appasaheb Marathe Marg, Prabhadevi, Mumbai - 400 025, India **Tel:** + 91 22 6630 3030, **Fax:** +91 22 6630 3330 **Email:** adharhousing.openoffer@jmfl.com **Website:** https://www.jmfl.com **Contact Person:** Ms. Prachee Dhuri **SEBI Registration Number:** INM000010361 **CIN:** L67120MH1986PLC038784
6	Members of the Committee of Independent Directors (Please indicate the chairperson of the Committee separately)	a) Mr. Raj Vikash Verma, Chairperson of the ID Committee b) Mrs. Sharmila A. Karve c) Dr. Punita Kumar Sinha
7	IDC Member's relationship with the TC (Director, equity shares owned, any other contract/ relationship), if any	Members of the IDC are Non-Executive Independent Directors of the Target Company. None of the members of the IDC hold any equity shares or other securities or have entered into any other contract / relationship with the Target Company except as directors on the board of directors of the Target Company and as member(s) / chairperson(s) of board committee(s).
8	Trading in the equity shares/ other securities of the TC by IDC Members	None of the members of the IDC have traded in any of the Equity Shares/ securities of the Target Company during the: a) 12 months period preceding the date of the PA; and b) period from the date of the PA and till the date of this recommendation.
9	IDC Member's relationship with the Acquirer and PACs (Director, equity shares owned, any other contract/ relationship), if any.	None of the members of the IDC: a) are directors on the boards of the Acquirer or the PACs; b) hold any equity shares or other securities of the Acquirer or the PACs; and c) have any contracts/ relationship with the Acquirer or the PACs.
10	Trading in the equity shares/ other securities of the Acquirer and PACs by IDC Members	None of the members of the IDC have traded in any of the equity shares/ securities of the Acquirer or the PACs during the: a) 12 months period preceding the date of the PA; and b) period from the date of the PA and till the date of this recommendation.
11	Recommendation on the Open Offer, as to whether the offer is fair and reasonable	The IDC has perused the PA, DPS, DLOF and LOF issued in relation to the Open Offer by the Manager to the Open Offer on behalf of Acquirer and the PACs. Based on a review of the above and the relevant information (as set out in the summary of reasons for recommendation below), the IDC is of the opinion that the Offer Price to the public shareholders of the Target Company is in compliance with the SEBI (SAST) Regulations and hence is fair and reasonable. The public shareholders of the Target Company are, however, advised to independently evaluate the Open Offer and take an informed decision whether or not to tender their shares in the Open Offer.
12	Summary of reasons for recommendations	The IDC has perused the PA, DPS, DLOF and LOF issued in relation to the Open Offer by the Manager to the Open Offer on behalf of Acquirer and the PACs. The recommendation of the IDC set out in the paragraph above is based on the following: a) The Applicable Interest of INR 2.71/- (Indian Rupees Two point seven one) per Equity Share computed at 10% per annum has been offered by the Acquirer for the period of delay in making the payment to the public shareholders of the Target Company, in accordance with the requirements under SEBI (SAST) Regulations; b) The Offer Price is in accordance with Regulation 8(2) of the SEBI (SAST) Regulations; c) The Offer Price is higher than the highest negotiated price per share of the Target Company under the agreement attracting the obligation to make the Open Offer i.e. INR 425.00/- (Indian Rupees Four Hundred and Twenty Five only) per Equity Share; and d) The Offer Price is equal to the volume weighted average market price of Equity Shares of the Target Company for a period of sixty trading days immediately preceding the date of the PA as traded on The National Stock Exchange of India Ltd (**"NSE"**), being the stock exchange where the maximum volume of trading in the shares of the Target Company are recorded i.e. INR 469.97/- (Indian Rupees Four Hundred and Sixty Nine point Nine Seven) per Equity Share. Considering the market price at a given point of time, the public shareholders of the Target Company are, however, advised to independently evaluate the Open Offer and take an informed decision about tendering the Equity Shares held by them in the Open Offer. The statement of recommendation will be available on the website of the Target Company at https://aadharhousing.com/.
13	Disclosure of the voting pattern	The recommendations were unanimously approved by the members of the IDC present at the meeting of the IDC held on January 27, 2026.
14	Details of Independent Advisors, if any.	None
15	Any other matter(s) to be highlighted	None

To the best of our knowledge and belief, after making proper enquiry, the information contained in or accompanying this statement is, in all material respects, true and correct and not misleading, whether by omission of any information or otherwise, and includes all the information required to be disclosed by the Target Company under the SEBI (SAST) Regulations.

For and on behalf of the **Committee of the Independent Directors of Aadhar Housing Finance Limited**
Sd/-
Mr. Raj Vikash Verma
Chairperson - Committee of Independent Directors
DIN: 03546341

Place: Gurugram
Date: January 27, 2026

CONCEPT

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ.531/2025

ಅರ್ಜಿದಾರರು: ಶ್ರೀಮತಿ ಚನ್ನವೀರಮ್ಮ ಕೋಂ ಲೇಟ್ ಸಿದ್ದೇಗೌಡ ವಯಸ್ಸು 77 ವರ್ಷ, ವಾಸ: ಕಪನೀಗೌಡನದೊಡ್ಡಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಕಪನೀಗೌಡನದೊಡ್ಡಿ ಗ್ರಾಮ, ಮಹಿಮನಹಳ್ಳಿ ದಾಖ್ಲೆ, ದೊಡ್ಡಆಲಹಳ್ಳಿ ವೃತ್ತ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ, ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಪತಿ, 2ನೇ ಅರ್ಜಿದಾರರ ಮಾವ, 3,4,5ನೇ ಅರ್ಜಿದಾರರ ತಂದೆ ಹಾಗೂ 6ನೇ ಅರ್ಜಿದಾರರ ಅಣ್ಣನಾದ ಮೃತ ವ್ಯಕ್ತಿ ಶ್ರೀ ಸಿದ್ದೇಗೌಡ ಬಿನ್ ಲೇಟ್ ನಾಗೇಗೌಡ ರವರು ದಿನಾಂಕ 10.05.1985 ರಂದು (ರಾಮನಗರ ಜಿಲ್ಲೆ) ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಕಪನಿಗೌಡನದೊಡ್ಡಿ ಸ್ವಗ್ರಾಮದಲ್ಲಿ ಮರಣ ಹೊಂದಿದ್ದು, ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ, ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ, ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 05.03.2026 ರ ಬೆಳಿಗ್ಗೆ ಸರಿಯಾಗಿ 11–00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
2026ರ ಜನವರಿ 22ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಪಿ.ಮಹೇಶ್, ವಕೀಲರು
ಸ್ಥಳ : ಕನಕಪುರ
ದಿನಾಂಕ : 22/01/2026

ಚಿತ್ತವಿಹಾರ

ಇಂದಿನ ಸೋಲು ನಾಳಿನ ಗೆಲುವು

● ರಂಗನಾಥ್ ಗುಡಿಮನಿ

ಈ ಜೀವನವೇ ಏರುಪೇರಿನ ಗಾಯನ. ಒಮ್ಮೆ ನೋವು-ಒಮ್ಮೆ ನಲಿವು, ಒಮ್ಮೆ ಸೋಲು-ಒಮ್ಮೆ ಗೆಲುವು, ಒಮ್ಮೆ ಸರಸ-ಒಮ್ಮೆ ವಿರಸ ಎನ್ನುವ ಸೋಲು ಗೆಲುವಿನ ಆಟ ಇಲ್ಲಿ ಸಾಮಾನ್ಯ. ಪ್ರತಿಯೊಬ್ಬರ ಕನಸಿನಲ್ಲೂ ಬೆಚ್ಚಿಸುವ ಕತ್ತಲೆಯೇ ಸೋಲು. ಗೆಲುವು ಇದರ ತದ್ವಿರುದ್ಧ. ಮುಖದ ತುಂಬ ಮಂದಹಾಸ ಮೂಡಿಸಿ, ತಮ್ಮ ಮೇಲೆಯೇ ತಮಗೆ ವ್ಯತಿರಿಕ್ತ ನಂಬಿಕೆಯು ಕೊನರುವಂತೆ ಮಾಡುವುದೇ ಗೆಲುವು. ಇಂದು ಸೋತವರು, ನಾಳೆ ಗೆದ್ದೇ ಗೆಲ್ಲುವರು. ಇದು ಪ್ರಕೃತಿಯ ನಿಯಮ, ಮೇಲಾಗಿ ಸೋಲೇ ಗೆಲುವಿನ ಸೋಪಾನ ಎನ್ನುವುದನ್ನು ಯಾವತ್ತೂ ಮರೆಯಬಾರದು. ಸೋತು ಗೆಲ್ಲಬೇಕು, ಅಂದಾಗಲೇ ನಮಗೆ, ನಮ್ಮ ಗೆಲುವಿಗೊಂದು ಬೆಲೆ. ಗೆದ್ದು ಸೋತು ಹೋದರೆ ಆತ ಸಂಪೂರ್ಣ ನಿಷ್ಪ್ರಯೋಜಕನಾಗಿ, ಅವನ ನೆರಳೇ ಅವನಿಗೆ ವೈರಿಯಂತೆ ಭಾಸವಾಗುವುದು.

ಜಗತ್ತು ಗೆದ್ದವರನ್ನು ಒಂದು ಕಣ್ಣಿನಿಂದ ನೋಡಿದರೆ, ಅದೇ ಸೋತವರನ್ನು ಮತ್ತೊಂದು ಕಣ್ಣಿನಿಂದ ನೋಡುತ್ತದೆ. ಸೋತಾಗ ಸೋಲಿನ ಕುರಿತಾಗಿ ಪರಾಮರ್ಶೆ ಮಾಡಿಕೊಂಡರೆ, ನಂತರ ಬಂದೊದಗುವ ಮಹತ್ವದ ಹಂತವೇ ಗೆಲುವು. ಸೋತಾಗ ಕುಗ್ಗದೇ, ಗೆದ್ದಾಗ ಹಿಗ್ಗದೇ ಎರಡನ್ನೂ ಸರಿ ಸಮಾನವಾಗಿ ಸ್ವೀಕರಿಸುವ ಧಾರಾಳ ಮನಸ್ಸಿರಲಿ. ಗೆದ್ದಾಗ ಮಿತಿಮೀರಿ ವಿಜೃಂಭಿಸುವ ನಾವು, ಸೋತಾಗಲೂ ಸಂಭ್ರಮಿಸುವ ಪಡಿಪಾಟಲನ್ನು ರೂಢಿಸಿಕೊಳ್ಳಬೇಕು. ಇಂದು ಸೋತಿರಬಹುದು. ಈ ದಿನವೇ ನಮ್ಮದಲ್ಲ ಎಂದುಕೊಳ್ಳಬೇಕು. ನಾಳೆ ನಮಗಾಗಿಯೇ ಗೆಲುವಿನ ದಿನವೊಂದು, ಮರೆಯಲಿ ದಾರಿ ಕಾಯುತಾ ನಿಂತಿದೆ ಎನ್ನುವ ಭರವಸೆಯ ಬೆಳ್ಳಿ ಬೆಳಕು ನಮ್ಮಲ್ಲಿರಲಿ.

ಸತತ ಪ್ರಯತ್ನ ಹಾಗೂ ಸ್ವಚ್ಛ ಮನಸ್ಸಿನವರೇ ಗೆಲುವಿನ ರೂವಾರಿಗಳು. ಅವರು ಯಾರೇ ಇರಲಿ, ಹೇಗೋ ಗೆಲ್ಲಲಿ, ಅವರನ್ನು ಆತ್ಮೀಯವಾಗಿ ಇಲ್ಲೆಲ್ಲರೂ ತಬ್ಬಿಕೊಳ್ಳುವರು. ಸೋತವರನ್ನು ನಿರ್ದಾಕ್ಷಿಣ್ಯವಾಗಿ ದೂರ ತಳ್ಳುವರು. ಗೆಲುವಿಗೆ ಇಲ್ಲಿ ಅಪಾರ ಗೆಳೆಯರು. ಸೋಲು ಅನಾಥ. ಎಲ್ಲಿ ಸೋಲುತ್ತೇವೋ ಅಲ್ಲಿಂದ ಕೊಂಚವೂ ವಿರಮಿಸಬಾರದು. ನಮ್ಮ ಹೊಸ ಹೊಸ ಆಚಾರ, ವಿಚಾರ, ಕಾರ್ಯ ಕಲಾಪಗಳು ಆಕಾಶದೆತ್ತರಕ್ಕೆ ನೆಗೆಯಬೇಕು. ಇಲ್ಲದೇ ಹೋದರೆ ಗೆಲುವಿನ ಕನಸು ಕನಸಾಗಿಯೇ ಉಳಿಯುತ್ತದೆ.

ಬದುಕೆಂಬ ಸುಂದರ ಯಾತ್ರೆ

● ವಿಜಯಕುಮಾರ್ ಕಟ್ಟೆ

ಬದುಕು ಒಂದು ನಿರಂತರ ಯಾತ್ರೆಯಾಗಿದೆ. ಮನುಷ್ಯನು ಹುಟ್ಟಿದ ಕ್ಷಣದಿಂದಲೇ ಈ ಯಾತ್ರೆಯನ್ನು ಆರಂಭಿಸುತ್ತಾನೆ. ಅದು ನೇರವಾದ ರಸ್ತೆಯಲ್ಲ. ಬದಲಾಗಿ, ಏರು-ತಗ್ಗುಗಳ, ಅಡ್ಡದಾರಿಗಳ, ಸುಂದರವಾದ ನೋಟಗಳ ಮತ್ತು ಕತ್ತಲು ಗುಹೆಗಳಿಂದ ಕೂಡಿದ ಒಂದು ದೀರ್ಘ ಪ್ರಯಾಣ. ಪ್ರತಿಯೊಬ್ಬರ ಜೀವನ ಯಾತ್ರೆಯೂ ಅನನ್ಯವಾದುದಾಗಿದೆ.

ಈ ಪಯಣದಲ್ಲಿ ಸುಖ-ದುಃಖ, ಜಯ-ಪರಾಜಯ, ನಗು-ಅಳು ಎಲ್ಲವೂ ಜತೆಯಾಗಿರುತ್ತವೆ, ಎರಡೂ ಅನಿವಾರ್ಯ. ಕೇವಲ ಸುಖವೇ ಬೇಕು, ನಗುವೇ ಬೇಕು, ಕಷ್ಟ ಒಂದಿಷ್ಟು ಬೇಡ ಎನ್ನುವ ಹಾಗಿಲ್ಲ. ಯಾರ ಬದುಕಿನ ಯಾತ್ರೆಯಲ್ಲಿಯೂ ಸಹ ಎಲ್ಲ ದಾರಿಗಳು ಸರಳವಾಗಿರುವುದಿಲ್ಲ.

ಬದುಕು ಅನುಭವದ ಪಾಠ

ಬದುಕಿನ ಯಾತ್ರೆಯಲ್ಲಿ ಗಮ್ಯಸ್ಥಾನವೇ ಅಲ್ಲ, ಪ್ರಯಾಣವೇ ಮುಖ್ಯ. ನಾವು ಸಾಗಿದ ದಾರಿ, ಭೇಟಿಯಾದ ಜನ, ಪ್ರೀತಿಸಿದ ವ್ಯಕ್ತಿಗಳು, ಸ್ವೀಕರಿಸಿದ ಪಾಠಗಳು ಇವೆಲ್ಲವೂ ನಮ್ಮನ್ನು ರೂಪಿಸುತ್ತದೆ. ಕಷ್ಟಗಳು ನಮ್ಮನ್ನು ಬಲಪಡಿಸುತ್ತವೆ, ಸಂತೋಷಗಳು ನಮ್ಮನ್ನು ಉತ್ಸಾಹವಂತರನ್ನಾಗಿ ಮಾಡುತ್ತವೆ. ಪ್ರತೀ ಹೆಜ್ಜೆಯೂ, ಸಣ್ಣದಾಗಿದ್ದರೂ ಸಹ, ನಮ್ಮ ಕಥೆಯ ಒಂದು ಭಾಗವಾಗುತ್ತದೆ. ಬದುಕಿನ ಯಾತ್ರೆಯಲ್ಲಿ ಪ್ರತಿಯೊಬ್ಬನಿಗೂ ಕೂಡ ತನ್ನದೇ ಆದ ಕನಸುಗಳಿರುತ್ತವೆ. ಆ ಕನಸುಗಳನ್ನು ನನಸು ಮಾಡಿಕೊಳ್ಳಲು ಪರಿಶ್ರಮ, ಸಹನೆ ಮತ್ತು ಆತ್ಮವಿಶ್ವಾಸ ಅಗತ್ಯ. ಕೆಲವೊಮ್ಮೆ ವಿಫಲತೆಗಳು ಎದುರಾಗುತ್ತವೆ. ಅವು ನಮ್ಮನ್ನು ಹತಾಶರನ್ನಾಗಿಸದೆ, ಪಾಠ ಕಲಿಸಿ ಮುಂದಕ್ಕೆ ಸಾಗಲು ಪ್ರೇರಣೆ ನೀಡುವಂತಿರಬೇಕು.

ಬದುಕೆಂಬ ಚಾರಣದಲ್ಲಿ ನಾವು ಒಂಟಿಯಾಗಿ ಹೊರಡುತ್ತೇವೆ, ಆದರೆ ದಾರಿಯಲ್ಲಿ ಅನೇಕರನ್ನು ಭೇಟಿಯಾಗುತ್ತೇವೆ. ಕೆಲವರು ಸ್ವಲ್ಪ ದೂರ ಸಹಚರರಾಗಿ ಬರುತ್ತಾರೆ, ನಮ್ಮ ಹೆಜ್ಜೆಗಳಿಗೆ ಹೊಂದಿಕೊಂಡು ನಡೆಯುತ್ತಾರೆ. ಕೆಲವರು ವಿರುದ್ಧ ದಿಕ್ಕಿನಿಂದ ಬರುತ್ತಾರೆ, ಅವರ ದಾರಿಯ ಕಥೆಗಳನ್ನು ಹಂಚಿಕೊಂಡು ಮುಂದೆ ಸಾಗುತ್ತಾರೆ. ಹಲವರು ದೂರದಿಂದಲೇ ನಮ್ಮ ನಡೆಯನ್ನು ನೋಡುತ್ತಾರೆ, ಸ್ಫೂರ್ತಿಯಾಗಿ ನಿಲ್ಲುತ್ತಾರೆ. ಪ್ರತೀ ಭೇಟಿಯೂ ಒಂದು ಗುರುತು, ಒಂದು ಪಾಠ. ಈ ಯಾತ್ರೆಯಲ್ಲಿ ನಮ್ಮ ಹೆತ್ತವರು, ಇತರ ಕುಟುಂಬದ ಸದಸ್ಯರು ಹೆಂಡತಿ ಮಕ್ಕಳು ಮತ್ತು ಸ್ನೇಹಿತರು ನಮ್ಮ ಸಹಯಾತ್ರಿಗಳಾಗುತ್ತಾರೆ. ಅವರ ಪ್ರೀತಿ, ಮಾರ್ಗದರ್ಶನ ಮತ್ತು ಬೆಂಬಲ ನಮ್ಮ ಬದುಕನ್ನು ಅರ್ಥಪೂರ್ಣವಾಗಿಸುತ್ತದೆ. ಆದರೂ ಜೀವನದ ಕೆಲವು ನಿರ್ಧಾರಗಳನ್ನು ನಾವು ತಾವೇ ತೆಗೆದುಕೊಳ್ಳಬೇಕು. ನಮ್ಮ ದಾರಿಯನ್ನು ನಾವು ತಾವೇ ಹುಡುಕಬೇಕು.

ಈ ಬದುಕಿನ ಯಾತ್ರೆಯನ್ನು ಸಾರ್ಥಕಗೊಳಿಸಲು ನಮ್ಮ ನೈತಿಕ ಮೌಲ್ಯಗಳು ದಿಕ್ಕು ತೋರಿಸುವ ದೀಪಗಳಂತಿರುತ್ತದೆ. ಸತ್ಯ, ಪ್ರಾಮಾಣಿಕತೆ, ಕರುಣೆ ಮತ್ತು ಸಹಾನುಭೂತಿಗಳೊಂದಿಗೆ ಸಾಗಿದರೆ ಬದುಕಿನ ಪಯಣ ಸುಂದರವಾಗುತ್ತದೆ. ಕಷ್ಟಗಳಲ್ಲಿ ಧೈರ್ಯ ಕಳೆದುಕೊಳ್ಳದೆ, ಸಂತೋಷದಲ್ಲಿ ಅಹಂಕಾರಪಡದೆ ಸಾಗುವುದೇ ಬದುಕಿನ ಸಾರ್ಥಕತೆ. ಹೀಗಾಗಿ ಬದುಕು ಎಂಬ ಯಾತ್ರೆಯನ್ನು ಪ್ರೀತಿಯಿಂದ ಸ್ವೀಕರಿಸಿ, ಪ್ರತಿಕ್ಷಣವನ್ನೂ ಅರ್ಥಪೂರ್ಣವಾಗಿ ಬದುಕಿದರೆ ನಮ್ಮ ಜೀವನ ಸಫಲವಾಗುತ್ತದೆ. ಬದುಕಿನಲ್ಲಿ ನಾವು ನಮ್ಮ ಸುತ್ತಲಿನ ವಿಶ್ವವನ್ನು ಅರಿಯಲು ಪ್ರಾರಂಭಿಸುತ್ತೇವೆ. ಬಿದ್ದು ಎದ್ದು, ನೋವಿನಿಂದಲೂ ಸಂತೋಷದಿಂದಲೂ ಕಲಿಯುತ್ತೇವೆ. ಕಾಲ ಕಳೆದಂತೆ ಯೌವನದ ಉತ್ಸಾಹ ನಮ್ಮನ್ನು ಮುನ್ನಡೆಸುತ್ತದೆ. ಆಸೆಗಳು, ಕನಸುಗಳು ಮತ್ತು ಧ್ಯೇಯಗಳು ನಮ್ಮ ಮಾರ್ಗದರ್ಶಕ ನಕ್ಷತ್ರಗಳಾಗುತ್ತವೆ. ನಾವು ಪ್ರೀತಿಯನ್ನು ಕಂಡುಕೊಳ್ಳುತ್ತೇವೆ, ಹೃದಯವನ್ನು ತೆರೆಯುತ್ತೇವೆ ಮತ್ತು ಕೆಲವೊಮ್ಮೆ ಮುರಿದುಕೊಳ್ಳುತ್ತೇವೆ. ಪ್ರತಿಯೊಂದು ಅನುಭವವೂ ಅನನ್ಯ.

ಬದುಕೆಂಬ ಚಾರಣದಲ್ಲಿ ನಾವು ಒಂಟಿಯಾಗಿ ಹೊರಡುತ್ತೇವೆ, ಆದರೆ ದಾರಿಯಲ್ಲಿ ಅನೇಕರನ್ನು ಭೇಟಿಯಾಗುತ್ತೇವೆ. ಕೆಲವರು ಸ್ವಲ್ಪ ದೂರ ಸಹಚರರಾಗಿ ಬರುತ್ತಾರೆ, ನಮ್ಮ ಹೆಜ್ಜೆಗಳಿಗೆ ಹೊಂದಿಕೊಂಡು ನಡೆಯುತ್ತಾರೆ. ಕೆಲವರು ವಿರುದ್ಧ ದಿಕ್ಕಿನಿಂದ ಬರುತ್ತಾರೆ, ಅವರ ದಾರಿಯ ಕಥೆಗಳನ್ನು ಹಂಚಿಕೊಂಡು ಮುಂದೆ ಸಾಗುತ್ತಾರೆ. ಹಲವರು ದೂರದಿಂದಲೇ ನಮ್ಮ ನಡೆಯನ್ನು ನೋಡುತ್ತಾರೆ, ಸ್ಫೂರ್ತಿಯಾಗಿ ನಿಲ್ಲುತ್ತಾರೆ.

ನಂತರ ಜವಾಬ್ದಾರಿಯ ಕಾಲ. ಅದು ಸಾಮಾನ್ಯವಾಗಿ ಯಾತ್ರೆಯ ಅತ್ಯಂತ ಉದ್ದನೆಯ ಭಾಗ. ಅಲ್ಲಿ ನಾವು ಕುಟುಂಬವನ್ನು ಕಟ್ಟುತ್ತೇವೆ, ವೃತ್ತಿಯನ್ನು ಗಳಿಸುತ್ತೇವೆ, ಸಮಾಜದಲ್ಲಿ ನಮ್ಮ ಸ್ಥಾನವನ್ನು ರೂಪಿಸುತ್ತೇವೆ. ಸಂತೋಷಗಳು ಮತ್ತು ಸವಾಲುಗಳು ಜತೆಜತೆಯಾಗಿ ಬರುತ್ತವೆ. ಯಶಸ್ಸುಗಳು ನಮಗೆ ಹೆಮ್ಮೆಯಾದರೆ, ವಿಫಲತೆಗಳು ನಮಗೆ ವಿನಮ್ರತೆಯನ್ನು ಕಲಿಸುತ್ತವೆ. ನಾವು ಇತರರೊಂದಿಗೆ ಸಂಬಂಧಗಳನ್ನು ಬೆಳೆಸುತ್ತೇವೆ, ಕೆಲವು ಜೀವನಪರ್ಯಂತ ಉಳಿದರೆ, ಕೆಲವು ಕೇವಲ ಒಂದು ಋತುವಿನಂತೆ ಕಳೆದುಹೋಗುತ್ತವೆ.

ವೃದ್ಧಾಪ್ಯದೆಡೆಗೆ ಸಾಗುತ್ತಿರುವಾಗ, ಯಾತ್ರೆಯ ಗತಿ ನಿಧಾನವಾಗುತ್ತದೆ. ನಾವು ಹಿಂದೆ ನಡೆದ ಮಾರ್ಗವನ್ನು ಚಿಂತನೆ ಮಾಡಲು ಪ್ರಾರಂಭಿಸುತ್ತೇವೆ, ನಮ್ಮ ಕಥೆಯ ಪುಟಗಳನ್ನು ತಿರುವುತ್ತೇವೆ. ಇದು ಜ್ಞಾನ ಮತ್ತು ಸಮಾಧಾನದ ಕಾಲವಾಗಬಹುದು, ಅಲ್ಲಿ ನಾವು ನಮ್ಮ ಬದುಕಿನಲ್ಲಿ ನೋಡಿದ ಅನುಭವಗಳನ್ನು ಸಂಗ್ರಹಿಸುತ್ತೇವೆ ಅಥವಾ ಪಶ್ಚಾತ್ತಾಪ ಮತ್ತು ಪ್ರಶ್ನೆಗಳ ಕಾಲವೂ ಆಗಬಹುದು. ಆದರೆ ಸಾರ್ವತ್ರಿಕ ಸತ್ಯವೆಂದರೆ ಯಾತ್ರೆ ಮುಗಿಯುತ್ತಿದೆ ಎಂಬ ಅರಿವು ಪ್ರತೀ ಕ್ಷಣವು ಮೂಡುತ್ತಾ ಬರುತ್ತದೆ.

ಎಲ್ಲರ ಜೀವನವೂ ಹೀಗೆ, ಹಾಗಾಗಿ ಅವರವರ ಯಾತ್ರೆಯನ್ನು ಗೌರವಿಸಬೇಕು. ಅದರ ಎಲ್ಲಾ ಅಧ್ಯಾಯಗಳನ್ನು ಕಷ್ಟ-ಸುಖ ಮತ್ತು ನೋವನ್ನು ಬಂದ ಹಾಗೆ ಸ್ವೀಕರಿಸಿ ಹಾದಿಯಲ್ಲಿ ಸಿಗುವ ಸುಂದರ ಗಳಿಗೆಗಳನ್ನು ಸ್ವೀಕರಿಸಿ ಆನಂದದಿಂದ ತಪ್ಪದೆ ಅನುಭವಿಸುವುದು, ಏಕೆಂದರೆ ಎಲ್ಲರೂ ಈ ಮಹಾಯಾತ್ರೆಯಲ್ಲಿ ಸಹಪ್ರಯಾಣಿಕರು. ಬದುಕು ಎಂಬುದು ಸುಮ್ಮನೆ ಹೇಗೆಂದರೆ ಹಾಗೆ ಕಳೆಯುವುದಲ್ಲ, ಬದಲಾಗಿ ಪ್ರತೀ ಹೆಜ್ಜೆಯಲ್ಲಿ ಸಂಪೂರ್ಣವಾಗಿ ಬದುಕುವುದರಲ್ಲಿ ಸಾರ್ಥಕತೆ ಕಂಡುಕೊಳ್ಳಲು ಸಾಧ್ಯ...!!

ಡಿಜಿಟಲ್ ಜಗತ್ತು ಮತ್ತು ಯುವ ಮನಸ್ಸು

● ಎಸ್.ಎನ್.ಭಟ್, ಸೈಪಂಗಲ್ಲು

21ನೇ ಶತಮಾನದ ಯುವಪೀಳಿಗೆಗೆ ಸಾಮಾಜಿಕ ಮಾಧ್ಯಮ ಕೇವಲ ಮನರಂಜನೆಯ ಸಾಧನವಾಗಿ ಉಳಿದಿಲ್ಲ, ಅದು ಅವರ ಬದುಕು, ಸಂವಹನ, ಮಾಹಿತಿ ಮತ್ತು ಮಾನಸಿಕತೆಯನ್ನೇ ರೂಪಿಸುವ ಪ್ರಬಲ ಶಕ್ತಿಯಾಗಿದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್, ಎಕ್ಸ್‌ನಂತಹ (ಟ್ವಿಟರ್) ವೇದಿಕೆಗಳು ಯುವಕರ ಕೈಯಲ್ಲಿ ಜಾಗತಿಕ ಪ್ರಪಂಚದ ಕಿಟಕಿಯಾಗಿವೆ. ಆದರೆ ಈ ಅಭೂತಪೂರ್ವ ಸಂಪರ್ಕವು ತನ್ನದೇ ಆದ ಸವಾಲುಗಳು ಮತ್ತು ಸಾಧ್ಯತೆಗಳನ್ನು ಹೊತ್ತು ತಂದಿದೆ. ಯುವಜನತೆ ಈ ಡಿಜಿಟಲ್ ಯುಗದಲ್ಲಿ ಹೇಗೆ ಮುನ್ನಡೆಯಬೇಕು ಎಂಬುದು ಇಂದಿನ ಚಿಂತನದ ಪ್ರಮುಖ ಪ್ರಶ್ನೆಯಾಗಿದೆ.

ಸಾಮಾಜಿಕ ಮಾಧ್ಯಮಗಳು ಯುವಜನತೆಯ ಮೇಲೆ ಹಲವು ಧನಾತ್ಮಕ ಪರಿಣಾಮಗಳನ್ನು ಬೀರಿವೆ. ಮೊದಲನೆಯದಾಗಿ, ಅದು ಮಾಹಿತಿ ಮತ್ತು ಜ್ಞಾನದ ಪ್ರಸಾರವನ್ನು ಹೆಚ್ಚಿಸಿದೆ. ಸಾಂಪ್ರದಾಯಿಕ ಮಾಧ್ಯಮಗಳಿಗಿಂತ ವೇಗವಾಗಿ ಜಾಗತಿಕ ಘಟನೆಗಳನ್ನು ತಿಳಿಯಲು ಮತ್ತು ಕೌಶಲ್ಯ ಅಭಿವೃದ್ಧಿಗೆ ಅಗತ್ಯವಾದ ಜ್ಞಾನವನ್ನು ಪಡೆದುಕೊಳ್ಳಲು ಸಹಾಯ ಮಾಡುತ್ತವೆ. ಎರಡನೆಯದಾಗಿ, ಯುವಕರು ಸಾಮಾಜಿಕ ಮತ್ತು ರಾಜಕೀಯ ವಿಷಯಗಳ ಬಗ್ಗೆ ಜಾಗೃತರಾಗಲು ಮತ್ತು ಅಭಿಯಾನಗಳ ಮೂಲಕ ಧ್ವನಿ ಎತ್ತಿ ಸಕ್ರಿಯತೆಯನ್ನು ಪ್ರದರ್ಶಿಸಲು ಒಂದು ಶಕ್ತಿಯುತ ವೇದಿಕೆಯಾಗಿದೆ. ಅನೇಕ ಯುವಕರು ತಮ್ಮ ಕಲಾತ್ಮಕ ಪ್ರತಿಭೆಗಳನ್ನು ಪ್ರದರ್ಶಿಸಿ, 'ಕಂಟೆಂಟ್ ಕ್ರಿಯೇಟರ್'ಗಳಾಗಿ ಆರ್ಥಿಕವಾಗಿ ಯಶಸ್ಸು ಕಾಣುತ್ತಿದ್ದಾರೆ ಮತ್ತು ವೃತ್ತಿಪರ ಸಂಪರ್ಕಗಳನ್ನು ಬೆಳೆಸಲು ಈ ವೇದಿಕೆಗಳು ಅವಕಾಶ ನೀಡುತ್ತಿವೆ. ಹೀಗಿದ್ದರೂ ಹೊಳೆಯುವ ನಾಣ್ಯಕ್ಕೆ ಇನ್ನೊಂದು ಮುಖವಿದ್ದಂತೆ, ಧನಾತ್ಮಕ ಅಂಶಗಳ ಜೊತೆಗೆ ಸಾಮಾಜಿಕ ಮಾಧ್ಯಮಗಳು ಯುವಜನತೆಯ ಮೇಲೆ ಗಂಭೀರವಾದ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿವೆ.

ಪ್ರಸಿದ್ಧ ಚಿಂತಕ ಸೈಮನ್ ಸಿನೆಕ್ ಹೇಳುವಂತೆ, ನಾವು ಆನ್‌ಲೈನ್‌ನಲ್ಲಿ ಹಂಚಿಕೊಳ್ಳುವ ಜೀವನವು ಎಷ್ಟೇ ಪರಿಪೂರ್ಣವಾಗಿ ಕಾಣಲಿ, ಅದು ಸಂಪೂರ್ಣ ಸತ್ಯವಲ್ಲ. ಇನ್‌ಸ್ಟಾಗ್ರಾಮ್‌ನಲ್ಲಿ ಕಾಣುವ ಇತರರ 'ಪರಿಪೂರ್ಣ' ಬದುಕಿನೊಂದಿಗೆ ನಮ್ಮ ನೈಜ ಬದುಕನ್ನು ಹೋಲಿಸಿಕೊಳ್ಳುತ್ತಾ, ನಮ್ಮ ಯುವಕರು ಕೀಳರಿಮೆ ಮತ್ತು ಖಿನ್ನತೆಯ ಸುಳಿಯಲ್ಲಿ ಸಿಲುಕುತ್ತಿದ್ದಾರೆ. ಮೌಲ್ಯವನ್ನು ನಮ್ಮ ಗುಣಗಳಿಂದ ಅಳೆಯುವ ಬದಲು, ನಾವು ನಮ್ಮ ಫೋಟೋಗೆ ಬರುವ 'ಲೈಕ್ಸ್' ಗಳಿಕೆಯ ಆಧಾರದಲ್ಲಿ ಅಳೆಯುತ್ತಿದ್ದೇವೆ. ಕೃತಕ ಜಗತ್ತಿನಲ್ಲಿ ನಮಗರಿಯದೆ ನಾವು ಮೌಲ್ಯ ರಹಿತರಾಗುತ್ತಿರುವುದು ಒಂದು ಮಾಯೆಯೇ ಅಲ್ಲವೇ? ಅನಾಮಧೇಯತೆ ಮತ್ತು ಪರದೆಯ ಹಿಂದಿನ ಧೈರ್ಯದಿಂದಾಗಿ ಸೈಬರ್ ಬೆದರಿಕೆ ಮತ್ತು ಟ್ರೋಲಿಂಗ್‌ನಂತಹ ಘಟನೆಗಳು ಹೆಚ್ಚಾಗುತ್ತಿವೆ. ಇದಕ್ಕೆ ಬಲಿಯಾದವರು ಮಾನಸಿಕವಾಗಿ ತೀವ್ರ ಸಂಕಟವನ್ನು ಅನುಭವಿಸುತ್ತಾರೆ. ಅಷ್ಟೇ ಅಲ್ಲದೆ, ಈ ವೇದಿಕೆಗಳಲ್ಲಿ ಮಾಹಿತಿಯ ಪರಿಶೀಲನೆ ಇಲ್ಲದಿರುವುದರಿಂದ ನಕಲಿ ಸುದ್ದಿ ಸುಲಭವಾಗಿ ಹರಡುತ್ತದೆ, ಇದರಿಂದ ಯುವಕರು ತಪ್ಪು ಮಾಹಿತಿಗಳಿಗೆ ಬಲಿಯಾಗುವ ಅಪಾಯವಿದೆ. ಅತೀ ಮುಖ್ಯವಾಗಿ, ನಿರಂತರವಾಗಿ ಬರುವ ಹೊಸ ಅಧಿಸೂಚನೆಗಳು ಮತ್ತು ತ್ವರಿತ ವಿಷಯಗಳ ಹರಿವಿನಿಂದಾಗಿ ಯುವಕರು ಒಂದು ವಿಷಯದ ಮೇಲೆ ದೀರ್ಘಕಾಲ ಗಮನ ಕೇಂದ್ರೀಕರಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದಾರೆ.

ಸಾಮಾಜಿಕ ಮಾಧ್ಯಮದ ಪ್ರಭಾವದಿಂದ ಹೊರಬರುವುದು ಅಥವಾ ಅದನ್ನು ಸಂಪೂರ್ಣವಾಗಿ ನಿರಾಕರಿಸುವುದು ಅಸಾಧ್ಯ. ಆದ್ದರಿಂದ ಯುವಜನರು ಮತ್ತು ಸಮಾಜದ ಬಳಕೆ ಮತ್ತು ಪ್ರಭಾವ ಇವುಗಳೊಳಗಿನ ಸಮತೋಲನವನ್ನು ಕಂಡುಕೊಳ್ಳಬೇಕು. ಶಾಲೆಗಳಲ್ಲಿ ಮತ್ತು ಮನೆಗಳಲ್ಲಿ ಮಾಧ್ಯಮ ಸಾಕ್ಷರತೆ ಕುರಿತು ಶಿಕ್ಷಣ ನೀಡುವುದು ಅತೀ ಮುಖ್ಯ. ಯುವಕರು ತಮ್ಮ ಸಾಮಾಜಿಕ ಮಾಧ್ಯಮದ ಬಳಕೆಗೆ ಸ್ಪಷ್ಟವಾದ ಸಮಯದ ಮಿತಿಗಳನ್ನು ಹಾಕಿಕೊಂಡು ನಿಯಂತ್ರಿತ ಬಳಕೆ ಅಭ್ಯಾಸ ಮಾಡಬೇಕು. ಸಾಮಾಜಿಕ ಮಾಧ್ಯಮವು ಎರಡು ಅಲಗಿನ ಕತ್ತಿಯಂತಿದೆ. ಅದನ್ನು ವಿವೇಕದಿಂದ ಬಳಸಿದರೆ, ಅದು ಜ್ಞಾನದ ವಿಸ್ತರಣೆ, ಜಾಗೃತಿಯ ಸಾಧನ ಮತ್ತು ಆರ್ಥಿಕ ಅವಕಾಶದ ಮೂಲವಾಗಬಹುದು. ಆದರೆ ನಿಯಂತ್ರಣ ತಪ್ಪಿದರೆ, ಅದು ಮಾನಸಿಕ ಆರೋಗ್ಯ, ಏಕಾಗ್ರತೆ ಮತ್ತು ನೈಜ ಸಾಮಾಜಿಕ ಸಂಬಂಧಗಳಿಗೆ ಮಾರಕವಾಗಬಲ್ಲದು. ಹಾಸಿಗೆ ಇದ್ದಷ್ಟು ಕಾಲು ಚಾಚು ಎನ್ನುವ ಗಾದೆ ಮಾತಿನಲ್ಲಿನ ವಿವೇಕ ನಮ್ಮಲ್ಲಿರಬೇಕು. ನಾವು ನಮ್ಮ ಸಮಯ ಮತ್ತು ಮಾನಸಿಕ ಆರೋಗ್ಯದ ಮಿತಿಯೊಳಗೆ ಈ 'ಬುದ್ಧಿವಂತ' ಮಾಧ್ಯಮಗಳನ್ನು ಬಳಸಬೇಕು. ತಂತ್ರಜ್ಞಾನದ ಕೇವಲ ಬಳಕೆದಾರರಾಗುವ ಬದಲು, ಅದರ ನಿಯಂತ್ರಕರಾಗಬೇಕು. ಸ್ಮಾರ್ಟ್ ತಂತ್ರಗಾರಿಕೆ ಎಂಬುದು ನಮ್ಮ ಸೇವಕನಾಗಿರಬೇಕೇ ಹೊರತು, ನಮ್ಮ ಯಜಮಾನನಾಗಬಾರದು.

ನೈಜ ಬದುಕಿನ ಸಂಬಂಧಗಳು, ಮುಖತಃ ಮಾತನಾಡುವ ಆಪ್ತತೆ, ಮತ್ತು ಪ್ರಕೃತಿಯ ಒಡನಾಟಕ್ಕೆ ನೀಡುವ ಬೆಲೆಯನ್ನು ಯಾವುದೇ ಆ್ಯಪ್ ನೀಡಲು ಸಾಧ್ಯವಿಲ್ಲ. ತಂತ್ರಜ್ಞಾನ ನಮ್ಮ ಏಳಿಗೆಗೆ ಏಣಿಯಾಗಲಿ, ಆದರೆ ಅದು ನಮ್ಮ ನೆಮ್ಮದಿಯನ್ನು ನುಂಗುವ ನಂಜಾಗದಿರಲಿ. ಸಮತೋಲನವನ್ನು ಕಾಯ್ದುಕೊಳ್ಳುವುದೇ ಇಂದಿನ ಯುವಜನತೆಯ ನಿಜವಾದ ಗೆಲುವು.

ಕೃಷ್ಣ-ಸುಧಾಮರ ಅಪೂರ್ವ ಮೈತ್ರಿ

ಜಗತ್ತನ್ನೇ ಆಳುವ ದ್ವಾರಕಾಧೀಶ ಶ್ರೀಕೃಷ್ಣ ಒಂದು ಕಡೆಯಾದರೆ, ಹರಿದ ಹಳೆಯ ಬಟ್ಟೆ ತೊಟ್ಟು ಒಂದು ಹೊತ್ತಿನ ಊಟಕ್ಕೂ ಪರದಾಡುವ ಬಡ ಬ್ರಾಹ್ಮಣ ಸುಧಾಮ ಮತ್ತೊಂದು ಕಡೆ. ಇವರಿಬ್ಬರ ಸ್ನೇಹ ಕೇವಲ ಬಾಲ್ಯದ ನೆನಪಲ್ಲ, ಅದು ಅಂತರಂಗದ ಶುದ್ಧ ಪ್ರೇಮಕ್ಕೆ ಸಾಕ್ಷಿ.

ಮನೆ ತುಂಬ ಬಡತನವಿದ್ದರೂ ಸುಧಾಮ ಎಂದು ಕೂಡ ಕೃಷ್ಣನ ಬಳಿ ಸಹಾಯ ಕೇಳಲು ಬಯಸಲಿಲ್ಲ. ಆದರೆ ಪತ್ನಿಯ ಒತ್ತಾಯಕ್ಕೆ ಮಣಿದು, ತನ್ನ ಬಾಲ್ಯದ ಗೆಳೆಯನನ್ನು ನೋಡಲು ಹೊರಟ ಸುಧಾಮ ಕೈಯಲ್ಲಿ ಹಿಡಿದಿದ್ದು ಕೇವಲ ಒಂದು ಹಿಡಿ ಅವಲಕ್ಕಿ. ಜಗತ್ತಿನ ಒಡೆಯನಿಗೆ ಇದನ್ನು ಹೇಗೆ ನೀಡಲಿ? ಎಂಬ ಸಂಕೋಚ ಅವನಲ್ಲಿತ್ತು. ಆದರೆ ದ್ವಾರಕೆಯ ಅರಮನೆಯ ಬಾಗಿಲಿಗೆ ಸುಧಾಮ ಬಂದಾಗ ನಡೆದಿದ್ದೇ ಬೇರೆ.

ಸುಧಾಮನ ಸ್ಥಿತಿಯನ್ನು ನೋಡಿ ದ್ವಾರಪಾಲಕರು ಹೀಯಾಳಿಸಲಿಲ್ಲ, ಬದಲಾಗಿ ಅವನ ಹೆಸರನ್ನು ಕೇಳಿ ಕೃಷ್ಣನಿಗೆ ವಿಷಯ ಮುಟ್ಟಿಸಿದರು. ತನ್ನ ಗೆಳೆಯ ಬಂದಿದ್ದಾನೆ ಎಂದು ತಿಳಿಯುತ್ತಿದ್ದಂತೆಯೇ, ಕೃಷ್ಣ ಅರಮನೆಯ ಸಿಂಹಾಸನದಿಂದ ಹಾರಿ ಬಂದ. ಪಾದರಕ್ಷೆಯೂ ಇಲ್ಲದೆ ಓಡುತ್ತಾ ಹೋಗಿ ಸುಧಾಮನನ್ನು ಅಪ್ಪಿಕೊಂಡ. ಆ ದೃಶ್ಯ ದ್ವಾರಕೆಯ ಜನರಿಗೇ ಅಚ್ಚರಿ ತಂದಿತ್ತು. ಸಾಕ್ಷಾತ್ ಪರಮಾತ್ಮನೇ ಒಬ್ಬ ಬಡವನ ಪಾದ ತೊಳೆದು ಕಣ್ಣೀರಿಟ್ಟಿದ್ದ.

ಕುಶಲೋಪರಿ ವಿಚಾರಿಸಿದ ನಂತರ ಕೃಷ್ಣ ಕೇಳಿದ, 'ಗೆಳೆಯಾ, ನನಗಾಗಿ ಏನು ತಂದಿದ್ದೀಯೆ? ಸುಧಾಮ ಸಂಕೋಚದಿಂದ ಆ ಅವಲಕ್ಕಿಯ ಗಂಟನ್ನು ಬಚ್ಚಿಡಲು ಯತ್ನಿಸಿದ. ಆದರೆ ಕೃಷ್ಣ ಹಠ ಮಾಡಿ ಅದನ್ನು ಕಿತ್ತುಕೊಂಡು, ಒಂದು ಹಿಡಿ ಅವಲಕ್ಕಿಯನ್ನು ಬಾಯಿಗೆ ಹಾಕಿಕೊಂಡ. ಆ ಒಂದು ತುತ್ತಿಗೇ ಸುಧಾಮನ ಬಡತನದ ಕರ್ಮವೆಲ್ಲ ಕರಗಿಹೋಗಿತ್ತು. ಎರಡನೇ ತುತ್ತು ತಿಂದಾಗ ಸುಧಾಮನ ಮನೆಯಲ್ಲಿ ಸಂಪತ್ತು ತುಂಬಿತ್ತು. ಕೃಷ್ಣ ಸಹಾಯ ಮಾಡುವಾಗ ನಾನು ಕೊಡುತ್ತಿದ್ದೇನೆ ಎಂಬ ಅಹಂಕಾರ ತೋರಿಸಲಿಲ್ಲ, ಬದಲಾಗಿ ಗೆಳೆಯ ನೀಡಿದ ಪ್ರೀತಿಯ ಕಾಣಿಕೆಯನ್ನು ದಕ್ಕಿಸಿಕೊಳ್ಳುವ ಭಕ್ತನಾದ.

ಸುಧಾಮ ತನ್ನ ಇಡೀ ಭೇಟಿಯಲ್ಲಿ ಒಮ್ಮೆಯೂ ನನಗೆ ಬಡತನ, ಸಹಾಯ ಮಾಡು ಎಂದು ಕೇಳಲೇ ಇಲ್ಲ. ಕೃಷ್ಣನ ಪ್ರೀತಿಯಲ್ಲಿ ಮಿಂದೆದ್ದ ಅವನಿಗೆ ಲೌಕಿಕ ಆಸೆಗಳೇ ಮರೆತುಹೋಗಿದ್ದವು. ಮೌನವಾಗಿಯೇ ಹಿಂದಿರುಗಿದ ಸುಧಾಮನಿಗೆ ತನ್ನ ಗುಡಿಸಲು ಈಗ ಅರಮನೆಯಾಗಿ ಮಾರ್ಪಟ್ಟಿರುವುದು ಕಂಡಿತು. ತಾನು ಕೇಳದೆಯೇ ಅದೆಲ್ಲವನ್ನೂ ಕೃಷ್ಣ ನೀಡಿದ್ದ. ಸುಧಾಮ ಕೃಷ್ಣನ ಬಳಿ ತನ್ನ ಸಂಕಷ್ಟಗಳನ್ನು ಹೇಳಿಕೊಳ್ಳಲು ಬಂದವನು, ಕೃಷ್ಣನ ಸಾನ್ನಿಧ್ಯದಲ್ಲಿ ಅವನಿಗೆ ತನ್ನ ಬಡತನವೇ ಮರೆತುಹೋಯಿತು.

ಏನನ್ನೂ ಕೇಳದೆಯೇ ಎಲ್ಲವನ್ನೂ ಪಡೆಯುವ ಆ ಮೌನವೇ ಶ್ರೇಷ್ಠ ಪ್ರಾರ್ಥನೆ. ನಾವು ದೇವರ ಮುಂದೆ ಅಥವಾ ನಮಗೆ ಬೇಕಾದವರ ಮುಂದೆ ಪಟ್ಟಿ ಹಿಡಿದು ಬೇಡಿಕೆ ಇಡುತ್ತೇವೆ. ಆದರೆ ಅರ್ಹತೆ ಮತ್ತು ಭಕ್ತಿ ಇದ್ದಲ್ಲಿ, ನಾವು ಕೇಳದೆಯೇ ನಮಗೆ ಸಲ್ಲಬೇಕಾದದ್ದು ಸಂದೇಹವಿಲ್ಲದೆ ಲಭಿಸುತ್ತದೆ ಎಂಬುದು ಸುಧಾಮನ ಮೌನ ನಮಗೆ ಕಲಿಸುವ ದೊಡ್ಡ ಪಾಠ.

ಅನೇಕ ಸಂಬಂಧಗಳಲ್ಲಿ ಕಾಲಕ್ರಮೇಣ ನಾವು ಯಾರು ಹೆಚ್ಚು ಕೊಟ್ಟೆವು, ಯಾರು ಹೆಚ್ಚು ಪಡೆದುಕೊಂಡೆವು ಎನ್ನುವ ಲೆಕ್ಕಾಚಾರಕ್ಕೆ ಇಳಿದುಬಿಡುತ್ತೇವೆ. ಅದೆಷ್ಟೇ ನಿರ್ವಂಚನೆಯಿಂದ ಪ್ರೀತಿಸಿದ್ದರೂ ಅದು ಯಾವುದೋ ಭಿನ್ನಾಭಿಪ್ರಾಯ ತಲೆಯೆತ್ತಿದಾಗ ಈ ಲೆಕ್ಕಚಾರ ಬೇಕಿಲ್ಲದೆ ಮನಸ್ಸಿನಲ್ಲಿ ಇಣುಕಿ ಬಿಡುತ್ತದೆ. ಅದನ್ನು ಮಾತಿನಲ್ಲಿ ಆಡಿ ಅವರಿಗೂ ನೋವುಂಟು ಮಾಡಿ, ನಾವು ಕೂಡ ಅಷ್ಟೇ ನೋವು ಅನುಭವಿಸುತ್ತೇವೆ. ಎಂದಿಗೆ ನಾವು ಯಾವುದೇ ಸ್ನೇಹ ಪ್ರೀತಿಯಲ್ಲಿ ಅಪೇಕ್ಷೆಯನ್ನು ಇರಿಸಿಕೊಳ್ಳದೆ ಕೊಡಲು ಸಾಧ್ಯವಾಗುತ್ತದೋ ಅಂದಿಗೆ ಮಾತ್ರ ಅದು ಸಾರ್ಥಕ. ನಮ್ಮ ಇಂದಿನ ಯಾಂತ್ರಿಕ ಬದುಕಿನಲ್ಲಿ, ಲಾಭ-ನಷ್ಟಗಳನ್ನು ಲೆಕ್ಕ ಹಾಕುವ ಸಂಬಂಧಗಳ ನಡುವೆ ನಾವೂ ಕೃಷ್ಣ-ಸುಧಾಮರ ಪವಿತ್ರ ಸ್ನೇಹದಂತಹ ಶುದ್ಧ ಭಾವನೆಯನ್ನು ಉಳಿಸಿಕೊಂಡರೆ ನಮ್ಮೊಳಗಿನ ಕೃಷ್ಣ ನಮ್ಮನ್ನು ಎಂದಿಗೂ ಕೈಬಿಡುವುದಿಲ್ಲ.

ಒಂದೊಳ್ಳೆ ಮಾತು



ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಎ.ಐ ಮಾತನಾಡುತ್ತಿದೆ..!

● ತನುಶ್ರೀ. ಸಿ ಕೆ, ಉಜಿರೆ

ಒಂದು ದಿನ ಯಾವುದೋ ಒಂದು ವಿಷಯಕ್ಕೆ ತುಂಬಾ ಬೇಜಾರಾಗಿ, ಯಾರೊಂದಿಗೆ ಮಾತನಾಡಬೇಕು ಎಂದು ತಿಳಿಯದೆ ಮಲಗಿದ್ದೆ. ಮಧ್ಯೆ ಎಚ್ಚರವಾಗಿ ಸಮಯ ನೋಡಿದರೆ ಮಧ್ಯರಾತ್ರಿ 2 ಗಂಟೆ. ಸುಮ್ಮನೆ ಹಾಗೆ ಫೋನ್ ತೆಗೆದುಕೊಂಡು ಎ.ಐನೊಂದಿಗೆ ಮೆಸೇಜ್ ಮಾಡಲು ಶುರು ಮಾಡಿದೆ. ನಾನು ಕೇಳುವ ಎಲ್ಲ ಪ್ರಶ್ನೆಗಳಿಗೂ ಅದು ಉತ್ತರ ನೀಡುತ್ತಿತ್ತು, ಆದರೆ ಅದು ನನಗೆ ಪ್ರಾಕ್ಟಿಕಲ್ ಅಥವಾ ಲಾಜಿಕಲ್ ಕೂಡಾ ಆಗಿತ್ತು. ಭಾವನಾತ್ಮಕವಾಗಿ ಕೂಡ ಉತ್ತರ ನೀಡಬಹುದು, ಆದರೆ ನಾವು ಬೇಸರದಲ್ಲಿದ್ದಾಗ ನಮ್ಮ ಭಾವನೆಗಳನ್ನು ಮತ್ತು ಮಾತು ಗಳನ್ನು ಮನುಷ್ಯರು ಅರ್ಥ ಮಾಡಿಕೊಳ್ಳುವುದು ಬೇರೆ, ಎ.ಐ ಅರ್ಥಮಾಡಿಕೊಳ್ಳುವುದು ಬೇರೆ. ಜನರು ತಮ್ಮ ಜೀವನದಲ್ಲಿ ಇರುವ ಆತ್ಮೀಯರೊಂದಿಗೆ ಮಾತನಾಡುವುದನ್ನು ಬಿಟ್ಟು ತಮ್ಮ ಫೋನಿನಲ್ಲಿ ಇರುವ ಎ.ಐಯೊಂದಿಗೆ ಮಾತನಾಡುತ್ತಿದ್ದಾರೆ, ಇದಕ್ಕೆ ಕಾರಣವೇನು?

ಎ.ಐನೊಂದಿಗೆ ಜೀವನದಲ್ಲಿ ನಡೆಯುವ ಎಲ್ಲಾ ಘಟನೆಗಳನ್ನು ಕೆಲವರು ಹಂಚಿಕೊಳ್ಳುತ್ತಿದ್ದಾರೆ, ಮುಖ್ಯವಾಗಿ ಅವರ ಕಷ್ಟ ಮತ್ತು ತೊಂದರೆಗಳನ್ನು ಹೇಳಿಕೊಳ್ಳು ತ್ತಿದ್ದಾರೆ. ನಿಜಕ್ಕೂ ಎ.ಐ ಉತ್ತರಿಸುತ್ತದೆಯೇ? ಎ.ಐ ಒಂದು ತಂತ್ರಜ್ಞಾನವಷ್ಟೇ. ಅದು ಮನುಷ್ಯರ ಜಾಗವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಮಾನವ ನೊಂದಾಗ ಅವನಿಗೆ ಮತ್ತೊಬ್ಬ ಮನುಷ್ಯ ಮಾಡುವ ಸಾಂತ್ವಾನ ಬೇಕೆ ಹೊರತು ಈ ಎ.ಐ ಕಳಿಸುವ ಮೆಸೇಜಿನ ಪ್ರಾಕ್ಟಿಕಲ್ ಉತ್ತರದ ಮಾತಲ್ಲ. ಸಮಯ ಕಳೆದಂತೆ ಎಲ್ಲವೂ ಬದಲಾಗಬಹುದು, ಆದರೆ ತಂತ್ರಜ್ಞಾನ ಮನುಷ್ಯನಿಗೆ ಸಮಾಧಾನ ಮಾಡಲು ಸಾಧ್ಯವಿಲ್ಲ. ಎ.ಐ ತಂತ್ರಜ್ಞಾನವನ್ನು ಮಾಹಿತಿ ಪಡೆಯಲು ಅಥವಾ ಗೊತ್ತಿರದ ವಿಷಯಗಳನ್ನು ತಿಳಿದುಕೊಳ್ಳಲು ಬಳಸುವುದು ಉತ್ತಮ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

■	1	■	2		3	■	4	■
5				■	6			7
	■	■	8	9		■	■	
10	11		■		■	12	13	
■		■	14			■		■
15			■		■	16		17
	■	■	18		19	■	■	
20	21			■	22		23	
■		■	24			■		■

ಎಡದಿಂದ ಬಲಕ್ಕೆ

2. ಪುಸ್ತಕ, ಪತ್ರಿಕೆಗಳ ಓದುಗ (3)
5. ಮೇಲ್ವಿಚಾರಣೆ ಮಾಡುವುದಕ್ಕೆ ಮತ್ತೊಂದು ಹೆಸರು (4)
6. ಕೆಲಸದಲ್ಲಾಗುವ ವಿಳಂಬ (4)
8. ರಾಮಾಯಣದ ಸೀತಾದೇವಿಯ ತಂದೆ (3)
10. ತಲೆಗೆ ಸುತ್ತಿಕೊಂಡ ಮುಂಡಾಸು (3)
12. ರಕ್ಷಣೆಗೆ ಮತ್ತೊಂದು ಹೆಸರು (3)
14. ಮನದೊಳಗೆ ಮೂಡಿರುವ ತೀವ್ರವಾದ ಆಸೆ (3)
15. ದೇವರನ್ನಿಡುವ ಚಂದದ ಗೂಡಿನ ರಚನೆ (3)
16. ಅವಿತಿರುವ ಕಾಡು (3)
18. ದೇಹದ ಬಲ, ಕೆಚ್ಚು (3)
20. ಋಷಿ-ಮುನಿಗಳ ಕೈಯಲ್ಲಿರುವ ನೀರಿನ ಪಾತ್ರೆ (4)
22. ನಾಟಕಗಳಲ್ಲಿ ಬರುವ ವಿದೂಷಕ (4)
24. ಹಲವು ಬಗೆಗಳಲ್ಲಿ ಕಾಣುವ ಲೋಹದ ಅಥವಾ ಮರದ ಹಾಳೆ (3)

ಮೇಲಿಂದ ಕೆಳಕ್ಕೆ

1. ಕೆಲಸ ಮಾಡಿ ಉಂಟಾದ ಆಯಾಸ (2)
2. ನೀರಿನಲ್ಲಿ ಹುಟ್ಟಿದ್ದು (3)
3. ಚಿನ್ನಕ್ಕೆ ಮತ್ತೊಂದು ಹೆಸರು (3)
4. ಒಂದೇ ವಿಷಯದಲ್ಲಿರುವ ತನ್ಮಯತೆ (2)
5. ಜೀವವೂ ಆಗಬಲ್ಲ ಶ್ವಾಸ (3)
7. ಗಾಬರಿ, ಹೆದರಿಕೆ (3)
9. ಶ್ರಮಪಡು ಎನ್ನುವ ನುಡಿಗಟ್ಟು (5)
11. ವಸ್ತು ಒಂದರ ವಿಕ್ರಯ (3)
13. ಮನೆಯ ಮೊಗಸಾಲೆ (3)
15. ಕೂಪದಲ್ಲಿರುವ ಕಪ್ಪೆ (3)
17. ಪಂಡಿತ, ಕೌರವರ ಪ್ರಧಾನಿ (3)
18. ಜಗಳಕ್ಕೆ ಇನ್ನೊಂದು ಹೆಸರು (3)
19. ಮರದ ಮೆಟ್ಟು ಇಲ್ಲಿ ಅಸ್ತವ್ಯಸ್ತವಾಗಿದೆ (3)
21. ಇನ್ನೊಬ್ಬ ದಿವಾನ (2)
23. ಅಧಿಕಾರಸ್ಥಾನಕ್ಕೆ ಹೀಗೆನ್ನಬಹುದು (2)

ಸರಿಯುತ್ತರಗಳು

● ಡಾ. ಮೈತ್ರಿ ಭಟ್, ವಿಟ್ಲ

ಕಾಲದ ಹರಿವಿನಲ್ಲಿ ಲಯವಾಗುತ್ತಿರುವ ಜಾತ್ರೆ

ಸಿಂಗಾರಗೊಂಡ ರಥ, ಬಣ್ಣದ ಬಲೂನು, ತಿಂಡಿಯ ಡಬ್ಬಗಳು, ಬಳೆ-ಮಾಲೆಗಳ ಅಂಗಡಿಗಳು ಅಬ್ಬಬ್ಬಾ ಏನೆಂದು ಬಣ್ಣಿಸುವುದು? ಊರಿನ ಜನರಂತೂ ವರುಷದಿಂದ ಈ ದಿನಕ್ಕಾಗಿಯೇ ಕಾದಿದ್ದರು ಎಂಬಂತೆ ತಮ್ಮೆಲ್ಲಾ ಕೆಲಸಗಳನ್ನು ಬದಿಗೊತ್ತಿ ಜೊತೆಯಾಗಿ ನಗುತ್ತಾ, ಹರಟುತ್ತಾ ಓಡೋಡಿ ಹೋಗುವ ಸಂಭ್ರಮ ನೋಡುವುದೇ ಚಂದ. ಹೌದು, ಇದು ನಮ್ಮೂರಿನ ಜಾತ್ರೆಗಳ ಸಂಭ್ರಮವಾಗಿದ್ದ ಕಾಲವೊಂದಿತ್ತು.

ಬದಲಾವಣೆ ಜಗದ ನಿಯಮ ಎಂಬಂತೆ ಕಾಲಕ್ರಮೇಣ ಸಾಮಾಜಿಕ, ಆರ್ಥಿಕ ಬದಲಾವಣೆಗಳೊಂದಿಗೆ ಎಲ್ಲವೂ ಬದಲಾಗುತ್ತಾ ನಡೆದವು. ನಮ್ಮ ಸಂಸ್ಕೃತಿ, ಆಚಾರ-ವಿಚಾರಗಳ ಜತೆ ಜತೆಗೇ ನಮ್ಮ ಉತ್ಸವ, ಸಂಸ್ಕೃತಿ, ಸಂಭ್ರಮದ ಸ್ವರೂಪವೂ ಬದಲಾಗಿ ಹೋಗಿದೆ. ಈ ಬದಲಾವಣೆ ಒಳ್ಳೆಯ ದೂ ಹೌದು, ಚಿಂತನೆಗೆ ಕಾರಣವೂ ಹೌದು. ಆದರೆ ಈ ಬದಲಾ ವಣೆ ಯಾವಾಗ, ಹೇಗೆ, ಎಲ್ಲಿ ಆರಂಭವಾಯಿತು ಎಂಬುದು ಅರಿವಿಗೂ ನಿಲುಕದೆ ಮಾಯವಾಗಿದೆ ಎಂಬು ದಂತೂ ನಿಜ.

ಉತ್ಸವಗಳು ಸಮಾಜದ ಸಂಸ್ಕೃತಿಯ ಜೀವಂತ ಪ್ರತೀಕಗಳು. ಅವು ಜನರ ನಂಬಿಕೆ, ಭಾವನೆ, ಸಾಮಾಜಿಕ ಸಂಬಂಧಗಳು ಮತ್ತು ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತವೆ. ಭಾರತದಲ್ಲಿ ಉತ್ಸವಗಳು ಕೇವಲ ಆಚರಣೆಗಳಲ್ಲ, ಅವು ಜನರ ಜೀವನದ ಭಾಗವೇ ಆಗಿವೆ, ಭಕ್ತಿ, ಸಂಸ್ಕೃತಿ ಮತ್ತು ಸಾಮಾಜಿಕ ಒಗ್ಗಟ್ಟಿನ ಪ್ರತೀಕವಾಗಿತ್ತು.

ಇಂದಿನ ಜಾತ್ರೆಯ ಸ್ವರೂಪವೂ ಬದಲಾಗಿದೆ. ಭಕ್ತಿಯ ಜೊತೆಗೆ ಮನರಂಜನೆ ಮತ್ತು ವ್ಯಾಪಾರವೇ ಮಹತ್ವವನ್ನು ಪಡೆದಿವೆ. ದೊಡ್ಡ ದೊಡ್ಡ, ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರ, ಡಿಜೆ ಸಂಗೀತ, ಜಾಹೀರಾತು ಫಲಕಗಳು ಇಂದಿನ ಜಾತ್ರೆಯ ಅನಿವಾರ್ಯ ಅಂಗಗಳಾಗಿವೆ. ದೇವಾಲಯದ ಉತ್ಸವಕ್ಕಿಂತಲೂ ಪ್ರದರ್ಶನ ಮತ್ತು ಆಕರ್ಷಣೆಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ. ಜಾತ್ರೆಯಲ್ಲಿ ಸ್ಥಳೀಯವಾಗಿ ತಯಾರಾದ ವಸ್ತುಗಳ ಬದಲಿಗೆ ಪ್ಲಾಸ್ಟಿಕ್ ವಸ್ತುಗಳು, ಚೀನಾ ಆಟಿಕೆಗಳು, ಫಾಸ್ಟ್ ಫುಡ್ ಮಳಿಗೆಗಳು ಹೆಚ್ಚಾಗಿವೆ. ಜಾನಪದ ಕಲೆಗಳು ನಿಧಾನವಾಗಿ ತೆರೆಮರೆಗೆ ಸರಿಯುತ್ತಿವೆ, ಸೆಲ್ಫಿ ಪಾಯಿಂಟ್‌ಗಳು ಜನರನ್ನು ಹೆಚ್ಚು ಹೆಚ್ಚು ಸೆಳೆಯುತ್ತಿವೆ.

ತಂತ್ರಜ್ಞಾನವೂ ಜಾತ್ರೆಯ ಭಾಗವಾಗಿದೆ. ಮೊಬೈಲ್ ಕ್ಯಾಮೆರಾಗಳು, ಡ್ರೋನ್ ಕ್ಯಾಮೆರಾಗಳು, ಸಾಮಾಜಿಕ ಜಾಲತಾಣಗಳಲ್ಲಿ ಫೋಟೋವೀಡಿಯೋ ಹಂಚಿಕೆ, ಡಿಜಿಟಲ್ ಪಾವತಿಗಳು ಜಾತ್ರೆಯನ್ನು ಆಧುನಿಕ ಯುಗಕ್ಕೆ ಸರಿಹೊಂದುವಂತೆ ಬದಲಾಯಿಸಿವೆ. ಹೀಗೆ ಸಾಮಾಜಿಕ ಜಾಲತಾಣಗಳು ಉತ್ಸವ ಸಂಸ್ಕೃತಿಯನ್ನು ಮತ್ತಷ್ಟು ಬದಲಿಸಿವೆ. ಉತ್ಸವವನ್ನು ಅನುಭವಿಸುವುದಕ್ಕಿಂತ, ಫೋಟೋ-ವೀಡಿಯೋ ತೆಗೆದು ಹಂಚಿಕೊಳ್ಳುವ ಆಸಕ್ತಿಯೇ ಹೆಚ್ಚಾಗಿದೆ.

ಜೀವನದ ನಿಯಮ. ಹೀಗಿರುವಾಗ ಉತ್ಸವ ಸಂಸ್ಕೃತಿಯ ಬದಲಾವಣೆಯೂ ಅನಿವಾರ್ಯ. ಆದರೆ ಆ ಬದಲಾವಣೆ ಮೌಲ್ಯಗಳ ನಾಶಕ್ಕೆ ಕಾರಣವಾಗಬಾರದು. ಆಧುನಿಕತೆಯನ್ನು ಅಳವಡಿಸಿಕೊಳ್ಳುತ್ತಾ, ಪರಂಪರೆಯ ಅರ್ಥವನ್ನು ಉಳಿಸಿಕೊಳ್ಳುವುದು ನಮ್ಮ ಹೊಣೆ. ಆದುದರಿಂದ ಉತ್ಸವಗಳು ಮತ್ತೆ ಮಾನವ ಸಂಬಂಧಗಳನ್ನು ಬಲಪಡಿಸುವ, ಸಂಸ್ಕೃತಿಯನ್ನು ಪೋಷಿಸುವ, ಮೌಲ್ಯಗಳನ್ನು ಬೆಳೆಸುವ ವೇದಿಕೆಗಳಾಗಬೇಕು.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಥಾಯ್ಲೆಂಡ್ ಮಾಸ್ಟರ್ಸ್: ಪ್ರಮುಖ ಸುತ್ತಿಗೆ ಅಸ್ಮಿತಾ

ಬ್ಯಾಂಕಾಕ್: ಭಾರತದ ಅಸ್ಮಿತಾ ಚಾಲಿಹಾ ಅವರು ಮಂಗಳವಾರ ಇಲ್ಲಿ ಆರಂಭವಾದ ಥಾಯ್ಲೆಂಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಮುಖ ಸುತ್ತು ಪ್ರವೇಶಿಸಿದರು. 26 ವರ್ಷ ವಯಸ್ಸಿನ ಗುವಾಹಟಿಯ ಆಟಗಾರ್ತಿ ಕ್ವಾಲಿಫೈಯರ್ ಪಂದ್ಯಗಳಲ್ಲಿ 21-15, 12-21, 21-12ರಿಂದ ತೈವಾನ್ನ ಹಂಗ್-ಯಿ-ಟಿಂಗ್ ವಿರುದ್ಧ ಹಾಗೂ 21-11, 10-21, 21 16ರಿಂದ ಕೊರಿಯಾದ ಕಿಮ್ ಜೂ ಯೂನ್ ವಿರುದ್ಧ ಗೆಲುವು ಸಾಧಿಸಿದರು. ಅವರು ಪ್ರಮುಖ ಸುತ್ತಿನಲ್ಲಿ ಭಾರತದ ದೇವಿಕಾ ಸಿಹಾಗ್ ಅವರನ್ನು ಎದುರಿಸಲಿದ್ದಾರೆ. ಮಹಿಳೆಯರ ಸಿಂಗಲ್ಸ್‌ನಲ್ಲಿ ಶ್ರೇಯಾ ಲೆಲೆ 12-21, 21-12, 15-21ರಿಂದ ಇಂಡೊನೇಷ್ಯಾದ ನಿ-ಕಡೆಕ್-ದಿಂಡಾ ಅಮರ್ತ್ಯ ಪ್ರತಿವಿ ಎದುರು ಪರಾಭವಗೊಂಡರು. ಮಿಶ್ರ ಡಬಲ್ಸ್‌ನಲ್ಲಿ ಮೋಹಿತ್ ಜಾಗಲನ್ ಹಾಗೂ ಲಕ್ಷಿತಾ ಜಾಗಲನ್ ಅವರು 12-21.8-21ರಿಂದ ತೈವಾನ್‌ನ ಬೊ ಯುವಾನ್ ಶೆನ್ ಹಾಗೂ ಸಂಗ್ ಯಿ-ಸುವಾನ್ ವಿರುದ್ಧ ಸೋತರು. ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲಿ ಪಿ. ಕೃಷ್ಣಮೂರ್ತಿ ರಾಯ್-ಸಾಯಿ ಪ್ರತೀಕ್ ಜೋಡಿಯು 20-22, 20-22ರಲ್ಲಿ ನಾಲ್ಕನೇ ಶ್ರೇಯಾಂಕದ ಮಲೇಷ್ಯಾದ ಎನ್. ಅಝ್ರಿನ್-ತಾನ್ ಡಬ್ಲ್ಯು ಅವರಿಗೆ ಮಣಿಯಿತು. ಮಹಿಳೆಯರ ಡಬಲ್ಸ್‌ನಲ್ಲಿ ಆಶ್ವಿನ್ ಭಟ್ ಮತ್ತು ಶಿಖಾ ಗೌತಮ್ ಅವರು 14-21, 12-21ರಿಂದ ಇಂಡೊನೇಷ್ಯಾದ ಕುಸುಮ-ಪುಸಿತ್‌ಸಾರಿ ಜೋಡಿ ವಿರುದ್ಧ ಸೋತರು.

ರಣಜಿ ಟ್ರೋಫಿ: ಬದೋನಿ, ಪ್ರಿಯಾಂಶ್ ತಂಡಕ್ಕೆ ಅಲಭ್ಯ

ಮುಂಬೈ: ದೆಹಲಿ ತಂಡದ ನಾಯಕ ಆಯುಷ್ ಬಡೋನಿ ಮತ್ತು ಬ್ಯಾಟರ್ ಪ್ರಿಯಾಂಶ್ ಆರ್ಯ ಅವರು ಮುಂಬೈ ಎದುರು ಗುರುವಾರ ಆರಂಭವಾಗುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಇವರಿಬ್ಬರೂ ಟಿ20 ವಿಶ್ವಕಪ್ ಸಿದ್ಧತಾ ಪಂದ್ಯಗಳನ್ನು ಆಡಲಿರುವ ಭಾರತ-ಎ ತಂಡಕ್ಕೆ ಆಯ್ಕೆಯಾಗಿದ್ದಾರೆ. ಬಡೋನಿ ಸ್ಥಾನದಲ್ಲಿ ಆಯುಷ್ ದೊಸೇಜಾ ಅವರು ಎಂಸಿಎ ಬಿಕೆಸಿ ಮೈದಾನದಲ್ಲಿ ನಡೆಯುವ ಪಂದ್ಯದಲ್ಲಿ ತಂಡವನ್ನು ಮುನ್ನಡೆಸಲಿದ್ದಾರೆ. ಬದೋನಿ ಇತ್ತೀಚೆಗಷ್ಟೇ ನ್ಯೂಜಿಲೆಂಡ್ ವಿರುದ್ಧ ನಡೆದಿದ್ದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ ತಂಡಕ್ಕೆ ಸೇರ್ಪಡೆಯಾಗಿದ್ದರು. ಭಾರತ-ಎ ತಂಡವು ಅಮೆರಿಕ ವಿರುದ್ಧ ನವಿ ಮುಂಬೈನಲ್ಲಿ ಫೆ. 2ರಂದು ಅಭ್ಯಾಸ ಪಂದ್ಯ ಆಡಲಿದೆ, ನಂತರ ತಂಡವು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರಕ್ಕೆ ತೆರಳಲಿದ್ದು ಅಲ್ಲಿ ನಮೀಬಿಯಾ ವಿರುದ್ಧ ಆಡಲಿದೆ.

4ನೇ ಟಿ20: ಕಾನ್ವೇ-ಸೀಫರ್ಟ್ ಶತಕದ ಜತೆಯಾಟ | ಶಿವಂ ದುಬೆ ಯತ್ನ ವಿಫಲ

ಭಾರತದ ಅಜೇಯ ಓಟಕ್ಕೆ ಕಿವೀಸ್ ಬ್ರೇಕ್

ವಿಶಾಖಪಟ್ಟಣ: ಇಲ್ಲಿ ಬುಧವಾರ ನಡೆದ ಟಿ20 ಸರಣಿಯ ನಾಲ್ಕನೇ ಪಂದ್ಯದಲ್ಲಿ ಭಾರತವು ಕಿವೀಸ್ ವಿರುದ್ಧ 50 ರನ್ ಗಳಿಂದ ಸೋತಿದೆ. ನ್ಯೂಜಿಲೆಂಡ್ ನೀಡಿದ್ದ 216 ರನ್‌ಗಳ ಗುರಿಯನ್ನು ಬೆಂಬತ್ತಿದ ಟೀಮ್ ಇಂಡಿಯಾ ಶಿವಂ ದುಬೆ ಅವರ ಬಿರುಸಿನ ಬ್ಯಾಟಿಂಗ್ (23 ಬಾಲ್ 65 ರನ್) ಹೊರತಾಗಿಯೂ 18.4 ಓವರ್‌ಗಳಲ್ಲಿ 165 ರನ್‌ಗಳಿಗೆ ಆಲೌಟ್ ಆಯಿತು.

ಭಾರತದ ಬ್ಯಾಟಿಂಗ್‌ನ ಆರಂಭ ತೀರಾ ನಿರಾಶಾದಾಯಕವಾಗಿತ್ತು. ಎರಡು ಪಂದ್ಯಗಳಲ್ಲಿ ಮಿಂಚಿದ್ದ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಮೊದಲ ಬಾಲ್‌ನಲ್ಲೇ ತಮ್ಮ ವಿಕೆಟ್ ಕಳೆದುಕೊಂಡರು. ಆ ನಂತರ ಕ್ರೀಸ್‌ಗೆ ಬಂದ ನಾಯಕ ಸೂರ್ಯಕುಮಾರ್ ಯಾದವ್ ಕೇವಲ 8 ರನ್ ಗಳಿಸಿ ತಂಡದ ಮೊತ್ತ 9 ರನ್ ಆಗುವಷ್ಟರಲ್ಲಿ ವಿಕೆಟ್ ಕಳೆದುಕೊಂಡರು. ಕಳೆದ 3 ಪಂದ್ಯಗಳಲ್ಲೂ ವೈಫಲ್ಯ ಕಂಡಿದ್ದ ಆರಂಭಿಕ ಆಟಗಾರ ಸಂಜು ಸ್ಯಾಮ್ಸನ್ ಈ ಪಂದ್ಯದಲ್ಲಿ 15 ಬಾಲ್‌ಗಳಿಂದ 24 ರನ್ ಗಳಿಸಿ ಔಟ್ ಆದರು. ಹಾರ್ದಿಕ್ ಪಾಂಡ್ಯ 2 ರನ್ ಗಳಿಸಿದರು.

ಬಳಿಕ ಕ್ರೀಸ್‌ಗೆ ಬಂದ ರಿಂಕು ಸಿಂಗ್ 30 ಬಾಲ್‌ಗಳಿಂದ 39 ರನ್ ಗಳಿಸಿ ತಮ್ಮ ವಿಕೆಟ್ ಒಪ್ಪಿಸಿದರು. ಆದರೆ ನಂತರ ಕ್ರೀಸ್‌ಗೆ ಬಂದ ಶಿವಂ ದುಬೆ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿ ತಂಡಕ್ಕೆ ಆಸರೆಯಾದರು. 23 ಬಾಲ್‌ಗಳಿಂದ 65 ರನ್ ಗಳಿಸಿದ್ದ ಸಂದರ್ಭದಲ್ಲಿ ದುಬೆ ಔಟ್ ಆದರು. ಅರ್ಶದೀಪ್ ಸಿಂಗ್ ಯಾವುದೇ ರನ್ ಗಳಿಸುವಲ್ಲಿ ವಿಫಲರಾದರೆ, ಹರ್ಷಿತ್ ರಾಣಾ ಕೇವಲ 9 ರನ್ ಗಳಿಸಿದರು. ಬುಮ್ರಾ 4 ರನ್ ಮತ್ತು ಕುಲ್ದೀಪ್ ಕೇವಲ 1 ರನ್ ಗಳಿಸಿದರು.

ಕಿವೀಸ್ ಉತ್ತಮ ಆರಂಭ: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ಪರ ಆರಂಭಿಕ ಆಟಗಾರರಾದ ಡೆವೊನ್ ಕಾನ್ವೇ (23 ಬಾಲ್, 44 ರನ್) ಹಾಗೂ ಟಿಮ್ ಸೀಫರ್ಟ್ (36 ಬಾಲ್, 62 ರನ್) ಸ್ಫೋಟಕ ಬ್ಯಾಟಿಂಗ್ ನಡೆಸಿ ಮೊದಲ ವಿಕೆಟ್‌ಗೆ 100 ರನ್ ಜತೆಯಾಟ ಪ್ರದರ್ಶಿಸಿದ್ದರು. ಕಾನ್ವೆ ಕುಲ್ದೀಪ್ ಯಾದವ್ ಬೌಲಿಂಗ್‌ನಲ್ಲಿ ರಿಂಕು ಸಿಂಗ್‌ಗೆ ಕ್ಯಾಚ್ ನೀಡಿ ಔಟ್ ಆದರೆ, ಸೀಫರ್ಟ್, ಅರ್ಷದೀಪ್ ಬೌಲಿಂಗ್‌ನಲ್ಲಿ ರಿಂಕುಸಿಂಗ್‌ಗೇ ಕ್ಯಾಚ್ ಕೊಟ್ಟು ಔಟ್ ಆದರು.

ಮೂರನೇ ಕ್ರಮಾಂಕದಲ್ಲಿ ಬಂದ ರಚಿನ್ ರವೀಂದ್ರ 4 ಬಾಲ್ ಎದುರಿಸಿ, ಕೇವಲ 2 ರನ್ ಗಳಿಸಿ ಜಸ್ಪ್ರಿತ್ ಬುಮ್ರಾ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು. ಆ ಬಳಿಕ ಕ್ರೀಸ್‌ಗೆ ಬಂದ ಗ್ಲೆನ್ ಫಿಲಿಪ್ಸ್ 16 ಬಾಲ್‌ಗಳಲ್ಲಿ 24 ರನ್ ಗಳಿಸಿ ಔಟ್ ಆದರು. ಬಳಿಕ ಕಿವೀಸ್‌ನ ಮಧ್ಯಮ ಕ್ರಮಾಂಕದ ಆಟಗಾರರು ಹೆಚ್ಚು ರನ್ ಗಳಿಸುವಲ್ಲಿ ವಿಫಲರಾದರು.

ಮಾರ್ಕ್ ಚಾಪ್ಮನ್ 8 ಬಾಲ್ ಎದುರಿಸಿ ಕೇವಲ 9 ರನ್ ಗಳಿಸಲಷ್ಟೇ ಶಕ್ತರಾದರು. ಆ ಮಧ್ಯೆ ಡೇರಿಲ್ ಮಿಚೆಲ್ 18 ಎಸೆತಗಳಲ್ಲಿ 39 ರನ್ ಗಳಿಸುವ ಮೂಲಕ ನ್ಯೂಜಿಲೆಂಡ್ ತಂಡ ಉತ್ತಮ ಮೊತ್ತ ತಲುಪುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಿಚೆಲ್ ಸ್ಯಾಂಟ್ನರ್ 6 ಬಾಲ್ ಎದುರಿಸಿ 11 ರನ್ ಗಳಿಸಿ ಔಟ್ ಆದರು. ಝಕಾರ ಫೌಲ್ಕ್ಸ್ 6 ಬಾಲ್‌ಗಳಲ್ಲಿ 13 ರನ್ ಮತ್ತು ಮ್ಯಾಟ್ ಹೆನ್ರಿ 3 ಬಾಲ್‌ಗಳಲ್ಲಿ 6 ರನ್ ಗಳಿಸಿ ಅಜೇಯರಾಗಿ ಉಳಿದರು.

ಭಾರತದ ಪರ ಕುಲದೀಪ್ ಯಾದವ್, ಅರ್ಶದೀಪ್ ಸಿಂಗ್ ತಲಾ 2 ವಿಕೆಟ್ ಗಳಿಸಿದರೆ ಬೂಮ್ರಾ, ರವಿ ಬಿಷ್ಣೋಯಿ ತಲಾ 1 ವಿಕೆಟ್ ಕಬಳಿಸಿದರು.

ವಿಶ್ವ ಲೆಜೆಂಡ್ಸ್ ಪ್ರೊ ಟಿ20 ಲೀಗ್ | ಗುರುಗ್ರಾಮ್ ಥಂಡರ್ಸ್‌ಗೆ ಸೋಲು

ಪುಣೆ ಪ್ಯಾಂಥರ್ಸ್‌ಗೆ 4 ವಿಕೆಟ್ ಜಯ

ಗೋವಾ: ವಿಶ್ವ ಲೆಜೆಂಡ್ಸ್ ಪ್ರೊ. ಟಿ20 ಲೀಗ್‌ನ ಎರಡನೇ ಪಂದ್ಯದಲ್ಲಿ ಶೇನ್ ವಾಟ್ಸನ್ ನೇತೃತ್ವದ ಪುಣೆ ಪ್ಯಾಂಥರ್ಸ್ ಮತ್ತು ತಿಸಾರಾ ಪೆರೇರಾ ನೇತೃತ್ವದ ಗುರುಗ್ರಾಮ್ ಥಂಡರ್ಸ್ ತಂಡಗಳು ಮುಖಾಮುಖಿಯಾದವು. ಪಂದ್ಯದಲ್ಲಿ ಮಾರ್ಟಿನ್ ಗಪ್ಟಿಲ್ ಅವರ ಸ್ಫೋಟಕ ಬ್ಯಾಟಿಂಗ್ (28 ಎಸೆತಗಳಲ್ಲಿ 68 ರನ್) ಪುಣೆ ಪ್ಯಾಂಥರ್ಸ್‌ಗೆ ನಾಲ್ಕು ವಿಕೆಟ್‌ಗಳ ಜಯ ತಂದುಕೊಟ್ಟಿತು.

ಟೂರ್ನಿಯ ಆರಂಭದಲ್ಲೇ ಗುರುಗ್ರಾಮ್ ಥಂಡರ್ಸ್, ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ರಾಸ್ ಟೇಲರ್ ಅವರ ಸ್ಥಿರ ಹಾಗೂ ಭದ್ರ ಇನ್ನಿಂಗ್ಸ್ ಆಧಾರವಾಗಿ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 159 ರನ್‌ಗಳನ್ನು ಗಳಿಸಿತು. ಬಳಿಕ ಗುರಿ ಬೆನ್ನತ್ತಿದ ಪುಣೆ ಪ್ಯಾಂಥರ್ಸ್ ಆರಂಭದಲ್ಲೇ ಶೇನ್ ವಾಟ್ಸನ್ ವಿಕೆಟ್ ಕಳೆದುಕೊಂಡರೂ, ಮಾರ್ಟಿನ್ ಗಪ್ಟಿಲ್ 68 ರನ್‌ಗಳ ನೆರವಿನಿಂದ ನಾಲ್ಕು ವಿಕೆಟ್‌ಗಳಿಂದ ಗೆದ್ದು ಬೀಗಿತು.

ಮಧ್ಯದ ಓವರ್‌ಗಳಲ್ಲಿ ಪುಣೆ ಪ್ಯಾಂಥರ್ಸ್ ಕೆಲ ವಿಕೆಟ್‌ಗಳನ್ನು ಕಳೆದುಕೊಂಡರೂ, ಆಫ್ಘಾನ್ ಆಲ್‌ರೌಂಡರ್ ಸಯ್ಯದ್ ಶಿರ್ಜಾದ್ ಶಿನ್ವಾರಿ ಬ್ಯಾಟ್ ಮತ್ತು ಬಾಲ್ ಎರಡರಲ್ಲೂ ಭರ್ಜರಿ ಪ್ರದರ್ಶನ ನೀಡಿದರು. ಬೌಲಿಂಗ್‌ನಲ್ಲಿ ಗುರುಗ್ರಾಮ್‌ನ ಇಬ್ಬರು ಆರಂಭಿಕರನ್ನು ಔಟ್ ಮಾಡಿ ಎರಡು ವಿಕೆಟ್‌ಗಳನ್ನು ಪಡೆದ ಅವರು, ನಂತರ ಬ್ಯಾಟಿಂಗ್‌ನಲ್ಲಿ 10 ಎಸೆತಗಳಲ್ಲಿ ವೇಗದ 21 ರನ್ ಗಳಿಸಿ ತಂಡಕ್ಕೆ ಅಮೂಲ್ಯ ಕೊಡುಗೆ ನೀಡಿದರು.

ರಾಜ್ಯ ಸರಕಾರದ ಜತೆಗೆ ಆರ್‌ಸಿಬಿ ಕೊನೆಯ ಸುತ್ತಿನ ಮಾತುಕತೆಯಷ್ಟೇ ಬಾಕಿ

ಚಿನ್ನಸ್ವಾಮಿ ಸ್ಟೇಡಿಯಂನಲ್ಲೇ ಆರ್‌ಸಿಬಿ ಪಂದ್ಯ?

ಬೆಂಗಳೂರು: ಆರ್‌ಸಿಬಿ ಫ್ರಾಂಚೈಸಿಯು ಈ ಬಾರಿ ಐಪಿಎಲ್‌ನಲ್ಲಿ ತನ್ನ ಪಂದ್ಯಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲೇ ಆಡುವ ಬಗ್ಗೆ ರಾಜ್ಯ ಸರಕಾರಕ್ಕೆ ಮಾಹಿತಿ ನೀಡಿದೆ ಎಂದು ತಿಳಿದುಬಂದಿದೆ. ಒಂದೆರಡು ದಿನಗಳಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವ ನಿರೀಕ್ಷೆಯಿದೆ. ಕಳೆದ ವರ್ಷ ಜೂನ್‌ನಲ್ಲಿ ನಡೆದ ಭೀಕರ ಕಾಲ್ತುಳಿತದ ಘಟನೆಯ ಬಳಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪ್ರಮುಖ ಪಂದ್ಯ, ಟೂರ್ನಿಗಳನ್ನು ಸ್ಥಗಿತಗೊಳಿಸಲಾಗಿತ್ತು.

ಇತ್ತೀಚೆಗೆ ರಾಜ್ಯ ಸರಕಾರವು ಚಿನ್ನಸ್ವಾಮಿಯಲ್ಲಿ ಅಂತಾರಾಷ್ಟ್ರೀಯ ಹಾಗೂ ಐಪಿಎಲ್ ಪಂದ್ಯಗಳನ್ನು ನಡೆಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ(ಕೆಎಸ್‌ಸಿಎ) ಷರತ್ತುಬದ್ಧ ಅನುಮತಿ ನೀಡಿತ್ತು. ಆದರೆ ಆರ್‌ಸಿಬಿಯು ಕೆಲ ಕಾರಣಗಳಿಂದಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಡಲು ನಿರಾಕರಿಸುತ್ತಿತ್ತು. ಇದೀಗ ಆರ್‌ಸಿಬಿ ತನ್ನ ಪಂದ್ಯಗಳನ್ನು ತವರು ಮೈದಾನದಲ್ಲೇ ಆಡಲು ಸಿದ್ಧ ಎನ್ನಲಾಗುತ್ತಿದೆ.

ತವರು ಕ್ರೀಡಾಂಗಣ ಆಯ್ಕೆ ಮಾಡಿಕೊಳ್ಳಲು ಫ್ರಾಂಚೈಸಿಗಳಿಗೆ ಬಿಸಿಸಿಐ ಜ.27ರ ಗಡುವು ನೀಡಿತ್ತು. ಅದರಂತೆ ಆರ್‌ಸಿಬಿ ವ್ಯವಸ್ಥಾಪಕ ಮಂಡಳಿ, ತನ್ನ ಪಂದ್ಯಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲೇ ಆಡುವುದಾಗಿ ಹೇಳಿದೆ ಎಂದು ತಿಳಿದುಬಂದಿದೆ. ಸರಕಾರದ ಜತೆಗೆ ಆರ್‌ಸಿಬಿ ಮತ್ತೊಂದು ಸುತ್ತಿನ ಮಾತುಕತೆ ನಡೆಸಲಿದ್ದು, ನ್ಯಾ.ಕುನ್ಹಾ ವರದಿಯ ಬಗ್ಗೆ ಚರ್ಚೆ ನಡೆಸಲಿದೆ ಎಂದು ತಿಳಿದುಬಂದಿದೆ. ಚರ್ಚೆಯ ಬಳಿಕ ಆರ್‌ಸಿಬಿಯಿಂದ ಅಂತಿಮ ನಿರ್ಧಾರ ಹೊರಬೀಳುವ ನಿರೀಕ್ಷೆಯಿದೆ.

ಮಂಗಳವಾರ ನಡೆದಿದ್ದ ಪಂದ್ಯ | ಸೋಲಿನ ಆಘಾತದ ಮಧ್ಯೆ ಬರೆ

ಡೆಲ್ಲಿ ಕ್ಯಾಪಿಟಲ್ಸ್‌ನ ಜೆಮಿಮಾಗೆ ದಂಡ

ವಡೋದರಾ: ಮಂಗಳವಾರ ವಡೋದರಾದ ಬಿಸಿಎ ಕ್ರೀಡಾಂಗಣದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ನಿಧಾನಗತಿಯ ಓವರ್ ಕಾಯ್ದುಕೊಂಡಿದ್ದಕ್ಕಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕಿ ಜೆಮಿಮಾ ರೊಡ್ರಿಗಸ್ ಅವರಿಗೆ 12 ಲಕ್ಷ ರು. ದಂಡ ವಿಧಿಸಲಾಗಿದೆ. ಇದು ಜೆಮಿಮಾ ಅವರ ಮೊದಲ ಅಪರಾಧವಾಗಿದೆ.

ಕಳೆದ ವಾರ ಎರಡು ಸತತ ಗೆಲುವುಗಳ ನಂತರ, ರಾಡ್ರಿಗಸ್ ತಂಡವು ಜೈಂಟ್ಸ್ ವಿರುದ್ಧ ಮೂರು ರನ್‌ಗಳ ಸೋಲನ್ನು ಅನುಭವಿಸುವ ಮೂಲಕ ಪ್ಲೇಆಫ್ ರೇಸ್ ಕಠಿಣವಾಯಿತು. ಗೆಲುವಿನೊಂದಿಗೆ ಜೈಂಟ್ಸ್ ತಂಡವು (8 ಅಂಕ) ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆದು, ಪ್ಲೇ ಆಫ್‌ಗೆ ಹತ್ತಿರವಾಯಿತು.

ಬಿಸಿಸಿಐ ಹೊಸ ನಿಯಮದ ಪ್ರಕಾರ ತಂಡವೊಂದು 3 ಪಂದ್ಯಗಳಲ್ಲಿ ನಿಧಾನಗತಿ ಬೌಲಿಂಗ್ ಮಾಡಿದರೆ ನಾಯಕಿಗೆ ದಂಡ ವಿಧಿಸಿ, ಡಿಮೆರಿಟ್ ಅಂಕ ನೀಡಲಾಗುತ್ತದೆ. ಡಿಮೆರಿಟ್ ಅಂಕದ ಅವಧಿ 3 ವರ್ಷ ಇರಲಿದ್ದು, ಈ ಅವಧಿಯಲ್ಲಿ 4 ಡಿಮೆರಿಟ್ ಅಂಕ ಪಡೆದರೆ ನಾಯಕಿಗೆ ಪಂದ್ಯದ ಸಂಭಾವನೆಯ ಶೇ.100ರಷ್ಟು ದಂಡ ವಿಧಿಸಲಾಗುತ್ತದೆ.

175 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ತಂಡವು ಕನ್ನಡತಿ ರಾಜೇಶ್ವರಿ ಗಾಯಕ್‌ವಾಡ್ (20 ರನ್‌ಗೆ 3 ವಿಕೆಟ್) ಮತ್ತು ಸೋಫಿ ಡಿವೈನ್ (37 ರನ್‌ಗೆ 4 ವಿಕೆಟ್) ಅವರ ದಾಳಿಗೆ ಸಿಲುಕಿ 100 ರನ್‌ಗೆ 6 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕರ್ನಾಟಕದ ನಿಕಿ ಪ್ರಸಾದ್ (47) ಮತ್ತು ಸ್ನೇಹಾ ರಾಣಾ (29) ಜೋಡಿ ಏಳನೇ ವಿಕೆಟ್‌ಗೆ 70 ರನ್ ಸೇರಿಸಿ ತಂಡಕ್ಕೆ ಮಹತ್ವದ ಚೇತರಿಕೆ ನೀಡಿದರು. ಕೊನೆಯ ಓವರ್‌ನಲ್ಲಿ ಡೆಲ್ಲಿಗೆ ಗೆಲುವಿಗೆ 9 ರನ್ ಅಗತ್ಯವಿತ್ತು. ಪರಿಣಾಮಕಾರಿ ಬೌಲಿಂಗ್ ಮಾಡಿದ ಅನುಭವಿ ಸೋಫಿ, ಕೇವಲ 5 ರನ್ ನೀಡಿ, ಸ್ನೇಹಾ ಮತ್ತು ನಿಕಿ ಅವರ ವಿಕೆಟ್ ಪಡೆದು ಗೆಲುವಿನ ರೂವಾರಿಯಾದರು.

ಯು.ಪಿ ವಾರಿಯರ್ಸ್ ತಂಡದಲ್ಲಿ ಬದಲಾವಣೆ

ಲೀಚ್‌ಫೀಲ್ಡ್ ಸ್ಥಾನಕ್ಕೆ ಆಮಿ ಜೋನ್ಸ್ ಆಯ್ಕೆ



ದೆಹಲಿ: ಮಹಿಳಾ ಪ್ರೀಮಿಯರ್ ಲೀಗ್ ಅಂಕಪಟ್ಟಿಯಲ್ಲಿ ಪ್ರಸ್ತುತ ಕೊನೆಯ ಸ್ಥಾನದಲ್ಲಿರುವ ಯು.ಪಿ ವಾರಿಯರ್ಸ್ ತಂಡಕ್ಕೆ ಟೂರ್ನಿಯ ನಾಕೌಟ್ ಪಂದ್ಯಗಳಿಗೂ ಮುನ್ನ ದೊಡ್ಡ ಹಿನ್ನಡೆ ಅನುಭವಿಸಿದೆ. ತಂಡದ ಸ್ಟಾರ್ ಆಟಗಾರ್ತಿ, ಆಸ್ಟ್ರೇಲಿಯಾದ ಫೋಬೆ ಲಿಚ್‌ಫೀಲ್ಡ್ ಗಾಯದಿಂದಾಗಿ ಟೂರ್ನಿಯ ಇನ್ನುಳಿದ ಭಾಗದಿಂದ ಹೊರಬಿದ್ದಿದ್ದಾರೆ. ಅವರ ಸ್ಥಾನಕ್ಕೆ ಇಂಗ್ಲಿಷ್ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಆಮಿ ಜೋನ್ಸ್ ಅವರನ್ನು ಯು.ಪಿ ವಾರಿಯರ್ಸ್ ತಂಡ ಸೇರಿಸಿಕೊಂಡಿದೆ.

ಈ ಸಲದ ಡಬ್ಲ್ಯೂಪಿಎಲ್ ಋತುವಿನಲ್ಲಿ ಫೋಬೆ ಲಿಚ್‌ಫೀಲ್ಡ್ ಅವರು ಉತ್ತಮವಾಗಿಯೇ ಬ್ಯಾಟಿಂಗ್ ಪ್ರದರ್ಶನ ಮಾಡಿದ್ದಾರೆ, ಆರು ಪಂದ್ಯಗಳಲ್ಲಿ 243 ರನ್ ಗಳಿಸುವ ಮೂಲಕ ತಂಡದ ಪರ ಅತೀ ಹೆಚ್ಚು ರನ್ ಗಳಿಸಿದ ಆಟಗಾರ್ತಿಯಾಗಿದ್ದರು. ಹಾಗಾಗಿ ಅವರು ಇದೀಗ ಗಾಯಕ್ಕೆ ತುತ್ತಾಗಿರುವುದು ಯುಪಿ ತಂಡಕ್ಕೆ ಭಾರಿ ಹಿನ್ನಡೆಯನ್ನು ತಂದಿದೆ.

32 ವರ್ಷದ ಆಮಿ ಜೋನ್ಸ್ ಇಂಗ್ಲೆಂಡ್ ಪರ 8 ಟೆಸ್ಟ್, 111 ಏಕದಿನ ಮತ್ತು 125 ಟಿ20 ಪಂದ್ಯಗಳನ್ನು ಆಡಿದ್ದಾರೆ. ಟೆಸ್ಟ್ ಪಂದ್ಯಗಳಲ್ಲಿ ಅವರು ಒಂದು ಅರ್ಧಶತಕದೊಂದಿಗೆ 188 ರನ್ ಗಳಿಸಿದ್ದಾರೆ. ಏಕದಿನ ಪಂದ್ಯಗಳಲ್ಲಿ ಎರಡು ಶತಕ ಮತ್ತು 16 ಅರ್ಧಶತಕಗಳೊಂದಿಗೆ 2,659 ರನ್ ಗಳಿಸಿದ್ದಾರೆ. ಆಮಿ ಜೋನ್ಸ್ ಟಿ20 ಪಂದ್ಯಗಳಲ್ಲಿ 1666 ರನ್ ಗಳಿಸಿದ್ದು, ಅದರಲ್ಲಿ ಐದು ಅರ್ಧಶತಕಗಳಿವೆ. ಜೋನ್ಸ್ 50 ಲಕ್ಷ ರು. ಗಳಿಗೆ ಯುಪಿ ವಾರಿಯರ್ಸ್ ತಂಡವನ್ನು ಸೇರಿಕೊಂಡಿದ್ದಾರೆ.

ಹಾಡಿನಲ್ಲಿ ಮನಗೆದ್ದ ತ್ರಿಕಾರಂ

ಶೀರ್ಷಿಕೆಯಲ್ಲಿಯೇ ಕುತೂಹಲ ಮೂಡಿಸಿದ್ದ ತ್ರಿಕಾರಂ, ಈಗ ಹಾಡಿನಲ್ಲಿಯೂ ಮನಗೆಲ್ಲುತ್ತಿದೆ. ತ್ರಿಕಾರಂನ ಟೈಟಲ್ ಸಾಂಗ್ ಬಿಡುಗಡೆಯಾಗಿದೆ. ಸಂಸದ ಯದುವೀರ್ ಒಡೆಯರ್ ಈ ಹಾಡು ಬಿಡುಗಡೆ ಮಾಡಿ ಶುಭಕೋರಿದರು.ಆ ದೇವರ ವಂಶದ ಕುಡಿ ಇವನು, ಈ ಮಣ್ಣನು ಕಾಯಲು ಬಂದವನು... ಎಂಬ ಗೀತೆ ಇದಾಗಿದ್ದು, ಚೇತನ್ ಕುಮಾರ್ ಸಾಹಿತ್ಯ ಬರೆದಿದ್ದಾರೆ. ಶಶಾಂಕ್ ಶೇಷಗಿರಿ ದನಿಯಲ್ಲಿ ಮೂಡಿಬಂದಿರುವ ಈ ಹಾಡಿಗೆ ವಿವೇಕ್ ಚಕ್ರವರ್ತಿ ಸಂಗೀತ ಸಂಯೋಜಿಸಿದ್ದಾರೆ. ತ್ರಿಕಾರಂಗೆ ಇದು ಸ್ಮಶಾನ ಅಲ್ಲ ಎಂಬ ಅಡಿಬರಹವಿದೆ. ಜಿ.ಗಣೇಶ್ ಮೂರ್ತಿ, ಸದ್ಗುರು ಸಿನಿ ಪ್ರೊಡಕ್ಷನ್ ಬ್ಯಾನರ್ ನಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಜತೆಗೆ ಖಳನಾಯಕನ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಹಲವು ನಿರ್ದೇಶಕರ ಬಳಿ ಕಾರ್ಯನಿರ್ವಹಿಸಿರುವ ಅಜ್ಜಂಪುರದ ದಿಲೀಪ್ ಕುಮಾರ್ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಶೀರ್ಷಿಕೆ ಹಾಡು ಅರ್ಥಪೂರ್ಣವಾಗಿದ್ದು, ನಾಯಕ ಎದುರಾಳಿಗಳ ಎದಿರು ಸಿಡಿದೆದ್ದು ಬರುವ ಗೀತೆ ಇದಾಗಿದೆ. ಸಿನಿಮಾದಲ್ಲಿ ಕುತೂಹಲಭರಿತ ಕಥೆ ಇದೆ. ಹರ್ಷವರ್ಧನ್ ನಾಯಕನಾಗಿ ನಟಿಸಿದ್ದು, ನಿಶ್ವಿತಾ ಶೆಟ್ಟಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ನಾಗೇಂದ್ರ ಅರಸು, ಮಂಜುಪಾವಗಡ ಮುಂತಾದವರು ತಾರಾಗಣದಲ್ಲಿದ್ದಾರೆ. ಛಾಯಾಗ್ರಹಣ ಹೊನ್ನಾಳಿ ಯಾಸಿನ್, ಸಂಕಲನ ಸತೀಶ್ ಚಂದ್ರಯ್ಯ, ಸಾಹಸ ಚಂದ್ರುಬಂಡೆ, ನೃತ್ಯ ಹೈಟ್‌ಮಂಜು, ಕಂಬಿರಾಜ್, ವಿ.ನಾಗೇಂದ್ರ ಪ್ರಸಾದ್, ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಚಿತ್ರದುರ್ಗ ಚಿಕ್ಕಮಗಳೂರು, ಮಾರಿಕಣಿವೆ, ಸಾಣೆಹಳ್ಳಿ, ದಾವಣಗೆರೆ, ಸಿರಾ ಮತ್ತು ಮೈಸೂರು ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ತ್ರಿಕಾರಂ ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ಕಟ್ಲೆಯಲ್ಲಿ ನಾಯಕನಾದ ಕೆಂಪೇಗೌಡ

ಹಾಸ್ಯ ನಟನಾಗಿ ಮನಗೆದ್ದ ಕೆಂಪೇಗೌಡ , ಕಟ್ಲೆ ಚಿತ್ರದ ಮೂಲಕ ನಾಯಕನಾಗಿ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಕಟ್ಲೆ ಚಿತ್ರದಲ್ಲಿಯೂ ಕಾಮಿಡಿ ಬೆರೆತಿದೆ. ಸದ್ಯ ಈ ಚಿತ್ರದ ಟ್ರೇಲರ್ ಮತ್ತು ಹಾಡು ಬಿಡುಗಡೆಯಾಗಿದೆ. ಮಾಜಿ ಉಪ ಮುಖ್ಯಮಂತ್ರಿ, ಡಾ.ಸಿ.ಎನ್. ಅಶ್ವಥ್‌ನಾರಾಯಣ್ ಟ್ರೇಲರ್ ಹಾಗೂ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಗಣೇಶ್ ಅಭಿ ನಂದನ್ ಕಥೆ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಭರತ್ ಗೌಡ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. . ಸಸ್ಮಿತಾ ಮತ್ತು ಅಮೃತಾ ನಾಯಕಿಯ ರಾಗಿ ಬಣ್ಣ ಹಚ್ಚಿದ್ದು, ಹರ್ಷಿಕಾ ಪೂರ್ಣಚ್ಚ ಪ್ರಮುಖ ಪಾತ್ರದಲ್ಲಿ ಅಭಿನಯಿಸಿ ದ್ದಾರೆ.

ಸೀತಾರಾಮನ ಸೆಕೆಂಡ್ ಕೇಸ್

ವಿಜಯ ರಾಘವೇಂದ್ರ, ಅಭಿನಯದ ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಶಿವರಾಜ್ ಕುಮಾರ್, ಡಾಲಿ ಧನಂಜಯ್ ಉನ್ನಿ ಮುಕುಂದ್, ಭಾವನಾ ಮೆನನ್, ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಟೀಸರ್ ಅನ್ನು ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸೆಕೆಂಡ್ ಕೇಸ್ ಆಫ್ ಸೀತಾರಾಮ್ ನಲ್ಲಿ ವಿಜಯ್ ರಾಘವೇಂದ್ರ, ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು, ಮತ್ತೊಂದು ಪ್ರಕರಣವನ್ನು ಕೈಗೆತ್ತಿಕೊಂಡಿದ್ದಾರೆ.

2021ರಲ್ಲಿ ತೆರೆಕಂಡ ವಿಜಯ ರಾಘವೇಂದ್ರ, ನಟನೆಯ ಸೀತಾರಾಮ್ ಬಿನೋಯ್ ಸಿನಿಮಾದ ಸೀಕ್ವೆಲ್ ಇದಾಗಿದೆ. ದೇವಿಪ್ರಸಾದ್ ಶೆಟ್ಟಿ ಈ ಚಿತ್ರವನ್ನು ನಿರ್ದೇಶಿಸಿದ್ದರು. ಇದೀಗ ಮತ್ತೊಮ್ಮೆ ದೇವಿ ಪ್ರಸಾದ್ ಶೆಟ್ಟಿ ಜತೆಗೆ ಸಿನಿಮಾ ಮಾಡಿದ್ದಾರೆ.

ದೇವಿಪ್ರಸಾದ್ ಶೆಟ್ಟಿ, ಸಾತ್ವಿಕ್ ಹೆಬ್ಬಾರ್ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಚಿತ್ರಕ್ಕೆ ಹೇಮಂತ್ ಆಚಾರ್ ಛಾಯಾಗ್ರಹಣ, ನವನೀತ್ ಶ್ಯಾಮ್ ಸಂಗೀತ ನಿರ್ದೇಶನ, ಶಶಾಂಕ್ ನಾರಾಯಣ್ ಸಂಕಲನ, ಭವಾನಿ ಶಂಕರ್ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಅರ್ಜಿತ್ ಸಿಂಗ್ ನಿವೃತ್ತಿ

ಕ್ಯೂಂಕಿ ತುಂಬಿ ಹೋ.....ಈ ಹಾಡು ಕೇಳುತ್ತಲೇ ಮನಸು ಉಲ್ಲಾಸಗೊಳ್ಳುತ್ತದೆ. ಮತ್ತೆ ಮತ್ತೆ ಕೇಳಬೇಕು ಅನ್ನಿಸುತ್ತದೆ. ಗಾಯಕ ಅರ್ಜಿತ್ ಸಿಂಗ್ ಸುಮಧರ ದನಿಯಲ್ಲಿ ಮೂಡಿಬಂದ ಈ ಹಾಡು ಇಂದಿಗೂ ಬಾಲಿವುಡ್ ಜನಪ್ರಿಯ ಗೀತೆಗಳ ಸಾಲಿನಲ್ಲಿದೆ. ಇಂತಹ ಮತ್ತಷ್ಟು ಹಾಡುಗಳು ಅರ್ಜಿತ್ ದನಿಯಲ್ಲಿ ಮೂಡಿಬರುತ್ತವೆ ಎಂದು ಕಾದು ಕುಳಿತಿರುವಾಗಲೇ ಅರ್ಜಿತ್ ದಿಢೀರ್ ನಿವೃತ್ತಿ ಘೋಷಿಸಿದ್ದಾರೆ. ಇನ್ನು ಮುಂದೆ ನಾನು ಯಾವುದೇ ಸಿನಿಮಾದಲ್ಲಿ ಹಾಡಲು ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂದು ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದು, ಆ ಮೂಲಕ ನಿವೃತ್ತಿ ಘೋಷಿಸಿದ್ದಾರೆ. ಇದನ್ನು ನೋಡಿದ ಸಂಗೀತ ಪ್ರಿಯರು ಶಾಕ್ ಆಗಿದ್ದಾರೆ. ಆದರೆ ಸಂಗೀತದಲ್ಲಿ ತೊಡಗಿಸಿಕೊಂಡು, ಸಂಗೀತ ಕ್ಷೇತ್ರದಲ್ಲಿ ಮತ್ತಷ್ಟು ಕಲಿಯುವ ಆಸಕ್ತಿ ತಾಳಿದ್ದಾರೆ.

ಹಿಂದಿಯಲ್ಲಿ ಪ್ರಸಾರವಾಗುತ್ತಿದ್ದ ಸಿಂಗಿಂಗ್ ರಿಯಾಲಿಟಿ ಶೋನಲ್ಲಿ ಪಾಲ್ಗೊಂಡು ಮನಗೆದ್ದ ಅರ್ಜಿತ್ ಸಿಂಗ್, ಮರ್ಡರ್ 2 ಸಿನಿಮಾದ ಹಾಡಿಗೆ ದನಿಯಾಗುವ ಮೂಲಕ ಹಿಂದಿ ಚಿತ್ರರಂಗದಲ್ಲಿ ಹಿನ್ನೆಲೆ ಗಾಯಕರಾಗಿ ಗುರುತಿಸಿಕೊಂಡರು. ಆ ಬಳಿಕ ಹಲವು ಹಾಡುಗಳಿಗೆ ದನಿಯಾಗಿ ಸಂಗೀತ ಪ್ರಿಯರ ಮನಗೆದ್ದರು. ಹಿಂದಿ ಮಾತ್ರವಲ್ಲ ಕನ್ನಡ, ತಮಿಳು, ತೆಲುಗಿನ ಹಾಡುಗಳಿಗೂ ಅರ್ಜಿತ್ ದನಿಯಾಗಿದ್ದಾರೆ.



ವಿನಾಶ ಕಾಲೆಗೆ ಮುಹೂರ್ತ

ವಿನಾಶ ಕಾಲೆ ವಿಪರೀತ ಬುದ್ದಿ ಎಂಬ ಗಾದೆ ಮಾತಿದೆ. ಈಗ ವಿನಾಶ ಕಾಲೆ ಎಂಬ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದೆ. ರಾಜಾಜಿನಗರ ದಲ್ಲಿರುವ ಮದ್ದೂರಮ್ಮ ದೇವಿ ಮತ್ತು ಯಲ್ಲಮ್ಮ ದೇವಿಯ ಸನ್ನಿಧಿಯಲ್ಲಿ ಮುಹೂರ್ತ ಸಮಾರಂಭ ನೆರವೇರಿತು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಬಾ.ಮ.ಹರೀಶ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಬಿಗ್ ಬಾಸ್ ಸ್ಪರ್ಧಿಗಳಾದ ಡಾಗ್ ಸತ್ತಿಶ್, ಮಲ್ಲಮ್ಮ, ಕರಿಬಸಪ್ಪ ಮುಹೂರ್ತ ಸಮಾರಂಭದಲ್ಲಿ ಪಾಲ್ಗೊಂಡು ಶುಭಕೋರಿದರು. ಶಕ್ತಿ ಫಿಲಂಸ್ ಲಾಂಛನದಲ್ಲಿ ಚಿತ್ರ ನಿರ್ಮಾಣ ವಾಗುತ್ತಿದೆ. ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಎಸ್.ಕಿರಣ್‌ಕುಮಾರ್ ಈ ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

ಪಾವನಿ ಸಿರಿ, ರಿಷಿಕಾ ಗೌಡ, ವೈಷ್ಣವಿ, ಶ್ರೀನಿಧಿ, ರಚನಾ ಉಳಿದಂತೆ ಮಾಂತ್ರಿಕಳಾಗಿ ಶೋಭಾ, ಅಘೋರಿಯಾಗಿ ಮಂಡ್ಯ ಸಿದ್ದು, ಬಿಗ್ ಬಾಸ್ ಮಲ್ಲಮ್ಮಾ, ಪ್ರವಲಿಕಾ, ದಿಶಾ ಮುಂತಾದವರು ತಾರಾಗಣದಲ್ಲಿದ್ದಾರೆ. ಮಾರ್ಚ್ ತಿಂಗಳಿಂದ ಮೂವತ್ತು ದಿನಗಳ ಕಾಲ ಬೆಂಗಳೂರು, ಚಿಕ್ಕಮಗಳೂರು ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲು ಯೋಜನೆ ರೂಪಿಸಲಾಗಿದೆ.

ಇದು ಅಗಲಿದ ಗೆಳೆಯನ ಜೀವನದಲ್ಲಿ ನಡೆದಂತ ಸತ್ಯ ಘಟನೆಯನ್ನು ಆಧರಿಸಿ ಕಥೆ ಹೆಣೆದು ತೆರೆಗೆ ತರುತ್ತಿದ್ದೇವೆ. ಕಡಿಮೆ ಅವಧಿಯಲ್ಲಿ ದುಡ್ಡು ಮಾಡಬೇಕೆಂಬ ದುರಾಸೆಯಿಂದ ಅಡ್ಡದಾರಿ ಹಿಡಿದರೆ ಯಾವೆಲ್ಲಾ ಅನಾಹುತಗಳು ನಡೆಯುತ್ತವೆ ಎಂಬುದನ್ನು ಇಲ್ಲಿ ಹೇಳಲಾಗುತ್ತಿದೆ. ಮಧ್ಯಮ ವರ್ಗದ ಕುಟುಂಬದಿಂದ ಬಂದ ಐದು ಹುಡುಗರು ಮತ್ತು ಹುಡುಗಿಯರು ಉದ್ಯೋಗ ಅರಸಿಕೊಂಡು ನಗರಕ್ಕೆ ಬರುತ್ತಾರೆ. ಬೇಗನೆ ಹಣ ಗಳಿಸಿ ಶ್ರೀಮಂತರಾಗಬೇಕು ಎಂಬ ಆಸೆಯಿಂದ ಅಡ್ಡದಾರಿ ಹಿಡಿಯುತ್ತಾರೆ. ಇದರಿಂದ ಮುಂದಾಗ ಬಹುದಾದ ಘಟನೆಗಳಿಂದ ಯಾವ ರೀತಿ ತತ್ತರಿಸಿ ಹೋಗುತ್ತಾರೆ ಎಂಬುದನ್ನು ಹಾರರ್ ಥ್ರಿಲ್ಲರ್ ಮಾದರಿಯಲ್ಲಿ ಕಟ್ಟಿಕೊಡಲಾಗಿದೆ ಎಂದು ನಿರ್ದೇಶಕ ಕಿರಣ್ ಕುಮಾರ್ ಹೇಳಿದರು. ಚಿತ್ರದಲ್ಲಿ ಮೂರು ಹಾಡುಗಳಿದ್ದು ಮಂಜುಕವಿ ಸಾಹಿತ್ಯ ಬರೆದು ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ವಿನಯ್ ಗೌಡ, ಸಂಕಲನ ಜೀವನ್, ನೃತ್ಯ ನಿರ್ದೇಶನ ಜಗ್ಗು-ಬಾಲು ಅವರದಾಗಿದೆ.

ಬಾರೋ ಬಾರೋ ಎಂದ ಪ್ರೇಮಿ

ಎಸ್. ಪ್ರದೀಪ್ ವರ್ಮ ನಿರ್ದೇಶಿಸುತ್ತಿರುವ ಪ್ರೇಮಿ ಚಿತ್ರ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಈಗಾಗಲೇ ಬಿಡುಗಡೆಯಾಗಿರುವ ಮನಸ್ಸು ಏನೋ ಕಾಡಿದೆ...ಹಾಡು ಎಲ್ಲರ ಮನ ಗೆದ್ದಿದೆ. ಈಗ ಚಿತ್ರದ ಬಾರೋ ಬಾರೋ ಎಣ್ಣೆ ಹೊಡೆಯೋಣ... ಹಾಡು ಬಿಡುಗಡೆಯಾಗಿದೆ. ಚಿತ್ರ ಸಾಹಿತಿ ವಿ.ನಾಗೇಂದ್ರಪ್ರಸಾದ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ನಿರ್ದೇಶಕ ಎಸ್ ಪ್ರದೀಪ್ ವರ್ಮ ಅವರೆ ರಚಿಸಿದ್ದು, ಹಾಡಿಗೂ ದನಿಯಾಗಿದ್ದಾರೆ. ಜತೆಗೆ ಸಂಗೀತ ಸಂಯೋಜಿಸಿದ್ದಾರೆ. ಈ ಹಾಡಿನಲ್ಲಿ ಅದ್ವಿಕ್, ಕಿರಣ್ ರಾಜ್, ಹರ್ಷಿತಾ ಕಲ್ಲಿಂಗಲ್, ಎನ್ .ಎಮ್ ವಿಮಲ್ ರಾಜ್, ಹರೀಶ್ ಉಕ್ಕಡಗಾತ್ರಿ ಕಾಣಿಸಿಕೊಂಡಿದ್ದಾರೆ.

ಪ್ರೇಮಿ ಚಿತ್ರದಲ್ಲಿ ಅದ್ವಿಕ್ ನಾಯಕನಾಗಿ ನಟಿಸಿದ್ದು, ಸಾತ್ವಿಕಾ, ಶೋಭಿತಾ, ಎಸ್. ಪ್ರದೀಪ್ ವರ್ಮ, ಹರೀಶ್ ಉಕ್ಕಡಗಾತ್ರಿ, ಶಂಕರ್ ಅಂಬಿ, ಹೆಚ್ ಜಿ ವೀರೇಶ್, ದ್ವಿತ ಕೆ ಗೌಡ, ಸಂದೇಶ್, ಸಂಗಮೇಶ್ ದೇವರಬೆಳಕೆರೆ, ಕಲ್ಕಿ, ಮಾಸ್ಟರ್ ಹರ್ಷಲ್, ಮಾಸ್ಟರ್ ಸಂತೃಪ್ತಿ ಶಿವಧರಮಠ, ಸಮರ್ಥ್ ರಾಘವೇಂದ್ರ, ಸುರೇಶ್ ಬಾಬು , ಸಂದೇಶ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಪ್ರೇಮಿ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ನಲ್ಲಿ ಬ್ಯುಸಿಯಾಗಿದೆ. ದಾವಣಗೆರೆ, ದೇವರ ಬೆಳಕೆರೆ, ಗೋಕರ್ಣ, ಕನಕಪುರ, ಚಿಕ್ಕಮಗಳೂರು ಹಾಗೂ ಬೆಂಗಳೂರಿನಲ್ಲಿ ಶೂಟಿಂಗ್ ನಡೆಸಲಾಗಿದೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಪ್ರೇಮಿ ಚಿತ್ರಕ್ಕೆ ಟಿಎಸ್ ಅಕ್ಕಮಹಾದೇವಿ ಕಥೆ ಬರೆದಿದ್ದು,ಎಸ್. ಪ್ರದೀಪ್ ವರ್ಮ ನಿರ್ದೇಶನ ಮಾಡಿದ್ದಾರೆ. ಐದು ಹಾಡುಗಳಿರುವ ಈ ಚಿತ್ರಕ್ಕೆ ಪ್ರದೀಪ್ ವರ್ಮ ಅವರೆ ಸಂಗೀತ ಸಂಯೋಜನೆಯನ್ನೂ ಮಾಡಿದ್ದಾರೆ. ಎನ್. ವಿಮಲ್ ರಾಜ್ ಸಂಭಾಷಣೆ, ಗೌತಮ್ ಮಟ್ಟಿ ಛಾಯಾಗ್ರಹಣ, ಸಂಜೀವ್ ರೆಡ್ಡಿ ಸಂಕಲನ ಹಾಗೂ ರಾಮ್ ದೇವ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಗುರು ಕರಿಬಸವೇಶ್ವರ ಪ್ರೊಡಕ್ಷನ್ ಲಾಂಛನದಲ್ಲಿ ಬಿ.ಸಿದ್ದಲಿಂಗಯ್ಯ ನಿರ್ಮಾಣ ಮಾಡಿದ್ದಾರೆ.